
ಹಸಿರು ಹಚ್ಚಿ ಚುಚ್ಚಿ

(ದ.ರಾ.ಬೇಂದ್ರೆ, ಕಾವ್ಯ ವಿಮರ್ಶೆ)



ಡಾ.ಜಿ.ಕೃಷ್ಣಪ್ಪ

ಹಸಿರು ಹಚ್ಚಿ ಚುಚ್ಚಿ

(ದ.ರಾ. ಬೇಂದ್ರೆ ಕಾವ್ಯ ವಿಮರ್ಶೆ)

ಡಾ. ಜಿ. ಕೃಷ್ಣಪ್ಪ

ಪ್ರಕಾಶಕರು
ವಂಶಿ ಪಬ್ಲಿಕೇಷನ್ಸ್
ನೆಲಮಂಗಲ, ಬೆಂಗಳೂರು.

HASIRU HACHHI CHUCHHI (Da.Ra. Bendre Kavya Vimarshe)
By Dr. G. Krishnappa, # 22, Sri Gurudatta Nilaya, 1st Cross, Netaji Nagar, Mathikere, Bangalore-560054.
Mobile : 9972109209

Published by
Vamshi Publications
4, Gayathri Complex, Near T.B. Bus Stop
B.H. Road, Subhash Nagara, Nelamangala
Bengaluru-562123.
Mob: 9916595916
email: vamshipublications@gmail.com

First Impression : 2019
Copies : 1000
Paper : 70 gsm N.S. Maplitho
Size : 1/8 demy
Pages : xiv + 158 = 172
Price : **150/-**
Cover Design By : **Belli Creations,** 9164731312

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ಚಾಮರಾಜಪೇಟೆ, ಬೆಂಗಳೂರು–೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨

ಅರ್ಪಣೆ

ದ.ರಾ. ಬೇಂದ್ರೆ ಮನೆತನದ ಮಾತೆಯರಾದ

ಶ್ರೀಮತಿ ಮಂಗಳಾ ಬೇಂದ್ರೆ, ಶ್ರೀಮತಿ ಪದ್ಮ ಪಾಂಡುರಂಗ ಬೇಂದ್ರೆ,

ಶ್ರೀಮತಿ ಪ್ರತಿಮಾ ಸಾತೆ, ಕು॥ ಪುನರ್ವಸು ಬೇಂದ್ರೆ,

ಶ್ರೀಮತಿ ವೈಖರಿ ಬೇಂದ್ರೆ, ಶ್ರೀಮತಿ ರಂಜನಾ ಪ್ರಭಾಕರ ಬೇಂದ್ರೆ,

ಕು॥ ವೃಶಾಲಿ ಪ್ರಭಾಕರ ಬೇಂದ್ರೆ ಅವರಿಗೆ.

ಬೇಂದ್ರೆ ಕಾವ್ಯದ ಧ್ಯಾನಿ ಜಿ. ಕೃಷ್ಣಪ್ಪ

ಕಾವ್ಯದ ಉತ್ಕಟ ಭಾವದಲ್ಲಿ ಭಾಷೆಯು ಮಂದಾರವಾಗಿ ಮಿಡಿಯುತ್ತದೆ. ಹಾಗಾಗಿಯೇ ಭೃಂಗದ ಬೆನ್ನೇರಿ ಕಾವ್ಯ ಕಾಲದ ಹಕ್ಕಿಯಾಗಿ ಹಾರಿಬರುವುದು. ಉತ್ಕಟ ಭಾವ ಸರಸದಲ್ಲೂ ವಿರಸದಲ್ಲೂ ಸಮನಾಗಿ ಆಸ್ಫೋಟಿಸಬಲ್ಲದು. ಬೇಂದ್ರೆಯಂತಹ ಮಹಾಕವಿಗೆ ರಸವೇ ಜನನ ವಿರಸವೇ ಮರಣವೆಂದೆನಿಸುವುದು ಸಾಕ್ಷಾತ್ಕಾರದ ಉತ್ಕಟ ದರ್ಶನದಿಂದ. ಬೇಂದ್ರೆ ಕಾವ್ಯದ ಬಗ್ಗೆ ಹಿರಿಯರಾದ ಕುರ್ತಕೋಟಿ, ಜಿ.ಎಸ್. ಆಮೂರ ಬಹಳ ಒಳ್ಳೆಯ ವಿಮರ್ಶೆಗಳನ್ನು ಬರೆದಿದ್ದಾರೆ. ಕಾವ್ಯದ ಮೋಡಿಕಾರ ಎಂಬುದು ಬೇಂದ್ರೆ ಅವರಿಗೆ ಸಂದ ಬಹಳ ದೊಡ್ಡ ಗೌರವ. ಈ ಪದವಿಯನ್ನು ಬೇರೆ ಕವಿಗಳಿಗೆ ಈಗಲೂ ಜನ ಕೊಟ್ಟಿಲ್ಲ ; ಪ್ರಾಜ್ಞರು ಕೂಡ ಬೇಂದ್ರೆ ಅವರಿಗಿಂತ ಇನ್ನೊಬ್ಬ ದೊಡ್ಡ ಕವಿ ಬಂದಿಲ್ಲ ಎಂದೇ ತಿಳಿದಿದ್ದಾರೆ. ದೊಡ್ಡ ಕವಿಗೆ ಗಿಲೀಟಿನ ವಿಮರ್ಶೆಯ ಅಗತ್ಯವಿಲ್ಲ. ಕಾಲ ಆಯ್ಕೆ ಮಾಡಿಕೊಂಡ ಕವಿಗಳ ಪಟ್ಟಿಯಲ್ಲಿ ಈಗಲೂ ಬೇಂದ್ರೆ ಮತ್ತು ಕುವೆಂಪು ಮೊದಲ ಸ್ಥಾನದಲ್ಲಿಯೇ ಇದ್ದಾರೆ.

ಬೇಂದ್ರೆ ಕಾವ್ಯ ತಾಯ ಎದೆಹಾಲ ಚಿಲುಮೆಯಂತೆ. ಕಾವ್ಯದ ಮಾಯೆ, ಮೋಡಿ ಸುಮ್ಮನೆ ಮಂತ್ರ ಹಾಕಿದರೆ ಬರುವುದಿಲ್ಲ. ಬೇಂದ್ರೆ ಕಾವ್ಯದ ಶಬ್ದಶಿಲ್ಪ ಅತ್ಯುನ್ನತವಾದದ್ದು. ಅದು ಸಾಧ್ಯವಾದದ್ದು ನಾದಲೀಲೆಯ ಶಬ್ದಬ್ರಹ್ಮನ ಧ್ಯಾನದಿಂದ. ಶಬ್ದವೂ ಬ್ರಹ್ಮವೇ... ಅದರ ನಾದವೂ ಲೀಲೆಯೇ... ಇವುಗಳಿಂದಲೇ ಒಂದು ಭಾವದ ತೊಟ್ಟಿಲ ಜೀವ ನಮ್ಮ ಮನದಲ್ಲಿ ಜೋಗುಳದಂತೆ ತೂಗಾಡುವುದು. ಇಂತಹ ಒಬ್ಬ ಶ್ರೇಷ್ಠ ಕವಿಯ ಬಗ್ಗೆ ನನ್ನ ಹಳೆಯ ತಕರಾರುಗಳನ್ನು ಅತ್ತ ಇಟ್ಟು, ಬೇಂದ್ರೆ ಕಾವ್ಯದ ಶಬ್ದ ಚಮತ್ಕಾರದ ಲಯ ವಿನ್ಯಾಸಗಳ ಸೌಂದರ್ಯ ಮೀಮಾಂಸೆಯನ್ನು ಅರ್ಥಬದ್ಧವಾಗಿ ವಿವರಿಸಿರುವ ಡಾ. ಜಿ. ಕೃಷ್ಣಪ್ಪ ಅವರ 'ಹಸಿರು ಹಚ್ಚಿ ಚುಚ್ಚಿ' ಬಗ್ಗೆ ನಾಲ್ಕು ಮಾತುಗಳ ಬರೆಯುವೆನು. ಡಾ. ಜಿ. ಕೃಷ್ಣಪ್ಪ ಅಪರೂಪದ ಸಜ್ಜನ ಕಾವ್ಯಜೀವಿ. ಅವರ ಪಾಲಿಗೆ ಬೇಂದ್ರೆ ಕಾವ್ಯದ ಆಸ್ವಾದನೆ ಮುಕ್ತಿಯ ಒಂದು ದಾರಿಯೂ ಹೌದು. ಕೃಷ್ಣಪ್ಪ ನನಗಿಂತ ಬಹಳ ಹಿರಿಯರು. ಕನ್ನಡ ಸಾಹಿತ್ಯ ಪರಂಪರೆಯ ಆರ್ದ್ರತೆಯನ್ನು ಕುಡಿದು ಬೆಳೆದವರು. ಸ್ವತಃ ಬೇಂದ್ರೆ ಅವರ ಜೊತೆ ಬಾಳ್ವೆಯ ಬೆಳಕನ್ನು ಕಂಡವರು. ಬೇಂದ್ರೆಯ ಕಾವ್ಯದ ಜೊತೆ ಮಾರ್ಗ ಮತ್ತು ದೇಶಿ ಜೀವನ ದರ್ಶನಗಳು ಸಮನಾಗಿ ಹೆಣ್ಣು ಗಂಡಿನಂತೆ ಬೆರೆತಿದ್ದವು. ಮಾರ್ಗ ಒಂದು ಬಗೆಯಲ್ಲಿ ಗಂಡಾದರೆ, ದೇಶಿ ಒಂದು ಬಗೆಯಲ್ಲಿ ತಾಯಿ ಇದ್ದಂತೆ. ಇವೆರಡರ ಸಂಗಮವೇ ಬೇಂದ್ರೆಯ ವ್ಯಕ್ತಿತ್ವ, ಭಾಷೆ, ಕಾವ್ಯ, ದರ್ಶನ. ಶಬ್ದದ ಧ್ವನಿಯೂ ಒಂದು ಬಗೆಯ ದರ್ಶನ. ಸಂಗೀತ ಧ್ವನಿ ಮಾಧುರ್ಯದ ಮಾಂತ್ರಿಕ ಕ್ರಿಯೆ. ಕಾವ್ಯವೂ ಹಾಗೆಯೇ. ಬೇಂದ್ರೆ ಕಾವ್ಯ ನಾದದಿಂದ ಶಬ್ದವನ್ನು ಜೋಡಿಸಿದರೊ, ಶಬ್ದದಿಂದ ನಾದ ಹುಡುಕಿಕೊಂಡರೊ ಹಾಗೂ ಅವೆರಡರಿಂದ ಕಾವ್ಯವನ್ನು ತನ್ನ ದನಿಯಿಂದ

ಬಿಂಬಿಸಿದರೊ ಎಂಬುದು ನಿಗೂಢ. ಈ ಜಾಡಿನ ಹುಡುಕಾಟದಲ್ಲಿ ಬೇಂದ್ರೆ ಕಾವ್ಯದ ವಿಮರ್ಶೆ ಆಳವಾಗಿ ಆಗಿಲ್ಲ.

ಈ ಕಾಲಕ್ಕೆ ಬೇಕಾಗಿದ್ದ ಇಂತಹ ಒಂದು ಬೇಂದ್ರೆ ಕಾವ್ಯದ ಅಧ್ಯಯನವನ್ನು ಪುಟ್ಟ ಪುಟ್ಟ ಹೆಜ್ಜೆಗಳಲ್ಲಿ, ನುಡಿ ಬೆಡಗ ಬೆಳಗಲ್ಲಿ, ಬಹಳ ಅಚ್ಚುಕಟ್ಟಾಗಿ ಡಾ. ಜಿ. ಕೃಷ್ಣಪ್ಪ ಪ್ರಾಮಾಣಿಕವಾಗಿ, ಗಾಢವಾಗಿ, ತನ್ಮಯವಾಗಿ ಬೇಂದ್ರೆ ಕಾವ್ಯದಲ್ಲಿ ಲೀನವಾಗಿ ಮಾಡಿದ್ದಾರೆ. ಕಾವ್ಯಮೀಮಾಂಸೆಯ ಹಳೆಯ ಶಿಸ್ತು ಈಗ ಪಲ್ಲಟಿಸಿದೆ. ಆದರೆ, ಹಳೆಯದರಲ್ಲೂ ನಾವು ಕಲಿಯುವುದು ಬಹಳಷ್ಟು ಇರುತ್ತದೆ. ಕೃಷ್ಣಪ್ಪ ಅವರು ಕಾವ್ಯದ ಬೇರುಗಳನ್ನು ಕೇವಲ ರಾಚನಿಕವಾಗಿ, ಪ್ರಾಕ್ಟಿಕಲ್ ಕ್ರಿಟಿಸಿಸಮ್ಮಿನ ರೀತಿಯಲ್ಲಿ ವಿಶ್ಲೇಷಿಸುವುದಿಲ್ಲ. ಸ್ವತಃ ಬೇಂದ್ರೆ ಕಾವ್ಯವೇ ಆ ಬಗೆಯ ಮಾನದಂಡಗಳಿಗೆ ಒಗ್ಗುವುದಿಲ್ಲ. ಪರಂಪರೆಯಿಂದ ಬಂದ ಮಾರ್ಗ ಮತ್ತು ದೇಶಿಯ ಸಂಬಂಧಗಳು ಮುಖ್ಯವಾಗಿ ಕವಿಗಳಿಂದಾದುದು. ಇನ್ನು ಬೇರೆ ಯಾರೂ ಈ ಕೊಂಡಿಗಳಿಗೆ ಬೆಸುಗೆ ಆಗಲಿಲ್ಲ. ವಚನ, ಭಕ್ತಿ ಕಾವ್ಯ, ತತ್ವ ಪದ, ಜನಪದ ಗೀತ ಇವು ಪುನರುಜ್ಜೀವನಗೊಂಡದ್ದು ಮಧ್ಯಕಾಲೀನ ಇತಿಹಾಸದಲ್ಲಿ. ಬೇಂದ್ರೆ ಕಾವ್ಯದಲ್ಲಿ ಇವು ಕೂಡ ಬೆರೆತಿವೆ. ಕುಣಿತ, ಮಣಿತ, ತಾಳಮೇಳ, ಬಣ್ಣದ ಜಾತ್ರೆ, ಸುಗ್ಗಿಯ ಪದಗಳ ಮಾಂತ್ರಿಕ ಲೋಕಗಳೆಲ್ಲ ಒಂದಾಗಿವೆ. ಹೀಗಾಗಿಯೇ ಡಾ. ಜಿ. ಕೃಷ್ಣಪ್ಪ ಬೇಂದ್ರೆ ಕಾವ್ಯವನ್ನು ಜಾತ್ಯತೀತ ದರ್ಶನದಲ್ಲಿ ನೋಡಲು ಸಾಧ್ಯವಾಗಿರುವುದು. 'ಹಳೆ ಮೈಸೂರಿನವರಾದ' ಅವರಿಗೆ ಕುವೆಂಪು ಸಾಕಾಗಿತ್ತು. ಕುವೆಂಪು ಸಾಹಿತ್ಯದ ಸುತ್ತ ಯಾವ ಒಂದು ಸೋವಿಯಟ್ ಕೋಗಿಲೆಯೂ ಕೂತಿರಲಿಲ್ಲ. ಮಹಾಕವಿ ಕುವೆಂಪು ಶಿಷ್ಯರು ಯಾವ ಕಾವ್ಯ ಸಾಕ್ಷಾತ್ಕಾರದಲ್ಲಿ ಮರೆಯಾದರೋ ಗೊತ್ತಿಲ್ಲ. ಕೃಷ್ಣಪ್ಪ ಅವರು ಬೇಂದ್ರೆ ಎಂಬ ಕಾಲದ ಹಕ್ಕಿಯ ರೆಕ್ಕೆಯ ಜಾಡನ್ನು ಗಾಳಿಯ ಅಲೆಗಳಲ್ಲೇ ಹುಡುಕಿ ಹಿಂಬಾಲಿಸಿದರು. ಅದರ ಪರಿಣಾಮವೇ 'ಹಸಿರು ಹಚ್ಚಿ ಚುಚ್ಚಿ' ಕೃತಿಯ ಬರಹಗಳು.

ಕೃಷ್ಣಪ್ಪ ಅವರು ಬೇಂದ್ರೆ ಕಾವ್ಯದ ಮಾಂತ್ರಿಕತೆಯನ್ನು ವಿವರಿಸುವ ಬಗ್ಗೆ ಹೇಳಬೇಕು. ಬೇಂದ್ರೆ ಕಾವ್ಯ ತತ್ವವನ್ನು ಎಂಟು ಪಾದಗಳಲ್ಲಿ ಇವರು ಆಯ್ದ ಪದ್ಯಗಳ ವಿವೇಚನೆಯಿಂದ ನಿರೂಪಿಸುತ್ತಾರೆ. ಕೇವಲ ಆಸ್ವಾದನೆಯ ಹಂತ ದಾಟಿ, ಧ್ಯಾನದ ದಿವ್ಯ ತನ್ಮಯತೆಯ ಮೀರಿ, ಒಬ್ಬ ಜಿಜ್ಞಾಸು ಈ ಬೇಂದ್ರೆ ಎಂಬ ಕಾವ್ಯದಲ್ಲಿ ಏನನ್ನು ಕಂಡುಕೊಂಡ ಎಂಬುದನ್ನು ಸುಂದರವಾಗಿ ಭಾವದೀಪ್ತಿಯು ಹೊಂದಿಕೊಂಡು ನಿಜ ನಿಜ ಎಂಬಂತೆ ಕಂಡರಿಸುವರು. ತಾನು ಅರಿತ ಕಾವ್ಯದ ಆದರ್ಶವನ್ನು ಅರ್ಥೈಸುವುದೂ ಕೂಡ ಒಂದು ಬಗೆಯ ವಿಮೋಚನೆ ಮತ್ತು ವಿಮರ್ಶೆಯ ವಿಸ್ತರಣೆ. ಮುಖ್ಯವಾಗಿ ಬೇಂದ್ರೆ ಕಾವ್ಯದ ಅನನ್ಯತೆಯನ್ನು ಪ್ರತಿಪಾದಿಸುವ ನಿಷ್ಠೆ ಈ ಬರಹಗಳಲ್ಲಿ ಗಾಢವಾಗಿದೆ. ಆದರೆ, ಕೃಷ್ಣಪ್ಪ ಅವರು ಬೇಂದ್ರೆ ಕಾವ್ಯವನ್ನು ಸಮರ್ಥಿಸುವುದರಲ್ಲಿ ಪ್ರಾಮಾಣಿಕತೆಯಿದೆ. ಹುಸಿ ವಿಮರ್ಶೆಯ ನಾಟಕ ಅವರಲ್ಲಿಲ್ಲ. ನಿಷ್ಠೆಯ ನಿರೂಪಣೆ ಅವರದು. ಕಾವ್ಯ ತೋರಿದ ದಾರಿಯ ವಿಮರ್ಶೆಯೇ ಅವರಿಗೆ ಮುಖ್ಯ. ಹೊರಗಿನಿಂದ ತಂದ ವಿಮರ್ಶಾ ಆಯುಧೋಪಕರಣಗಳಿಂದ ಅವರು ಕಾವ್ಯವನ್ನು ತುಂಡು ಮಾಡಿ ನೋಡುವುದಿಲ್ಲ. ಸ್ವತಃ ಆ ಕವಿಯ ಕಾವ್ಯವೇ ಕಾವ್ಯವನ್ನು ಅರಿಯಲು ಒಂದು ದಾರಿಯನ್ನು ಮಾಡಿರುತ್ತದೆ. ಆ ದಾರಿಯನ್ನು ತಲುಪದೇ ಅನ್ಯ ಮಾರ್ಗಗಳಲ್ಲೇ ಕಾವ್ಯ ವಿಮರ್ಶೆ ನಡೆದು ಬಂದಿದೆ.

ದಲಿತ ಬಂಡಾಯ ಕಾವ್ಯ ಮಾರ್ಗ ಕೆಲವು ಮೌಲ್ಯಗಳನ್ನು ಕಾವ್ಯ ವಿಮರ್ಶೆಗೆ ತಂದಿತು. ಅದರಿಂದ ಕಾವ್ಯ ತತ್ವದ ಮೇಲೆ ಬೆಳಕಾಯಿತು. ನವ್ಯಕಾವ್ಯವೂ ತನ್ನ ದಾರಿ ಸುಧಾರಿಸಿಕೊಂಡಿತು. ಇಷ್ಟಾದರೂ ಯಾವ ದಲಿತ ಬಂಡಾಯ ಕವಿಗಳೂ ಕುವೆಂಪು ಹಾಗು ಬೇಂದ್ರೆ ಕಾವ್ಯವನ್ನು ನಿರಾಕರಿಸಲಿಲ್ಲ ; ಅಂದರೆ ಅವರ ಕಾವ್ಯತತ್ವದ ಕರುಳ ಬಳ್ಳಿಯು ನಿಸರ್ಗನಿಷ್ಠವಾದ ತಾಯ್ತನದಲ್ಲಿ ಕಾವ್ಯಭಾಷೆಯನ್ನು ವಿಸ್ತರಿಸಿದೆ ಎಂದು ಎಲ್ಲ ಕಾಲದ ಕವಿಗಳು ಒಪ್ಪಿದ್ದಾರೆ ಎಂದರ್ಥ.

ಕೃಷ್ಣಪ್ಪ ಅವರು ಬೇಂದ್ರೆ ಕಾವ್ಯದ ಜೀವನ ದರ್ಶನವನ್ನು ತಮ್ಮ ಜೀವನದ ತೊಟ್ಟಿಲಿಗೆ ತಂದು ತೂಗಿ ಅರ್ಥೈಸುತ್ತಿದ್ದಾರೆ. ಹಾಗಾಗಿಯೇ ಇದು ದೇಶೀ ವಿಮರ್ಶೆ; ಪಾಶ್ಚಾತ್ಯ ಕಾವ್ಯ ವಿಮರ್ಶೆಯ ನೆರಳಿನ ನಿರೂಪಣೆ ಅಲ್ಲ. ಬೇಂದ್ರೆ ಕಾವ್ಯವೇ ಕೃಷ್ಣಪ್ಪ ಅವರಿಗೆ ಒಂದು ವಿಸ್ಮಯ, ಆನಂದ, ಅನಂತ ಕಾವ್ಯದ ಲೀಲೆ. ಇದನ್ನು ಯಾರಾದರೂ ಪ್ರಶ್ನಿಸಬಹುದು; ಆದರೆ ಇಷ್ಟು ಹಿರಿಯ ಗಾಂಧಿ ತತ್ವಾನುಯಾಯಿಯಾದ ಕೃಷ್ಣಪ್ಪ ಅವರಿಗೆ ಯಾವ ಸಾಹಿತ್ಯಿಕ ವ್ಯಾಮೋಹಗಳೂ ಇಲ್ಲ. ಹೆಚ್ಚೆಂದರೆ ಬೇಂದ್ರೆ ಕಾವ್ಯದ ಬಗ್ಗೆ ಒಂದು ಉಪನ್ಯಾಸ ನೀಡಲು ಸ್ವಂತ ಖರ್ಚಿನಲ್ಲೇ ಎಲ್ಲಿಗಾದರೂ ಈ ಇಳಿಗಾಲದಲ್ಲೂ ಹೋಗಿ ಬರಲು ಸಿದ್ಧರು. ಬೇಂದ್ರೆ ಕಾವ್ಯದ ಪ್ರತಿನಿಧಿಯಂತೆ ಕೃಷ್ಣಪ್ಪ ಕಾಣುವರು. ಬೇಂದ್ರೆ ಕಾವ್ಯದ ಆಳದ ಬೇರುಗಳನ್ನು ಅವರು ಎಷ್ಟು ಸೂಕ್ಷ್ಮವಾಗಿ ಗ್ರಹಿಸಿದ್ದಾರೆ ಎಂಬುದಕ್ಕೆ ಈ ಕೃತಿಯ ಬಿಡಿಬಿಡಿ, ಪುಟ್ಟ ಬರಹಗಳು ಸಾಕ್ಷಿ ನೀಡುತ್ತವೆ. ಬೇಂದ್ರೆ ಕಾವ್ಯ ಒಮ್ಮೊಮ್ಮೆ ಸ್ಪರ್ಶಿಸಿದಂತೆ ಭಾಸವಾಗುತ್ತದೆ. ಕಾವ್ಯ ಕೂಡ ಅಂತರಾಳವ ಮುಟ್ಟುತ್ತದೆ. ಅಂತೆಯೇ ಕೃಷ್ಣಪ್ಪ ಮನಮುಟ್ಟುವಂತೆ ಬರೆಯುತ್ತಾರೆ. ಶಬ್ದಗಳಿಗೆ ಬಣ್ಣ ವಾಸನೆಗಳಿಲ್ಲ ನಿಜ; ಆದರೆ ಕವಿ ಪದಪದಗಳಿಗೂ ಮಾನವ ಸಂಬಂಧಗಳ ನಾಡಿಮಿಡಿತವ ತೊಡಿಸಬಲ್ಲ. ಹಾಗೆಯೇ ಬೇಂದ್ರೆಯ ನಾಡಿ ನಾದದ ಮಿಡಿತವ ಗ್ರಹಿಸಿ ಬರೆವ ವಿಮರ್ಶೆಯೂ ನಮಗೆ ಪಂಚಭೂತಗಳ ಸ್ಪರ್ಶವನ್ನು ಮಾಡಿಸುವಂತೆ ಆ ಕ್ಷಣಕ್ಕೆ ಬೆರಗು ಹುಟ್ಟಿಸುತ್ತದೆ.

ಇಂತಹ ಹಿರಿಯ ಡಾ. ಜಿ. ಕೃಷ್ಣಪ್ಪ ಅವರ ಈ ಕೃತಿಯು ವ್ಯಾಪಕವಾಗಿ ಓದುಗರ ಎದೆಯ ಕದವ ತೆರೆದು ಮತ್ತೊಮ್ಮೆ ಮನಮುಟ್ಟಲಿ ಎಂದು ಬಯಸುವೆ.

ಕನ್ನಡ ವಿಶ್ವವಿದ್ಯಾಲಯ **–ಮೊಗಳ್ಳಿ ಗಣೇಶ್**
9483980959

ಲೇಖಕನ ನುಡಿ

ವರಕವಿ ದ.ರಾ. ಬೇಂದ್ರೆಯವರ ಕಾವ್ಯ ಸಹೃದಯನಿಗೆ ನಿಜದ ಅರಿವನ್ನು ಉಣಬಡಿಸುತ್ತ, ಅವನನ್ನು ಸಾಂಸಾರಿಕ ಜಂಜಡದಿಂದ ತುಸು ಬಿಡುಗಡೆಗೊಳಿಸಿ– ಒಂದು ಉನ್ನತ ಮನೋಸ್ತರಕ್ಕೆ ಕೊಂಡೊಯ್ಯುತ್ತದೆ. ಅವನು ಅಧ್ಯಾತ್ಮದ ಸೂಕ್ಷ್ಮ ಮಿಡಿತದಲ್ಲಿ ಧ್ಯಾನಸ್ಥನಾಗುವಂತೆ ಮಾಡುತ್ತದೆ. ಅವರ ಕಾವ್ಯ ಈ ನೆಲದ ಬಹು ಸಂಸ್ಕೃತಿಯ ವಿವಿಧ ಮಿಡಿತಗಳನ್ನು ಒಳಗೊಂಡ ನಾದಲೀಲೆಯಾಗಿದೆ. ನಮ್ಮ ಜನಪದರು ಬಳಸುವ ದೇಸಿಪದಗಳು ಅವರ ಜೀವನಾನುಭವದ ವ್ಯಕ್ತರೂಪವಾಗಿದ್ದು, ಅವು ಅವರ ಮಾನಸಿಕ ಪಕ್ವತೆಯ ಪ್ರತೀಕವಾಗಿವೆ. ಅದಕ್ಕೆ ಕಿವಿಯಾದ ಬೇಂದ್ರೆಯವರು ಅದನ್ನು ಸಮರ್ಥವಾಗಿ ಶಿಷ್ಟ ಕಾವ್ಯದಲ್ಲಿ ಕಸಿಗೊಳಿಸಿದ್ದಾರೆ. ಅದರ ಸೂಕ್ಷ್ಮ ಅಧ್ಯಯನ ಈ ವಿಮರ್ಶಾ ಲೇಖನಗಳಲ್ಲಿದೆ.

ಅವರ ಭಾವವೈಖರಿಗೆ ತಕ್ಕಂತೆ ಕವನಗಳ ಛಂದಸ್ಸು ರೂಪುಗೊಂಡಿವೆ. ಅವು ಒಂದೊಂದು ತನ್ನದೆ ಪ್ರಾಸ ವಿಲಾಸ ಗತಿಯಿಂದ ಸಾಗಿ ಸಹೃದಯ ಆಹ್ಲಾದಿಯಾಗಿವೆ. ಅವರ ಕಾವ್ಯದಲ್ಲಿ ನಿಸರ್ಗದ ಬೆಡಗು, ಪ್ರೇಮದ ಕಂಪು, ನೋವು ನಲಿವಿನ ಬದುಕು, ಸಾಮಾಜಿಕ ಚಿಂತನೆ, ಅಧ್ಯಾತ್ಮ ಜಿಜ್ಞಾಸೆ ಹಾಸು ಹೊಕ್ಕಾಗಿವೆ. ಅದನ್ನು ತಿಳಿಯುವ ಕಿರು ಪ್ರಯತ್ನದ ಫಲ 'ಹಸಿರು ಹಚ್ಚಿ ಚುಚ್ಚಿ' ಕಾವ್ಯ ವಿಮರ್ಶೆ.

'ಲೀಲೆಯಲಿ ಯಾವುದೂ ವಿಫಲ ಮಲ್ಲ' ಎಂಬುದು ಬೇಂದ್ರೆ ಚಿಂತನೆ. ಆ ಮಾರ್ಗದಲ್ಲಿ ನಡೆದು ಅವರ ಕಾವ್ಯ ವಿಮರ್ಶೆ ಮಾಡಿದೆ. ಅದು ಸಾವಿರಾರು ಜನ ಓದುಗರಿಗೆ ತಲುಪುವಂತೆ ಮಾಡಿದವರು ನನ್ನ ಆತ್ಮೀಯ ಕಾವ್ಯಾಸಕ್ತ ಪತ್ರಿಕಾ ಬಳಗದವರು. ನಾನು ಆಗಾಗ್ಗೆ ಬರೆದ ಬೇಂದ್ರೆ ಕಾವ್ಯ ವಿಮರ್ಶಾ ಲೇಖನಗಳನ್ನು ಪ್ರಕಟಿಸಿ ಪ್ರೋತ್ಸಾಹಿಸಿದ ಅವರಿಗೆ ನಾನು ಋಣಿಯಾಗಿದ್ದೇನೆ.

ವಿಮರ್ಶಾ ಲೇಖನಗಳನ್ನು ಪ್ರಕಟಿಸಿದ 'ಪ್ರಜಾವಾಣಿ'ಯ ಸಂಪಾದಕರಾದ ಕೆ.ಎನ್. ಶಾಂತಕುಮಾರ್, ಪದ್ಮರಾಜ ದಂಡಾವತಿ, ಚ.ಹ. ರಘುನಾಥ್, ಬಿ.ಎಂ. ಹನೀಫ್, ಸಂದೀಪ ನಾಯಕ್, ಶೈಲಜಾ ಹೂಗಾರ್ ; 'ವಿಜಯ ಕರ್ನಾಟಕ'ದ ಬಿ.ಎಸ್. ಜಯಪ್ರಕಾಶ ನಾರಾಯಣ, ವೆಂಕಟೇಶ ಮಾನು, ಅದರ 'ಬೋಧಿವೃಕ್ಷ' ಸಂಚಿಕೆಯ ಸಂಪಾದಕರಾದ ಶ್ರೀವತ್ಸ ನಾಡಿಗ ಮತ್ತು ಗೌರಿಪುರ ಚಂದ್ರು ; 'ಸಂಯುಕ್ತ ಕರ್ನಾಟಕ'ದ ಮುಖ್ಯ ಸಹಾಯಕ ಸಂಪಾದಕ ರಾಜು ಮಳವಳ್ಳಿ ; 'ಔಟ್‌ಲುಕ್' ಆಂಗ್ಲ ಮಾಸಿಕದ ಸುಗತ ಶ್ರೀನಿವಾಸರಾಜು ; 'ಸಿಹಿಗಾಳಿ' ಮಾಸಪತ್ರಿಕೆಯ ಸಂಪಾದಕರುಗಳಿಗೆ ನನ್ನ ಮನಃಪೂರ್ವಕ ನಮನಗಳು.

ನಾನು ತಿಳಿದ ಬೇಂದ್ರೆ ಕಾವ್ಯದ ಆಂತರ್ಯವನ್ನು 'ಆಕಾಶವಾಣಿ'ಯ 'ಚಿಂತನ'ದಲ್ಲಿ ಜನಮನಕ್ಕೆ ತಲುಪಿಸಿದ ಮತ್ತು ಬೇಂದ್ರೆ ಕಾವ್ಯ ಕುರಿತು ಸಂದರ್ಶನ ನಡೆಸಿದ ಅದರ ನಿರ್ದೇಶಕರಾದ ಆನಂದ ಪಾಟೀಲ, ಬಸವರಾಜ ಸಾದರ ; ಕಾರ್ಯಕ್ರಮ ನಿರ್ವಾಹಕರಾದ ಎಸ್. ಸಾಯಿಲಕ್ಷ್ಮಿ, ನೂತನ, ಸುಲೋಚನ ಹುಲ್ಲಲ್ಲಿ ಅವರನ್ನು ಸದಾ ನೆನೆಯುತ್ತೇನೆ.

ಬೇಂದ್ರೆ ಕಾವ್ಯ ವಿಮರ್ಶಾ ಸೂಕ್ಷ್ಮಗಳನ್ನು ತಿಳಿಸಿ ಈಗಲೂ ಮಾರ್ಗದರ್ಶನ ಮಾಡುತ್ತಿರುವ ಗುರು ಕೆ. ಅನಂತರಾಮು ಅವರಿಗೆ ನನ್ನ ಪ್ರಣಾಮಗಳು. ಬೇಂದ್ರೆ ಕಾವ್ಯ ಅಧ್ಯಯನಕ್ಕೆ ಎಲ್ಲ ಪ್ರೋತ್ಸಾಹ ನೀಡಿ ನಾಡಿನಾದ್ಯಂತ ಶಾಲಾ ಕಾಲೇಜುಗಳಲ್ಲಿ 'ದ.ರಾ. ಬೇಂದ್ರೆ ಕವನ ಗಾಯನ ಸ್ಪರ್ಧೆ' ನಡೆಸಲು ಸಹಕಾರ ನೀಡುತ್ತಿದ್ದವರು ಕವಿಪುತ್ರರಾದ ದಿ. ಪಾಂಡುರಂಗ ಬೇಂದ್ರೆ ಮತ್ತು ದಿ. ವಾಮನ ಬೇಂದ್ರೆ ಅವರ ನಿಷ್ಕಲ್ಮಷ ಪ್ರೀತಿಯನ್ನು ನೆನೆದಾಗ ಮನಸ್ಸು ತುಂಬಿಬರುತ್ತದೆ, ಕಣ್ಣು ಕಂಬನಿದುಂಬುತ್ತದೆ.

ನನ್ನ ಬೇಂದ್ರೆ ಕಾವ್ಯ ಅಧ್ಯಯನಕ್ಕೆ ಉತ್ತೇಜನ ನೀಡುತ್ತಿರುವ ಆಚಾರ್ಯ ಮಲ್ಲೇಪುರಂ ಜಿ. ವೆಂಕಟೇಶ್, ಎಸ್.ಜಿ. ಸಿದ್ದರಾಮಯ್ಯ, ಪುರುಷೋತ್ತಮ ಗಲಗಲಿ, ಕೋ. ಚೆನ್ನಬಸಪ್ಪ, ಬಾಳಣ್ಣ ಸೀಗೀಹಳ್ಳಿ, ಸಿ. ನಾಗಣ್ಣ, ಕೆ.ಸಿ. ಶಿವಾರೆಡ್ಡಿ, ಡಿ.ಎನ್. ಅಕ್ಕಿ, ಜ.ಹೊ. ನಾರಾಯಣಸ್ವಾಮಿ, ರಾಜೇಗೌಡ ಹೊಸಹಳ್ಳಿ, ಶಿವರಾಮಯ್ಯ, ಎಂ. ನರಸಿಂಹ, ಎನ್. ಸೂರ್ಯನಾರಾಯಣ, ಜೆ.ಎನ್. ಶ್ಯಾಮರಾವ್, ಟಿ.ಎನ್. ವಾಸುದೇವಮೂರ್ತಿ, ಎ.ಕೆ. ರವಿಶಂಕರ, ಸತ್ಯಮಂಗಲ ಮಹದೇವ, ಎಂ. ಬಸವಣ್ಣ, ಪುನರ್ವಸು ಬೇಂದ್ರೆ, ಎಚ್.ಎಸ್. ಹರಿಶಂಕರ, ಡಿ.ಕೆ. ಶ್ಯಾಮಸುಂದರರಾವ್, ಪಂಡಿತ ಎಚ್. ಹನುಮಂತರಾಯ, ಸುಬ್ಬು ಹೊಲೆಯಾರ್, ಸಿದ್ದರಾಮಪ್ಪ ಮಾಸಿಮಡೆ ಮುಂತಾದವರನ್ನು ನೆನೆಯುವುದೊಂದು ಭಾಗ್ಯವಾಗಿದೆ.

ನನ್ನ ಬೇಂದ್ರೆ ಕಾವ್ಯ ಅಧ್ಯಯನವನ್ನು ಪ್ರೋತ್ಸಾಹಿಸುತ್ತಿರುವ ನಾಡಿನ ಹೆಸರಾಂತ ಕಥೆಗಾರರು ಮತ್ತು ವಿಮರ್ಶಕರು ಆದ ಪ್ರಾಧ್ಯಾಪಕ ಮೊಗಳ್ಳಿ ಗಣೇಶ್ ಅವರು ಅಮೂಲ್ಯವಾದ ಮುನ್ನುಡಿಯನ್ನು ಬರೆದುಕೊಟ್ಟಿದ್ದಾರೆ. ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ನನ್ನ ಎಲ್ಲ ಸಾಹಿತ್ಯ ಚಟುವಟಿಕೆಗಳಿಗೆ ಸಹಕಾರ ನೀಡುತ್ತಿರುವ ನಮ್ಮ ದ.ರಾ. ಬೇಂದ್ರೆ ಕಾವ್ಯ ಕೂಟದ ಸದಸ್ಯರಿಗೆ ನನ್ನ ಮನಃಪೂರ್ವಕ ವಂದನೆಗಳು. ನನ್ನ ಸಾಹಿತ್ಯ ಅಧ್ಯಯನಕ್ಕೆ ತುಂಬು ಉತ್ತೇಜನ ನೀಡುತ್ತಿರುವ ನನ್ನ ಪತ್ನಿ, ಮಕ್ಕಳು, ಅಳಿಯಂದಿರು ಮತ್ತು ಸೊಸೆಯನ್ನು ನೆನೆಯುವುದು ನನ್ನ ಕುಟುಂಬ ಸಾಹಿತ್ಯ ಪೋಷಕ ವಾತಾವರಣದ ಆಹ್ಲಾದ.

'ಹಸಿರು ಹಚ್ಚಿ ಚುಚ್ಚಿ' (ದ.ರಾ. ಬೇಂದ್ರೆ ಕಾವ್ಯ ವಿಮರ್ಶೆ) ಕೃತಿಯನ್ನು ಪ್ರಕಟಿಸುತ್ತಿರುವ ವಂಶಿ ಪಬ್ಲೀಕೇಷನ್ಸ್‌ನ ಯುವ ಉತ್ಸಾಹಿ ಎನ್. ಪ್ರಕಾಶ್ ಅವರಿಗೆ, ಮುಖ ಪುಟ ವಿನ್ಯಾಸ ಬೆಳ್ಳಿ ಕ್ರೀಯೆಷನ್ಸ್ ಶ್ರೀನಿಧಿ ಅವರಿಗೆ, ಮುದ್ರಕರಾದ ಲಕ್ಷ್ಮೀ ಮುದ್ರಣಾಲಯದವರಿಗೆ ವಂದನೆಗಳು.

ನಾನು ಈ ಮೊದಲು ರಚಿಸಿರುವ ಬೇಂದ್ರೆ ಕಾವ್ಯ ವಿಮರ್ಶಾ ಕೃತಿಗಳನ್ನು ಓದಿ ಸವಿದ ಕನ್ನಡ ಕಾವ್ಯ ರಸಿಕರು ಮತ್ತು ವಿದ್ವನ್ಮಣಿಗಳು ಈ ಕೃತಿಯನ್ನು ಪ್ರೀತಿಯಿಂದ ಸ್ವೀಕರಿಸಿ ಆಶೀರ್ವದಿಸಬೇಕೆಂದು ಪ್ರಾರ್ಥಿಸುತ್ತೇನೆ.

ಬೆಂಗಳೂರು **ಡಾ. ಜಿ. ಕೃಷ್ಣಪ್ಪ**

೧೮.೦೩.೨೦೧೯

ಪರಿವಿಡಿ



ಹಸಿರು ಹಚ್ಚಿ ಚುಚ್ಚಿ ಮೇಲ್ಕರಿಸಿಣ ಹಚ್ಚಿ

ಬೆಡಗು ಬಿನ್ನಾಣದ ಆಕರ್ಷಕ ಚಿಟ್ಟೆಯನ್ನು ಕಂಡು ನಲಿದ ಮುಗ್ಧ ತಂಗಿಯ ಉತ್ಸಾಹವನ್ನು ಕವಿ ದ.ರಾ. ಬೇಂದ್ರೆ 'ಪಾತರಗಿತ್ತಿ ' ಕವನವಾಗಿ ರಚಿಸಿದ್ದಾರೆ. ಅವರ ನವನವೀನ ಬಣ್ಣನೆಯಲ್ಲಿ ನಮಗೆ ಗೊತ್ತಿರುವ ಚಿಟ್ಟೆಯ– ಅಪರಿಚಿತ ಆಯಾಮಗಳನ್ನು ತಿಳಿದಾಗ ಮನಸ್ಸು ಮುದಗೊಳ್ಳುತ್ತದೆ. ತಂಗಿಯು ಅಕ್ಕನಿಗೆ ಕೇಳುತ್ತಿದ್ದಾಳೆ :

ಪಾತರಗಿತ್ತೀ ಪಕ್ಕಾ / ನೋಡೀದೇನ ಅಕ್ಕಾ !

ತಂಗಿಯು ತಾನು ಪಾತರಗಿತ್ತಿಯ ಪಕ್ಕ(ರೆಕ್ಕೆ)ದಲ್ಲಿ ಕಂಡ ಬೆರಗನ್ನು ಅಕ್ಕನಿಗೆ ಹೇಳುತ್ತ ಆಶ್ಚರ್ಯವನ್ನು ವ್ಯಕ್ತಪಡಿಸುತ್ತಿದ್ದಾಳೆ. ಆ ತಂಗಿಗೆ ಪಾತರಗಿತ್ತಿಯ ರೆಕ್ಕೆಯ ಮೇಲಿರುವುದು ಹಳ್ಳಿಯ ಜನಗಳ ಮೈ ಮುಖದ ಮೇಲೆ ಕಂಡ ಹಚ್ಚೆಯ ಪ್ರತಿರೂಪ. ಅವಳು ಆ ದೇಸಿಕಲೆಯನ್ನು ಹಸಿರು ಗಿಡಮೂಲಿಕೆಗಳಿಂದ ತಯಾರಿಸಿದ ರಸವನ್ನು ಹಚ್ಚಿ, ಹಚ್ಚೆ ಚುಚ್ಚುವುದು ಕಂಡಿದ್ದಾಳೆ. ಆ ಚುಚ್ಚಿದ ಭಾಗಕ್ಕೆ ನಂಜು ಆಗದಿರಲು ಅರಿಷಿಣ ಹಚ್ಚುವುದನ್ನು ನೋಡಿದ್ದಾಳೆ. ಹಣೆ, ಗಲ್ಲ, ಮುಂಗೈ, ತೋಳುಗಳ ಮೇಲೆ ಚಿತ್ತಾರಗೊಂಡ ಹೂವು, ನಕ್ಷತ್ರ, ಸೀತೆ ಸೆರಗು, ಮುತ್ತಿನ ಬಳ್ಳಿ, ಒಡವೆ, ಶಿವನ ಬಾಸಿಂಗ, ಬಾಳೆಗಿಡ ಚಿತ್ತಾರಗಳ ಕಲೆಯನ್ನು ಮೈ ಮನಗಳಲ್ಲಿ ತುಂಬಿಕೊಂಡಿದ್ದಾಳೆ. ಜೀವಂತ ಚೇತನದ ಪಾತರಗಿತ್ತಿಯ ರೆಕ್ಕೆಗಳಿಗೆ ಅನಂತಶಕ್ತ ಹಚ್ಚೆ ಹಚ್ಚಿರುವುದನ್ನು ಕಂಡು ಅಚ್ಚರಿಗೊಂಡಿದ್ದಾಳೆ. ಅದರ ಬಣ್ಣ ಬೆಡಗು ಲವಲವಿಕೆಗೆ ಸರಿಸಾಟಿಯಾಗಿ ಓಡಿ, ಪಾತರಗಿತ್ತಿಯನ್ನು ಹಿಡಿದು ನೋಡಿ ಅಕ್ಕನಿಗೆ ಹೇಳುತ್ತಿದ್ದಾಳೆ. ಅದನ್ನು ಮುಟ್ಟಿನೋಡಿದೆ ಕೈ ಎಲ್ಲ ಅರಿಷಿಣವಾಯಿತು. ಅದಕ್ಕೆ ಸೃಷ್ಟಿಕರ್ತ 'ಹಸಿರು ಹಚ್ಚಿ ಚುಚ್ಚಿ! ಮೇಲಕರಿಸಿಣ ಹಚ್ಚಿ' ಕಳುಹಿಸಿದ್ದಾನೆ !

ಚಿಟ್ಟೆಯ ರೆಕ್ಕೆಯ ಮೇಲೆ ಹುರುಪೆಗಳಿವೆ. ಆ ಮೋಹಕ ಲಾವಣ್ಯದ 'ಪಕ್ಕ' ಹಿಡಿಯಲು ಹೋದರೆ ನಮ್ಮ ಕೈಗೆ ಹುರುಪೆ ಅಂಟಿಕೊಳ್ಳುತ್ತದೆ. ಹಾಗೆ ಅಂಟಿಕೊಳ್ಳಲು ಅದರಲ್ಲಿರುವ ವಿವಿಧ ವರ್ಣದ್ರವ್ಯವೇ ಕಾರಣ. ಅದು ಬೆಳಕಿನ ಕಾರಣದಿಂದ ಹಲವು ಬಣ್ಣಗಳನ್ನು ಹೊಮ್ಮಿಸುತ್ತದೆ. ಆ ಹುರುಪೆಯನ್ನು ನಾವು ಹೆಚ್ಚು ಅದುಮಿ ಅಲುಗಾಡಿಸಿ ಹಿಂಸಿಸಿದಾಗ ರೆಕ್ಕೆಗಳ ಸಮತೋಲನಕ್ಕೆ ಧಕ್ಕೆಯಾಗುತ್ತದೆ.

ತಂಗಿಯ ಕುತೂಹಲದ ಹಚ್ಚೆ ಪಾತರಗಿತ್ತಿಯ ರೆಕ್ಕೆಯ ಮೇಲೆ ತನ್ನ ವರ್ಣವೈಭವದ ಚಿತ್ತಾರದಲ್ಲಿ ಮೌನದಲ್ಲಿ ಕಂಗೊಳಿಸುತ್ತಿದೆ. ಹೀಗೆ ಮೌನದ ಪ್ರತಿಮೆಯಂತೆ ಹಚ್ಚೆ ಅಲ್ಲಿರುವುದನ್ನು ಕಾವ್ಯ ಸುಲಭವಾಗಿ ಬಿಟ್ಟುಕೊಡುವುದಿಲ್ಲ. ಅದು ಕವಿಯ ಕಲ್ಪನಾ ಸಾಮರ್ಥ್ಯದಲಿ ಒಂದಾದ ಕಾವ್ಯ ರಚನಾ ಕುಶಲತೆ. ಸ್ಥಾವರವಾದ ದೇಸಿಕಲೆ ಹಚ್ಚೆ ಜಂಗಮವಾಗಿ ಪಾತರಗಿತ್ತಿಯಲ್ಲಿ ಹರಿದಾಡಿ ಸಹೃದಯನಿಗೆ ಕಚಗುಳಿ ಇಡುತ್ತದೆ.

ಪಾತರಗಿತ್ತಿಯ ರೆಕ್ಕೆಯನ್ನು ನೋಡುತ್ತಿದ್ದರೆ ಅದರ ರಚನೆಯಲ್ಲಿ ಸುತ್ತಲೂ ಹೊನ್ನ ಚಿಕ್ಕಿ ಚಿಕ್ಕಿಯ ಹೊಳಪಿದೆ. ಮಧ್ಯದಲ್ಲಿ ಬೆಳಗುವ ಬೆಳ್ಳಿಯಂತಹ ಕಣ್ಣು (ಅಕ್ಕಿ=ಅಕ್ಷಿ) ಇದೆ.

ಹೊನ್ನ ಚಿಕ್ಕಿ ಚಿಕ್ಕಿ / ಇಟ್ಟು ಬೆಳ್ಳೀ ಅಕ್ಕಿ,

ಹೆಣ್ಣುಮಕ್ಕಳು ಕಣ್ಣಿಗೆ ಕಾಡಿಗೆ ಹಚ್ಚಿಕೊಂಡು ನಲಿದ ಸೊಬಗನ್ನು ತಂಗಿಯು ಪಾತರಗಿತ್ತಿಯಲ್ಲಿ ನೋಡಿ ಅಕ್ಕನಿಗೆ ಹೇಳುತ್ತಿದ್ದಾಳೆ.

ಸುತ್ತೂ ಕುಂಕುಮದೆಳಿ / ಎಳೆದು ಕಾಡಿಗೆ ಸುಳಿ,

* *

ನನ್ನ ಚಿತ್ರಕ ಶಕ್ತಿ ಉತ್ಪ್ರೇಕ್ಷೆಯನೇರಿ
ಬಣ್ಣ ಬಣ್ಣದ ಬಣ್ಣನೆಗೆ ಒಲಿದಿತು

ಎಂದು ಹೇಳುವ ಬೇಂದ್ರೆಯವರ ಉತ್ಪ್ರೇಕ್ಷೆಯು 'ಪಾತರಗಿತ್ತಿ'ಯಲ್ಲಿ ಚೆಲ್ಲುವರಿದಿದೆ. ಅವರ ಚಿತ್ರಕಶಕ್ತಿ ತಂಗಿಯ ಕುತೂಹಲದಲ್ಲಿ ಗರಿಗೆದರಿದೆ. ಜನಪದರ ಅನುಭವ ಜಾಣತನದಿಂದ ಧ್ವನಿಯಾಗಿ ಹೊಮ್ಮುವುದೇ ನುಡಿಗಟ್ಟು. ಅದರ ಭಾವತೀವ್ರತೆ ವರ್ಣನಾತೀತ. ಅಂತಹದೇ ನುಡಿಗಟ್ಟು 'ಗಾಳಿ ಕನೆ'ಯನ್ನು ಬೇಂದ್ರೆಯವರು ಪಾತರಗಿತ್ತಿಯನ್ನು ಬಣ್ಣಿಸಲು ಬಳಸಿದ್ದಾರೆ. ಪಾತರಗಿತ್ತಿಯ ಶುಭ್ರತೆ, ನುಣುಪು, ರಂಗು, ಕಾಂತಿಗೆ ಮಾರುಹೋದ ತಂಗಿಯು– 'ಇದನ್ನು ಗಾಳಿಯ ಕೆನೆಯಲ್ಲಿ ಮಾಡಿದ್ದಾರಲ್ಲವೆ!' ಎಂದು ಅಕ್ಕನನ್ನು ಕೇಳುತ್ತಾಳೆ.

ಗಾಳೀ ಕೆನೀ ಲೇನs / ಮಾಡಿದ್ದಾರ ತಾನ !

ಕಣ್ಣು ಹರಿದಷ್ಟು ದೂರ ಅನಿರ್ಬಂಧಿತವಾಗಿ ಈ ಕೊನೆಯಿಂದ ಆ ಕೊನೆಯವರೆಗೆ (ಅರುಪಾರು) ಹಾರಾಡುತ್ತಿರುವ, ಗುಂಪು ಗುಂಪಾಗಿ ಹಾರಾಡುತ್ತಿರುವ ಅಗಣಿತ ಪಾತರಗಿತ್ತಿಯನ್ನು ವೀಕ್ಷಿಸುತ್ತ ತಂಗಿ ಅಕ್ಕನನ್ನು ಪ್ರಶ್ನಿಸುತ್ತಾಳೆ :

ನೂರು ಆರುಪಾರು / ಯಾರು ಮಾಡಿದ್ದಾರು !

ತಂಗಿಯ ಪ್ರಶ್ನೆ ಅಕ್ಕನಿಗೂ ಪ್ರಶ್ನೆಯಾಗಿಯೇ ಉಳಿಯುತ್ತದೆ. ಅದರ ರೆಕ್ಕೆಯ ಮೇಲೆ ವಿವಿಧ ಬಣ್ಣಗಳ ಮೆರವಣಿಗೆಯಿದ್ದರೂ ಮಧ್ಯದಲ್ಲಿ ನವಿಲುಗಣ್ಣು ಚಿತ್ರಿತವಾಗಿದೆ. ಇಷ್ಟೆಲ್ಲ ವರ್ಣವೈಭವದ ಹಚ್ಚೆ ಹೊಂದಿದ ಅದರ ತೆಳುವಾದ ರೆಕ್ಕೆ ರೇಷ್ಮೆಯಷ್ಟು ನಯವಾಗಿದೆ. ಅದರ ಸೂಕ್ಷ್ಮತೆಯ ಕಾರಣ ಅದನ್ನು ಮುಟ್ಟಲು ತನಗೆ ಭಯ ಎಂದು ತಂಗಿ ಹೇಳುವಲ್ಲಿ ಅವಳ ಮರುಕ ಹಾಗೂ ತನ್ನ ಹಿಡಿತದಿಂದ ಅದು ಹರಿಯುವುದೆಂಬ ನೋವು ಕಾಡಿದೆ.

ಏನು ಬಣ್ಣ ಬಣ್ಣ / ನಡುವೆ ನವಿಲಗಣ್ಣ !
ರೇಶಿಮೆ ಪಕ್ಕ ನಯ / ಮುಟ್ಟಲಾರೆ ಭಯ !

ಹಾರಾಡುವ ಹೂವಿನಂತಿರುವ ಪಾತರಗಿತ್ತಿಯು ಹೂವಿನ ಬಳಿ ಹೋಗಿ ಗಲ್ಲಾ ತಿವಿಯುವುದನ್ನು ಗಮನಿಸಿದ ತಂಗಿಗೆ ಆದ ಮುದವು ಸಹೃದಯರ ಮನಸ್ಸನ್ನು ಅರಳಿಸುತ್ತದೆ.

ಹೂವಿನ ಪಕಳಿಗಿಂತ / ತಿಳಿವು ತಿಳಿವು ಅಂತ?
ಹೂವಿಗೆ ಹೋಗಿ ತಾವ / ಗಲ್ಲಾ ತಿವಿತಾವ.

ಚಿಟ್ಟೆಗಳು ಚೆಲ್ಲುವರಿದು, ಚೆಲ್ವುವರಿದು (ಅಂದವಾಗಿ ಓಡು) ಇರುವ ಪ್ರಾಕೃತಿಕ ಎಡೆಗಳಾದ ಹುಲ್ಲುಗಾವಲು, ತೋಟ, ಕಳ್ಳಿ, ನಾಯಿಕೊಡೆ, ರುದ್ರಗಂಟಿ ಹೂ, ವಿಷ್ಣುಗಂಟಿ ಹೂ, ಹೇಸಿಗೆ ಹೂ, ಮದುಗುಣಿಕಿ ಹೂ, ಗುಲಬಾಕ್ಷಿ ಹೂ, ಸೀಗಿಬಳ್ಳಿ, ಗೊರಟಿಗೆ ಹೂ, ಮಾಲಿಂಗನ ಬಳ್ಳಿಗಳಲ್ಲಿ ಓಡಾಡಿರುವುದು ಅವುಗಳ ಬದುಕಿನ ರೀತಿಯ ಸೂಕ್ಷ್ಮ ವಿಶ್ಲೇಷಣೆಯಾಗಿದೆ. ತಂಗಿಯು ಪಾತರಗಿತ್ತಿಯ ಹುಲ್ಲುಗಾವಲದಲ್ಲಿಯ ಚೆಲ್ಲಾಟವನ್ನು, ಹೆಣ್ಣುಮಕ್ಕಳ ಹುಡುಗಾಟಿಕೆಗೆ ಹೋಲಿಸಿಕೊಂಡು ಪ್ರಕಟಪಡಿಸಿರುವ ಸಹಜಾಭಿವ್ಯಕ್ತಿ-ರಸಿಕ ನಿಂತು ನೋಡುವಂತಿದೆ.

ಹುಲ್ಲುಗಾವುಲದಾಗ / ಹಳ್ಳೀ ಹುಡುಗೀ ಹಾಂಗ
ಹುಡದೀ ಹುಡದೀ / ಭಾಳ ಅಟಕ್ಕಿಲ್ಲ ತಾಳ.

(ಮರಾಠಿ ಮೂಲದ ಹುಡದಿ ಪದದ ಅರ್ಥ: 1. ಗೊಂದಲ; ಗಲಾಟೆ; 2. ಹುಡುಗಾಟಿಕೆ; ಚೆಲ್ಲಾಟ.)

ಮದುಗುಣಿಕಿ ವಿಷದ ಗಿಡ. ಅದರ ಎಲೆಯನ್ನು ಕುಟ್ಟಿ ಮಜ್ಜಿಗೆಯಲ್ಲಿ ಕಲಸಿ ಕಡಲೆಗೆ ಹಚ್ಚಿ ಬೀಜೋಪಚಾರ ಮಾಡಿ ರೈತರು ಬಿತ್ತುತ್ತಾರೆ. ಅದರಲ್ಲಿ ರೋಗ ನಿರೋಧಕ ಶಕ್ತಿಯಿದೆ. ಪಾತರಗಿತ್ತಿಯು ಅದನ್ನು ಹುರುಪಿಗಿಷ್ಟು ಮೇಯುತ್ತದೆ! ಎಲೆಯ ತುದಿ ಚೂಪಾಗಿ ಮುಳ್ಳು ಹೊಂದಿರುವ ಗಿಡ ಗೊರಟಿಗೆ. ಅದರ ಬಣ್ಣದ ಹೂವನ್ನು ಪೂಜೆಗೆ ಬಳಸುತ್ತಾರೆ. ಪಾತರಗಿತ್ತಿಯು ಅದಕ್ಕೆ ದೂರದಿಂದಲೇ ನಮಸ್ಕರಿಸುತ್ತದೆ ! ಇದು ಅದರ ಜಾಣ, ಎಚ್ಚರದ ನಡೆ.

ಮದುಗುಣಿಕಿಯ ಮದ್ದು / ಹುರುಪಿಗಿಷ್ಟು ಮೆದ್ದು,

* *

ಗೊರಟಿಗೆಗೆ ಶರಣ / ಮಾಡಿ ದೂರಿಂದsನ.

ದೀಪಾವಳಿಯಲ್ಲಿ ತಂಗಿಯು ತಾನು ಬಿಸಿ ನೀರು ಸ್ನಾನ ಮಾಡುವ ಹಂಡೆಗೆ ಸುತ್ತಿದ ಮಾಲಿಂಗನ ಬಳ್ಳಿಯನ್ನು ನೆನೆದು, ಹೊರಗೆ ಸುಖದ ಸೊಬಗಿನಲ್ಲಿ ಪಾತರಗಿತ್ತಿ ಅದರ ಮೇಲೆ ತೂಗಾಡುವುದನ್ನು ವರ್ಣಿಸಿದ್ದಾಳೆ. ಮಾಲಿಂಗನ ಬಳ್ಳಿಯಲ್ಲಿರುವ ಕಾಯಿಗಳು ಲಿಂಗಾಕೃತಿಯಲ್ಲಿದ್ದು ರೋಗ ನಿರೋಧಕ ಶಕ್ತಿಯನ್ನು ಹೊಂದಿವೆ.

ಮಾಲಿಂಗನ ಬಳ್ಳಿ / ತೂಗೂ ಮಂಚದಲ್ಲಿ
ತೂಗಿ ತೂಗಿ ತೂಗಿ / ದಣಿಧಾಂಗ ಅಗಿ.

ಚಿಟ್ಟೆಗಳು ಹೂಗಳ ಪರಾಗಸ್ಪರ್ಶ ಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಪಾತರಗಿತ್ತಿಯು ಗುಲಬಾಕ್ಷಿ ಹೂವಿನ ಕುಶಲ ವಿಚಾರಿಸುತ್ತ ಗಂಡು ಹಡಿಯಲು ಹಾರೈಸಿ ಸಾಗುವುದನ್ನು ಕವಿ– ಪ್ರಕೃತಿಯ ವಿಸ್ಮಯ ಮಾತಾಡಿದಂತೆ ಬಣ್ಣಿಸಿದ್ದಾರೆ.

ಗುಲಬಾಕ್ಷಿಯ ಹೂವ / ಕುಶಲ ಕೇಳತಾವ ;
ಹುಡಿಯ ನೀರಿನ್ಯಾಗ / ತುಳಕಿಸುತ್ತ ಬ್ಯಾಗ
ಹಡಿಯೆ ಬೀಜ ಗಂಡು / ಹಾರ ಹರಿಕಿ ಅಂದು.

'ಪಾತರಗಿತ್ತಿ' ಶಿಶುಗೀತವು ಜಾನಪದ ದ್ವಿಪದಿಯಲ್ಲಿ ಅಂಶ ಛಂದಸ್ಸಿನಲ್ಲಿದೆ. ಪ್ರತಿ ಸಾಲು ಮೂರು ತಾಳಕ್ಕೆ ದುಡಿಯುತ್ತ, ಅಂತ್ಯ ಪ್ರಾಸವು ದೇಸಿಗತ್ತಿಗೆ, ಹಾಡಿನ ಮಟ್ಟಿಗೆ ಕುಣಿಯುತ್ತದೆ. ಇಲ್ಲಿಯ ಕಾವ್ಯಭಾಷೆ ಮಗುವಿನ ಸಹಜ ಸರಳ ನುಡಿಯಲ್ಲಿ ಪಾತರಗಿತ್ತಿಯ ಮೋಹಕ ಲಾವಣ್ಯದಂತಿದೆ.

ತಾಳ ಚವ್ವ ಚಕ್ಕ / ಕುಣಿತ ತಕ್ಕ ತಕ್ಕ

ಪಾತರಗಿತ್ತಿ ನಿಸರ್ಗದ ಶ್ರೇಷ್ಠ ಕೊಡುಗೆ. ಅದರ ಬಗ್ಗೆ ಅರಿವು ಮೂಡಿಸುತ್ತ. ಅದರ ಉಳಿವಿನಲ್ಲಿ ಈ ನೆಲದ ಸೊಗಸು ಇದೆ ಎಂದು ನಿರೂಪಿಸುವ ಅತ್ಯುತ್ತಮ ಪರಿಸರ ಪೋಷಕ ಕವನ ಇದಾಗಿದೆ. ಈ ಜಗದ ಸೃಷ್ಟಿ ಸೌಂದರ್ಯ ಮೂಡುವ ಬಗೆ ಹೇಗೆ ಗೂಢವೊ, ಅದು ನಿಸರ್ಗದಲ್ಲಿ ಒಂದಾಗಿ ಹೋಗುವುದು ಅಷ್ಟೇ ನಿಗೂಢ ಎಂಬುದನ್ನು ಈ ಕವನದ ಕೊನೆಯ ಭಾಗ ಧ್ವನಿಸುತ್ತದೆ.

ಕಾಣದೆಲ್ಲೊ ಮೂಡಿ / ಬಂದು ಗಾಳಿ ಗೂಡಿ,
ಇನ್ನು ಎಲ್ಲಿಗೋಟ? / ನಂದನದ ತೋಟ !

(ಪ್ರಜಾವಾಣಿ, ಮುಕ್ತಛಂದ, 31.1.2016)

■



ಚಳಿಯಾಕೆ

1998ರ ಅಕ್ಟೋಬರ್ ತಿಂಗಳಿನಲ್ಲಿ ಧಾರವಾಡದ ಆರ್.ಟಿ.ಓ. ಕಚೇರಿಯಲ್ಲಿ ಕೆಲಸ ಮಾಡುವಾಗ ಒಂದು ದಿನ ಮಧ್ಯರಾತ್ರಿಯವರೆಗೆ ವಿಶೇಷ ಕರ್ತವ್ಯ ನಿಮಿತ್ತ ಅಲ್ಲಿಯೇ ಇರಬೇಕಾಗಿತ್ತು. ಹೊರಗೆ ವಿಶಾಲ ಬಯಲಿನಲ್ಲಿ ಚಂದ್ರನ ಬೆಳುದಿಂಗಳು ಹಾಲು ಚೆಲ್ಲಿದಂತಿತ್ತು. ಕೈಲಿರುವ ಕಚೇರಿ ಟಿಪ್ಪಣಿಗಳನ್ನು ಸ್ಪಷ್ಟವಾಗಿ ಓದಬಹುದಾದಷ್ಟು ಬೆಳಕು ಹರಿದಿತ್ತು. ನಾನು ಆ ಸ್ವರ್ಗಸದೃಶ ಬೆಳುದಿಂಗಳಲ್ಲಿ ಮೈಮರೆತು ಹುಬ್ಬಳ್ಳಿಯವರಾದ ನನ್ನ ಸ್ನೇಹಿತ ಕಂಬಾರರನ್ನು ಕೇಳಿದೆ: 'ಇದೇನಿದು ಇಷ್ಟು ಬೆಳುದಿಂಗಳು!'

ಅವರು 'ಇಂದು ಸೀಗಿ ಹುಣ್ಣಿಮೆ. ನೋಡಿ ಇನ್ನು ಕೆಲವೇ ದಿನಗಳಲ್ಲಿ ನೀವು ನಡುಗಿ ಹೋಗುವ ಹಾಗೆ ಚಳಿ ಶುರುವಾಗುತ್ತದೆ' ಎಂದರು. ನಾನು ನಕ್ಕು ಅದು ಹೇಗೆ ಸಾಧ್ಯ ಎಂದುಕೊಂಡೆ. ತಕ್ಷಣ ಬೇಂದ್ರೆಯವರ ಕವನ 'ಚಳಿಯಾಕೆ'ಯ ಮೊದಲ ನುಡಿಯ ಪೂರ್ವಾರ್ಧ ನೆನಪಾಯಿತು.

ಸೀಗೆ ಹುಣ್ಣಿವೆ ಮುಂದೆ
ಸೋಗಿನ ಚಂದ್ರಮ
ಸಾಗಿಬರುವೊಲು ಬರುವ ಚಳಿಯಾಕೆ.

ದಿನ ದಿನ ಕಳೆದ ಹಾಗೆಲ್ಲ ಚಳಿ ಧಾರವಾಡವನ್ನು ತಬ್ಬಿತು. ನಾನು ನಡುಗಿದೆ.

ಒಂದು ಋತುಮಾನದ ಹೊರಳನ್ನು ಆ ನೆಲದ ಅಣುಗನಾಗಿ ಬೇಂದ್ರೆ ಸೂಕ್ಷ್ಮವಾಗಿ ಗ್ರಹಿಸಿ ಅಭಿವ್ಯಕ್ತಿಸಿರುವ ರೀತಿ ಕನ್ನಡ ಕಾವ್ಯದ ಅಚ್ಚರಿ. ಅದು ಸೀಗೆಕಾಯಿಗಳು ಫಲಕ್ಕೆ ಬರುವ ಕಾಲ. ಆ ಬಳ್ಳಿಯಲ್ಲಿರುವ ಮುಳ್ಳುಗಳು ಗಟ್ಟಿಗೊಂಡು ಚುಚ್ಚಿ ನೋಯಿಸುವಂತೆ ಚಳಿ ಬಿಗುವುಗೊಂಡು ಕೊರೆಯುವ ಪ್ರತಿಮೆ ಒಂದು ವಿಶಿಷ್ಟ ಸ್ಪರ್ಶಾನುಭವ. ಈ ಕವನದಲ್ಲಿ ಬೇಂದ್ರೆಯವರು ಚಳಿಯನ್ನು ಹೆಣ್ಣಾಗಿ ಪರಿಭಾವಿಸಿ ಆಕೆ ನಿಸರ್ಗದಿಂದ ಪಡೆದ ಪರಿಕರಗಳಲ್ಲಿ ಚೆಲುವಾದುದನ್ನು ಚಿತ್ರಿಸಿದ್ದಾರೆ. ಆಕೆ ಸಕಲ ಜೀವಜಾಲವನ್ನು

ಆಕರ್ಷಿಸಿ ತನ್ನ ತೆಕ್ಕೆಗೆ ತೆಗೆದುಕೊಂಡ ಅಮೂರ್ತಾನುಭವ ಇಲ್ಲಿ ಮೂರ್ತಗೊಂಡಿದೆ. ಬೇಂದ್ರೆ ತನ್ನ ಪಂಚೇಂದ್ರಿಯಗಳು ಅನುಭವಿಸಿದ ಚಳಿಯನ್ನು ಅಂಗೈಲಿ ಹಿಡಿದು ಆಡಿಸಿ ನೋಡಿದ್ದಾರೆ.

ಸೇವಂತಿಗೆಯ ಕಂಪು ಚಳಿಗಾಲದ ಗಮಲು. ಹೊನ್ನ ಬಣ್ಣದ ಸೇವಂತಿಗೆಯನ್ನು ಹೆರಳಿನಲ್ಲಿ ಮುಡಿದು ಚಳಿಯಾಕೆ ಶೃಂಗಾರಗೊಂಡಿದ್ದಾಳೆ. ಅದು ಕಾವಣ ಆವರಿಸುವ ಕಾಲ. ಅದರ ಬಣ್ಣ ಪ್ರಧಾನವಾಗಿ ಬಿಳುಪು. ಹಾಗಾಗಿ ಅವಳು ಬಿಳಿಯ ಬಣ್ಣದ ಸೇವಂತಿಗೆಯ ಕುಲದವಳು 'ಬೆಳ್ಳಿ ಸೇವಂತಿ'ಗೆಯ ಬಳಿಯಾಕೆ ಎಂದು ಬೇಂದ್ರೆ ವರ್ಣಿಸಿರುವ ರೀತಿ ಅನನ್ಯವಾಗಿದೆ.

ನಡುಗಿಸಲು ಅಡಿಯಿಟ್ಟು ಬರುವ ಚಳಿಯಾಕೆಯನ್ನು ಬೇಂದ್ರೆಯವರು ಆಕೆ ತೊಟ್ಟ ಆಭರಣಗಳ ಪ್ರತಿಮೆಯಲ್ಲಿ ಹಿಡಿದಿಟ್ಟಿದ್ದಾರೆ. ಮುಗಿಲ ಮಲ್ಲಿಗೆಯಂತಹ ಒಡವೆಯನ್ನು ಆಕೆ ಕಿವಿಯಲ್ಲಿ ಧರಿಸಿದ್ದಾಳೆ. ಅದು ಕಿವಿಯ ಹಾಲೆಯ ಮೇಲು ಭಾಗದಲ್ಲಿ ನೇತಾಡುವಂತೆ ಇಟ್ಟುಕೊಳ್ಳುವ ಮುತ್ತು ಹರಳುಗಳನ್ನು ಜೋಡಿಸಿದ ಉಂಗುರದಂತಿರುವ ಆಭರಣ 'ಬಾವಿಲಿ'. ಇನ್ನೊಂದು ಕಿವಿಗೆ ಒಪ್ಪುವ ಓಲೆಕೊಪ್ಪ. ಆ ಓಲೆಗೆ ಸೇರಿಸುವ ಜುಮುಕಿಯಂತಹ ಅಲ್ಲಾಡುವ 'ಚಳತುಂಬ'. ಅವೆಲ್ಲಾ ಚಳಿಯ ಮುಖ ಅಲುಗುತ್ತಿರುವುದರ ಸೂಚನೆ. ಅಂಥ ಒಡವೆಗಳನ್ನು ಧರಿಸಿದ ಹಲವಾರು ಮುಖಗಳನ್ನು ಚಳಿಯಾಕೆ ನಡುಗಿಸುತ್ತಿದ್ದಾಳೆ ಎಂಬುದು ಅನುಭವ ಗೋಚರ.

ಹೊಳೆಹೊಂಡದ ಉಸಿರನ್ನು ನಯವಾಗಿ ನೇಯ್ದು ಸಿದ್ಧಪಡಿಸಿದ ಮೇಲ್ಸೆರಗು ಅವಳುಟ್ಟ ರೇಷ್ಮೆ–ಹೊಳೆ ಹೊಂಡದ ಮೇಲೆ ಮಂಜು ಆವರಿಸಿ ನೀರಿನ ಎಳೆಗಳ ಮೂಲಕವೇ ಉಸಿರಾಡುತ್ತಿರುವಂತೆ ಕಾಣಿಸುತ್ತದೆ. ಆ ಉಸಿರಿನಿಂದಲೇ ನೇಯ್ದು ಸಿದ್ಧಪಡಿಸಿದ ಮೇಲ್ಸೆರಗನ್ನು ಚಳಿಯಾಕೆ ಮೈತುಂಬ ಹೊದ್ದಿದ್ದಾಳೆ ಎಂದು ಆಕೆಯ ಘನತೆ ಗಾಂಭೀರ್ಯವನ್ನು ಕವಿ ಸೂಚಿಸಿದ್ದಾರೆ. ಅದು ರೂಪಕಾತ್ಮಕವಾಗಿ ನಮ್ಮ ಮನದಲ್ಲೆಲ್ಲ ತುಂಬಿಕೊಳ್ಳುತ್ತದೆ.

ಚಿನ್ನದ ಕಡಲು ಹೊಯ್ದಾಡಿದಂತೆ ಭತ್ತದ ತೆನೆಗಳು ತಲೆದೂಗುತ್ತಿವೆ. ಅದರಲ್ಲಿ ಈಸಾಡಿಕೊಂಡು ಸಂತೋಷವನ್ನು ಅನುಭವಿಸುತ್ತಾ ಬಾ ಎಂದು ಚಳಿಯಾಕೆಯನ್ನು ಕವಿ ಆಹ್ವಾನಿಸಿದ್ದಾರೆ. ಅದರ ಬೀಸು ಬಿರುಸಾದರೆ ನಂಜಾಗಿ ಸೀತೆನೆ ಉದುರಿಹೋಗುತ್ತದೆ. ಈ ನೆಲದ ಪ್ರಾಣಿ ಪಕ್ಷಿಗಳಿಗೆ ಕಾಳು ಇಲ್ಲವಾಗುತ್ತದೆ ಆದುದರಿಂದ ಕವಿ ಪ್ರಾರ್ಥಿಸಿದ್ದಾರೆ.

ತೆನೆ ಹಾಲು ದಕ್ಕಲಿ
ಕಕ್ಕಿಸ ಬೇಡದನು
ನಿನ್ನ ನಂಜಿನ ಸೆರಗ ಬೀಸಾಡಿ

ಹಗುರ ಪ್ರಶಾಂತ ಚಂದ್ರನ ಬೆಳುದಿಂಗಳು ಬಿಳಿ ಮೋಡದ ಮೇಲೆ ಬಿದ್ದಾಗ ಅದು ಪಳಕ್ಕನೆ ನಕ್ಕಂತಾಗುತ್ತದೆ. ಅಂತಹ ಸ್ವಚ್ಛ ಪರಿಶುದ್ಧ ನಗೆ ಚಳಿಯದಾಗಿದೆ. ಚಳಿಯ ಮೋಡಿ ದಾಂಪತ್ಯದ ಸಿರಿ ಹೆಚ್ಚಿಸುತ್ತದೆ.

ಬೆಲ್ಲದ ಸವಿ ಕುಸಿರಿಡುತಿರೆ ಒಡೆದಿಹ ತುಟಿಗಳೊಳು
ಚಳಿಗಾಲಕೆ ಚಿಗುರಿಟ್ಟಿತು ದಾಂಪತ್ಯದ ತಿರುಳು.
(ಋತುಗಾನ)

ಚಳಿಯಾಕೆಯ ಬಿಂಕ ಬಿನ್ನಾಣ ಎಂಬುದು 'ಉಸುರುಸುರಿಗೆ ಮುರುಕ' ಗೊಳ್ಳುವುದರಲ್ಲಿ ಅನುಭವಕ್ಕೆ ಬರುತ್ತದೆ. ಆಕೆ ಮೆಲ್ಲಗೆ ಮುಂಗೈ ಹಿಡಿಯುವುದೇ ಒಂದು ಬೆರಗು. ಮುಂಗೈ ಹಿಡಿದ ಮೇಲೆ ಇಡೀ ಶರೀರ ಆಕೆಯ ವಶವಾಗುತ್ತದೆ. ಅದನ್ನು ಬೇಂದ್ರೆ ಹೀಗೆ ಚಿತ್ರಿಸಿದ್ದಾರೆ:

ಯಾವ ಜಾತಿಯ ಹೆಣ್ಣೊ
ಹಾವ ಭಾವವೆ ಬೇರೆ
ಅಪ್ಪಿದ ಅಪ್ಪಿಗೆ ಬಿಡದಾಕೆ.

ಈ ಕವನದ ಪ್ರಕೃತಿಯಲ್ಲಿ ಪ್ರಣಯ ಹಾಸುಹೊಕ್ಕಾಗಿದೆ. ನಿಸರ್ಗದ ಎಲ್ಲ ಚಟುವಟಿಕೆಯಲ್ಲಿ ಮಾನವೀಯ ಸ್ಪರ್ಶವೂ ಇದೆ ಎಂಬುದನ್ನು 'ಚಳಿಯಾಕೆ' ಎಂಬ ಶೀರ್ಷಿಕೆಯಲ್ಲಿ ಕವಿ ಸೂಚಿಸಿದ್ದಾರೆ. ಅದು ಮಾಗಿ ಕಾಲದ ಚಿತ್ರ ಮಾತ್ರವಲ್ಲ ಕವಿಯ ಮಾಗಿದ ಮನಸ್ಸಿನ ಫಲವೂ ಆಗಿದೆ. ಅಲ್ಲಿ ಇರುವುದು ಸರಳ ಸಹಜ ನುಡಿಚಿತ್ರ. ಹೊರಗಿನ ಕೃತ್ರಿಮತೆಯ ಸೋಗಿಲ್ಲದ 'ಚಳಿಯಾಕೆ' ಎಂಬ ಸುಂದರಿಯ ತೇಜ. 'ಅಪ್ಪಿದ ಅಪ್ಪಿಗೆ ಬಿಡದಾಕೆ'ಯ ಸಶಕ್ತ ಶೃಂಗಾರ. ತಣ್ಣನೆಯ ಗಾಳಿಯ ಬೀಸಿನಲ್ಲಿ ಧಾರವಾಡದ ಭಾಷೆ ಕಾವುಗೊಂಡು 'ಚಳಿಯಾಕೆ' ಯೆಂಬ ಕಾವ್ಯ ಪುಷ್ಪ ಅರಳಿದ ಕಂಪು.

(ವಿಜಯ ಕರ್ನಾಟಕ, ಸಾಪ್ತಾಹಿಕ ಲವಲವಿಕೆ, 3.7.2011)

■



ತಿಪ್ಪೆಯ ಬಸುರಿನ ಮಾವಿನ ಪೀಪಿ

ಬೇಂದ್ರೆಯವರು ಬಾಲ್ಯದಲ್ಲಿ ಕೇಳಿದ ವಿವಿಧ ನಾದ ತರಂಗಗಳು ಯಾವುದೇ ಮಗು ಈ ಜಗತ್ತಿಗೆ ತೆರೆದುಕೊಂಡಾಗ ಆಲಿಸಿ ಪಡುವ ಆನಂದ ಸ್ವರೂಪವಾಗಿದ್ದವು. ರವದಿ (ಜೋಳದ ದಂಟು) ಉದುರುವುದು ಚಳಿಗಾಲದಲ್ಲಿ. ಅದನ್ನು ಪ್ರೀತಿಯಿಂದ ಎತ್ತಿ ಮೃದುವಾಗಿ ಮೈಸವರಿ ಒಲ್ಮೆಯ ಮುತ್ತನ್ನಿಟ್ಟು ನಾದತರಂಗಗಳನ್ನು ಹೊಮ್ಮಿಸುವವರು ಬಡ ಗ್ರಾಮೀಣ ಮಕ್ಕಳು. ಅದನ್ನು ಊದುತ್ತ ಸವಿಗನಸು ಕಂಡು ನಕ್ಕು ನಲಿಯುವುದೊಂದು ಆಹ್ಲಾದ. ಅದರ ಸುಂದರ ಅನುಭವವೆಂದರೆ ಬಡವನಿಗೆ ನೀಡುವ ಮನ್ನಣೆ. ಕಸವಾದ ರವದಿ, ಕಡ್ಡಿಯು ತಾನು ಉತ್ತಮವಾಗಬೇಕು ಎನ್ನುತ್ತದೆ. ಅದಕ್ಕೆ ಬೇಕಾದ ಆವೇದ ಸಂವೇದ ಅದರಲ್ಲಿದ್ದು, ಅದು ಜೀವಂತಿಕೆಯಿಂದ ಕೂಡಿದೆ.

ಬೇಂದ್ರೆಯವರು ಬಾಲ್ಯದಲ್ಲಿ ಆಡಿದ ಆಟದಲ್ಲಿ ರವದಿ, ಕಡ್ಡಿಗಳ ಪೊಳ್ಳಿನಲ್ಲಿ ಸುಳ್ಳಾಗಿ ಸುಳಿದ ಗಾಳಿಯು ಸವಿಮಂತ್ರವಾಗಿತ್ತು. ಕಸವಾದ ಜೋಳದ ಗರಿ ರವದಿಗೂ ಜೋಳದ ದಂಟಿಗೂ ಭವದೀಕ್ಷೆ ನೀಡುವ ಶಕ್ತಿ ಗಾಳಿಗಿದೆ. ಭವದೀಕ್ಷೆಯೆಂದರೆ ಶ್ರೀ ಅರವಿಂದರು ಹೇಳಿರುವ 'ಭೌತದ್ರವ್ಯವೂ ಪರಬ್ರಹ್ಮ ಸ್ವರೂಪವನ್ನು ಪ್ರಕಟಿಸುವುದು' ಎಂಬ ಚಿಂತನೆ. ಈ ಜಗದಲ್ಲಿ ಒಂದು ಸಾಧಾರಣ ರವದಿ, ಕಡ್ಡಿ ಉನ್ನತ ಸ್ತರಕ್ಕೆ ಏರುವ ಆಂತರಿಕ ಬಲವನ್ನು ಹೊಂದಿರುವಾಗ, ಸಮಾಜದ ನಿರ್ಲಕ್ಷಿತ ದೀನದಲಿತರು ಮೇಲೇರಬೇಕೆಂಬ ಆಕಾಂಕ್ಷೆಯನ್ನು ಬೇಂದ್ರೆ ಕಾವ್ಯ ಹೊಮ್ಮಿಸಿದೆ.

'ಪೊಳ್ಳಿನ ಸುಳ್ಳಿನ ಸುಳಿವ ಗಾಳಿಯ ನಾದ
ಕಿವಿಮಂತ್ರ, ಸವಿಮಂತ್ರ ಓದುವುದು
ರವದೀಗು ಭವದೀಕ್ಷೆ, ಕನಸು ಕಡ್ಡಿಗು ಇದೆ
ಆವೇದ ಸಂವೇದ ಊದುವುದು'. (ಬಾಲ್ಯಕಾಂಡ)

* * *

ಕಸದಂತೆ ಬಿದ್ದಂಥ ರವದಿ ಕಂಡೆನು ನಾನು
ಕಸವೆಂದು ಬಗೆದಂಥ ರವದಿ ಕಸವಾಗಿತ್ತು
ಕಸವಲ್ಲವೆಂದು ನಾನೆತ್ತಿದೆನು ; ಅಂತೆಯೇ ಕಸವಾಗಲಿಲ್ಲ ರವದಿ ॥
(ಸಖೀಗೀತ)

ಧಾರವಾಡದ ದ.ರಾ. ಬೇಂದ್ರೆ ರಾಷ್ಟ್ರೀಯ ಟ್ರಸ್ಟ್ ನನಗೆ ಬೇಂದ್ರೆಯವರ 'ಬಾಲ್ಯಕಾಂಡ' ಅಧ್ಯಯನ ಮಾಡಲು 2003ರಲ್ಲಿ ಫೆಲೋಷಿಪ್ ನೀಡಿತು. ಆ ಖಂಡಕಾವ್ಯವನ್ನು ಅಧ್ಯಯನ ಮಾಡುವಾಗ ಬೇಂದ್ರೆಯವರು ಬಾಲ್ಯದಲ್ಲಿ ಆಡಿದ ಈ ಕೆಳಗಿನ ಸಾಲುಗಳಲ್ಲಿ ಸೂಚಿಸಿರುವ ಆಟ ತನ್ನ ಮರ್ಮವನ್ನು ಬಿಟ್ಟುಕೊಡಲಿಲ್ಲ.

'ತೆಯ್ದದ್ದೆ ತೆಯ್ದದ್ದು ತುಟಿಗೆರೆ ಬಿಚ್ಚಿರಲು
ಉಸಿರೆ ಆಗುವದಣ್ಣ ಸಾಕಾರವು !
ಯಾವ ತಿಪ್ಪೆಯ ಬಸಿರ ಬಿರಕಿಗೆ ಮೂಡಿತ್ತೊ
ಮಾವಿನ ಪೀಪಿಯ ಆಕಾರವು ?'

ಮೇಲಿನ ರೀತಿಯ ಮಕ್ಕಳ ವಿನೋದದ ಆಟ ನಮ್ಮ ಮೈಸೂರು ಪ್ರದೇಶದಲ್ಲಿ ಇಲ್ಲ. ಒಂದೆರಡು ವರ್ಷ ಎಷ್ಟೇ ವಿಚಾರ ಮಾಡಿದರೂ ಈ ಸಾಲಿನ ಆಂತರ್ಯ ತಿಳಿಯಲಿಲ್ಲ. ನನಗೆ ಬೀದರ ಜಿಲ್ಲೆಗೆ ವರ್ಗವಾಯಿತು. ಅಲ್ಲಿ ನನಗೆ ಗ್ರಾಮೀಣ ಹಿನ್ನೆಲೆಯ ಮುಸ್ಲಿಂ ವ್ಯಕ್ತಿ ಬಾಬಾ ಪರಿಚಯವಾದರು. ಅವರು ಈ ಆಟದ ಸೊಬಗನ್ನು – ತಿಪ್ಪೆಯಲ್ಲಿ ಬೆಳೆದ ಮಾವನ್ನು ತೆಗೆದುಕೊಂಡು ಬಂದು – ಪ್ರಾಯೋಗಿಕವಾಗಿ ಮಾಡಿ ತೋರಿಸಿದರು !

ಚಿಗುರಿದ ಮಾವನ್ನು ಎತ್ತಿಕೊಂಡು ಓಟೆಯ ಮೇಲಿನ ಗೊರಟೆ ಕಿತ್ತೆಸೆದರು. ಮೊಳಕೆಯೊಡೆದ ತುದಿಯನ್ನು ಹಾಗೆ ಬಿಟ್ಟರು. ಬುಡದ ಬೀಜದ ತುದಿಯ ಮೃದುಭಾಗವನ್ನು ಸ್ವಲ್ಪ ಓರೆಯಾಗಿಸಿ ಕಲ್ಲಿಗೆ ತಿಕ್ಕಿದರು. ಹಾಗೆ ತಿಕ್ಕಿದಾಗ ಆ ಬೀಜವು ತುಟಿಗಳನ್ನು ತೆರೆದುಕೊಂಡಂತೆ ಬಿರುಕು ಬಿಟ್ಟಿತು. ಅದನ್ನು ಬಾಯಿಗಿಟ್ಟುಕೊಂಡು ಪೀಪಿಯಂತೆ ಊದಿದರು. ಆಗ ವಿಲಕ್ಷಣವಾದ ನಾದ ಹೊಮ್ಮಿತು ! ಆಗ ನನಗೆ ಬೇಂದ್ರೆ ಕಾವ್ಯದ ಮೇಲಿನ ನಾಲ್ಕು ಸಾಲಿನ ರಸಾನಂದವಾಯಿತು !

ಹಳತಾದುದರ ಸಾರಸರ್ವಸ್ವವೇ ಗೊಬ್ಬರ. ಅದರಲ್ಲಿ ಹೊಮ್ಮುವುದೇ ನವನವೀನ ಮೊಳಕೆ. ಹಳತರ ಸಾರವಿಲ್ಲದೆ ಹೊಸತರ ಸೃಷ್ಟಿಯಿಲ್ಲ. ಹಳೆಯ ಪರಂಪರೆ ಅರಿತು ಅದರ ಸತ್ತ್ವದ ಸಾರದಲ್ಲಿ ನವನವೀನವಾಗುವುದೇ ಹೊಸ ದೃಷ್ಟಿ, ಹೊಸ ಹೊಳಹು. ಹಳತರಿಂದ ಹೊಮ್ಮಿದೆ ಹೊಸ ಮುಖ, ಹೊಸ ಹಾಡು, ಹೊಸ ಜೀವನೋತ್ಸಾಹ. ಕಾವ್ಯದ ಅಂತಸ್ಸತ್ವವಾದ ರಸತತ್ವ ಹೊರಹೊಮ್ಮಿ ರಸಾನಂದಕ್ಕೆ ಕೊಂಡೊಯ್ಯುವುದು ನಾದ ಮಾಧುರ್ಯ. ಆ ನಾದದ ಅನುಭವ ಬಾಲ್ಯದಲ್ಲಿ ಬೇಂದ್ರೆಯವರಿಗೆ ದೊರೆತುದು ತಿಪ್ಪೆಯ ಮಾವಿನಲ್ಲಿ. ತಿಪ್ಪೆಯ ಸಾರಸರ್ವಸ್ವ ಹೀರಿಕೊಂಡು ಚಿಗುರೊಡೆದ ಮಾವು

ತನ್ನೊಡಲಿನಲ್ಲಿ ನಾದ ಮಾಧುರ್ಯವನ್ನು ಹೊಂದಿರುತ್ತದೆ. ಅದು ರಸಿಕರ ಮೃದುಭಾವದ ನಲ್ಮೆಯ ಸ್ಪರ್ಶಕ್ಕೆ, ತೇಯ್ದ ಭಾವಕ್ಕೆ ತುಟಿಯೊಡೆದು ರಸಿಕರ ಉಸಿರಿಗೆ ನಾದವಾಗುತ್ತದೆ. ಹಿರಿದಾದ ಸಂಸ್ಕೃತಿಯ ನಾದ ಸಂಗೀತದ ಮೂಲ ಸೆಲೆ ರವದಿ, ತಿಪ್ಪೆಯ ಮಾವು. ತ್ಯಾಜ್ಯವೆನಿಸಿಕೊಂಡರೂ ಅವು ಅಪ್ರಯೋಜಕವಾದವುಗಳಲ್ಲ. ಅವುಗಳಲ್ಲಿ ಜೀವ ಸ್ಪಂದನವಿದೆ. ಆದರೆ ಅವುಗಳನ್ನು ಸ್ಪರ್ಶಿಸಿ ಮುದ್ದಿಸುವ ರಸಿಕನಷ್ಟೆ ಬೇಕು ಎಂಬ ಅನ್ಯಾದೃಶ ಚಿಂತನೆ ಬೇದ್ರೆಯವರ ಕಾವ್ಯ ರೂಪಕಗಳಲ್ಲಿದೆ.

ಬಾಲ್ಯದ ಅನುಭವವೇ ಅವರನ್ನು ನಾದೋಪಾಸಕರನ್ನಾಗಿಸಿತು. 'ನಾದಲೀಲೆ' ಕಾವ್ಯರಚನೆಗೆ ಕಾರಣವಾಯಿತು. 'ಎಲ್ಲ ನಾದದಲಿ ಎಲ್ಲ ದನಿಗಳಲಿ ದೇವವಾಣಿ ಜಾಗು' ಎಂದು ದೈವೀಭಾವದ ಚಿಂತನೆ ನೀಡಲು ಕಾರಣವಾಯಿತು. ಅವರು ನಾದದಲ್ಲಿಯೇ ಲೀನವಾಗಿ ನಾದದ ವಿವಿಧ ಅರ್ಥಗಳಾದ ಧ್ವನಿಯ ; ಸಂಗೀತದ ನಿಯಮಿತ ತರಂಗಗಳನ್ನುಳ್ಳ ಧ್ವನಿಯ ನಾದದ ; ಹಿಟ್ಟನ್ನು ನೀರಿನಲ್ಲಿ ಕಲಸಿ ಚೆನ್ನಾಗಿ ಮಿದ್ದುವ ; ವ್ಯಕ್ತಿ ಒಂದು ವಿಷಯದಲ್ಲಿ ಒಲವನ್ನು ಬೆಳೆಸಿಕೊಂಡು ಹದಗೊಳ್ಳುವ ವಿವಿಧ ಭಾವಾರ್ಥ ಅಂತರಾರ್ಥಗಳನ್ನು ಒಳಗೊಂಡ 'ನಾದ ಬೇಕು' ಕವನ ರಚಿಸಿದ್ದಾರೆ. ಅವರು 'ನಾದ ನಾನೇ ಆದ ಮೇಲೆ ಬೇರೆ ವಾದ ಏಕೆ ಬೇಕು' ಎಂದು ಆತ್ಮಶೋಧಕ್ಕೆ ಒಳಗಾಗಿ ನಾದಾನುಭವದಲ್ಲಿ ಲೀನವಾಗಿ ಹೋಗಿದ್ದಾರೆ.


ನಾದ ಬೇಕು ನಾದ ಬೇಕು
ನಾದಾನ ನಾದ ಬೇಕು
ನಾದಕ್ಕೆ ಪ್ರತಿನಾದ ಬೇಕು
ನಾದಾನs ಆದ ಮ್ಯಾಲೆ ಬ್ಯಾರೆ ಯಾಕ ವಾದ ಬೇಕು.

ತತ್ತ್ವಶಾಸ್ತ್ರದ ಪ್ರಕಾರ ಬ್ರಹ್ಮಸ್ವರೂಪವೆನಿಸಿರುವ ಧ್ವನಿ ವಿಶೇಷದ ಅನುಸಂಧಾನದಲ್ಲಿ ತೊಡಗಿದ ಕವಿವರ್ಯರು ನಾದದ ಆಂತರ್ಯವನ್ನು ಹೀಗೆ ಮಿಡಿದಿದ್ದಾರೆ :

ಅಂತರಂಗದಾ ಶೋಧ ಬೇಕು
ಪರಬ್ರಹ್ಮದಾ ಬೋಧ ಬೇಕು
ಎಂದಿಗು ಶ್ರೀ ಗುರುಪಾದ ಬೇಕು
ನಾದ ಬೇಕು ನಾದ ಬೇಕು ತುದಿ ಮುಟ್ಟಾನು ನಾದ ಬೇಕು.

(ವಿಜಯ ಕರ್ನಾಟಕ, ಬೋಧಿವೃಕ್ಷ, 27.8.2017)

■



‘ಪಾಡು ಆಗತಾವ, ಹಣ್ಣು ಆಗತಾವ ಅದರ ಲಯಕೆ ತೂಗಿ’

‘ಎನ್ನ ಪಾಡೆನಗಿರಲಿ ಅದರ ಹಾಡನ್ನಷ್ಟೆ
ನೀಡುವೆನು ರಸಿಕ ! ನಿನಗೆ !
ಕಲ್ಲುಸಕ್ಕರೆಯಂಥ ನಿನ್ನೆದೆಯು ಕರಗಿದರೆ
ಆ ಸವಿಯ ಹಣಿಸು ನನಗೆ !’

ಎಂದು ಬೇಂದ್ರೆಯವರು ರಸಿಕ ಸಹೃದಯನನ್ನು ಪ್ರೀತಿಯಿಂದ ಕೇಳಿಕೊಂಡಿದ್ದಾರೆ. ಅದು ‘ನಾದಲೀಲೆ’ ಕವನ ಸಂಕಲನದ ಪ್ರಾರಂಭದ ಪೀಠಿಕಾ ಪದ್ಯ. ಅದರಲ್ಲಿಯ ‘ಪಾಡು’ ಕವಿಗೆ ಸಂಬಂಧಪಟ್ಟ ಸ್ಥಿತಿ, ಕಷ್ಟ, ತೊಂದರೆಯನ್ನು ತಿಳಿಸುವ ಆಡುನುಡಿಯಾಗಿದೆ. ಆ ಪಾಡು ತನಗಿರಲಿ. ರಸಿಕನಾದ ನೀನು ಕಲ್ಲಿನಂತಾಗದೆ ಕಲ್ಲುಸಕ್ಕರೆಯಂಥಾಗು. ನನ್ನ ಹಾಡನ್ನು ಕಲ್ಲುಸಕ್ಕರೆಯಂತೆ ನಾಲಗೆಯಲ್ಲಿ ಹೊರಳಾಡಿಸುತ್ತ ಸವಿ ನೋಡು. ಆ ಹಾಡಿನಿಂದ ನಿನ್ನ ಆರ್ದ್ರ ಹೃದಯ ಕರಗಿದರೆ ಅದರ ಸವಿಯನ್ನು ನನಗೆ ಹನಿ ಹನಿಯಾಗಿ ಉಣಿಸು ! ಎಂದು ವಿನಂತಿಸಿಕೊಂಡಿದ್ದಾರೆ. ಇದು ಕವಿ ಸಹೃದಯರ ಆತ್ಮೀಯ ಬಂಧ !

ಬೇಂದ್ರೆಯವರ ಕಾವ್ಯದ ಕೇಂದ್ರ ಪ್ರತಿಮೆ ತಾಯಿಯಾದುದರಿಂದ ಅವರು ತಮ್ಮ ಕಾವ್ಯನಾಮವನ್ನು ‘ಅಂಬಿಕಾತನಯದತ್ತ’ವೆಂದಿಟ್ಟುಕೊಂಡರು. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಓರ್ವ ಶ್ರೇಷ್ಠ ಕವಿಯಾಗಿ ತನ್ನ ತಾಯಿಯ ಹೆಸರಿನ ಕಾವ್ಯನಾಮವನ್ನಿಟ್ಟುಕೊಂಡ ಮೊದಲಿಗರು ದ.ರಾ. ಬೇಂದ್ರೆ. ‘ಅಂಬಿಕೆ’ ಅವರಿಗೆ ತನ್ನ ತಾಯಿಯಂತೆ ವಿಶ್ವಮಾತೆಯೂ ಆದುದರಿಂದ ಆ ಶಕ್ತಿ ತನ್ನನ್ನು ಈ ಜಗತ್ತನ್ನು ನಡೆಸುತ್ತಿದೆ ಎಂದು ಭಾವಿಸಿದರು. ಅವರು ನಮ್ಮ ಭಾರತೀಯ ಕಾವ್ಯ ಪರಂಪರೆಯ ಭಕ್ತ ಕವಿಗಳಾದ ಶರಣರು, ದಾಸರು ತಮ್ಮ ಕಾವ್ಯದಲ್ಲಿ ‘ಅಂಕಿತನಾಮ’ವನ್ನು ಬಳಸಿದಂತೆ ‘ಅಂಬಿಕಾತನಯದತ್ತ’ ವನ್ನು ಅಂಕಿತವಾಗಿಯೂ ಬಳಸಿದರು. ಅವರು ‘ಅಂಕಿತ’ವಾಗಿ ಸೂಚಿಸಿರುವ ಕಾವ್ಯದಲ್ಲಿ ಅನುಭಾವದ ಸ್ಪರ್ಶವಿದೆ.

'ಅಂಬಿಕಾತನಯನ ಜಂಬದ ಪಾಡಳಿದು
ನಂಬಿಕೆಯ ಹಾಡಾಗಿ ಬಂತಿಲ್ಲಿಗೆ.'

ಈ ಅನುಭಾವದ ನುಡಿಯ 'ಜಂಭದ ಪಾಡಳಿದು' ಎಂಬ ವಾಕ್ಯ ಭಾಗದಲ್ಲಿಯ 'ಪಾಡು' ಜಂಭದ ಸ್ಥಿತಿ, ಅವಸ್ಥೆಗಳನ್ನು ಸೂಚಿಸುತ್ತದೆ. ಆ ಜಂಭದ ಸ್ಥಿತಿ, ಅವಸ್ಥೆಯು ವ್ಯಕ್ತಿಯಲ್ಲಿ ನಾಶವಾದಾಗ ಅವನು ಶುದ್ಧನಾಗುತ್ತಾನೆ. ಆ ನಿರ್ಮಲ ಮನಸ್ಥಿತಿಯಲ್ಲಿ ಅವನಿಗೆ ತನ್ನಲ್ಲಿ ನಂಬಿಕೆಯುಂಟಾಗುತ್ತದೆ. ಅದು ಬೊಮ್ಮವನ್ನು ಅರಿತ ಮನುಜನ ಸ್ಥಿತಿ. ಆಗ ಹೊಮ್ಮುವ ಹಾಡು ಆ ಕವಿಯ ಹಾಡು ಮಾತ್ರವಾಗಿರುವುದಿಲ್ಲ. ಅದು ಜಗದ ಹಾಡಾಗುತ್ತದೆ. ಹಾಗೆ ಬೇಂದ್ರೆಯ ನಂಬಿಕೆಯ ಹಾಡು ಸಹೃದಯನಲ್ಲಿ ಅವನ ನಂಬಿಕೆಯನ್ನು ಹೆಚ್ಚಿಸಿ ಅವನ ಮನದ ಹಾಡೂ ಆಗುತ್ತದೆ. ಜಂಬದ ಪಾಡಳಿಯುವ ಸ್ಥಿತಿ ಎಂದರೆ ಹುಳಿಯನ್ನು ಕಳೆದುಕೊಂಡ ಹಣ್ಣಿನ ಅವಸ್ಥೆಯಂತಹ ಪಕ್ವ ಮನಸ್ಥಿತಿ, ಏರುಗತಿ.

* * *

ಕನ್ನಡ ವಿಶ್ವವಿದ್ಯಾಲಯ, ಹಂಪಿ ಅವರು ಬೇಂದ್ರೆಯವರ 'ಜೋಗಿ' ಕವನವನ್ನು 'ಶತಮಾನದ ಕವಿತೆ ಜೋಗಿ' ಎಂದು 1999ರಲ್ಲಿ ಪ್ರಕಟಿಸಿದ್ದಾರೆ. ಆ ಕವನದ ಬಗ್ಗೆ ಅದುವರೆಗೆ ಬಂದಿದ್ದ ವಿಮರ್ಶೆಗಳನ್ನು ಆ ಕೃತಿಯಲ್ಲಿ ಪ್ರಕಟಿಸಿದ್ದಾರೆ. ಆ ಕವಿತೆ ಕನ್ನಡ ಸಾಂಸ್ಕೃತಿಕ ವಲಯದಲ್ಲಿ ಒಂದು ವಿಶಿಷ್ಟ ಪ್ರಭಾವವನ್ನುಂಟು ಮಾಡಿದೆ. ಅದು ಕಾವ್ಯ ಓದುಗನಿಗೆ ಒಂದು ಆಕರ್ಷಣೆಯಾಗಿ, ಅವನಲ್ಲಿ ಏಳುವ ಪ್ರಶ್ನೆಗಳನ್ನು ಹಾಗೇ ಉಳಿಸಿ ಸಾಗುವ ಸಂಕೀರ್ಣ ಕವನವಾಗಿದೆ. ಅದು ಕನ್ನಡ ಭಾವಗೀತ ಲೋಕದ ಆಧುನಿಕ ಪುರಾಣದಂತಿದೆ.

ನನ್ನ ಪ್ರಕಾರ ಬೇಂದ್ರೆಯವರ 'ಜೋಗಿ' ಸ್ವಯಂ ಕವಿಯೆ ಆಗಿ, ಅಲ್ಲಿ ತನ್ನ ಆತ್ಮದ ಸಂಭಾಷಣೆಯೊಂದಿಗೆ ಪರಮಾತ್ಮನನ್ನು ಅರಿಯುವ ಪ್ರಯತ್ನ ಮಾಡುವ ಒಂದು ಜೀವ ಸಂವಾದ ನಡೆದಿದೆ.

ಈ ಬದುಕಿನ ಎಲ್ಲ ಜಂಜಾಟದಲ್ಲಿ ಸದಾ ಆತ್ಮದ ಕರೆಗೆ ಎಚ್ಚರವಾಗಬೇಕು. ಆ ಎಚ್ಚರ ಬರುವುದು ಆತ್ಮದ ಸುಗ್ಗಿಯ ಕಾಲ. ಆ ಮಾವಿನಲ್ಲಿ ಈ ಸುಗ್ಗಿಯಲ್ಲಿ ಒಂದು ಕೋಗಿಲೆ ಬಂದು ತನ್ನ ಜೋಡಿಗಾಗಿ ನನ್ನನ್ನು ಬಾ ಎಂದು ಕರೆಯುತ್ತಿದೆ ಎಂದು ಕವಿ ತಿಳಿಸಿದ್ದಾರೆ.

ತಾರ ಪಂಚಮದಾಗ ಕೋಗಿಲಾ ಕೂಗತsದೊ ಜೋಗಿ
ಯಾವ ಬಣ್ಣ ಅದಕಾವ ಕಣ್ಣು ನಾ ನೋಡಲೇನು ಹೋಗಿ ?
ತೋಟವೆಲ್ಲ ಹೂವಾಗಿ ನಿಂತು ತೊಂಗೆಲ್ಲ ಗೊಂಚಲಾಗಿ
ಪಾಡು ಆಗತಾವ, ಹಣ್ಣು ಆಗತಾವ ಅದರ ಲಯಕೆ ತೂಗಿ.

ಎಂಬಲ್ಲಿ ಕವಿಯ ಆತ್ಮ, ಪರಮಾತ್ಮನ ಕೋಗಿಲ ಕರೆಗೆ ಓಗೊಡುತ್ತ ಅದು ಕವಿಯಾದ ಜೋಗಿಗೆ ಕೇಳುತ್ತದೆ : 'ತಾರ ಪಂಚಮದಾಗ ಕೋಗಿಲಾ ಕೂಗತsದೊ ಜೋಗಿ, ಯಾವ ಬಣ್ಣ ಅದಕಾವ ಕಣ್ಣು ನಾ ನೊಡಲೇನು ಹೋಗಿ ?'

ಆ ತಾರ ಪಂಚಮದ ಕೋಗಿಲೆಯ ಪರಮಾತ್ಮನ ಕೂಗಿಗೆ, ತನ್ನ ಮನದ ತೋಟವೆಲ್ಲಾ ಹೂವಾಗಿ, ತೊಂಗೆಲ್ಲ ಗೊಂಚಲಾಗಿ ಪಾಡಾಗಿ, ಹಣ್ಣಾಗಿ ಅದರ ಲಯಕ್ಕೆ ತೂಗುತ್ತಿದೆ ಎಂಬುದು ಅಧ್ಯಾತ್ಮದ ಭವ್ಯಾನುಭವ. ಅದು ಆ ಕರೆಗೆ ತೂಗುಯ್ಯಲಿಡುವ ಆತ್ಮ ಪರಮಾತ್ಮನ ಜೊತೆಗೆ ಬೆರೆಯಲು ತೂಗುವ ಸ್ಥಿತಿಯ ಸಮರ್ಥ ಬಣ್ಣನೆ. ಅದು ವ್ಯಕ್ತಿ ತನ್ನ ವೈಯಕ್ತಿಕ ಜೀವನದಲ್ಲಿ ಅಧ್ಯಾತ್ಮಿಕ ಎತ್ತರಕ್ಕೇರುವ ಮಾನಸಿಕ ಊರ್ಧ್ವಗಾಮಿತ್ವವನ್ನು ಸೂಚಿಸುತ್ತದೆ.

ಕವಿಯ ದೇಹವನ್ನು ಬಿಟ್ಟು ಆತ್ಮ ಪರಮಾತ್ಮನೊಡನೆ ತೂಗುವ ತೂಗುಯ್ಯಾಲೆಯ ಸಮರ್ಥ ಅಭಿವ್ಯಕ್ತಿ 'ತೊಂಗೆಲ್ಲ ಗೊಂಚಲಾಗಿ ಪಾಡು ಆಗತಾವ' ಎಂಬ ನುಡಿಯಲ್ಲಿದೆ. ಈ ಪಾಡು ಎಂಬ ಪದ ಆತ್ಮದ ಪರಿಪಕ್ವತೆಯ ಸ್ಥಿತಿಯನ್ನು ಧ್ವನಿಸುತ್ತದೆ. ಕಾಯಿಯಿದ್ದದ್ದು ಪಾಡಾಗಿ ಬಂದ ಪರಿಯನ್ನು ಅಭಿವ್ಯಕ್ತಿಸುತ್ತದೆ. ಮಾವಿನ ಮರದ ಸಂಕೇತ, ಅಲ್ಲಿನ ಕೋಗಿಲೆಯ ಕರೆ, ಏಳು ಹೆಡೆ ಸರ್ಪದ ಹುತ್ತ ಏರಿಹೋದ ಧೈರ್ಯ–ಆತ್ಮವನ್ನು ಮಾವಿನ ಹಣ್ಣಿನ ಪಕ್ವತೆಯ ಸ್ಥಿತಿಗೆ ತಂದಿದೆ. ಉತ್ತರ ಕರ್ನಾಟಕದಲ್ಲಿ ಮಾವು ದೋರುಗಣ್ಣಿನ ಹಂತ ದಾಟಿ ಪಕ್ವತೆಯ ಹಂತ ತಲುಪಿದ ಸ್ಥಿತಿಯನ್ನು 'ಪಾಡು' ಎನ್ನುವರು. ಆಗ ಅದನು ಕಿತ್ತು ಅಡೆ ಹಾಕಬೇಕಾಗುತ್ತದೆ ಹಣ್ಣಾಗಲು. ಅಂತಹ 'Ripeness and readiness to be gathered' ನ ಸ್ಥಿತಿಗೆ ತಲುಪಿದ್ದ ಆತ್ಮದ ಏರುಸ್ಥಿತಿ ಬಂದಿದೆ. ಅದೇ ಸಂದರ್ಭದಲ್ಲಿ ಆತ್ಮ ಪರಮಾತ್ಮನನ್ನು ತಲುಪಲು ನಡೆಸಿದ ಹೋರಾಟ ಅದರ ಪಾಡನ್ನು ಅಂದರೆ Suffering, Throuble ಅನ್ನು Proper state, fitness ತಲುಪಿದ ಹಂತವನ್ನು ಸೂಚಿಸುತ್ತದೆ. ಅದು 'ಪಟ್ಟ ಪಾಡೆಲ್ಲವೂ ಹುಟ್ಟು ಹಾಡಾಗುತ ಹೊಸದಾಗಿ ರಸವಾಗಿ ಹರಿಯುತಿದೆ' ಎಂಬ ಸ್ಥಿತಿಯೂ ಆಗುತ್ತದೆ. ಅಂತಹ ಪಾಡು ಆತ್ಮ ಪರಮಾತ್ಮನನ್ನು ಸೇರುವ, ತೂಗಿ ತೊನೆವ ಸಮರ್ಥ ಚಿತ್ರಣವಾಗಿದೆ.

(ವಿಜಯ ಕರ್ನಾಟಕ, ಬೋಧಿವೃಕ್ಷ, 27.5.2017)

■



ಓ ಆಷಾಢಾ

ರೈತರು ಮೊದಲ ಮಳೆಗೆ ನೆಲ ಉತ್ತು ಬಿತ್ತನೆ ಮಾಡಿದ ನಂತರ ಪ್ರಮುಖವಾಗಿ ಕಾಯುವುದು ಆಷಾಢದ ಮೃಗಶಿರಾ ಮಳೆಗಾಗಿ, ಅದಕ್ಕಾಗಿ ಅವರು ಪರಿತಪಿಸುವ ಚಿತ್ರಣವನ್ನು ಎಳೆ ಎಳೆಯಾಗಿ ಬೇಂದ್ರೆ ಅವರು 'ಓ ಆಷಾಢಾ' ಕವನದಲ್ಲಿ ನೀಡಿದ್ದಾರೆ.

ಮೊದಲ ಬಿತ್ತಿಗೀ ಮೊಳಕೀ ಒಡೆದು ಗೋಣು ಚೆಲ್ಲ್ಯಾವ
ತೂಕಾ ತಪ್ಪಿದ ಮೂಕ ಪ್ರಾರ್ಥನೀ ಮುಗಿಲಿಗೆ ಸಲ್ಲ್ಯಾವ
ಎಲ್ಲ್ಯಾವ ಎಲ್ಲ್ಯಾವ ಎಲ್ಲ್ಯಾವ ಮೋಡಾ
ಮಣ್ಣೆತ್ತೂನೂ ನೀರಡಿಸ್ಯಾವಽ
ಒಕ್ಕಲಿಗಽನ ಕಣ್ ಬಿಡಿಸ್ಯಾವಽ ಓ ಆಷಾಢಾ ॥ (ನಮನ)

ಬಿತ್ತಿದ ಬೀಜ ಹಕ್ಕಳಿ ಎಬ್ಬಿಸಿಕೊಂಡು ನಿಂತಿರುತ್ತವೆ. ಹಾಗೆ ಮಡಿಲೊತ್ತಿಕೊಂಡು ನಿಂತಾಗ ಅಲ್ಲಿ ಮೊಳಕೆ ಕಾಣಿಸುತ್ತದೆ. ಅದು ಮಳೆನೀರಿಗಾಗಿ ಕಾಯುತ್ತಿರುತ್ತದೆ. ಸ್ವಲ್ಪ ಮಳೆ ಆದರೂ ಹಕ್ಕಳಿ ನೆನೆದು ಕರಗಿ ಹೋಗುತ್ತದೆ. ಮೊಳಕೆಗೆ ಉಟಾವ್ ಸಿಗುತ್ತದೆ. ಬೆಳೆ ಬಾಳುತ್ತದೆ.

ರೈತರು ಮಳೆಗಾಗಿ ಪ್ರಾರ್ಥಿಸುತ್ತ ಆಷಾಢದಲ್ಲಿ ಮಣ್ಣುಪೂಜೆ ಮಾಡುತ್ತಾರೆ. ಜ್ಯೇಷ್ಠ ಬಹುಳ ಅಮಾವಾಸ್ಯೆಯನ್ನು ಮಣ್ಣೆತ್ತಿನ ಅಮಾವಾಸ್ಯೆ ಎಂದು ಕರೆಯುತ್ತಾರೆ. ಅಂದು ಮಣ್ಣಿನ ಜೋಡಿ ಎತ್ತುಗಳನ್ನು ತಯಾರಿಸಿ ರೈತರು ಪೂಜೆ ಮಾಡುತ್ತಾರೆ. ಮಣ್ಣೆತ್ತನ್ನು ಪೂಜಿಸುವಾಗ ತೀವ್ರ ಮಳೆಯ ಅಭಾವವಿರುವುದನ್ನು ಕವಿ 'ಮಣ್ಣೆತ್ತೂನೂ ನೀರಡಿಸ್ಯಾವಽ' ಎಂದು ಧ್ವನಿಪೂರ್ಣವಾಗಿ ಚಿತ್ರಿಸಿದ್ದಾರೆ.

ಆಷಾಢದಲ್ಲಿ ಮಳೆ ಬೀಳುವುದು ಅನಿಶ್ಚಿತವಾಗಿರುತ್ತದೆ. ಆಗ ಮಳೆಗಾಗಿ ಕಾದ ರೈತ ಚಡಪಡಿಸುತ್ತಿರುತ್ತಾನೆ. ಆ ಚಿಂತೆ ಅವನನ್ನು ಕಣ್ ಬಿಡುವಂತೆ ಮಾಡುತ್ತದೆ. ಅದನ್ನು ಕವಿ 'ಒಕ್ಕಲಿಗನ ಕಣ್ ಬಿಡಿಸ್ಯಾವಽ ಓ ಆಷಾಢ' ಎಂದು ವ್ಯಂಗ್ಯಾತ್ಮಕವಾಗಿ ವರ್ಣಿಸಿದ್ದಾರೆ.

ಅಕಸ್ಮಾತ್ತಾಗಿ ಆ ಸಮಯಕ್ಕೆ ಮಳೆ ಬಾರದೆ ಇದ್ದರೆ ಬೀಜ ಸತ್ತುಹೋಗುತ್ತದೆ. ಹಾಗಾಗಿ ಹುಸಿಹೋದ ಆಷಾಢದ ಮಳೆಯನ್ನು ರೈತ 'ಓ ಆಷಾಢಾಽ ಆಷಾಢಾಽ । ತಡಮಾಡಬ್ಯಾಡಾ' ಎಂದು ಅಂಗಲಾಚಿ ಮೊರೆಯಿಡುತ್ತಾನೆ.

ಗ್ರಾಮೀಣ ಜನರು 'ಮೋಡ'ವನ್ನು 'ಮಾಡಾ' ಎಂದು ಕರೆಯುತ್ತಾರೆ. 'ಮಾಡಾ' ಅವರ ನಂಬಿಕೆಯ ಬಿಂಬ. ಅದನ್ನು ಶ್ಲೇಷಾರ್ಥದಲ್ಲಿ ಬೇಂದ್ರೆ ಹೀಗೆ ಪ್ರಾರ್ಥನೆಯಾಗಿಸಿದ್ದಾರೆ.

'ಮಾಡಾ, ಮಾಡಾ, ಮಾಡಾ
ಮಾಡಾ ಅನಬ್ಯಾಡಾ.
ಮಾಡೋವಾಗ ಮಾಡತಾನ ತಾನಽ
ತಿಳ್ಯೋದಿಲ್ಲ ಗೂಢಾ.'

* * *

'ಮಾಡಾ ಮಾಡಾ ದಯಮಾಡಾ
ಸ್ವಾಮಿ! ನೆಲ ನೀರಡಿಸಿತ್ತು.' **(ತಾ ಲೆಕ್ಕಣಿಕೆ ತಾದೌತಿ)**

ಕವಿಯು ಮಳೆಯ ಬರುವಿಕೆಗಾಗಿ ಆಕಾಶವನ್ನು ಈಕ್ಷಿಸುತ್ತ ಘನಮೋಡವೆ ಮಳೆಯಾಗಿ ಇಳಿ. ನೀನು ಬಿದ್ದಾಗ ಮಾತ್ರ ಈ ಭೂಕ್ಷೇತ್ರ ಫಲರೂಪಿಯಾಗುತ್ತದೆ. ನೆಲದ ಜೀವಿಗಳಿಗೆ ಜೀವಪೋಷಕ ದವಸಧಾನ್ಯದ ಕರುಣೆ ಎಂದು ಧ್ಯಾನಿಸಿದ್ದಾರೆ.

'ಓ ಘನವೆ ಜೀವನವೆ ಅಂತರಿಕ್ಷದೊಳಿಂತು
ಸಾಕ್ಷಿಕನ ತೆರದಿ ಸಂಚರಿಸುವರೆ? ಇಳಿಯಣ್ಣ;
ಕ್ಷೇತ್ರವಾಗಲಿ ಫಲ ರುಚಿರ ಗಾತ್ರ ಸತ್ಪಾತ್ರ
ಬಾಂಬೊಲದಿ ಬರಿದೇನು ಇಂದ್ರಚಾಪದ ಬಣ್ಣ.' **(ಉತ್ತರಾಯಣ)**

ಅಮರಾವತಿಯೇ ಬಾಂಬೊಲ. ಆ ಸ್ವರ್ಗದ ಪಟ್ಟಣದಲ್ಲಿ ಇಂದ್ರಚಾಪದ ಬಣ್ಣ ಬರಿದೆ? ಇಲ್ಲ. ಆ ಕಾಮನಬಿಲ್ಲು ಏಳು ಬಣ್ಣಗಳಿಂದ ರಂಜಿಸುವ ತುಂಬು ವೈಭವ ಹೊಂದಿದೆ. ಅಲ್ಲಿಂದ ಇಳಿದು ಬರುವ ಆಕಾಶದ ನದಿಯೇ ದೇವಗಂಗೆ. ಆ ತಾಯಿ ಇಳಿದು ಬಂದಾಗ ಹಸಿರುಕ್ಕಿ ಈ ಭುವಿಯಲ್ಲಿ ಫಲ ಹೊಮ್ಮಿದಾಗ ಅದನುಂಡು ಎಲ್ಲ ಜೀವಜಂತುಗಳು ಇಂದ್ರಚಾಪದ ಬಣ್ಣದಲ್ಲಿ ಮಿರುಗುತ್ತವೆ. ಈ ನೆಲದ ಜನ ಜೀವಂತಿಕೆಯಿಂದ ಉಸಿರಾಡಿ ಕಂಗೊಳಿಸುತ್ತಾರೆ. ಅದನ್ನು ಸಾಧ್ಯವಾಗಿಸುವ ಘನ ಮೋಡವೆ ನೀನು ಜೀವನ ಅಂದರೆ ನೀರು. ನೆಲದ ಜನರ ಜೀವನವಾಗಿ ಇಳಿಯಣ್ಣ ಎಂದು ಬೇಂದ್ರೆ ಪ್ರಾರ್ಥಿಸಿದ್ದಾರೆ.

ಮೋಡರಾಯ ನೀನು ಬರುವಾಗ ಸಿಡಿಮಿಡಿಗೊಂಡು, ಸಿಡಿಲೆರಗಿಸಿ ಆಘಾತವನ್ನುಂಟು ಮಾಡಬೇಡ. ಈ ನೆಲದ ಬದುಕನ್ನು ಹಸನುಗೊಳಿಸಲು ಚಡಪಡಿಸಿ ಬಾ ಎಂದು ಕೇಳಿಕೊಂಡಿದ್ದಾರೆ.

'ಸಿಡಿಮಿಡಿ ಮಾಡಬ್ಯಾಡ
ಸಿಡಿಲೆರಗಿ ಬರಬ್ಯಾಡಾ
ತುಡಗೀಲೆ ಹೆಜ್ಜೆಹಾಕಿ, ಚಡಪಡಿಸಿ ಬಾ
ಜಾಡು ತಡವೆರಿಸಿ ಬಾ' (ಶತಮಾನ)

ಆಷಾಢದಲ್ಲಿ ಹೊಂಗೆಮರದ ಹೊಂಗೆ ಕಾಯಿಯ (ಹುಲುಗಲ) ಒಳಗಿನ ಬೀಜ ಒಣಗಿ ಅದು ಗಿಲೀ ಗಿಲೀ ಎಂದು ಶಬ್ದ ಮಾಡುತ್ತದೆ. ಅದೇ ಕಾಲದಲ್ಲಿ ಬಿತ್ತಿದ ಬೀಜವು ಉಳಿದು ಬೆಳೆಯಲು ರೈತನು ಮಳೆಗಾಗಿ ಮೋಡವನ್ನು ನೋಡುತ್ತಿರುತ್ತಾನೆ. ರೈತ ಮತ್ತು ಇಡೀ ಪ್ರಕೃತಿ ಮಳೆಗಾಗಿ ಬಾಯಿಬಿಟ್ಟು ಕಾಯುತ್ತಿರುತ್ತದೆ. ಸಾಕಷ್ಟು 'ಹೊಟ್ಟೆಯೊಳಗೆ ಹೂರಣ ಇಲ್ಲದ' ಕರ್ಜಿಕಾಯಿಯೂ ಗಿಲೀ ಗಿಲೀ ಎಂದು ಶಬ್ದ ಮಾಡುತ್ತದೆ.

'ನರಗಳ ನೂಲಿನ ಪರೆ ಪರೆ ಚೀಲಾ । ತೆರೆ ತೆರೆಯಾಗಿದೆ ಜಿರಿ ಜಿರಿಯಾಗಿದೆ। ಅದರೊಳಗೊಂದು ಎಲುವಿನ ಬಲೆಯು!'

(ಭೂಮಿ ತಾಯಿಯ ಚೊಚ್ಚಿಲ ಮಗ)

ಸ್ಥಿತಿಯ ರೈತನ ಹೊಟ್ಟೆಯೊಳಗೂ ಸಾಕಷ್ಟು ಹೂರಣ ಇಲ್ಲ. ಹಾಗಾಗಿ ಅವನ ಚಡಪಡಿಕೆ ಗಿಲಗಂಚೀಕಾಯಿ (ಕರ್ಜಿಕಾಯಿ)ಯ ರೀತಿಯದ್ದಾಗಿದೆ ಎಂದು ಕವಿ ರೂಪಕಾತ್ಮಕವಾಗಿ ಚಿತ್ರಿಸಿದ್ದಾರೆ:

'ಹುಲುಗಲದಾಽಗಽ, ಗಿಲೀ ಗಿಲೀ ಅಂತಾಽವ । ಗಿಲಗಂಚೀ ಕಾಯಿಽ
ಹೊಟ್ಟೀಯೊಳಗ ಹೊರಣೆಲ್ಲಾಽ । ಬಿಡತಾವೋಽ ಬಾಯಿಽ'


* * * *

ಆಷಾಢದಲ್ಲಿ ಬೀಳುವ ಮೃಗಶಿರ ಮಳೆಯನ್ನು ನಿರೀಕ್ಷಿಸುತ್ತ ರೈತರು 'ಮೃಗಾಕೂಡ್ತು', 'ಮಿರುಗನ ಮಳಿಕೂಡ್ತು' ಎಂದು ಹೇಳುತ್ತಾರೆ. ಆ ಮೃಗಾಮಳೆಯು ಭ್ರಮೆಹುಟ್ಟಿಸಿ ಬೀಳದೆ ಇರುವುದನ್ನು ಬೇಂದ್ರೆಯವರು 'ಮೃಗಜಲಾ ಆತು' ಎಂದು ಧ್ವನಿಪೂರ್ಣವಾಗಿ ಬಣ್ಣಿಸಿದ್ದಾರೆ. ಜಲ ಮರೀಚಿಕೆಯಲ್ಲಿ ರೈತ ಕಂಗಾಲಾಗಿ ಹೋಗುತ್ತಾನೆ. ಆಗ 'ಹೊಲಾ ಆತು ಬರಿ ನೆಲಾ.' ಹಾಗೆ ಆಗದಿರಲಿ ಎಂದು ರೈತ ಆಷಾಢನನ್ನು ಪ್ರಾರ್ಥಿಸುವ ಆಶಾಭಾವನೆಯ ಧನಾತ್ಮಕ ಚಿಂತನೆ ಬೇಂದ್ರೆಯವರದು. ಅವರು ಆಷಾಢವನ್ನು ಪ್ರಾರ್ಥಿಸಿದ್ದಾರೆ:

'ಏಳುವ ಬೆಳೀ ಬಾಳುವಿಗಾಗಿ
ಕತ್ತ ಎತ್ತಿರಲಿ. ಓ ಆಷಾಢಾ.'

(ವಿಜಯ ಕರ್ನಾಟಕ, ಬೋಧಿವೃಕ್ಷ 22-7-2017)

■



ಗಂಗಾಷ್ಟಕ

'ಬೆಳೆವ ಹೊಲಕೆ ಮಳೆಯಾಗಿ
ಬಾಯಾರಿಸೆ ಹೊಳೆಯಾಗಿ
ಕಣ್ಣಿಗೆ ಕಳೆಕಳೆಯಾಗಿ
ಜಲವಾಗಿಹೆ ನೀನು' (ಸಂಚಯ)

ಪಂಚಭೂತಗಳ ಆರಾಧನೆಯ ಭಾರತೀಯ ಮನಸ್ಸು ಜಲವನ್ನು ಹೆಣ್ಣಾಗಿ ಪರಿಭಾವಿಸಿದೆ. ಗಂಗಾದೇವಿಯಾಗಿ ಆರಾಧಿಸಿದೆ. ಗಂಗೆಯು ಈ ನೆಲದ ಚರಾಚರಗಳ ಸೃಷ್ಟಿ ಹಾಗೂ ಪೋಷಕ ಚೈತನ್ಯ. ಈ ಪೃಥ್ವಿಯಲ್ಲಿ ಮೊದಲು ಸೃಷ್ಟಿಯಾದದ್ದು ನೀರು. ಬೇಂದ್ರೆಯವರು ನೀರನ್ನು 'ನೀರೆ'/ಚೆಲುವೆ ಎಂದು ಕರೆದು ಕವನ ರಚಿಸಿದ್ದಾರೆ. ಆ ಸೌಂದರ್ಯ ಸೃಷ್ಟಿಯ ತಾಯಿ ಬಂದು ಈ ನೆಲದ ಜೀವಿಗಳ ಕುದಿವ ಪಾಪ, ಕೋಪ, ಸಂತಾಪವನ್ನು ಹೀರಿ ಇಲ್ಲವಾಗಿಸಲಿ ಎಂದು ಪ್ರಾರ್ಥಿಸಿದ್ದಾರೆ.

ಜೀವದಲ್ಲಿಹ ಪಾಪ,
ಜೀವಿಗಳ ಸಂಕೋಪ,
ಜೀವನದ ಸಂತಾಪ,
ಕುಚ್ಚುತಿದೆ, ಕುದಿಸುತಿದೆ, ಎಲೆನೀರೆ! ಹೀರು. (ನಾದಲೀಲೆ)

* * * *

ದೇವತೆಗಳು ಅಥವಾ ದೇವರು (ಬೇರೆ ರೂಪದಿಂದ) ಭೂಮಿಯಲ್ಲಿ ಹುಟ್ಟಿ ಬರುವುದು–ಅವತರಣ. ಅದರ ಇನ್ನೊಂದು ಅರ್ಥ ಇಳಿಯುವುದು. ಬೇಂದ್ರೆಯವರು ಗಂಗಾದೇವಿಯನ್ನು ನೆನೆಯುವುದೆ ತಪಸ್ಸು ಎಂದು ಹೇಳಿದ್ದಾರೆ. ತದೇಕ ಚಿತ್ತದ ಧ್ಯಾನದಲ್ಲಿ ಗಂಗಾಮಾತೆಯನ್ನು ಧ್ಯಾನಿಸಿ ಬರೆದದ್ದು 'ಗಂಗಾಷ್ಟಕ'. ಎಂಟು ಪದ್ಯ ಅಥವಾ ಶ್ಲೋಕಗಳನ್ನುಳ್ಳ ಕವಿತಾ ರಚನೆ ಅಷ್ಟಕ. ಬೇಂದ್ರೆಯವರು ಕೃಷ್ಣಭಕ್ತಿಯ –

ಸಂಕಷ್ಟ ಹರಣಾಷ್ಟಕ ಮುಕ್ತಾವಲಿ, ಗಣಪತಿ ಸ್ತುತಿ, ನೃಸಿಂಹ ಸ್ತೋತ್ರ, ಶಂಕರಾ ಶುಭಂಕರಾ ಅಷ್ಟಕಗಳನ್ನು ರಚಿಸಿದ್ದಾರೆ. ಅವು ಭಕ್ತಸಮುದಾಯದ ಕಷ್ಟ ಪರಿಹಾರಕ, ದೋಷಹಾರಕ, ಶಾಂತಿ ಸಮಾಧಾನ ತಾರಕ ಅಷ್ಟಕಗಳಾಗಿವೆ.

ಅವರಿಗೆ ತಾಯಿ ಗಂಗೆಯು ಮಮತೆಯ ಆವು/ಗೋವು. ಆ ಕಾಮಧೇನು ಹಾಡಿನ ಹಾಲನ್ನು ಸದಾ ಕರೆಯುತ್ತಿದ್ದಾಳೆ. ಅದರಿಂದ ತಣಿದಿರುವಾಗ ತಾಯಿಯನ್ನು ನೆನೆವುದೇ ತಪಸ್ಸು. ತಾಯಿಯ ಧ್ಯಾನವೇ ಜಪ. 'ಉಳಿದ ಶಾಸ್ತ್ರದ ಜಪವು ಕೊರಳೊಳಗೆ ಬಿದ್ದ ಉರಲು' (ಉರಲು= ಜೀರುಗುಣಿಕೆಯ ಹಗ್ಗ; ಪಾಶ) ಎಂದು ಹೇಳಿದ್ದಾರೆ. ಎಲ್ಲ ಸಾಮ್ರಾಜ್ಯಗಳು ಸೃಷ್ಟಿಯಾಗಿರುವುದು ನದಿಗಳ ದಂಡೆಯ ಮೇಲೆ. ಆದುದರಿಂದ ಬೇಂದ್ರೆಯುವರು 'ತಾಯಿ ತೊಡೆಯುಲ್ಲಾಡಿ ಬೆಳೆಯುದಿಹ ಕೂಸುಗಳು ಇಳೆಯೊಳೆಲ್ಲಾದರುಂಟೆ?' ಎಂದು ಪ್ರಶ್ನಿಸಿದ್ದಾರೆ. ಆಕೆಯ ಅವತರಣವೆ ಅತಿಶಯವಾದುದು ಎಂದು ಹೇಳಿದ್ದಾರೆ: 'ಹತ್ತು ಅವತಾರಕ್ಕು ಹಿರಿದೆಂಬೆ ಹಡೆದವ್ವ ನಿನ್ನ ಗಂಗಾವತಾರ.'

ಬೇಂದ್ರೆಯವರು ಇಂಗ್ಲಿಷ್ ನಾಲ್ಕನೇ ಇಯತ್ತೆಯಲ್ಲಿ ಓದುವಾಗ ಹುಯಿಲಗೋಳ ನಾರಾಯಣರಾಯರು ಸಂಸ್ಕೃತ ಶಿಕ್ಷಕರಾಗಿದ್ದರು. ಅವರು ತಮ್ಮ ಬಾಲ್ಯದಲ್ಲಿ ಸಂಸ್ಕೃತ ಕಾವ್ಯ ಅಧ್ಯಯನದಲ್ಲಿ ತೊಡಗಿದ್ದನ್ನು ಹೀಗೆ ತಿಳಿಸಿದ್ದಾರೆ: 'ಸಹಸ್ರಬುದ್ಧೆ ಅವರ ಸಂಸ್ಕೃತ ಪಾಠಶಾಲೆಯೊಳಗಿನ ವಿದ್ಯಾಭ್ಯಾಸ, ಮೇಘದೂತ, ಭರ್ತೃಹರಿ ಶತಕ, ಕಾಲಿದಾಸನ ನಾಟಕ ಇವುಗಳ ಸಂಸ್ಕಾರ ಮೂಡಿತು. ಜಗನ್ನಾಥ ಪಂಡಿತನ ಕೃತಿಗಳು ನನ್ನ ಪ್ರೀತಿಯ ಪಠನಪುಸ್ತಕಗಳಾಗಿದ್ದವು. ಅದರೊಳಗಿನ ಅನ್ಯೋಕ್ತಿ ಶಾಂತಿ ವಿಲಾಸಗಳಂತೆ, ಅವನ ಗಂಗಾಲಹರಿ ಮತ್ತು ಬೇರೆ ಲಹರಿಗಳು ನನ್ನನ್ನು ತಿಳಿಯದೆ ಕಾವ್ಯ ಪ್ರದೇಶದಲ್ಲಿ ಎಳೆದೊಯ್ದವು.' (ಆತ್ಮ–ಕಥನ. ಪುಟಬಂಗಾರ ಸಂಪುಟ–5, ಪು. 430)

ಜಗನ್ನಾಥ ಪಂಡಿತನ ಗಂಗಾಲಹರಿಯ ಮನನದಲ್ಲಿ ಮಿಂದ ಬೇಂದ್ರೆಯವರು 'ಗಂಗಾಷ್ಟಕ'ದಲ್ಲಿ 'ರಾಜ ರಮಣಿಯರು ಕಂಪುಗೊಳ್ಳಲು ತಮ್ಮ ಎದೆಗೆ ಪೂಸಿಕೊಂಡಿದ್ದ ಕಸ್ತೂರಿ, ಅವರು ಬೆಳಗಿನಲ್ಲಿ ಗಂಗಾನದಿಯಲ್ಲಿ ಸ್ನಾನ ಮಾಡುವಾಗ ನೀರಿನೊಳಗೆ ಕೂಡಿದರೆ ಕಸ್ತೂರಿಮೃಗಕ್ಕೆ ಮುಕ್ತಿ.' ಎಂದು ಅವನು ಹೇಳಿದ್ದನ್ನು ಕನ್ನಡಿಸಿದ್ದಾರೆ. ಆ ಉಕ್ತಿಯನ್ನು ನೆನೆದು–ನಾನು ಅವನರೀತಿ ಕಾವ್ಯಮಾರ್ಗದಲ್ಲಿ ನಡೆದವನು ಎಂದು ಹೆಮ್ಮೆಪಟ್ಟಿದ್ದಾರೆ. ತಾನು ಗಂಗೆಯಲ್ಲಿ ಮಿಂದಾಗ–ಕಸ್ತೂರಿ ಮೃಗಕ್ಕೆ ಮುಕ್ತಿದೊರೆತಂತೆ–ತನ್ನನ್ನು ಹಡೆದ ತಾಯಿ ಅಂಬವ್ವನಿಗೆ ಮುಕ್ತಿ ದೊರೆಯಿತು ಎಂದು ಭಾವತನ್ಮಯರಾಗಿ ನುಡಿದಿದ್ದಾರೆ. ಇದೊಂದು ಕವಿಕಲ್ಪನೆ. ಗಂಗೆಯ ಪಾವಿತ್ರ್ಯಶಕ್ತಿಯನ್ನು ಧ್ವನಿಸುವ ಬೆಡಗಿನ ವರ್ಣನೆ.

'ರಾಜರಮಣಿಯರೆದೆಗೆ ಬೆಳಗಿನಲ್ಲುಳಿದಂಥ ಕಸ್ತೂರಿ ಬಿದ್ದು ಕೆಳಕೆ
ಮೈ ತೊಳೆದ ನೀರಿನೊಡ ಗಂಗೆಯಲಿ ಕೂಡಿದರೆ ಮುಕ್ತಿ ಕಸ್ತೂರಿ ಮೃಗಕೆ'
–ಹೀಗೆ ಹಾಡಿದ ಕವಿಯ ನಂಬಿ, ನಿನ್ನಲ್ಲಿಮಿಂದೆ, ನಾನವನ ಬಟ್ಟೆಯವನು.
ನನ್ನ ತಾಯಿಗೆ ಮುಕ್ತಿ ಮಿಂದಂದೆಯಾಗಿತ್ತು; ನಾನವಳ ಹೊಟ್ಟೆಯವನು.

ಭಾರತೀಯ ಧರ್ಮ ಸಂಸ್ಕೃತಿಯ ನೆಲೆ ಕಾಶಿಯಲ್ಲಿ ಹರಿವ ಗಂಗಾನದಿಯಲ್ಲಿ ಸ್ನಾನ ಮಾಡಿದಾಗ ಉಂಟಾದ ಪವಿತ್ರಭಾವ, ಉನ್ನತ ಆಲೋಚನಾ ಸಿದ್ಧಿಯನ್ನು ಬೇಂದ್ರೆಯವರು ಹೀಗೆ ದಾಖಲಿಸಿದ್ದಾರೆ:

'ವಿಶ್ವದೊಳಗೆಲ್ಲೆಲ್ಲು
ತನ್ನ ಜೀವದ ಸೊಲ್ಲು'

ಈ ಮಿಡಿತ ಕಾಶೀವಿಶ್ವೇಶ್ವರನ ಬಳಿ ಸುಳಿಯುವಾಗ ನನ್ನ ಕಿವಿ ಹಿಂಡಿತು, ಹಿಡಿದಿತು. 'ಗಂಗಾಷ್ಟಕ'ದಿಂದ ನನ್ನ ಜ್ಞಾನಪಿಂಡ ತೊಳೆದ ಕಾಲ ಅದು. (ಸಾಹಿತ್ಯದ ವಿರಾಟ್ ಸ್ವರೂಪ. ಪು–99)

'ತನ್ನ ಮಕ್ಕಳಿಗಾಗಿ ಏನು ಮಾತೆಯರೀತಿ! ಆ ಪದವಿ ಯಾವ ಕಂಡ ನನ್ನ ಗಂಗಾಷ್ಟಕವು ಆ ಮಾತೃಪದದಲ್ಲಿ ಆಗಿರಲಿ ಜ್ಞಾನಪಿಂಡ', ಎಂದು ತನ್ನ ತಾಯಿ ಅಂಬವ್ವನಿಗೆ ಪಿಂಡವನ್ನು ಅರ್ಪಿಸಿದ್ದಾರೆ. ತಾಯಿಗೆ ತಕ್ಕ ಮಗನಾಗಿ ಅವಳ 'ಉದರದ ಹೂವಾಗಿ, ಸರಸ್ವತಿಗೆ ಸಲ್ಲಿಸಲ್ಪಟ್ಟವರು 'ಅಂಬಿಕಾತನಯದತ್ತ'. ಅವರು ಭಾರತೀಯ ಕರ್ಮಕಾಂಡದ ಭಾವ ಚಿಂತನೆಯ ಉನ್ನತನೆಲೆಯಲ್ಲಿ ಒಂದಾಗಿ ಹೀಗೆ ತನ್ನನ್ನೇ ತಾನು ಪ್ರಶ್ನಿಸಿಕೊಂಡಿದ್ದಾರೆ :

'ಗಂಗೆಯನ್ನು ಕುರಿತು 'ಗಂಗಾಷ್ಟಕ' ಬರೆದು, ಬೇಂದ್ರೆ ತಾಯಿಗೆ ಪಿಂಡಾರ್ಪಣ ಮಾಡಿದ. ಮಾತೆಯ ಪ್ರಪಂಚದಲ್ಲಿ ಮಾತಿನ ಪಿಂಡ! 'ಮಾತೆ ಜ್ಯೋತಿರ್ಲಿಂಗ' ಎಂದು ಕಾಣುವದು ಜನ್ಮಜನ್ಮದ ಸಾಧನ. ಜಾತ್ಯಂತರ ಸಿದ್ಧಿ ಅಲ್ಲವೇ?' (ಸಾ.ವಿ.ಸ್ವಪು. 51)

* * * *

'ಸಮೃದ್ಧ' ಕವನದ ಭಾವಸಂದರ್ಭ: ಜಗನ್ನಾಥ ಪಂಡಿತರ ಭಕ್ತಿ ವಾತ್ಯಾಲ್ಯಗೀತವಾದ ಗಂಗಾಲಹರಿಯ ಮೊದಲ ಚರಣ 'ಸಮೃದ್ಧಂ ಸೌಭಾಗ್ಯಂ ಸಕಲ ವಸುಧಾಯಾಃ ಕಿಮಪಿತತ್' ಎಂಬುದರ ಪದಪದವನ್ನು ಸ್ಮರಿಸಿ, ಗಂಗೆಯ ವಿಭೂತಿಮತ್ವವನ್ನು ಬಣ್ಣಿಸಿದೆ.

ಜಗನ್ನಾಥ ಪಂಡಿತನಂತೆ ಬೇಂದ್ರೆಯವರು 'ಅಹುದು ನೀನೆ ಸಮೃದ್ಧ ಎಂಬೆ' ಎಂದು ಕವನದಲ್ಲಿ ಹಾಡಿದ್ದಾರೆ. ಗಂಗಾದೇವಿ ಮುಗಿಲಿನಿಂದ ಧರೆಗೆ ಇಳಿದು ಬರುವ ದೇವತೆ. ಹಾಗಾಗಿ ಅವಳನ್ನು ಬಣ್ಣಿಸುವಾಗ ಅವಳು ಮುಗಿಲಮಲ್ಲಿಗೆಯಂತ ಒಡವೆಯನ್ನು ಕಿವಿಯಲ್ಲಿ ಧರಿಸಿದ್ದಾಳೆ. ಆ ಓಲೆಯ ಹೊಳಪು ಅವಳನ್ನು ಪ್ರಕಾಶಿಸಿದೆ ಎಂದು ಕಲ್ಪನಾ ಸೌಂದರ್ಯದಲ್ಲಿ ಅವರು ದೇವಿಯನ್ನು ಬಣ್ಣಿಸಿದ್ದಾರೆ. ಅದು ಕಿವಿಯ ಹಾಲೆಯ ಮೇಲುಭಾಗದಲ್ಲಿ ನೇತಾಡುವಂತೆ ಇಟ್ಟುಕೊಳ್ಳುವ ಮತ್ತು ಅರಳುಗಳನ್ನು ಜೋಡಿಸಿದ ಉಂಗುರದಂತಿರುವ ಆಭರಣ–ಬಾವಿಲಿ. ಅದರ ಪ್ರಕಾಶದ ಕಿರಣವೇ ಮಳೆ ಎಂಬ ಭಾವದಲ್ಲಿ ಕವಿಯು ಹೀಗೆ ಚಿತ್ರಿಸಿದ್ದಾರೆ:

ತುಂಬಿ ತುಂಬೌಗಂಗೆ ಲೋಕಲೋಪವ ತುಂಬು
ಶಿಷ್ಟದುಷ್ಟರ ಕೊಡುಗೆಗಿರಲಿ ಬಾವುಲಿ ಕರ್ಣ
ಜಗದಂತರಾಳದಲಿ ನೀನೆ ಪೂರ್ಣಾತ್ ಪೂರ್ಣ.

ಗಂಗೆ ಸುರಿಸುವ ಮಳೆ ಬೇಂದ್ರೆಯವರಿಗೆ ಅಂಬು(ಬಾಣ). ಕಾಮನ ಪುಷ್ಪಶರ ಲೋಕದ ಪ್ರಿಯ ಪ್ರಿಯೆಯರಲ್ಲಿ ಪ್ರೇಮಭಾವವನ್ನುಂಟು ಮಾಡಿದರೆ ಗಂಗಾಮಾತೆಯ ಅಂಬು 'ಜೀವದಾನದ ದೀಕ್ಷೆ ತೊಟ್ಟಿಹುದು.'

ಬೇಂದ್ರೆಯವರಿಗೆ ಗಂಗೆಯ ನೆನೆಪು ಎಂಬುದೇ ಬೆಳಕು, ಜ್ಞಾನ. ಜಲವು ಸೃಷ್ಟಿಯ ಎಲ್ಲ ಜ್ಞಾನದ ಮೂಲ. ಅದಿಲ್ಲದಿದ್ದರೆ ಲೋಕದಲ್ಲಿ ಜಡ ಚೇತನಗಳಿಗೆ ಬೆಳಕಿಲ್ಲ. ಸೂರ್ಯ ಬೆಳಕು ನೀಡಿದರೂ ಅದರ ಝಳದಲ್ಲಿ ಎಲ್ಲ ನಾಶವಾಗಿ ಮರಳುಗಾಡಾಗುವುದು. ಆದುದರಿಂದ ಬೇಂದ್ರೆಯವರು ಹೀಗೆ ವರ್ಣಿಸಿದ್ದಾರೆ.

ನಿನ್ನ ನೆನವೇ ಬೆಳಕು ನನಗೆ ಮೂರು ಸಂಜೆ
ನಿನಗುಪಮೆಯೇ ತಾಯಿ ನೀನು ಕಳಿಯದ ಹಣ್ಣು.


ಕವಿಯು ಗಂಗಾದೇವಿಯನ್ನು ಬಣ್ಣಿಸಲು ಒಂದು ವಿಶಿಷ್ಟಪದ 'ಕಳಿಯದ ಹಣ್ಣು' ಬಳಸಿದ್ದಾರೆ. ಕಳಿಯೆಂದರೆ ಮಾಗು, ಪಕ್ವವಾಗು ಎಂಬ ಎಲ್ಲರಿಗೂ ಗೊತ್ತಿರುವ ಒಂದು ಅರ್ಥವಿದೆ. ಅದರ ಇನ್ನೊಂದು ಅರ್ಥ ಬಾಡು; ಬತ್ತು; ಕ್ಷೀಣವಾಗು; ಕಳೆಗುಂದು. ಅವರು ಈ ಕವನದಲ್ಲಿ ಗಂಗಾದೇವಿಯನ್ನು ಚಿತ್ರಿಸುವಾಗ ಬಾಡದ, ಬತ್ತದ, ಕ್ಷೀಣವಾಗದ, ಕಳೆಗುಂದದ ಎಂಬ ಅರ್ಥದಲ್ಲಿ 'ಕಳಿಯದ ಹಣ್ಣು" ಪದ ಬಳಸಿದ್ದಾರೆ.

ನಿನ್ನ ಜೀವನ ಕುಡಿದು ಸುತ್ತಗೊ ಮಣ್ಣ ತುಂಬಿದೆ ಜೀವನಾ.
ಬೆಳಕಿಗೆತ್ತಲು ಕಣ್ಣ ತೆರೆದಿದೆ ಹುಡುಕ ಬಯಸಿದೆ ದೇವನಾ.
(ಜೀವನ=ನೀರು)

(ಹೃದಯ ಸಮುದ್ರ)

(ವಿಜಯ ಕರ್ನಾಟಕ, ಬೋಧಿವೃಕ್ಷ, 13–05–2017)

■



ತಾಯೆ ಕನಿಮನೆಯೆ ನೀ

ಇತ್ತೀಚಿನ ದಿನಗಳಲ್ಲಿ ಪತ್ರಿಕೆ ಓದಲು, ಟಿ.ವಿ. ನೋಡಲು ಮನಸ್ಸಾಗುತ್ತಿಲ್ಲ. ಪತ್ರಿಕೆಯ ಪುಟ ಪುಟಗಳಲ್ಲಿ ಹೆಣ್ಣಿನ ಅತ್ಯಾಚಾರದ ಸುದ್ದಿ ಇದ್ದು, ಟಿ.ವಿಗಳಲ್ಲಿ ಅದರ ಕ್ರೌರ್ಯ ಕಣ್ಣಿಗೆ ರಾಚುತ್ತಿದೆ. ಪುರುಷನಾದ ನನ್ನನ್ನು ಈ ಜಗತ್ತಿಗೆ ತಂದವಳು ನನ್ನ ತಾಯಿ. ಪವಿತ್ರಾತ್ಮಳಾದ ಹೆಣ್ಣು. ಅವಳಿಲ್ಲದೆ ನಾನು ಇಲ್ಲ. ಒಂದು ಮಣ್ಣಿನ ಗೊಂಬೆಯಂತೆ ಕೈಕಾಲು ಕತ್ತು ನಿಲ್ಲದ ಜೀವವನ್ನು ಮಮತೆ ಮುದ್ರಿಸಿ, ಅಮೃತದ ಸ್ತನ್ಯಪಾನದಿಂದ ಪೋಷಿಸಿದವಳು ತಾಯಿ. ಅವಳನ್ನು ಗೌರವಿಸುವ ರೀತಿಯೆಂದರೆ ಹೆಣ್ಣನ್ನು ಗೌರವಿಸುವುದು.

ವರಕವಿ ದ.ರಾ. ಬೇಂದ್ರೆಯವರಿಗೆ ಬಾಲ್ಯದಲ್ಲಿ ಅವರ ತಾಯಿ ಅಂಬವ್ವ ಹೇಳಿಕೊಟ್ಟ ಮಂತ್ರ 'ಹೆಣ್ಣು ಎನ್ನುವ ಮಾತು, ತಾಯಿ ಎನ್ನುವ ಮಾತು ಎರಡಲ್ಲ ಒಂದು' ಎಂಬುದು. ಅದರಿಂದ ಅವರು ತನ್ನ ತಾಯಿಯ ಹೆಸರನ್ನು ಕಾವ್ಯನಾಮವಾಗಿಟ್ಟುಕೊಂಡು ಕಾವ್ಯ ರಚಿಸಿ 'ಅಂಬಿಕಾತನಯದತ್ತ' ಆದರು. ಅವರು ಇಡೀ 'ಸ್ತ್ರೀ' ಸಮೂಹವನ್ನು ತಾಯಿ ಎಂದು ಕರೆದು ಹೀಗೆ ಬಣ್ಣಿಸಿದ್ದಾರೆ:

'ತಾಯೆ ಕನಿಮನೆಯೇ ನೀ, ಅಕ್ಕ ಅಕ್ಕರತೆಯೇ
ಬಾಯೆನ್ನ ತಂಗಿ ಬಾ ಮುದ್ದು ಬಂಗಾರವೇ
ನೀಯೆನ್ನ ಹೆಂಡತಿಯೊ ಮೈಗೊಂಡ ನನ್ನಿಯೋ
ಮಗಳೊ ನನ್ನೆದೆಯ ಮುಗುಳೊ?

ಈಯೆನ್ನ ಇರವಿಂಗೆ ಜೀವನದ ಬಾಳ್ವಿಕೆಗೆ
ಈಯುತ್ತ ಕೈಮೈಗಳಂ ಜೀವಭಾವದಿಂ
ಸ್ತ್ರೀಯೆ, ಕಾಪಾಡಿದೌ ಪಾಡಾಗಿ ಮೂಢನನು
ತಕ್ಕೈಸಿ ನೂರು ತೆರದಿ.' **(ಗರಿ)**

ಈ ಕವನದಲ್ಲಿ ಬೇಂದ್ರೆಯವರು ಗಂಡಸಾಗಿ ತನ್ನೆಲ್ಲ ಪುರುಷ ಪ್ರಧಾನ ಭಾವನೆಗಳನ್ನು ಬದಿಗೊತ್ತಿ, ಸ್ತ್ರೀ ಶಕ್ತಿಯನ್ನು ಅರಿತು ಅಲ್ಲಿ ನೆಲಸಿರುವ ಕೋಮಲಾಂತಃಕರಣ ಮತ್ತು ಜೀವ ಪೋಷಕ ಸತ್ವದಿಂದ ತಾನು ಪೂರ್ಣನಾಗಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ಮಿಂಚಿನ ಹೊಳಪಿನ ಸೃಷ್ಟಿ ಹಾಗೂ ಜ್ಞಾನದ ನೆಲೆ ತಾಯಿ ಎಂದು ತಿಳಿದು 'ತಾಯೆ ಕನಿಮನೆಯೆ ನೀ' ಎಂದಿದ್ದಾರೆ. ಬೇಂದ್ರೆಯವರ ಕಾವ್ಯದ ಸ್ಥಾಯಿಭಾವ ತಾಯಿ. ಅವರಿಗೆ ತಾಯಿ ಎಂದರೆ ಬೆಳಕು ಮತ್ತು ಜ್ಞಾನ. ಹಾಗಾಗಿ ಅವರು ತಾಯಿಯನ್ನು ಕುರಿತು 'ಬೆಳಕಿನ ಬಾಂಧವ್ಯದಿಂದ ತಾಯಸೆರಗ ಹಿಡಿದೆವು. ಬೆಳಕಿನಿಂದ ಬಂದೆವಣ್ಣ, ಬೆಳಕಿನತ್ತ ನಡೆವೆವು' ಎಂದು ಹೇಳಿದ್ದಾರೆ.

ಪ್ರೀತಿಯನ್ನು ಸದಾ ಹೊಂದಿರುವ ಅಕ್ಕನು ಅಕ್ಕರತೆಯ ಪ್ರತಿಮೂರ್ತಿ. ಪ್ರೀತಿಯ ತಂಗಿ ಮುದ್ದು ಬಂಗಾರ. ವ್ಯಕ್ತಿ ಬೆಳೆದು ಯೌವನಸ್ಥನಾದಂತೆ ಹೆಣ್ಣನ್ನು ಹೆಂಡತಿಯಾಗಿ ಕೈಹಿಡಿಯುತ್ತಾನೆ. ಆ ಹೆಂಡತಿ ಎಂಬುವವಳು ಸತ್ಯ, ಪ್ರೀತಿ, ವಿಶ್ವಾಸವನ್ನೆ ಮೈಗೊಂಡವಳು. ಅವರ ಪ್ರೀತಿಯ ಫಲ ಮಗಳು. ಅವಳು ತನ್ನೆದೆಯ ಮುಗುಳು, ಎದೆಯ ಮೊಗ್ಗು, ಅನಂದದ ನಗೆ ಎಂದಿದ್ದಾರೆ.


ಹೀಗೆ ಬೆಳಕು, ಜ್ಞಾನ, ಅಕ್ಕರತೆ, ಸತ್ಯ ಪ್ರೀತಿ, ವಿಶ್ವಾಸ ಎದೆಯ ಮೊಗ್ಗು ಆದ ಸ್ತ್ರೀಯನ್ನು ಕಾಮದ ದೃಷ್ಟಿಯಿಂದಲೇ ಕಂಡು ಆಕ್ರಮಣ ನಡೆಸುವ ಪುರುಷ ಕ್ರೌರ್ಯ ನೋಡಿ ಬೆಚ್ಚಿ ಬೀಳುವಂತಾಗಿದೆ.

ಇದಕ್ಕೆ ಈ ಸಮಾಜದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆ, ಬಡತನ, ನೈತಿಕ ಅಧಃಪತನ, ಕಠಿಣಶಿಕ್ಷೆ ಇಲ್ಲದ್ದು, ಅತಿರಂಜಿತ ಮಾಧ್ಯಮ, ಕಲೆ ಸಾಹಿತ್ಯ ಸಂಗೀತಗಳಿಂದ ವಿಮುಖವಾದ ಜೀವನಶೈಲಿ, ಮನೋರಂಜನಾರಹಿತ ಬಾಳು ಹೀಗೆ ಹಲವಾರು ಕಾರಣಗಳಿರಬಹುದು. ಆದರೆ ಇದಕ್ಕೆಲ್ಲ ಪರಿಹಾರ ಬಾಲ್ಯದಲ್ಲಿ ವಿದ್ಯಾರ್ಥಿಗಳಿಗೆ ಹೆಣ್ಣನ್ನು ಗೌರವಿಸುವ, ಹೆಣ್ಣಿನ ಮಹತ್ತ್ವ ತಿಳಿಸುವ ಪಾಠವಿಲ್ಲದಿರುವುದು ಒಂದು ಮುಖ್ಯಕಾರಣ ಎನಿಸುತ್ತದೆ. ಸಂಚಿ ಹೊನ್ನಮ್ಮನ

ಪೆಣ್ಣಲ್ಲವೆ ತಮ್ಮನ್ನೆಲ್ಲ ಪಡೆದ ತಾಯಿ?
ಪೆಣ್ಣಲ್ಲವೆ ಪೊರೆದವಳು?
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು?

ಎಂಬುದನ್ನು ಮಕ್ಕಳಿಗೆ ಬಾಲ್ಯದಲ್ಲಿ ಹೇಳಿಕೊಡಬೇಕಾಗಿದೆ. ಬಸವಣ್ಣ, ಸರ್ವಜ್ಞನ ವಚನಗಳನ್ನು ಬೋಧಿಸಬೇಕಾಗಿದೆ. ಆ ಚಿಂತನೆಗಳು ಮಕ್ಕಳಿಗೆ ಅಂತರ್ಬೋಧೆಯಾಗಿ ಅವರು ಹೆಣ್ಣನ್ನು ಗೌರವಿಸುವಂತವರಾಗುತ್ತಾರೆ. ಇದನ್ನು ನಾವು ಮೊದಲು ಮಾಡಬೇಕಾಗಿದೆ. ಇದರತ್ತ ಶಿಕ್ಷಣ ತಜ್ಞರು ಗಮನ ಹರಿಸಿದರೆ ಒಳ್ಳೆಯದು.

(ಆಕಾಶವಾಣಿ : ಚಿಂತನ)



ನಕ್ಕಾವಾ ಗೆದ್ದಾವಾ !

ಮನುಷ್ಯ ಪ್ರಾಣಿಗೆ ದೇವರು ನೀಡಿರುವ ಎರಡು ವಿಶಿಷ್ಟ ವರಗಳೆಂದರೆ ಮಾತು ಮತ್ತು ನಗು. ನಗೆ ಕನ್ನಡದ ಮೂಲ ಶಬ್ದ. ಅದು ಕ್ರಿಯಾಪದವಾಗಿದ್ದು ಇನ್ನೊಬ್ಬರನ್ನು ತನ್ನ ಅಹ್ಲಾದದಲ್ಲಿ ಒಳಗೊಳ್ಳುವಂತೆ ಮಾಡುತ್ತದೆ. ಅದರ ಪರಿಣಾಮ ಮನದ, ಮುಖದ ಅರಳುವಿಕೆ. ನಗು ನಿರ್ಮಲವಾದುದು. ಆದುದರಿಂದ ಅದನ್ನು ಹೊಮ್ಮಿಸುವ ವಿಷಯವು ನಿರ್ಮಲವಾಗಿದ್ದರೆ ಒಳ್ಳೆಯದು. ಅದು ನೋವನ್ನು, ಕೀಳು ಭಾವವನ್ನು ಹೊಮ್ಮಿಸಬಾರದು. ವಿನೋದದಲ್ಲಿ ಕೆಲವೊಮ್ಮೆ ಸುಳ್ಳು ನುಸುಳುತ್ತದೆ. ಆದರೆ ಸಂವೇದಾಶೀಲ ವಿನೋದದಲ್ಲಿ ಸತ್ಯವಿರುತ್ತದೆ. ಹಾಸ್ಯ ಪ್ರವೃತ್ತಿಯಲ್ಲಿ ಇನ್ನೊಬ್ಬರಿಗೆ ನೋವುಂಟುಮಾಡುವ ಎಳೆ ಇರುತ್ತದೆ. ಆದರೆ ವಿನೋದದಲ್ಲಿ ಅದು ಇರುವುದಿಲ್ಲ. ಹೊಟ್ಟೆ ಹುಣ್ಣಾಗುವಂತೆ ನಗುವುದೇ ಮನುಷ್ಯನ ಆರೋಗ್ಯದ ಗುಟ್ಟು, ವಿನೋದ ಪ್ರವೃತ್ತಿ ಇಲ್ಲದ ವ್ಯಕ್ತಿ ಒಂದು ಕೊರಡಿದ್ದಂತೆ.

ನಗುವಿಲ್ಲದೆ ಗೆಲುವಿಲ್ಲ. ಗೆಲುವಿಲ್ಲದೆ ನಗುವಿಲ್ಲ. ಆದ ಕಾರಣ ವರಕವಿ ದ.ರಾ. ಬೇಂದ್ರೆಯವರು 'ನಕ್ಕಾವಾ ಗೆದ್ದಾವಾ!' ಎಂದು ಸಾರಿದ್ದಾರೆ. ಅವರು ಮನುಜನಲ್ಲಿರುವ ಹುಸಿನಗು, ನಸುನಗು ಮತ್ತು ತುಸುನಗುವನ್ನು ಹೇಳಿ ಅವನು ಕೆರಳದೆ ಬಾಳಬೇಕಾದ ಚಿಂತನೆಯನ್ನು ಹೀಗೆ ನೀಡಿದ್ದಾರೆ:

ಹುಸಿನಗುತ ಬಂದೇವ ನಸುನಗುತ ಬಾಳೋಣ
ತುಸು ನಗುತ ತೆರಳೋಣ
ಬಡನೂರು ವರುಷಾನ ಹರುಷಾದಿ ಕಳೆಯೋಣ
ಯಾಕಾರೆ ಕೆರಳೋಣ.

ನೋವಿಗೆ, ಅಳುವಿಗೆ ಸಾವು ತುಂಬಾ ಹತ್ತಿರವಾದರೆ, ನಗುವಿಗೆ ಸಾವು ತುಂಬಾ ದೂರ. ನಕ್ಕು ನಗಿಸುವವರು ಮತ್ತು ನಗುವನ್ನು ಆಶಿಸುವವರು ಒಂದಾಗಿ ಕುಣಿದು ಸಾವನ್ನು ದೂರಮಾಡಿಕೊಳ್ಳಬೇಕು. 'ಈ ಬದುಕು ಬರಿಭ್ರಮಿ/ತಕಿಧಿಮಿ, ಗಿಮಿಗಿಮಿ/ ಹಾಂಗೊಮ್ಮಿ, ಹೀಂಗೊಮ್ಮಿ ಕುಣಿಯೋಣು ಬಾರ' ಎಂದು ಕುಣಿದು ಹೆಜ್ಜೆ ಹಾಕಬೇಕು.

ನಗುವಿನಲ್ಲಿ ಒಂದಾಗಿ ಹೋಗಿ ನುಡಿಯಬೇಕು: 'ನಾನಲ್ಲ ನೀನಲ್ಲ। ನನ್ನಲ್ಲಿ ನೀನಿಲ್ಲ। ಸಾವಿನ ನೋವಿಲ್ಲ। ಕುಣಿಯೋಣು ಬಾರ। ಕುಣಿಯೋಣು ಬಾ' ಆ ಭಾವ ಸ್ಥಿತಿಯಲ್ಲಿ ದೈಹಿಕ ಮತ್ತು ಮಾನಸಿಕ ವ್ಯಾಧಿಗಳು ದೂರವಾಗಿ ಮನುಷ್ಯ ಆರೋಗ್ಯವಂತನಾಗುತ್ತಾನೆ.

ನಗೆ ನಮ್ಮ ನಾರಿಯರ ಮುಖದಲ್ಲಿ ಒಂದು ನವಿಲಾಗಿ ಕುಣಿಯುತ್ತಿದೆ ಎಂದು ಬಣ್ಣಿಸಿರುವ ಬೇಂದ್ರೆ, ತಮ್ಮ ಜೀವನದ ಪಾಡನ್ನು ಹಾಡಾಗಿಸಿದ ಗಾರುಡಿಗ. ಅವರು ಬಣ್ಣಿಸಿರುವ ಆ ನಗೆ ಇಡಿ ವಿಶ್ವವನ್ನು ವ್ಯಾಪಿಸಿರುವ ಹೊಳಪು.

ನಾರಿ ನಿನ್ನ ಮಾರಿಮ್ಯಾಗ । ನಗೀ ನವಿಲು ಆಡತಿತ್ತ
ಆಡತಿತ್ತ ಓಡತಿತ್ತ । ಮುಗಿಲ ಕಡೆಗೆ ನೋಡತಿತ್ತ.
ಮಿನ ಮಿನ ಮಿಂಚತಿತ್ತ । ಮೂಡತಿತ್ತ ಮುಳಗತಿತ್ತ
ಮುಳಗತಿತ್ತ ತೊಳಗತಿತ್ತ । ನೆಲಾ ಜಲಾ ಬೆಳಗತಿತ್ತ


ಅವರಿಗೆ ಈ ಜೀವನ ಮುಗುಳುನಗೆಯನ್ನು ಮುಡಿದುಕೊಂಡಿಹ ಬಾಲೆಯಾಗಿ ಕಂಡಿದೆ. ಆ ಸ್ಥಿತಿಗೆ ಮನುಷ್ಯ ಏರಿದಾಗ ಈ ನೆಲದ ಬಾಳು ಒಂದು ಶಾಂತಿಯ ನೆಲೆಯಾಗುತ್ತದೆ.

ದೇವರು ನಗುವಿನಲ್ಲಿದ್ದಾನೆ. ಮಗುವಿನ ಮುಗ್ಧ ನಗುವೆ ದೇವರು. ಅಂತಹ ಮುಗ್ಧ ನಗುವನ್ನು ಹೊಂದಿದ ಬುದ್ಧ, ಏಸು, ಗಾಂಧಿ ಈ ನೆಲ ಕಂಡ ಮಹಾತ್ಮರು. ಆ ನಗುವೆ ಬೆಳಕು. ಅದೇ ಜ್ಞಾನ. ಅದೇ ಶಾಂತಿ. ಗಾಂಧಿಯ ನಗುವನ್ನು ಕುರಿತು ಬೇಂದ್ರೆ ಹೇಳಿರುವ ನುಡಿಗೆ ಮನಸ್ಸು ಕೊಡೋಣ.

ನೆನಸೇವು ನಿಮ್ಮ ಆ ನಗೀ
ಒಳಗೆ ಇಲ್ಲ ಧಗಿ
ಬರೇ ಬೆಳಕು–ಬರೇ ಬೆಳಕು!

(ಆಕಾಶವಾಣಿ, ಚಿಂತನ)

■



ಶ್ರಾವಣ

ಬೇಂದ್ರೆ ಅವರಿಗೆ ಶ್ರಾವಣಮಾಸ ವಸಂತ ಋತುವಿನ ಮಧುಮಾಸಕ್ಕೂ ಹಿರಿದಾಗಿ 'ಮಧುರಮಾಸ'ವಾಗಿದೆ. ಮಧುರ ಭಾವನೆಯ ಆ ಮಾಸದಲ್ಲಿ ಹೆಣ್ಣುಮಕ್ಕಳು ಹಬ್ಬಹರಿದಿನಗಳಂದು ತವರು ಮನೆಗೆ ಬಂದು ಹೋಗುವ ಮಧುರ ಉಲ್ಲಾಸವಿದೆ. ಅದು ನೆಲದಿಂದ ಹುಟ್ಟಿ ಮುಗಿಲು ಸೇರಿ ಮತ್ತೆ ನೆಲಕ್ಕೆ ಸುರಿಯುವ ಮಳೆಯ ಮಧುಭಾವವೂ ಆಗಿದೆ.

ಮಳೆಯಂತಹ ಪ್ರಕೃತಿ ಸಹಜ ಕ್ರಿಯೆಯನ್ನು ವೈಜ್ಞಾನಿಕ ನೆಲೆಯಲ್ಲಿ ಅರ್ಥೈಸುತ್ತಲೇ ಮಧು ಕಾವ್ಯಾನುಭವವಾಗಿಸಿರುವುದು ಬೇಂದ್ರೆಯವರ ವೈಶಿಷ್ಟ್ಯವಾಗಿದೆ. ಶ್ರಾವಣನ ತಾಯಿ ಭೂಮಿತಾಯಿ ಬಿಸಿಲ ಹಣ್ಣನ್ನು ತಿಂದು ಅವನನ್ನು ಹೆತ್ತಿದ್ದಾಳೆ. ನೆಲದ ನೀರು ಕಾದು ಕಾದು ಉಗಿಯಾಗಿ ಮುಗಿಲು ಸೇರಿದೆ. ಆ ಮುಗಿಲರಾಯ ಶ್ರಾವಣನ ಮುದಿತಂದೆ 'ಮೋಡಗಣ್ಣಿನವನು.' ಅವನು ಶ್ರಾವಣನನ್ನೇ ಬಯಸಿದ್ದಾನೆ. ಭೂಮಿತಾಯಿಯೂ ಶ್ರಾವಣನನ್ನೆ 'ನೆನಸಿತು । ಎದೆಯ ಸೆರಗ ನನೆಸಿತು.' ಅದರ ಫಲವಾಗಿ ಶ್ರಾವಣ ಜನಿಸಿದ ಎಂಬ ಚಿತ್ರಣವನ್ನು ಬೇಂದ್ರೆ 'ಶ್ರಾವಣ' ಕವನದಲ್ಲಿ ನೀಡಿದ್ದಾರೆ. ಶ್ರಾವಣ ದ್ಯಾವ ಪೃಥ್ವಿಯ ದಾಂಪತ್ಯದ ಸಂಕೇತ. ಜಗದ ಜೀವಿಗಳ ಸೃಜನ ಶಕ್ತಿಯ ದೃಷ್ಟಾಂತ.

ಬೇಂದ್ರೆಯವರು ಕಡಲಿನ ಮೇಲೆ ಸುರಿಯುವ ಮಳೆಯನ್ನು 'ಕುಣಿದ್ಹಾಂಗ ರಾವಣ' ಎಂದು ಹತ್ತು ತಲೆಯ ರಾವಣ ಕುಣಿದಂತ ವೈಭವದ ಅದ್ಭುತ ಪ್ರತಿಮೆಯಲ್ಲಿ ಬಣ್ಣಿಸಿದ್ದಾರೆ. ಆಗ ಬೀಸುವ ಗಾಳಿ 'ಭೈರವನ ರೂಪ ತಾಳಿ' ಭಯಂಕರ ಅಲ್ಲೋಲ ಕಲ್ಲೋಲವನ್ನುಂಟು ಮಾಡಿತು ಎಂದು ಮಳೆಯ ಆರ್ಭಟವನ್ನು ಶಿವೋಪಾಸಕ ರಾವಣ ಹಾಗೂ ಶಿವನ ಭೈರಾಗಿ ರೂಪದಲ್ಲಿ ನೀಡಿದ್ದಾರೆ. ಅವರು ತಮ್ಮ ಘನ ಶಿವಪೂಜೆಯಲ್ಲಿ ಪ್ರಕೃತಿ ಒಂದಾದಂತೆ ಪ್ರತಿಗುಡ್ಡವು ಸ್ಥಾವರಲಿಂಗವಾಗಿದ್ದು ಅದಕ್ಕೆ ಮಳೆಯ ಅಭ್ಯಂಜನ ನಡೆಯುತ್ತಿದೆ ಎಂದು ಸುತ್ತಮುತ್ತ ನೆರೆದ ಮೋಡ ನೋಡಿ ನಲಿದಿದ್ದಾರೆ.

ಶ್ರಾವಣಾ ಬಂತು ಕಾಡಿಗೆ । ಬಂತು ನಾಡಿಗೆ ।
ಬಂತು ಬೀಡಿಗೆ । ಶ್ರಾವಣಾ ಬಂತು ।
ಕಡಲಿಗೆ ಬಂತು ಶ್ರಾವಣಾ । ಕುಣಿದ್ಹಾಂಗ ರಾವಣ ।
ಕುಣಿದಾವ ಗಾಳಿ । ಭೈರವನ ರೂಪ ತಾಳಿ ।

* * *

ಗುಡ್ಡ ಗುಡ್ಡ ಸ್ಥಾವರಲಿಂಗ
ಅವಕ ಅಭ್ಯಂಗ
ಎರಿತಾವನ್ನೊಹಾಂಗ ।
ಕೂಡ್ಯಾವ ಮೋಡ । ಸುತ್ತೆಲ್ಲ ನೋಡ ನೋಡ ॥

(ಹಾಡು ಪಾಡು–ಶ್ರಾವಣ)

ಶ್ರಾವಣ ಬೇಂದ್ರೆಯವರ ಜೀವ ಚೈತನ್ಯದ ಭಾಗವಾಗಿದೆ. 'ನನ್ನ ಕಣ್ಣೇ ಕಿವಿಯು ಕವಿಯು ನಾನು' ಎಂದು ಹಾಡಿದ ಅವರಿಗೆ 'ಕಿವಿಯೆ ಕವಿ.' ಶ್ರಾವಣ ಕುತೂಹಲದ, ಜೀವದಾಧಾರ ಮಳೆಯನ್ನು ಹೊತ್ತುತರುವ ಸುಂದರ ಪ್ರಕೃತಿಯ ಮಾಸ! ಅದು ಚೆಲುವು ಒಲವು, ನೆರೆ–ಅಬ್ಬರಗಳಿಂದ ಅವರ ಸೃಜನಶೀಲತೆ ಮತ್ತು ಜಿಜ್ಞಾಸೆ ರೂಪುಗೊಂಡು ವಿಕಾಸಗೊಳ್ಳಲು ಕಾರಣವಾದ ಮಾಸ. ಅವರು ಶ್ರಾವಣದ ನಾದ ಮಾಧುರ್ಯಕ್ಕೆ ಶ್ರುತಿಗೊಂಡ ಕಿವಿಯನ್ನು ಕವಿಯಾಗಿಸಿದ 'ಶ್ರವಣ ಪ್ರತಿಭೆ'ಯ ಕವಿ. ಶ್ರಾವಣ ಮಾಸದಲ್ಲಿ ಧಾರವಾಡದ ಆಕರ್ಷಕ ನಿಸರ್ಗ ಸೌಂದರ್ಯವನ್ನು ಅನುಭವಿಸಿದ ಕವಿಯ ಆನಂದ – ಶ್ರಾವಣದ ಹಾಡುಗಳಾಗಿವೆ.

ಶ್ರಾವಣ ಬೇಂದ್ರೆಯವರಿಗೆ ಭಗವಾನ್ ಶ್ರೀಕೃಷ್ಣನ ಜನನ, ಮಹರ್ಷಿ ಅರವಿಂದರ ಜನನ; ತನ್ನ ಮಕ್ಕಳಾದ ವಾಮನ ಮತ್ತು ಮಂಗಲಾರ ಜನನದ ಸಂತಸದ ಮಾಸವಾಗಿದೆ. ಹಾಗೆಯೆ ಗೆಳೆಯ ಮಧುರಚೆನ್ನ (ಹಲಸಂಗಿ ಚೆನ್ನಮಲ್ಲಪ್ಪ), ಶಂಕರಗೌಡ ಪಾಟೀಲ, ತಾಯಿ ಅಂಬವ್ವ, ಪತ್ನಿ ಲಕ್ಷ್ಮೀಬಾಯಿ ತೀರಿಕೊಂಡ ನೋವಿನ ದುಃಖದ ಮಾಸವಾಗಿದೆ. ಅದು 'ಸಮರಸವೇ ಜೀವನ' ಎಂದು ಕವಿಭಾವ ಬೆಳಗುವಂತೆ ಮಾಡಿದೆ. ಅವರು ಶ್ರಾವಣಮಾಸವು ದೇಶಕ್ಕೆ ಸ್ವಾತಂತ್ರವನ್ನು ತರುತ್ತದೆ ಎಂದು ಕನಸು ಕಂಡಿದ್ದರು.

ಬಂದಿಯೊಳಗಿದ್ದವರ ಬಂಧನವ ಬಿಡಿಸುವಾ
ಬಂದಿಕಾರಾ ಶ್ರಾವಣಾ.

* * *

'ಕತ್ತಲೆಯ ತುಟ್ಟತುದಿ ಹತ್ತಿರವೆ ಬೆಳಕು ಬದಿ'
ಎಂದು ಸಾರೋ ಶ್ರಾವಣಾ.
ಮುಂದೆ ಬರುವ ಸ್ವತಂತ್ರ ವಂದಿಮಾಗಧ ನೀನು
ಬಂಧುರಾಂಗ ಶ್ರಾವಣಾ. **(ಗಂಗಾವತರಣ)**

ಅವರು 1944ರಲ್ಲಿ ಶ್ರಾವಣಮಾಸವನ್ನು ಕುರಿತು ಕವನ ರಚಿಸುತ್ತ ಭಾರತದೇಶಕ್ಕೆ ಮುಂದೆ ಬರುವ ಸ್ವಾತಂತ್ರ್ಯವನ್ನು ಸಾರುತ್ತಿರುವ ವಂದಿಮಾಗಧ ಶ್ರಾವಣ ಎಂದು ದೂರದೃಷ್ಟಿಯ ಭಾವಕಲ್ಪದಲ್ಲಿ ಮಿಂದರು. ಅವರ ಆ ಶುಭ ಭಾವವೇ ನಿಜವಾಗಿ ಶ್ರಾವಣ ಮಾಸದ 15 ಆಗಸ್ಟ್ 1947ರಲ್ಲಿ ದೇಶ ಸ್ವಾತಂತ್ರ್ಯ ಪಡೆಯಿತು. ಅವರಿಗೆ ಶ್ರಾವಣ–ಚೆಲುವೇ ಮೈವೆತ್ತ ಬಂಧುರಾಂಗ; ಸುಂದರ. ಅವರಿಗೆ ಶ್ರಾವಣ ಸ್ವಾತಂತ್ರ್ಯದ, ವ್ಯಕ್ತಿವಿಕಾಸದ, ಸರ್ವ ಸಮಾನತೆಯ, ಜಗದ ಏಳಿಗೆ ಸಾರುವ ಪವಿತ್ರ ತಿಂಗಳು.

ಕವಿಯು ಸ್ವಾತಂತ್ರ್ಯ ನಂತರ ಭಾರತದ ಸ್ಥಿತಿಯನ್ನು ಅವಲೋಕಿಸಿ, ಆಳುವವರು – ಅನಿರ್ಬಂಧತೆಯಲ್ಲಿ ಮನಬಂದಂತೆ ವರ್ತಿಸುವ, ಸ್ವಾರ್ಥ ದಾಹಕ್ಕೆ; ಮತದಾನದ ದುರ್ಬಳಕೆಗೆ ನೊಂದಿದ್ದಾರೆ. ಪ್ರಜೆಗಳೆಲ್ಲರ ಬದುಕು ಉತ್ತಮವಾಗಿಲ್ಲ; ಸ್ವಾತಂತ್ರ್ಯಾರ್ಥದ ಕಸುವನ್ನು ಅರ್ಥಮಾಡಿಕೊಳ್ಳದೆ ಅದನ್ನು ಕಸವಾಗಿ ಎಸೆದಾಡುತ್ತಿದ್ದಾರೆ. ಆಳುವವರು ಅಧಿಕಾರದ ಮದದಲ್ಲಿ ಅವ್ಯವಸ್ಥೆ ಸೃಷ್ಟಿಸಿ ಪ್ರಜ್ಞಾಹೀನರಾಗಿ ಪ್ರಪಾತಕ್ಕೆ ಧುಮುಕುತ್ತಿರುವುದನ್ನು ಕಂಡು ಕ್ರೋಧಗೊಂಡಿದ್ದಾರೆ. ಅದನ್ನು 1958ರಲ್ಲಿ ಕಾವ್ಯವಾಗಿ ಹೀಗೆ ನೀಡಿದ್ದಾರೆ.

ಸ್ವಾತಂತ್ರ್ಯವೋ ಇದುವು ಯಾ ತಂತ್ರವೋ
ಬಲ್ಲವರ ಕೈಗೆ ಬಾಗುವ ಯಂತ್ರವೋ

* * *

ತನ್ನ ಕಸುವನೆಲ್ಲ ಕಸವೆಂದು ಎಸೆಯುತ್ತ
ಜೋಗ ಪ್ರಪಾತವೆನೆ ಧುಮುಕಿ ಕೆಳಗೋ

(ನಮನ–ಇದು ಸ್ವಾತಂತ್ರ್ಯವೋ?)

ಕವಿಯು ಪ್ರಕೃತಿಯ ವೈಭವದ ಶ್ರಾವಣ ಈ ಜಗಕ್ಕೆ ಹಸಿರು, ಸಿರಿವನ ಮಧುರ ಬಾಂಧವ್ಯ, ಸೃಜನಶೀಲತೆ, ಸಮತೆಯನ್ನು ತರುವುದೆಂದು ಅದೇ ಸ್ವಾತಂತ್ರ್ಯದ ಜೀವನವೆಂದು ಧ್ಯಾನಿಸುತ್ತ ಸ್ವಾತಂತ್ರ್ಯದ ವರ್ಧಂತಿ ಕವನ ರಚಿಸಿದ್ದಾರೆ.

ಆದರೆ ಶ್ರಾವಣಮಾಸ ಆಳುವವರ ಸ್ವೈರತೆ, ಸ್ವಾರ್ಥ, ಸ್ವಜನಪಕ್ಷಪಾತದಿಂದಾಗಿ ಸ್ವಾತಂತ್ರದ ಫಲ ಸರ್ವರಿಗೆ ಸಿಗುತ್ತಿಲ್ಲ. ಹೀಗೆ ಅಡ್ಡಿಪಡಿಸುತ್ತಿರುವ ಆಳುವವರ ಮನೆ ಸುಡುವ ಮತ್ಸರಕ್ಕೆ; ಜೀವನವನ್ನು ರಣಾಂಗಣವಾಗಿಸುತ್ತಿರುವ ರಾಕ್ಷಸತ್ವದ ಬಗ್ಗೆ ನೊಂದು – ಜನ ಎಚ್ಚರಗೊಳ್ಳಬೇಕೆಂದು ಕರೆಕೊಟ್ಟಿದ್ದಾರೆ.

ಕಾಲ ಉರುಳಿ, ಋತುವು ಮರಳಿ, ಬಂತು ನಮ್ಮ ಶ್ರಾವಣಾ
ಹೊಲಕೆ ಪಯಿರು, ನೆಲಕೆ ಪಸಿರು, ಪಚ್ಚವಾಯ್ತು ಸಿರಿವನ
ಬಂಧನವನು ಬಿಡಿಸಿ ಬಿತ್ತಿ ಬಾಂಧವ್ಯದ ಭಾವನಾ
ಜನಜನವೂ ಸೃಜನಶೀಲ – ಸ್ವಾತಂತ್ರ್ಯದ ಜೀವನಾ.

ಸ್ವೈರತೆಗೂ ಸ್ವಾತಂತ್ರ್ಯಕು ಇಹುದು ಅಜಗಜಾಂತರಾ
ಸುವ್ಯವಸ್ಥೆ ಮಹಾತಂತ್ರ, ಬದ್ಧತೆ ಬರಿಯಂತರಾ.

* * *

ಕೊಲ್ಲಬೇಕು ಸಾಯಬೇಕು ಎನುವಗೋ ರಣಾಂಗಣಾ
ಬದುಕುವವಗೆ ಕೋಲಿನಾಟ, ಬಾಳು ಜೀವರಿಂಗಣಾ.

* * *

ಮತದಹೆಮ್ಮೆ, ಬರಡು ಎಮ್ಮೆ, ಸಫಲವಹುದು ಎಚ್ಚರಾ
ಮನೆಯ ಸುಟ್ಟು ಮಾರ ಸುಟ್ಟು ಅಡಗಬಹುದಾ ಮಚ್ಚರಾ.

* * *

ಬೇಂದ್ರೆಯವರಿಗೆ ಜನಸಾಮಾನ್ಯರ ಬದುಕು ಕೋಲಿನಾಟದಂತೆ ಸರಳಸುಂದರ ಅಹ್ಲಾದಮಯವಾಗಬೇಕಾಗಿದೆ. ಅಲ್ಲಿ ಜೀವರಿಂಗಣದಲ್ಲಿ ನಲಿಯಬೇಕಾಗಿದೆ. ಅದನ್ನು 'ಸ್ವಾತಂತ್ರ್ಯದ ವರ್ಧಂತಿ' ಹೊತ್ತು ತರಲಿ ಎಂದು ಆಶಿಸಿದ್ದಾರೆ.

ಸ್ವಾತಂತ್ರ್ಯದ ಮುದ್ರೆಕಂಡು ಅವ್ಯವಸ್ಥೆ ಓಡಲಿ
ಸ್ವೈರ-ವೈರ ಇಂಗಿಹೋಗಿ ಸುವ್ಯವಸ್ಥೆ ಮೂಡಲಿ (ನಮನ)

ಅವರಿಗೆ ಈ ಮಾಸದಲ್ಲಿ ಭೂಮಿತಾಯಿಯು ಹೂವಿನ ಹಡಲಿಗೆಯನ್ನು ಹೊತ್ತ ಜೋಗಿತಿಯಂತೆ ಮೈದುಂಬಿ ಕುಣಿಯುತ್ತಿದ್ದಾಳೆ.

ಹೂವ ಹಡಲಿಗೆಯನ್ನು ಹೊತ್ತ
ಭೂಮಿತಾಯಿ ಜೋಗಿತಿ
ಮೈತುಂಬಿ ಕುಣಿಯುತಿಹಳ
ನಂತ ಕಾಲ ವೀಗತಿ.

ಅವರು ಶ್ರಾವಣನನ್ನು ತುಂಟ ಹುಡುಗ ಎಂದು ಕರೆದು ಗೆಳೆಯನಂತೆ ಕಂಡಿದ್ದಾರೆ.

ಬಾರೋ ಬಾ ಸಂಗಾಟ ॥ ಪ ॥
ಶೃಂಗೇರಿ ಶಿಖರಾ ಏರಿ, ತುಂಬಿಯ ಒಡಲ ಸೇರಿ
ಬಂಗಾರ ಮಲೆನಾಡ ಪೊಂಗಿಸಿ ಬಾ
ಬೆಳುವಲ ಬರಗಾಲ ಹಿಂಗಿಸಿ ಬಾ ॥ (ಶತಮಾನ)

ಅವರು ಶ್ರಾವಣದ ಮಳೆಯಲ್ಲಿ ನೆನೆದು, ಮೋಡಗಳ ಆಟ ನೋಡುವ ಉತ್ಸಾಹದಲ್ಲಿ ಸ್ನೇಹಿತರನ್ನು ಕರೆದು ಮಳೆಯಲ್ಲಿ ಕುಣಿದಿದ್ದಾರೆ.

ಮಳೆ ಬರುವ ಕಾಲಕ್ಕ
ಒಳಗ್ಯಾಕ ಕೂತೇವೊ

* * *

ಇಳೆಯೊಡನೆ ಜಳಕ ಮಾಡೋಣ
ನಾವೂನು, ಮೋಡಗಳ ಆಟ ನೋಡೋಣ (ಉಯ್ಯಾಲೆ)

ಬೇಂದ್ರೆಯವರು ಶ್ರಾವಣ 'ಪಡುವ ದಿಕ್ಕಿನಿಂದ ಹರಿವ ಗಾಳಿ-ಕುದುರೆಯನ್ನು ಏರಿ । ಪರ್ಜನ್ಯ ಗೀತವನ್ನು । ಹಾಡುತ್ತ ಬಂದಿತು.' ಎಂದು ಲೋಕಕ್ಕೆ ಸಾರಿದರು. ಶ್ರಾವಣ ಬರುವಾಗ ಪ್ರಕೃತಿಗೆ ಹೊಸಕಂಪು, ರಸ, ಮೃದುತನ ತಂದಿದೆ ಎಂದು ನಲಿದರು.

'ಬಾನ್ ತುಂಬಿದೆ, ಕೆರೆ ತುಂಬಿದೆ,
ಹೂ ತುಂಬಿದೆ ಬೇಲಿ.
ನೀರಲದಲಿ ರಸ ತುಂಬಿದೆ
ಮಿದುವಾಗಿದೆ ಜಾಲಿ' **(ಜೀವಲಹರಿ)**

ಶ್ರಾವಣ ಮಾಸವೆಂದರೆ ಕುತೂಹಲದ, ಸ್ಪರ್ಶ ಚೇತನದ, ಬಣ್ಣ ಬೆಡಗಿನ, ಶಬ್ದ ಮೌನದ ಜಾತ್ರೆಯಿದ್ದಂತೆ. ಅದು ಬಾನು-ಭುವಿಯ ನೇಹದ ಆಹ್ಲಾದ. ಇಡೀ ಪ್ರಕೃತಿ ಸೃಜನಕ್ರಿಯೆಗೆ ಒಳಗಾದ ಜೀವ ಸ್ಪಂದನದ ಅರಿವು.

ಮಣ್ಣು ಹುಡಿಯ ಕಣಕಣವೂ
ಕಣ್ಣು ಪಡೆದ ಹಾಗಿದೆ ;
ಬಾನಿನಂಚಿನಲ್ಲಿ ಮೋಡ
ನೋಡಲಿದನೆ ಬಾಗಿದೆ **(ಸಖೀಗೀತ)**

ಬೇಂದ್ರೆಯವರಿಗೆ ಶ್ರಾವಣ ಕಂಪಿನ, ನಾದದ, ಸೃಷ್ಟಿಶಕ್ತಿಯ ಸೆಲೆ. ಅದರಲ್ಲಿ ಲೀನವಾದ ಅವರಿಗೆ 'ಶ್ರಾವಣ ಬಂದಾ ! ಕವಿ ತೆರೆ ಎಂದಾ'- ಎಂಬ ಧ್ಯಾನ, ಶ್ರವಣ ಪ್ರತಿಭೆಯ ಜಾಗೃತ ಸ್ಥಿತಿ. ಶ್ರಾವಣ ಮಾಸದಂತೆ ಕಾವ್ಯ ರಚನೆಗೆ ಒಳಗಾದ ಆಮೋದ.

ಕೇದಗೆಯ ಹೊಡೆ ತೂರಿ ಊದು ನಿನ್ನ ತುತೂರಿ
ಮೋದ ಬೀರೋ, ಶ್ರಾವಣಾ
ನಾದವಿದು ಯಾವುದೋ ಅಗಾಧ ತಳದಿಂ ಬಂತು,
ಉದೋದಿದೋ ಶ್ರಾವಣಾ **(ಗಂಗಾವತರಣ)**

ಅವರಿಗೆ ಶ್ರಾವಣಮಾಸದ ವರ್ಷಧಾರೆ ಶ್ರೀಕೃಷ್ಣನ ಕೊಳಲ ನಾದ. ಭಾರತೀಯ ಭಾವಕೋಶದ ಪ್ರೀತಿ, ಶಾಂತಿ, ಸುಖ, ಸಮೃದ್ಧಿಯ ಸಂಕೇತ. ಶ್ರಾವಣ ಮತ್ತು ಶ್ರೀಕೃಷ್ಣ ಒಂದಾದ ಸಂಪತ್ತಿನ ಪ್ರತಿಮೆ.

ಶ್ರಾವಣಽನ ಗೆಜ್ಜೆ ಹೆಜ್ಜೆ
ಕುಣಿದು ಹೋದವೇನೊ ಇನ್ನೂ
ಅಲ್ಲು ಇಲ್ಲು ಎಲ್ಲು ಹಸಿರು
ಹುಲ್ಲೆ ಹುಲ್ಲು, ಹೂವೆ ಹೂವು ॥ **(ಕಾಮಕಸ್ತೂರಿ : ಕೊಳಲನೂದಿದ)**

(ವಿಜಯ ಕರ್ನಾಟಕ, ಬೋಧಿವೃಕ್ಷ 12-08-2017)

■



ನೀನು ನಕ್ಕರೆ ಬೆಳಕಿನ ಬೆಳೆ

ಮಕ್ಕಳನ್ನು ಅರಿಯುವುದೆಂದರೆ ಪ್ರೀತಿಸುವುದು. ನಿರ್ಮಲ ಪ್ರೀತಿಯೊಂದೆ ಅವರ ಏಳ್ಗೆಗೆ ಸಾಧನ. ತಾಯಿಗೆ ಮಗು ಬೆಲ್ಲದ ಅಚ್ಚು. ಅಷ್ಟು ಸಿಹಿ ಅವಳಿಗೆ. ವರಕವಿ ದ.ರಾ.ಬೇಂದ್ರೆ ಆ ಭಾವವನ್ನು ಹೀಗೆ ಚಿತ್ರಿಸಿದ್ದಾರೆ.

ನನ್ನ ಬೆಲ್ಲದಚ್ಚಿನ ಬೊಂಬೆಯೆ!
ನೀನು ನಕ್ಕರೊಂದು ರುಚಿ, ಅತ್ತರೊಂದು ರುಚಿ.
ನೀನು ನಗುತ್ತಲೆ ನಾನು ನಿನ್ನವಳೆಂದೆನಿಸುವುದು
ನೀನು ಅಳುತ್ತಲೆ ನೀನು ನನ್ನವನೆಂದೆನಿಸುವುದು
ನೀನು ನಕ್ಕರೆ ಬೆಳಕಿನ ಬೆಳೆ
ನೀನು ಅತ್ತರೆ ಮುತ್ತಿನ ಮಳೆ.

ಪುಟ್ಟ ಮಗುವನ್ನು ಗಮನಿಸಿ. ಅದು ಯಾವುದೇ ಸಂದರ್ಭದಲ್ಲಿಯೂ ಆ ಕ್ಷಣಕ್ಕೆ ತಕ್ಕಂತೆ ಪ್ರತಿಕ್ರಿಯೆ ನೀಡುತ್ತದೆ. ಅದಕ್ಕೆ ಹಿಂದಿನ ಅನುಭವ ಮುಂದಿನ ಆಗುಹೋಗು ಗೊತ್ತಿಲ್ಲ. ಅದು ನಕ್ಕರೆ ನಗುತ್ತದೆ, ಭಯ ಪಡಿಸಿದರೆ ಭಯಪಡುತ್ತದೆ, ಹಿಂಸಿಸಿದರೆ ಅಳುತ್ತದೆ. ಆದಕಾರಣ ನಾವು ನಮ್ಮನ್ನು ಸರಿಯಾದ ಮನಸ್ಥಿತಿಯಲ್ಲಿರಿಸಿಕೊಂಡು ಮಗುವನ್ನು ತಿಳಿಯಲು ಪ್ರಯತ್ನಿಸಬೇಕು.

ನಮ್ಮ ಶ್ರಮದಷ್ಟೆ ನಮ್ಮ ಫಲ. ಆದುದರಿಂದ ನಮ್ಮ ಮಕ್ಕಳನ್ನು ಶ್ರಮಪಟ್ಟು ಸರಿಯಾಗಿ ತಿಳಿದುಕೊಂಡು, ಸರಿಯಾಗಿ ಬೆಳೆಸಿದರೆ; 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ' ಎಂಬ ಗಾದೆ ಅರಿತು ನಡೆದರೆ ಮಕ್ಕಳನ್ನು ಉತ್ತಮ ನಡೆನುಡಿಯವರನ್ನಾಗಿ ರೂಪಿಸಬಹುದು.

'ಮೂರು ವರ್ಷದಲ್ಲಿ ಕಲಿತದ್ದು, ನೂರು ವರ್ಷದ ತನಕ' ಎಂಬ ಮಾತಿದೆ. ಮಗು ಅಕ್ಷರಜ್ಞಾನವನ್ನು ಪಡೆಯುವುದೇ ಅರಿವು ಎಂಬ ಅಭಿಪ್ರಾಯ ತಪ್ಪು. ಅದು

ಕಣ್ಣು ಬಿಟ್ಟು ಈ ಜಗತ್ತನ್ನು ಕಂಡತಕ್ಷಣ ಅರಿವಿನತ್ತ ಮನಸ್ಸು ಕೊಡುತ್ತದೆ. ತಂದೆ ತಾಯಿ ಮತ್ತು ಕುಟುಂಬದ ಇತರ ಜನರ ವರ್ತನೆಗಳನ್ನು ಮೊದಲು ಅನುಕರಿಸುತ್ತದೆ. ಅವರ ಮಾತುಗಳನ್ನು ಕೇಳುತ್ತ ಶಬ್ದಗಳನ್ನು ಅನುಕರಿಸಿ ತಾನು ಉಚ್ಚರಿಸುತ್ತ ಭಾಷೆಯನ್ನು ಕಲಿಯುತ್ತದೆ. ಆದುದರಿಂದ ಆ ಮಕ್ಕಳ ಅರಿವಿನ ಜಗತ್ತು ದೋಷರಹಿತವಾಗಲು, ಭವಿಷ್ಯ ಉಜ್ವಲವಾಗಲು ನಮ್ಮ ವರ್ತನೆ, ನಡೆನುಡಿ ಮೊದಲು ಶುದ್ಧವಾಗಿರಬೇಕು.

ಮಕ್ಕಳನ್ನು ಅಧ್ಯಯನ ಮಾಡಿರುವ ಪರಿಣತರು 2 ರಿಂದ 12 ವರ್ಷ ಮಕ್ಕಳ ಬಾಲ್ಯಾವಸ್ಥೆ ಎಂದು ಹೇಳಿದ್ದಾರೆ. ಮಕ್ಕಳ ಶರೀರ ಹೇಗೆ ನಿಧಾನವಾಗಿ ಬೆಳವಣಿಗೆ ಹೊಂದುತ್ತಾ, ಎಷ್ಟು ಭಾರ ಎಷ್ಟು ಕಷ್ಟದ ಕೆಲಸ ತಮ್ಮಿಂದ ಮಾಡಲು ಸಾಧ್ಯವಾಗುತ್ತದೆಯೊ; ಹಾಗೆಯೇ ಅವುಗಳ ಮನಸ್ಸಿನ ಅರಿವಿಗೂ ಮಿತಿಯಿದೆ. ಮನಸ್ಸು ನಿಧಾನವಾಗಿ ಹಂತ ಹಂತವಾಗಿ ಅರಿವಿನ ಪಯಣದತ್ತ ಸಾಗುತ್ತದೆ ಎಂಬುದನ್ನು ತಂದೆ-ತಾಯಿ, ಪೋಷಕರು ತಿಳಿಯಬೇಕು. ಆ ಮಕ್ಕಳ ಮನಸ್ಸು ವಿಕಾಸವಾದಂತೆ ಅದಕ್ಕೆ ತಕ್ಕ ಅಕ್ಷರ ಜ್ಞಾನ ಮತ್ತು ವಿದ್ಯೆ ಕಲಿಸಬೇಕು. ಚಿಕ್ಕಮಕ್ಕಳಿಗೆ ಆಟ, ಕುಣಿತ, ಕಥೆಯ ಮುಖಾಂತರ ಅವರ ದೇಹ ಮನಸ್ಸು ಕಲ್ಪನೆಯತ್ತ ಸಾಗಿ ವಿಕಾಸಗೊಳ್ಳಲು ಸಹಕಾರಿಯಾಗಬೇಕು.

ಕೆಲಸಕ್ಕೆ ಹೋಗುವ ಮಹಿಳೆಯರು ಅಥವಾ ಗೃಹಿಣಿಯಾಗಿದ್ದು ಮಕ್ಕಳನ್ನು ಸಂಭಾಳಿಸುವ ಸಹನೆ ಕಳೆದುಕೊಂಡವರು ಟಿ.ವಿ ಆನ್‌ಮಾಡಿ ಮಕ್ಕಳನ್ನು ಆ ದಡ್ಡಪೆಟ್ಟಿಗೆ ಮುಂದೆ ಕೂಡಿಸುವ ಕೆಟ್ಟ ಚಾಳಿ ಇಂದು ಹೆಚ್ಚಾಗಿದೆ. ಒಂದು ಅಧ್ಯಯನದ ಪ್ರಕಾರ ದಿನದಲ್ಲಿ 2 ಗಂಟೆಗಿಂತ ಹೆಚ್ಚು ಟಿ.ವಿ ನೋಡುವ ಮಕ್ಕಳು ಗಣಿತದ ಸಮಸ್ಯೆ ಬಿಡಿಸುವಲ್ಲಿ ಹಿಂದುಳಿಯುತ್ತಾರಂತೆ. ಅವರು ಶಾಲೆ ಬಿಟ್ಟು ಬಂದನಂತರ ಟಿ.ವಿ ನೋಡುವ ಚಟಕ್ಕೆ ಒಳಗಾಗಿ ಅವರ ದೈಹಿಕ ಮತ್ತು ಮಾನಸಿಕ ಆರೋಗ್ಯಕೆಡುತ್ತದೆ. ಈ ಸೂಕ್ಷ್ಮವನ್ನು ಅರಿತು ತಂದೆ-ತಾಯಿಯರು ಇದರತ್ತ ಗಮನ ಕೊಡುವುದು ಮಕ್ಕಳನ್ನು ಸರಿಯಾಗಿ ಅರಿತಂತೆ.

ಮಕ್ಕಳು ಸದಾ ಕುತೂಹಲಿಗಳು. ಅವರು ಕೇಳುವ ಪ್ರತಿ ಪ್ರಶ್ನೆಗೆ ಪ್ರೀತಿ ಮತ್ತು ಸಹನೆಯಿಂದ ಉತ್ತರ ಹೇಳಬೇಕು. ಇನ್ನೊಬ್ಬರ ಮಕ್ಕಳ ಜೊತೆ ಹೋಲಿಕೆ ಮಾಡಿ ಹೀಯಾಳಿಸಬಾರದು. ಆ ರೀತಿಯ ವರ್ತನೆ ಆ ಮಕ್ಕಳನ್ನು ನಿಧಾನವಾಗಿ ಕೊಲ್ಲುವ ವಿಷ ಎಂದು ತಿಳಿಯಿರಿ. ತಂದೆ-ತಾಯಿಗಳು ಮೊದಲು ತಾವು ಸರಿಯಾಗಿದ್ದು, ಅವುಗಳ ತಪ್ಪನ್ನು ತಿದ್ದಬೇಕು. ಮಕ್ಕಳು ತಂದೆ-ತಾಯಿ ಹೇಳಿದಂತೆ ಕೇಳುವುದಿಲ್ಲ. ಆದರೆ ಅವರ ವರ್ತನೆ, ನಡತೆ, ನಡಾವಳಿಕೆಯನ್ನು ಗಮನಿಸಿ ಅದರಂತೆ ಆಗುತ್ತಾರೆ. ಆದಕಾರಣ ತಂದೆ-ತಾಯಿ ತಮ್ಮ ನಡೆಯಲ್ಲಿ ಎಚ್ಚರವಹಿಸಬೇಕು. ಫೋನ್‌ಮಾಡಿದ ವ್ಯಕ್ತಿ 'ನಿಮ್ಮಪ್ಪ ಇದ್ದಾರೆಯೇ?' ಎಂದು ಕೇಳಿದರೆ; ಆ ವ್ಯಕ್ತಿಯ ಹೆಸರು ಕೇಳಿ 'ಇಲ್ಲ ಎಂದು ಹೇಳು' ಎಂದು ಮಕ್ಕಳಿಗೆ ಹೇಳಿಕೊಡಬಾರದು. ಇದು ಸಣ್ಣ ವಿಷಯ. ಆದರೆ ಮಗು ಬ್ಲಾಟಿಂಗ್ ಪೇಪರ್ ತರಹ. ನೀವು ಹೇಳಿದ ರೀತಿ ಸರಿ ಎಂದು ಅದನ್ನು ತನ್ನ ಮನಸ್ಸಿನಲ್ಲಿ ಹೀರಿಕೊಳ್ಳುತ್ತದೆ. ಅನಂತರ ಅದೇ ಬಗೆಯ ಉತ್ತರ ನಿಮಗೆ ಆ ಮಗುವಿನಿಂದ ಸಿಗುತ್ತದೆ.

ಸದಾ ಸತ್ಯವನ್ನು ನುಡಿಯಿರಿ. ಸತ್ಯದಂತೆ ನಡೆಯಿರಿ. ಗೋವಿನ ಕಥೆ ಹೇಳಿ. ಮಕ್ಕಳು ಕಥೆಕೇಳಿ ಕಣ್ಣೀರುಹಾಕುತ್ತವೆ. 'ಸತ್ಯವೇ ನಮ್ಮ ತಾಯಿ ತಂದೆ। ಸತ್ಯವೇ ನಮ್ಮ ಬಂಧು-ಬಳಗ। ಸತ್ಯವಾಕ್ಯಕೆ ತಪ್ಪಿನಡೆದರೆ ಮೆಚ್ಚನಾ ಪರಮಾತ್ಮನು' ಎಂಬ ನುಡಿ ಮನನ ಮಾಡಿಕೊಡಿ. ಮಗುವಿನಲ್ಲಿ ಅಪಾರ ಮಮತೆ ಇದೆ. ಅದನ್ನು ಬೇಂದ್ರೆ ನುಡಿಯಂತೆ ತುಂಬಿಕೊಳ್ಳೋಣ ಬನ್ನಿ.

ಹಿಗ್ಗಿನ ತೊರೆಯಾಗಿ ಬಂತು
ನಗೆಯ ತೆರೆಯಾಗಿ ಬಂತು
ನನ್ನ ಮಗುವಿನ ಮಮತೆ

* * *

ಮುಗಿಲಿನ ಸೆರೆಯಾಗಿ ಬಂತು
ಜಗದ ದೊರೆಯಾಗಿ ಬಂತು
ನನ್ನ ಮಗುವಿನ ಮಮತೆ.

ಬನ್ನಿ ನಮ್ಮ ಮಗುವನ್ನು ಜಗದ ದೊರೆಯಾಗಿ ಮಾಡೋಣ.

(ಆಕಾಶವಾಣಿ, ಚಿಂತನ)

■



ನಿಸರ್ಗ ಧ್ಯಾನಿ

'ನನ್ನ ಕಣ್ಣೇ ಕಿವಿಯು ಕವಿಯು ನಾನು' ಎಂದು ನಿಸರ್ಗವನ್ನು ನೋಡಿ ನಲಿದವರು ಬೇಂದ್ರೆ. ಅವರು ಪ್ರಕೃತಿಯನ್ನೆ ಧ್ಯಾನಿಸುತ್ತ ತನ್ನ ಒಳಲೋಕದಿಂದ ಕಂಡ ಅದರ ವಿಸ್ಮಯವನ್ನು ಕಾವ್ಯವಾಗಿ ನೀಡಿದರು. 'ಅಪರಿಮಿತಂ ಭವ್ಯಂ' ಎಂಬ ಉಪನಿಷತ್ತಿನ ನುಡಿಯಂತೆ ಜಗದ ಪೋಷಕ ಶಕ್ತಿಯಾದ ಸೃಷ್ಟಿಯ ಭವ್ಯಾನುಭವವನ್ನು ಅನುಭವಿಸುತ್ತ ಅದರ ನಾದದಲ್ಲಿ ಒಂದಾಗಿ ಹೋದರು. 'ಕ್ಷಣ ಕ್ಷಣವೂ ಹೊಸ ಹೊಸದಿದು ಘನಗಗನ ವಿತಾನ' ಎಂದು ಸೂಕ್ಷ್ಮವಾಗಿ ಅವಲೋಕಿಸಿದರು. ಆ ಹೊಸತಾಗುವ ಋತುಮಾನದಿಂದ ಮನುಜರು ತಿಳಿಯಬೇಕಾದ ತತ್ವವನ್ನು ಹೀಗೆ ಹೇಳಿದರು:

'ತಿರುತಿರುಗಿಯು ಹೊಸತಾಗಿರಿ' ಎನುತಿದೆ ಋತುಗಾನ
ಈ ಹಾಡಿಗೆ ಶ್ರುತಿ ಹಿಡಿದಿದೆ ಬ್ರಹ್ಮಾಂಡದ ಮೌನ. (ನಾದಲೀಲೆ)

ಬಿಸಿಲಬೇಗೆಯ ಭೀಕರತೆಯನ್ನು, ಆ ಝಳದ ತೀವ್ರತೆಗೆ ಜನ ನಲುಗಿ ಹೋದುದನ್ನು ನುಡಿಕೆಂಡದಲ್ಲಿ ಬಣ್ಣಿಸಿದರು: 'ನಿಗಿನಿಗಿ ಮುಗಿಲು ನಿಗಿನಿಗಿ ಹಗಲು ಕೆಂಡವ ಕಾರುವದು; ಮೈದೊರೆದೆತ್ತಲು ಪ್ರಾಣವು ಬತ್ತಲು ನೆತ್ತಿಲಿ ಹಾರುವುದು.' ಆ ಬಿಸಿಯುಸಿರಿನ ಗಾಳಿಯು ಆಕಾಶವನ್ನೇ ಈಸಿಕೊಂಡು ಹಬ್ಬಿ ಬರುವುದನ್ನು 'ಬೇಗೆಯ ಬೀಸಿ ಆಗಸವೀಸಿ ಬರುತಿದೆ ಮೈತಾಳಿ' ಎಂದು ನುಡಿಯಲ್ಲಿ ಕಾಣಿಸಿದರು.

ಹಾಗೆ ಇಡೀ ನೆಲದ ಪಶು ಪಕ್ಷಿ, ಜನ ಜಾನುವಾರುಗಳನ್ನು ಕಾಡುವ ಬೇಸಿಗೆಯ ಬಿರುಬಿಸಿಲು ಋತು ಹೊರಳಿದಂತೆ ತರುವ ತಂಪನ್ನು ಅದ್ವಿತೀಯ ಪ್ರತಿಮೆಯಲ್ಲಿ ಹೀಗೆ ಚಿತ್ರಿಸಿದರು: 'ಬಿಸಿಲು ಕುಣಿದು ಬೆವತಽದ, ಈಗ ಬಂದಽದ ಮಳಿಯ ಹದಕಽ' (ಬಿಸಿಲನ್ನು ಕುಣಿಸಿ ಬೆವರಿಸಿದ ಕವಿ ಬೇಂದ್ರೆ!)

ಆಗ ಪ್ರಕೃತಿಯಲ್ಲಿ ಮಳೆಯಕಾರಣ ಕಾಣುವ ಬೆಳೆ, ಹಕ್ಕಿಯ ಇಂಚರ ನಗುವನ್ನು ಪಾರಮಾರ್ಥಿಕ ದಯೆಯೆಂದು ಬಣ್ಣಿಸಿದರು. 'ಕಾಲೂರಿತು ಮಳೆ, ಕತ್ತೆತ್ತಿತು ಬೆಳೆ, ಹನಿಯೊಡೆಯಿತು ಮೋಡ; ಕಿಲಿಕಿಲಿ ಹಕ್ಕಿ ಕುಲು ಕುಲು ನಕ್ಕಿ! ದಯೆಗರೆಯಿತು ನೋಡಾ!'

ಕನ್ನಡ ಕಾವ್ಯಲೋಕದಲ್ಲಿ ಬಹುಪಾಲು ಕವಿಗಳು ವಸಂತದ ಆರಾಧಕರು. ಆದರೆ ಬೇಂದ್ರೆ ಶ್ರಾವಣದ ಧ್ಯಾನ್ಯಶೀಲರು. ಪ್ರಕೃತಿಯ ಎಲ್ಲ ಶಬ್ದ, ನಾದದ ಅನುಭಾವ ಅವರ ಶ್ರವಣ ಪ್ರತಿಭೆ (Auditory Imagination). ಒಂದು ಮಳೆಗಾಲದ ಮಧ್ಯರಾತ್ರಿಯಲ್ಲಿ ಅವರ ಸಾಧನಕೇರಿಯ ಕೆರೆಯಲ್ಲಿ ಸಹಸ್ರಾರು ಕಪ್ಪೆಗಳು ತಾರಸ್ವರದಲ್ಲಿ ಒಟ್ಟಿಗೆ ವಟಗುಟ್ಟುತ್ತಿದ್ದುವಂತೆ. ಆ ದನಿಗೆ ಎಚ್ಚೆತ್ತ ಕವಿಯು ಮಗ ವಾಮನ ಬೇಂದ್ರೆಯವರಿಗೆ 'ನಡಿ ಕೆರೆಯ ಬಳಿ ಹೋಗಿ ಆ ಕಪ್ಪೆಗಳ ನಾದ ಕೇಳೋಣ' ಎಂದು ಹೇಳಿ ಮಗನೊಡನೆ ಹೊರಟರಂತೆ. ಬೆಳಗಾಗುವ ತನಕ ತದೇಕಚಿತ್ತರಾಗಿ ಮೌನದಿಂದ ಆ ನಾದದಲ್ಲಿ ಲೀನವಾಗಿದ್ದರಂತೆ. (ಈ ಘಟನೆಯನ್ನು ವಾಮನ ಬೇಂದ್ರೆ ನನಗೆ ತಿಳಿಸಿದ್ದರು.)

ಜಗದ ಜನರಿಗೆ ಶ್ರಾವಣ ಮಾಸದ ಗಂಗಾವತರಣ ಪವಿತ್ರ ಜೀವಪೋಷಕ ಶಕ್ತಿ. ಆದುದರಿಂದ ಕವಿ ಗಂಗೆಯನ್ನು 'ಹತ್ತು ಅವತಾರಕ್ಕು ಹಿರಿದೆಂಬೆ ಹಡೆದವ್ವ ನಿನ್ನ ಗಂಗಾವತಾರ' ಎಂದು 'ಗಂಗಾಷ್ಟಕ'ದಲ್ಲಿ ಧ್ಯಾನಿಸಿದ್ದಾರೆ. ಮಳೆಯನ್ನು ಕಂಡು 'ಇದು ವಿಶ್ವಜೀವದಾಕರ್ಷ ಹೊಮ್ಮಿತೋ ಹರ್ಷ' ಎಂದು ನಲಿದಿದ್ದಾರೆ.

ವರ್ಷಧಾರೆಯಿಂದಾಗಿ 'ಮಣ್ಣು ಹುಡಿಯ ಕಣಕಣವೂ ಕಣ್ಣು ಪಡೆದ ಹಾಗಿದೆ; ಬಾನಿನಂಚಿನಲ್ಲಿ ಮೋಡ ನೋಡಲಿದನೆ ಬಾಗಿದೆ.' ಎಂದು ಹೇಳಿ, ಧ್ಯಾವಾ ಪೃಥ್ವಿಯ ಒಲ್ಮೆಯ ರಸಿಕತೆಯನ್ನು ಸೃಷ್ಟಿ ಸೊಬಗಿನಲ್ಲಿ ಚಿತ್ರಿಸಿದ್ದಾರೆ. ಅದು ಕಂಪು, ನಾದದೊಡನೆ ಮೋದವನ್ನು ಬೀರುತ್ತ ಬರುತ್ತದೆ. ಅದರ ಘೋಷಧ್ವನಿ ಕಲ್ಪಿಸಿಕೊಳ್ಳಲಾಗದ ಯಾವುದೊ ಅಗಾಧ ತಳದಿಂದ ಬಂದಿದೆ. ಅದು ಜಗಕ್ಕೆ ಮಂಗಳವನ್ನುಂಟು ಮಾಡಿದೆ ಎಂದು ಹರ್ಷದಿಂದ ಸವದತ್ತಿ ಎಲ್ಲಮ್ಮನ ಭಕ್ತರು ಧ್ಯಾನಿಸುವಂತೆ 'ಉದೋದಿದೋ ಶ್ರಾವಣಾ' ಎಂದು ಹಾಡಿ ಮೈಮರೆತಿದ್ದಾರೆ.

'ಕೇದಗೆಯ ಹೊಡೆ ತೂರಿ ಊದು ನಿನ್ನ ತುತೂರಿ
ಮೋದಬೀರೋ ಶ್ರಾವಣಾ
ನಾದವಿದು ಯಾವುದೊ ಅಗಾಧ ತಳದಿಂ ಬಂತು,
ಉದೋದಿದೋ ಶ್ರಾವಣಾ' **(ಗಂಗಾವತರಣ)**

ಬೇಂದ್ರೆಯವರು ಶ್ರಾವಣದ ನಾದ ತರಂಗಕ್ಕೆ ತಮ್ಮನ್ನು ಸಜ್ಜುಗೊಳಿಸಿಕೊಂಡು ಅದರಲ್ಲಿ ಲೀನವಾಗಿ ಹೋಗಿದ್ದರು. ಆ ಐಕ್ಯ ಭಾವವೇ ಅಚಿಂತ್ಯಾನುಭವ. ಅದು ನಿಸರ್ಗದ ಧ್ಯಾನದಲ್ಲಿ ಒಂದಾದ ಕವಿಯ ಆನಂದ.

'ಶ್ರಾವಣಕ ತಪ್ಪಿತ ಗ್ಯಾನಾ
ಎಲ್ಲಿದೋ ಧ್ಯಾನಾ
ಹುಚ್ಚ ಆಗ್ಯಾನಾ
ಮದೋನ್ಮತ್ತಾ
ಅಂಬಿಕಾತನಯದತ್ತಾ' **(ಸೂರ್ಯಪಾನ)**

(ವಿಜಯ ಕರ್ನಾಟಕ, ಬೋಧಿವೃಕ್ಷ 10-06-2017)

■



ಭಾವಗೀತ

ದ.ರಾ. ಬೇಂದ್ರೆಯವರು ಮುಗದ ಗ್ರಾಮದಲ್ಲಿ ಇರುವ ಸಮಯದಲ್ಲಿ (1932–33) ವೇದನೆಗೆ ಒಳಗಾಗಿ ದುಗುಡದಿಂದಿದ್ದರು. ಅವರು ಕಟ್ಟಿದ್ದ 'ಗೆಳೆಯರ ಗುಂಪು' ವಿಘಟನೆಯಾಗಿತ್ತು. ಬ್ರಿಟೀಷ್ ಸಾಮ್ರಾಜ್ಯವನ್ನು ಎದುರಿಸಿ ಜೇಲುವಾಸ ಅನುಭವಿಸಿ ಸ್ಥಾನಬದ್ಧತೆಗೆ ಒಳಗಾಗಲು ಕಾರಣವಾದ ತಮ್ಮ ಕವಿತಾಶಕ್ತಿಯ ಬಗ್ಗೆ ಅವರಿಗೆ ಹೆಮ್ಮೆಯುಂಟಾಗಿತ್ತು. ' 'ನರಬಲಿ' ಕವನವು ಬಲಿಮಾಡಿತೆನ್ನನು/ಹೆಳವನಿದ್ದಲ್ಲಿಗೆ ಹೊಳೆಬಂದಿತು' ಎಂಬ ಹಿರಿಮೆ ಅವರದಾಗಿತ್ತು. ವಿರುದ್ಧ ಭಾವಗಳ ತಾಕಲಾಟದ ಸಂಘರ್ಷದಲ್ಲಿ ಋಣಾತ್ಮಕ ಸಂಗತಿ ಸಂದರ್ಭಗಳ ನೆನಪು ಮನಸ್ಸಿನ ಭಾರವನ್ನು ಹೆಚ್ಚಿಸಿದಂತೆ; ಧನಾತ್ಮಕ ಆಲೋಚನೆ, ಕಾವ್ಯ ಕೃಷಿ ನೀಡುವ ಮಧುರ ಆನಂದ ಆಹ್ಲಾದದಿಂದ ಅವರ ಮನಸ್ಸು ಮತ್ತು ದೇಹ ಹಗುರಾಗುತ್ತಿದ್ದವು.

ನಿರಾಸೆ, ಆತಂಕ, ಅನಿಶ್ಚಯತೆಗಳ ಬಸುರಿನಿಂದಲೇ ಸ್ಥಿರ ಚಿಂತನೆಯ ಕಾವ್ಯ ಹುಟ್ಟಿಬರುತ್ತಿತ್ತು. ಮನಸ್ಸು ಆಗತಾನೆ ಬಿರಿದ ಮಲ್ಲಿಗೆಯಂತೆ ತಾಜಾ ಕಂಪುಸೂಸಿ ಉಲ್ಲಾಸವಾಗಿರುತ್ತಿತ್ತು. ಆ ಆಹ್ಲಾದವೇ 'ಭಾವಗೀತ'ವಾಗಿ ಸಹೃದಯರ ಉಲ್ಲಾಸ, ಕ್ರಿಯಾಶೀಲತೆಗೆ ಕಾರಣವಾಗುತ್ತಿದೆ ಎಂದು ತಿಳಿದ ಕವಿ ಬೇಂದ್ರೆ ಆ ಎಲ್ಲ ಭಾವಕ್ಕೆ ಪ್ರತಿಮೆಯಾಗಿ 'ಭೃಂಗ'ವನ್ನು ಕಂಡು 'ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸ' ಎಂಬ 'ಭಾವಗೀತ' ರಚಿಸಿದರು.

ಭೃಂಗವು ಹೂವಿನ ಮಕರಂದ ಸಂಗ್ರಹದಿಂದ ಅದನ್ನು ಮಧುವಾಗಿಸುವವರೆಗಿನ ಒಂದು ಪೂರ್ಣಕ್ರಿಯೆ ಅವರಿಗೆ 'ಭಾವಗೀತ' ಸೃಷ್ಟಿಯ ರೂಪಕವಾಗಿ ಕಂಡಿತು. ಕವಿಯ 'ಭಾವಗೀತ' ತುಂಬಿಯಂತೆ ಸಹೃದಯನನ್ನು ಹೊಕ್ಕು ಅವನನ್ನು ಮಧುರ ಭಾವನೆಗೆ ಒಳಗಾಗಿಸಿ ಮಧುವಾಗಿಸುವ ಲೀಲೆಯೆನಿಸಿತು. ಆ ಲೀಲೆಯಲ್ಲಿ ರಸಿಕ ಸಹೃದಯ ತುಂಬಿಯಂತೆ ನಲಿದು ಲಯಾನ್ವಿತ ನರ್ತನ ನಡಿಗೆಯಲ್ಲಿ ನಾದಕ್ಕೆ ತಕ್ಕಂತೆ ಓಲಾಡಿ ತಣಿವುದೇ ಆಹ್ಲಾದ, ಕಾವ್ಯದ ಸಾರ್ಥಕತೆ ಎನಿಸಿತು.

* * * *

ಬೇಂದ್ರೆಯವರ 'ಭಾವಗೀತ'ದ ಕಲ್ಪನಾ ವಿಲಾಸವು ಮಕ್ಕಳನ್ನು ನಲಿಸುವ 'ಹಾರಗುದರಿ ಬೆನ್ನ ಏರಿ' ಬಂದಿಲ್ಲ. ಆನೆಯ ಅಂಬಾರಿಯ ಮೇಲೆ ಕುಳಿತು ವಿಜೃಂಭಿಸಿಲ್ಲ. 'ಮಾತನಾಡುವ ಗಿಣಿ,' 'ಸುಧೆಯ ಕುಡಿದ ಹಕ್ಕಿ' ಅಥವಾ ಗಾಳಿ, ಮೋಡಗಳ ಸವಾರಿ ಮಾಡುತ್ತಲೂ ಬಂದಿಲ್ಲ. ಅದು ಬಂದಿರುವುದು 'ಭೃಂಗದ ಬೆನ್ನೇರಿ.' ಅದು ಜೀವನಾನುಭವ ಸಂಸ್ಕಾರಗೊಂಡು ಮಧುವಾದುದರ ಪ್ರತೀಕ.

ಕನ್ನಡದ 'ತುಂಬಿ'ಯೇ 'ಭೃಂಗ.' 'ತುಂಬಿ' ಬೇಂದ್ರೆಯವರಿಗೆ ತುಂಬಾ ಪ್ರಿಯವಾದ ಪದ. ಅವರು 'ಈ ತುಂಬಿ ಬಾಳು ತುಂಬಿರುವ ತನಕ ತುಂತುಂಬಿ ಕುಡಿಯಬೇಕು' ಎಂಬ ಚಿಂತನೆಯನ್ನು ನೀಡಿ ತುಂಬಿಬಾಳಿನ ಸವಿಯನ್ನು ಈ ನೆಲದ ಜನ ಅನುಭವಿಸುವಂತೆ ತಿಳಿ ಹೇಳಿದ್ದಾರೆ.

ಬೇಂದ್ರೆಯವರ ಭಾವಭೃಂಗ ರೆಕ್ಕೆ ಕಟ್ಟಿಕೊಂಡು ಹಾಡುವುದು 'ಜೇಂಗೊಡ'ಕ್ಕೆ.

'ಹಾರಿದೆನು ಜೇಂಗೊಡಕ್ಕೆ, ಹೀರಿದೆನು ಬಾಯಹಚ್ಚಿ
ತೀರಿದರು ತಣಿವಿಲ್ಲ ಮೈಮರೆಯೆ ಕುಡಿದೂ ಮನ
ದಣಿಯಲಿಲ್ಲ ಕಡೆಗೂ.' (ಸಖೀಗೀತ–ಜೇನುಹುಟ್ಟು)

ಭೃಂಗವು ಅಲ್ಪಾಯುಷಿ ಆದರೆ ಅದರ ಜೀವಿತದ ಪ್ರತಿಕ್ಷಣವು ಕ್ರಿಯಾಶೀಲ. ಸುಂದರ ಹುಳುವು ಸದಾ ಲವಲವಿಕೆಯಿಂದಿದ್ದು ಮಧು ಸಂಗ್ರಹಿಸಿ ಜೇನು ಹುಟ್ಟುಕಟ್ಟಿ ತನ್ನೆಲ್ಲರನ್ನೂ ಒಳಗೊಂಡು ಬದುಕುವುದು ಈ ನೆಲದ ಜನರಿಗೆ ಒಂದು ಆದರ್ಶ. ಅನಂತಶಕ್ತ ಭಗವಂತನನ್ನು ಬೇಂದ್ರೆಯವರು 'ಹುಟ್ಟದ ಹುಟ್ಟು' ಎಂದಿದ್ದಾರೆ.

ಮುಟ್ಟದ ಮಾಟದ
ಹುಟ್ಟದ ಹುಟ್ಟಿಗೆ
ಜೇನಿನ ಥಳಿಮಳಿ
ಸನಿಹ ಹನಿ (ನಾಕುತಂತಿ)

'ಪರಬ್ರಹ್ಮನಿಗೆ ಆದಿಯೂ ಇಲ್ಲ. ಅಂತ್ಯವೂ ಇಲ್ಲ. ಅಂದರೆ ಹುಟ್ಟೂ ಇಲ್ಲ. ಸಾವೂ ಇಲ್ಲ. ಅದನ್ನು ಬೇಂದ್ರೆಯವರು ಪ್ರತಿಮಾ ಪೂರ್ವಕವಾಗಿ 'ಮುಟ್ಟದ ಮಾಟದ, ಹುಟ್ಟದ ಹುಟ್ಟಿಗೆ' ಎಂದಿದ್ದಾರೆ. ಅದು ಜೇನುಹುಟ್ಟಿನಂತಹ ಸೃಷ್ಟಿ. ಅಂತಹದರ ಫಲವೆಂದರೆ 'ಜೇನಿನ ಥಳಿ ಮಳಿ', ಸಿಹಿ ತಳಿಯ ಮಳೆ ಅರ್ಥಾತ್ ಅಮೃತ ವರ್ಷ. ಅದು ಹತ್ತಿರದಲ್ಲೇ 'ಸನಿಹ ಹನಿ'ಯಾಗಿ ಅಮೃತಧಾರೆಯ ಬಿಂದುಗಳನ್ನು ತೊಟ್ಟಿಕ್ಕುವ ಆನಂದ ವೃಷ್ಟಿ'.

* * * *

ಮನ್ಮಥನ ಕಬ್ಬಿನ ಬಿಲ್ಲಿಗೆ ತುಂಬಿಗಳ ಸಾಲೇ ಹೆದೆ (ದಾರ). ಅದನ್ನು ಝೇಂಕರಿಸಿದಾಗ ಎಂತಹ ಮುನಿಗಳೂ ಕಾಮನ ಸೆಳೆತಕ್ಕೆ ಒಳಗಾಗುವರು ಎಂಬುದು ಕವಿಸಮಯ. ಅಂತಹ ಎಲ್ಲರನ್ನೂ ತನ್ನತ್ತ ಸೆಳೆವ ತುಂಬಿಯ ಬೆನ್ನೇರಿ ಕಲ್ಪನಾವಿಲಾಸ ಹೊರಟಿದೆ !

ತನ್ನ ಜೀವನಾನುಭವದ ಮಧುರ ನೆನಪನ್ನು ಕಾವ್ಯವಾಗಿ ನೀಡಿ ಅದರ ಆನಂದದಲ್ಲಿ ಲೀನವಾಗುವ ಕವಿಯೂ ಒಂದು ಭೃಂಗವೆ. ಭೃಂಗ ತನ್ನ ಗುಂಯ್‌ಗುಡುವ ನಾದದೊಡನೆ ಒಂದು ಲಯಬದ್ಧ ನಡೆಯನ್ನು ಹೊಂದಿ, ಚಾಂಚಲ್ಯದ ನೋಟದೊಡನೆ ಬಣ್ಣ ಬೆಡಗನ್ನು ಪ್ರದರ್ಶಿಸುತ್ತ ಮರೆಯಾಗುತ್ತದೆ. ಆದರೂ ಅದರ ಮಿಂಚಿನ ಚಲನೆ ಮನದಲ್ಲಿ ಹಾಗೆಯೇ ಉಳಿಯುತ್ತದೆ. ಕವಿಯ ಸೌಂದರ್ಯದ ಆವಿಷ್ಕಾರವು ಭೃಂಗದಂತೆ ಗೋಚರಿಸಿ ತಕ್ಷಣ ಮಾಯವಾಗುವ ಒಂದು ಫ್ಲಾಷ್‌ನಂತಹದು.

ಬೆಳಕಿನಲ್ಲಿ ಸದಾ ಗುಂಯ್‌ಗುಡುತ್ತಾ ಹರಿದಾಡುವ ಕಪ್ಪು ಬಣ್ಣದ ದುಂಬಿ ಬೇಂದ್ರೆಯವರಿಗೆ ಹಗಲು ನಕ್ಷತ್ರದಂತೆ, ಅದು ಸರಿದಾಡುವುದೇ ಮಿಂಚು ಹರಿದಂತೆ. ಅದೊಂದು ನಗೆಯ ಅಲೆ; 'ಮಿಂಚಿ ಮಾಯವಾಗುತಿತ್ತು ಒಂದು ಮಂದಹಾಸ'.

ನೆಲದ ರಸಗಂಧವನ್ನು ಹೀರಿದ ತರುವಿನಿಂದ ಹೊಮ್ಮಿದ ಹೂವಿನ ಮಕರಂದ ಸವಿದ 'ತುಂಬಿ' ಗಗನಮುಖಿಯಾಗಿ, ನೆಲಬಾನುವಿನ ಮಧುರ ಬಾಂಧವ್ಯದ ಸವಿಗೆ ಪ್ರತಿಮೆಯಾಗಿದೆ. ಈ ಕವನದ ನಾದವೇ ಮಧುಭಾವವನ್ನುಂಟು ಮಾಡುವುದನ್ನು ಎರಡನೆಯ ನುಡಿ ಧ್ವನಿಸುತ್ತದೆ. 'ತುಂಬಿ'ಯಲ್ಲಿಯ ಅಂತಃಶಕ್ತಿ ಚೇತನ ರಸಲಹರಿಯ ಪ್ರಕಟರೂಪ ಜೇನು! ಹಿಗ್ಗು! ವಿಕಾಸ! ಆಹ್ಲಾದ!

ಕಾವ್ಯದ ಪ್ರಯೋಜನ ಏನು? ಎಂಬ ಪ್ರಶ್ನೆಗೆ ಉತ್ತರ: ಕಾವ್ಯ ರಸಾಸ್ವಾದನೆಯ ಆಹ್ಲಾದ ಎಂಬುದಾಗಿದೆ. ಅದನ್ನು ಬೇಂದ್ರೆಯವರು ಪ್ರಶ್ನೋತ್ತರವಾಗಿ ತಿಳಿಸಿರುವ ರೀತಿ ಮಧುಮಯ.

'ಏನು? ಏನು?' ಪ್ರಶ್ನೆ ತನ್ನೊಳಗೆ ಉತ್ತರ ಅಡಗಿಸಿಟ್ಟಂತೆ ಮಾರ್ನುಡಿಯುತ್ತದೆ– 'ಜೇನು? ಜೇನು?'

ಕಾವ್ಯರ್ಷಿ ಬೇಂದ್ರೆಯವರಿಗೆ ತನ್ನ ತಪಸ್ಸು ಗೀತವಾಗಿ ಹರಿದು ಸಹೃದಯರನ್ನು ಅಲೌಕಿಕ ಭಾವಕ್ಕೆ ಕೊಂಡೊಯ್ಯುವ ಸಮರ್ಥ ಸಾಧನವಾಗಿದೆ ಎಂಬ ಹೆಮ್ಮೆ ಇದೆ. ಹಾಗಾಗಿ ನುಡಿದಿದ್ದಾರೆ: 'ಓಂಕಾರದ ಶಂಖನಾದಕಿಂತ ಕಿಂಚಿದೂನಾ'.

ಭೃಂಗದ ಗುಂಗು ನಾದದ ಇಂಪು, ಅದರ ವಿಶಿಷ್ಟ ಸಂಮೋಹನ ಬೆಡಗು ಬಿನ್ನಾಣದಲ್ಲಿ 'ಅಲೌಕಿಕ ರಸ' ಪ್ರವಹಿಸುತ್ತದೆ. ಆ ರಸಾನಂದದಲ್ಲಿ ಕವಿಯಂತೆ ಸಹೃದಯರು ಒಂದಾಗಿ ಹೋಗುತ್ತಾರೆ: 'ಕವಿಯ ಏಕತಾನ ಕವನದಂತೆ ನಾದಲೀನಾ'.

* * *

'ಭಾವಗೀತ'ದ ಕಲ್ಪನಾ ವಿಲಾಸವು ಜೀವನತತ್ತ್ವ, ಚಿಂತನೆ, ಸವಿಧ್ಯಾನವನ್ನು ಹೊಂದಿ ಭೃಂಗದ ಬೆನ್ನೇರಿ ಸಾಗಿದೆ. ಅದು ತನ್ನ ಹೃದಯದಲ್ಲಿ ಸಿಹಿಯಾದ ಮಧುವನ್ನು ತುಂಬಿಕೊಂಡು ಕ್ರಿಯಾಶೀಲವಾಗಿ, ಸದಾ ಚಟುವಟಿಕೆಯಿಂದಿರುವ ಮಧುಕರನ ಬೆನ್ನೇರಿ ಸಾಗಿದೆ. ಅದೊಂದು ರಹಸ್ಯ ಪೂರ್ಣವಾದ, ಬಣ್ಣಿಸಲಾಗದ ಬೃಹದ್ಭಾವಯಾನ. ಮಧುಸಂಗ್ರಹದ ಆನಂದ ಲಹರಿಯ ಪುನೀತ ಪಯಣ.

ಕಾವ್ಯ ಸೃಷ್ಟಿಯು ಅಂತಃಶ್ಚೇತನವಾಗಿ ಒಡಮೂಡಿ ಕಲಾತ್ಮಕವಾಗಿ ಹೊಮ್ಮಿ ಬರಬೇಕು ಎಂಬುದನ್ನು ಬೇಂದ್ರೆಯವರು 'ಒಡಲ ನೂಲಿನಿಂದ ನೇಯುವಂತೆ ಜೇಡ ಜಾಲಾ' ಎಂಬ ಪ್ರತಿಮೆಯಲ್ಲಿ ತಿಳಿಸಿದ್ದಾರೆ. ಅದು ಅವರ ಕಲ್ಪನೆ ಮತ್ತು ಆಲೋಚನೆ ಪ್ರಕೃತಿಯೊಡನೆ ಒಂದಾಗಿ ನಲಿದು ಸೃಷ್ಟಿಗೊಂಡ ರೀತಿ. 'ಉಸಿರಿನಿಂದೆ ಹುಡುಕುವಂತೆ ತನ್ನ ಬಾಳಮೇಲಾ' ಎಂಬುದು ತಾಪಸಿಯ ಧ್ಯಾನವನ್ನು ತಿಳಿಸುತ್ತಲೆ ಅವನು ತೇಜಸ್ವಿಯಾಗಿ ಪ್ರಕಾಶಿಸುವುದನ್ನು ಹೇಳಿದೆ. ಅದು ಏಕಾಗ್ರತೆ, ಸಾಧನೆ, ತನ್ನತನದಿಂದಲೇ ತನ್ನ ವ್ಯಕ್ತಿತ್ವ ರೂಪಿಸಿಕೊಳ್ಳುವ ಕಸುವು, ಜಾಣ್ಮೆ, ಕಲೆಗಾರಿಕೆಯ ವಿಕಾಸ ಪಥ.

* * *

ಮಂತ್ರ ಮಾತು ಅಲ್ಲ. ಏನೋ ಹಿರಿದಾದುದು. ಅದು ದೈವಿ ಆಲೋಚನೆಯಲ್ಲಿ ಗಟ್ಟಿಗೊಂಡ ಮನಸ್ಸಿನ ಶಕ್ತಿ. ಅದು ಪ್ರಾಪಂಚಿಕ ಜಂಜಡದಿಂದ ಮುಕ್ತವಾಗಲು ಕೈಗೊಂಡ ದೈವಿಕತೆಯ ಆವಿಷ್ಕಾರ. ಉನ್ನತ ನೆಲೆಯ ಸ್ವತಂತ್ರ ಚಿಂತನೆ. ಪರಿಶುದ್ಧತೆಗೆ ಸಾಗುವ ವಿಶಿಷ್ಟ ತಂತ್ರ. ಮಂತ್ರ ಸಾಧನೆಯಂತೆ ಕಾವ್ಯದ ಅನುಸಂಧಾನ; ಕಾವ್ಯವು ನಾವು ಕಾಣುವ ಹೊರಜಗತ್ತು ಮತ್ತು ನಮ್ಮ ಅಂತರ್ಯದ ಒಳವಿಶ್ವದ ಸಂಯೋಗದಿಂದ ಸೃಷ್ಟಿಗೊಂಡರೂ ಅತಿಸ್ವತಂತ್ರವಾದದ್ದು. ಅದು ತನ್ನದೇ ಸತ್ಯದಿಂದ ಮೊಳಗುವ ವಿಶಿಷ್ಟ ಸ್ವತಂತ್ರ ಪ್ರಕಾಶ. ಅದು ತೂರ್ಯಾವಸ್ಥೆಯಲ್ಲಿಯ ಮೊಳಗು.

ತಿರುಗುತಿತ್ತು ತನ್ನ ಸುತ್ತು ಮೂಕಭಾವ ಯಂತ್ರಾ
ಗರ್ಭಗುಡಿಯ ಗರ್ಭದಲ್ಲಿ ಪಡಿನುಡಿಯುವ ಮಂತ್ರಾ
ಮೂಡಿ ಮೂಡಿ ಮುಳುಗಿ ಮುಳುಗಿ ಮೊಳಗುವೊಲು ಸ್ವತಂತ್ರಾ.

* * *

ಸೃಷ್ಟಿದೇವಿಯ ಆರಾಧನೆಗೆ ಭೃಂಗದ ಬೆನ್ನೇರಿ ಹೊರಟ ಕಲ್ಪನಾ ವಿಲಾಸವು ಆ ಭವ್ಯ ಪ್ರಕೃತಿಯ ಲೀಲಾವಿಲಾಸದಲ್ಲಿ ಒಂದಾಗಿ ಹೋಗಿದೆ.

'ಧೂಪ ಧೂಮಾ ಲಹರಿ ಲಹರಿ ಕಂಪಬಳ್ಳಿ'ಯಲ್ಲಿ ತೊನೆದಾಡಿ ಕಂಪಿಡಿದು ಹೋಗಿದೆ. ಅದರ 'ಚಿತ್ತರಂಗ ಭೂಮಾ' ಆಗಿದೆ. 'ಯೋ ವೈ ಭೂಮಾ ತತ್ಸುಖಂ ನಾಲ್ಪೇಸುಖಮಸ್ತಿ' ಎಂಬ ಉಪನಿಷತ್ತಿನ ಋಷಿವಾಣಿಯಂತೆ ಯಾವುದು ಭೂಮವೋ ಅಂದರೆ ಮಹತ್ತಾದುದೋ ಅದೇ ಸುಖ. ಅಲ್ಪದರಲ್ಲಿ ಸುಖವಿಲ್ಲ ಎಂಬ ಅನುಭವದಲ್ಲಿದೆ. ಆಗ ಅಲ್ಲಿ ಅರಳಿದ್ದು ಪ್ರೇಮಾ. ಪ್ರೇಮಾ creative force. 'ದಾಂಗುಡಿಗಳ ಬಿಡುತಲಿತ್ತು ಅರಳಲಿತ್ತು ಪ್ರೇಮಾ'.

ಪ್ರೇಮ ಭಾವಾಂಕುರವಾದ ಮೇಲೆ ಅದು ಸೃಷ್ಟಿಕ್ರಿಯೆಗೆ ತೊಡಗುತ್ತದೆ. ಅದು ಭಾವಭೃಂಗವು ಪದಪದವನ್ನು ಹೊಕ್ಕು ನೀರ ಹೀರುವ ಕ್ರಿಯೆ. ನೀರುಗಟ್ಟಿಸುವ; ನೀರು ನಿಲ್ಲಿಸುವ ಆನಂದ. ಅಲ್ಲಿಯ ಪ್ರೇಮಕ್ರಿಯೆಯಲ್ಲಿ ಎಲ್ಲವೂ ಫಲರೂಪಿಯಾಗುವುದಿಲ್ಲ. ಅದು 'ಅಯ್ಯೊನೋವೆ! ಅಹಹ ಸಾವೆ! ವಿಫಲ ಸಫಲ ಜೀವಾ' ಎಂಬ ಸಹಸ್ರಾರು

ವೀರ್ಯಬೀಜಗಳಲ್ಲಿ ಕೆಲವೇ ಸಫಲವಾಗುವ ರೀತಿಯದು. ಸಫಲ ಪದಗಳು ಪ್ರತಿಭೆಗೆ ದಕ್ಕಿದ ನಂತರ ಭಾವ ಆನಂದಲಹರಿಗೆ ಸಿಕ್ಕಿ ಸುಖಿಸುತ್ತದೆ. ಬಿದಿಗೆ ಚಂದ್ರನನ್ನು ಕಂಡು ಅವನಂತೆ ವಿಕಾಸಗೊಳ್ಳತೊಡಗುತ್ತದೆ. ಅದು ಸದಾಸ್ಮಿತವಾಗಿ ಮುಗಿಲ ಚಿಕ್ಕೆಯೊಡನೆ ಸ್ನೇಹವನ್ನು ಬೆಳೆಸಲು ಮುಗಿಲಿಗೆ ಹಾರತೊಡಗುತ್ತದೆ.

ಹೀಗೆ ಉನ್ಮುಖವಾಗಿ ಕವಿ ಪ್ರತಿಭೆ ಸಾಗಿದರೂ ಅದರ ಸಹಜ ಸುಖ ನೆಲದ್ದು. ಇಲ್ಲಿಯ ಮೋಹ, ಸೌಂದರ್ಯ, ಬೆಡಗಿನ ಸೆಳತದಲ್ಲಿಯೂ ಅಮರತ್ವವಿದೆ: 'ಅಲ್ಲು ಇಲ್ಲು ಚೆಲುವು ನಿಂತು ಹಾಕುತಿತ್ತು ತಾಳಾ'. ಅದರೊಡನೆ ತಾನೂ ತಾಳ ಹಾಕಿ, ಏನೇ ಎಡರುತೊಡರಿದ್ದರೂ 'ಪ್ರಾಣತಂತು ಹೆಣೆಯುತಿತ್ತು ಬಾಳಾ'. ಅದರ ನಿರಂತರ ಬೆಳವಣಿಗೆ ಉಲ್ಲಾಸ ಕಂಡು ಅನಂತಕಾಳನಾದ ಯಮ 'ಬಂತೆಲ್ಲಿಗೆ?' ಎಂದು ಪ್ರಶ್ನೆ ಕೇಳಿ ಮೌನವಾಗಿದ್ದಾನೆ! ಆ ಪ್ರಶ್ನೆಯಲ್ಲಿ ಅವನೂ ಅದರ ಸುಖವನ್ನು ಅನುಭವಿಸುತ್ತಿರುವನು– ಎಂಬ ಭಾವವಿದೆ.

ನಾನಲ್ಲ
ನೀನಲ್ಲ
ನನ್ನಲ್ಲಿ ನೀನಿಲ್ಲ
ಸಾವಿನ ನೋವಿಲ್ಲ ॥ ಕುಣಿಯೋಣು ॥

ಇದ್ದದ್ದು ಮರೆಯೋಣ
ಇಲ್ಲದ್ದು ತೆರೆಯೋಣ
ಹಾಲ್ಜೇನು ಸುರಿಸೋಣ ॥ ಕುಣಿಯೋಣು ॥
(ಗರಿ: ಕುಣಿಯೋಣು ಬಾರ!)

ಕುಣಿಯೋಣು ಬಾರ ಎಂದು ಕಾಳನೊಡನೆ ಹೆಜ್ಜೆ ಹಾಕಿ ಆಹ್ಲಾದದಿಂದ 'ಹಿಗ್ಗಲಿ ಸಿರಿಮುಖಿ' ಎಂದು ಕುಣಿದು ನಲಿಯುತ್ತದೆ!

ಆಗ ಅದರ ಹಿಗ್ಗು: 'ಮಾತು ಮಾತು ಮಥಿಸಿ ಬಂದ ನಾದದ ನವನೀತಾ'. ತನ್ನ ಹಿಗ್ಗನ್ನು ಇತರರಿಗೆ ಬೀರುತ್ತ, ಅದರ ಪ್ರತಿಫಲವಾಗಿ ತಾನು ಮತ್ತೆ ಮತ್ತೆ ಹಿಗ್ಗಿ ವಿಕಾಸಗೊಳ್ಳುವ ಅನಂತ ಆಹ್ಲಾದ. ಅದು ರೂಪಾತೀತ, ಭಾವಾತೀತವಾದ ಆನಂದ: ಯಾವುದೇ ಸ್ವಾರ್ಥ ಕೇಂದ್ರಿತ ಆರ್ಥಿಕ ಲಾಭ ನಷ್ಟಗಳಿಂದ ಮುಕ್ತವಾದ ಸಂತೋಷ: 'ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತಾ', ತನ್ನ ಫಲವನ್ನು ತಾನೇ ಸಂಪಾದಿಸಿ ಇತರರಿಗೂ ಹಂಚುವ ನಿಧಿ 'ಭಾವಗೀತ'. ಅದೊಂದು ಬಗೆಯಲ್ಲಿ ಆತ್ಮೋದ್ಧಾರದ ಸುಖ. ಬೇಂದ್ರೆಯವರ ಜೀವನದ ಅತ್ಯುತ್ತಮ ಆವಿಷ್ಕಾರ. ವಿಶ್ವದ ಶ್ರೇಷ್ಠ ಕವನಗಳ ಸಾಲಿನಲ್ಲಿ ಹೊಳೆವ ಮಾಣಿಕ್ಯ.

(ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, 29.9.2013)

■



ಆತ್ಮದ ನೀತಿಯು ಮಧುಸಂಗಮ

ವಾಗರ್ಥಾವಿವ ಸಂಪೃಕ್ತೌ ವಾಗರ್ಥ ಪ್ರತಿಪತ್ತಯೇ ।
ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ ॥

ಇದು ಕಾಳಿದಾಸನು ರಘುವಂಶದ ಆದಿಯಲ್ಲಿ ನೀಡಿರುವ ಮಂಗಳಾಚರಣೆ. ಭಾರತೀಯ ಚಿಂತನಾ ಪರಂಪರೆಯ ಆದ್ಯ ದಂಪತಿಗಳು ಪಾರ್ವತೀ ಪರಮೇಶ್ವರ. ಅವರಂತೆ ನಿಕಟವಾಗಿರುವುದು ವಾಕ್ಕು ಮತ್ತು ಅರ್ಥ. ಅವರು ಈ ಜಗದ ದಂಪತಿಗಳಿಗೆ ಆದರ್ಶವಾದ ಅರ್ಧನಾರೀ ನಟೇಶ್ವರ. ಸೃಷ್ಟಿಯ ಕಾರಣ ಚೇತನಗಳಾದ ಹೆಣ್ಣು ಮತ್ತು ಗಂಡಿನ ಅನ್ಯೂನ್ಯತೆಯ ಬದುಕಿನಲ್ಲಿ ಜಗದ ಶಾಂತಿ, ಪ್ರೀತಿ, ಸುಖ, ಆಹ್ಲಾದವಿದೆ. ಈ ಅನಂತ ಪ್ರಣಯದಲ್ಲಿ ಆ ಪ್ರೇಮಿಗಳು ತಮ್ಮ ತಮ್ಮ ಚೆಲುವನ್ನು ಅರಸಿ ಒಂದಾಗುತ್ತಾರೆ.

‘ನಿರಂತರದ ಈ ಅನಂತ ಪ್ರಣಯವು
ನಡೆದಿದೆ ಎಂದೆಂದೂ
ತಂತಮ್ಮೊಲವಿನ ಚೆಲುವರಸುತ್ತಿವೆ
ಜೀವವು ಒಂದೊಂದೂ’ (ಹಾಡುಪಾಡು)

ಪ್ರೀತಿಯೆಂಬ ಚುಂಬಕ / ಅಯಸ್ಕಾಂತದಿಂದ ಒಂದಾದವರು ನೆಲದ ಸವಿಯಲ್ಲಿ ಸುಖ ಕಾಣುತ್ತಾರೆ. ಅವರು ಒಂದಾಗುವ ಬಗೆಯನ್ನು ಕವಿ ಬೇಂದ್ರೆಯವರು

ಆ ಮುಖಾ–ಈ ಮುಖಾ
ಯಾವ ಗಂಡೊ
ಯಾವ ಹೆಣ್ಣೊ
ಪ್ರೀತಿಯೆಂಬ ಚುಂಬಕಾ
ಕೂಡಿಸಿತ್ತು
ಆಡಿಸಿತ್ತು

ಕೂಡಲದೊಲು ನೋಟವಾ
ಮೂರು ದಿನದ ಆಟವಾ

ಎಂದು ತಿಳಿಸಿ 'ಬೆರಕೆಯಿಂದೊ ಎರಕದಿಂದೊ ಬಂತು ಬೇರೆ ಜೀವನಾ ಕೃಪೆಯೊ ಕಾಮದೇವನಾ' ಎಂದು ವರ್ಣಿಸಿದ್ದಾರೆ. ಪ್ರೇಮಿಗಳಿಬ್ಬರು ಒಬ್ಬರಿಗೊಬ್ಬರು ಸಮ್ಮುಖವಾದಾಗ ಹೆಣ್ಣು ಗಂಡು ಎಂಬ ಭಿನ್ನ ಭಾವ ಬತ್ತಿ ಹೋಗುತ್ತದೆ. ಅಲ್ಲಿ ಅವರ ಸ್ನೇಹ, ಆರ್ದ್ರತೆಯೇ ಬೆಳಕಾಗಿ ಪ್ರಕಾಶಿಸಲು ತೊಡಗಿ ಅಲ್ಲಿ ಒಂದು ಹೊಸ ಜ್ಯೋತಿ ಹೊತ್ತಿಕೊಳ್ಳುತ್ತದೆ. ಅದೇ ದಾಂಪತ್ಯದ ಬೆಡಗು ! ಅದನ್ನು ಬೇಂದ್ರೆಯವರು 'ಬೇರೆ ಬತ್ತಿ । ದೀಪಹತ್ತಿ' ಎಂದು ಬೇರೆಯೆಂಬುದು ಬತ್ತಿ ಹೋದುದನ್ನು, ಹೊಸ ಬತ್ತಿ ಸೃಷ್ಟಿಗೊಂಡು ದೀಪವಾಗಿ ಬೆಳಗಿದುದನ್ನು ಶ್ಲೇಷಾಲಂಕಾರದಲ್ಲಿ ಧ್ವನಿಸಿದ್ದಾರೆ. ದಾಂಪತ್ಯ ನಂಟು ಚಿಗಿತು ಸಂತತಿಯಾದುದು ಅವರ ನಿರಂತರತೆ, ಶಾಶ್ವತತೆ.

'ಅಂಟಿಗಂಟು
ಚಿಗಿತು ನಂಟು
ಇದುವೆ ನಿತ್ಯನೂತನಾ
ಸಂತತಿಯೆ ಚಿರಂತನಾ'. (ಸಖೀಗೀತ)

ತಾಯಿ ತಂದೆಗೆ ಆ ಕುವರನು – ಸುಸಂಸ್ಕೃತವಲ್ಲದ ಮೋಹವನ್ನು ಕೊಂದು ಪ್ರೇಮಧರ್ಮವನ್ನು ಪ್ರತಿಷ್ಠಾಪಿಸುವ ಚೈತನ್ಯ ಶಕ್ತಿ.

'ಮ್ಲೇಂಛ ಮೋಹವ ಕೊಂದು ಪ್ರೇಮ ಧರ್ಮವ
ಪ್ರತಿಷ್ಠಾಪಿಸುವ ನನ್ನ ಕುವರ.' (ಉಯ್ಯಾಲೆ)

ದಾಂಪತ್ಯದ ಈ ಅಮೂಲ್ಯ ಸತ್ಯ ತಿಳಿದೂ – ಮಾನವ ಚಾರಿತ್ರ್ಯದಲ್ಲಿ ಎಷ್ಟೊ ಪ್ರಳಯ – ಪ್ರಜ್ಞಾರಹಿತ ನಡೆಯಿಂದ ಸಾವು ನೋವುಗಳಾಗಿ ನಾಶವಾಗಿದೆ. ಹಾಗಿದ್ದರೂ ಆ ಪ್ರಲಯದಲ್ಲಿಯೇ 'ಸ್ತ್ರೀಯ ಪ್ರೇಮ, ಪುರುಷ ಭಾಗ್ಯ ಕಾದು ಕಾದು ಮಾಗಿವೆ.' (ಗಂಗಾವತರಣ)

ಬೇಂದ್ರೆಯವರು ಭಾರತೀಯ ಚಿಂತನೆಯ ಹಿನ್ನೆಲೆಯಲ್ಲಿ ದಂಪತಿಗಳು ಬದುಕಿ ಬಾಳಬೇಕಾದ ರೀತಿಯನ್ನು ಹೀಗೆ ತಿಳಿಸಿದ್ದಾರೆ :

ದಂಪತಿಗಳು ಪರಸ್ಪರರ ಜೀವಕ್ಕೆ ಪ್ರಕಾಶವನ್ನು ನೀಡುವ ಉತ್ತೇಜನಕಾರಿಗಳಾಗಿರಬೇಕು. ಅವರ ಪ್ರೇಮರೂಪಿ ಜೀವನವೆಂಬುದು ಅವರ ಎದೆಯಲ್ಲಿ, ಬೆಳಕಿನ ಬದಿಯಲ್ಲಿ ಇದ್ದು, ಅದು ರಸಗಂಗಾ ನದಿಯಲ್ಲಿ ಉದಿಸಿದೆ ! ಅದರ ಹೆಸರು ಪ್ರೀತಿ! ಅದರ ರೀತಿ ಹಿಗ್ಗು ! ಅದನ್ನು ತಿಳಿದ ಅವರು ತಮ್ಮಲ್ಲಿರುವ ಆತ್ಮ ತತ್ವ ಒಂದೇ ಎಂದು ತಿಳಿದು ಬಾಳಿದಾಗ ಅದೇ ಮಧುಸಂಗಮ !

'ಅನ್ನಕೆ ಬಾಳಾಗಿ ಕಾಮಕೆ ಹೋಳಾಗಿ
ಮಾನಕೆ ಆಳಾಗಿ ಉಸಿರೆಳೆದುದು
ಬಾಳಲ್ಲ ಬದುಕಲ್ಲ, ಜೀವ ಜೀವಕೆ ಉ–
ದ್ದೀಪನವಾದುದೆ ಜೀವನವು.

ಅದು ಇದೆ ಎದೆಯಲ್ಲಿ, ಬೆಳಕಿನ ಬದಿಯಲ್ಲಿ
ರಸಗಂಗಾನದಿಯಲ್ಲಿ ಅದರುಗಮ
ಹೆಸರದಕೆ ಪ್ರೀತಿಯು, ಹಿಗ್ಗಿನ ರೀತಿಯು
ಆತ್ಮದ ನೀತಿಯು ಮಧುಸಂಗಮ.' (ಸಖೀಗೀತ)

(ವಿಜಯ ಕರ್ನಾಟಕ, ಬೋಧಿವೃಕ್ಷ 29.4.2011)

■



ಕೂಡಿರಲಿ ಬಾಳು ಇಡಿಗಾಳಿನಂತೆ

ಇಂದು ಎಲ್ಲ ಮಾಧ್ಯಮಗಳಲ್ಲಿ ಪ್ರೀತಿ, ಪ್ರೇಮದ ಹುಚ್ಚು ಹೊಳೆಯೇ ಹರಿಯುತ್ತಿದೆ. ಯುವ ಜನರು ತಮ್ಮ ಗೆಳತಿಯರನ್ನು 'you are sexy' ಎಂದು ಎಲ್ಲರ ಮುಂದೆ ನುಡಿವ ನುಡಿ ಒಂದು ಮುಜುಗರದ ಎಲ್ಲೆಯನ್ನು ಮೀರಿನಿಂತಿದೆ. ದುರದೃಷ್ಟದ ಸಂಗತಿ ಏನೆಂದರೆ ಈ ಮಾತನ್ನು ಹೊಗಳಿಕೆ ಎಂದೇ ತಿಳಿಯುತ್ತಾರೆ ನಮ್ಮ ಹುಡುಗಿಯರು. ಹೆಣ್ಣಿಗೆ ಇರಬೇಕಾದ ನಾಚಿಕೆ, ಗೌಪ್ಯವು ಮಸುಕಾಗುತ್ತ ಮುಕ್ತಾಭಿವ್ಯಕ್ತಿಯತ್ತ ಸಾಗಿದೆ. ಪುರುಷನಾದವನು ತಾನು ಆಕೆಗೆ ಹೆಚ್ಚು ಸ್ವಾತಂತ್ರ್ಯ ನೀಡಿದ್ದೇನೆ ಎಂಬ ಅಹಮಿಕೆಯಲ್ಲಿ, ಆಕೆಯ ಮಧುರ, ಸೂಕ್ಷ್ಮ ಭಾವನೆಗಳಿಗೆ ಕನ್ನ ಹಾಕಿ ಅವಳನ್ನು ಶೋಷಿಸುತ್ತಿದ್ದಾನೆ. ಇತರ ಪ್ರಾಣಿಗಳಿಗಿಂತ ಭಿನ್ನವಾದ ಮಾನವರು, ಕಾಮದ ನಿರ್ಭಿಡೆಯ ವರ್ತನೆಗೆ ಒಳಗಾಗಿ ಅದರ ಅಂತರ್ಯದ ಕಂಪಿನಿಂದ ದೂರವಾದಂತೆ ಕಂಡುಬರುತ್ತಿದೆ. ಇಂದು ಹೆಣ್ಣುಗಂಡಿನ ಪ್ರೀತಿ–ಪ್ರೇಮಗಳು ಸಾಮಾಜಿಕ, ವೈಯಕ್ತಿಕ ಮತ್ತು ನೈತಿಕ ನೆಲೆಗಳಲ್ಲಿ ಹಲವು ಪಲ್ಲಟಗಳನ್ನು ಉಂಟು ಮಾಡುತ್ತಿವೆ. ಅಲ್ಲಿ ಆತಂಕ, ಆಘಾತಗಳಿಗೆ ಒಳಗಾಗಿ ಹೆಚ್ಚು ದೈಹಿಕ ಮತ್ತು ಮಾನಸಿಕ ನೋವು ಅನುಭವಿಸುತ್ತಿರುವವಳು ಹೆಣ್ಣೇ ಆಗಿದ್ದಾಳೆ. ಇಂತಹ ಪರಿಸ್ಥಿತಿಯಲ್ಲಿ ಕಾಮದ ಆಕರ್ಷಣೆಯಲ್ಲಿ ಪ್ರೇಮದ ಮಧುರ ಬಂಧದಲ್ಲಿ ಒಂದಾಗಿ ಉತ್ತಮ ಸಾಮಾಜಿಕ, ವೈಯಕ್ತಿಕ, ಆರ್ಥಿಕ ನೆಲೆಗಟ್ಟಿನಲ್ಲಿ ಸುಖಿಸುವುದಕ್ಕೆ ಅನುರಾಗ ಕಾವ್ಯದ ದ್ರಷ್ಟಾರ ಬೇಂದ್ರೆಯವರ ಕಾವ್ಯವನ್ನು ತಿಳಿಯುವುದು ತುಂಬಾ ಅವಶ್ಯಕವೆನಿಸಿದೆ.

ಈ ಜಗದ ಸೃಷ್ಟಿಯ ಆದಿಯಿಂದ ಹೆಣ್ಣು ಗಂಡಿನ ಪರಸ್ಪರ ಆಕರ್ಷಣೆ ಆಯಸ್ಕಾಂತ ಗುಣದಂತಿದೆ. ಉತ್ತರ ಮತ್ತು ದಕ್ಷಿಣ ಧ್ರುವವಾದ ಅವು ಸದಾ ಒಂದಕ್ಕೊಂದು ಸೆಳೆತಕ್ಕೆ ಒಳಗಾಗಿ ಬಳಿ ಸಾರುತ್ತಿವೆ.

ವಾರಿನೋಟ ಹಾರುತಿತ್ತೋ ಹೊಳಿಮ್ಯಾಗ
ಹೊಸಾ ಹರೆ ಈಸತಿತ್ತೋ ಹೊಳಿಯಾಗ

* * *

ಸೂಜಿಗಲ್ಲು ತಿರುಗುತಿತ್ತೋ ಹೊಳಿಮ್ಯಾಗ
ಸೂಜಿಯೊಂದು ತೇಲುತಿತ್ತೋ ಹೊಳಿಯಾಗ (ವಾರಿನೋಟ)

ಆ ಆಕರ್ಷಣೆಗೆ ಇಬ್ಬರೂ ಒಳಗಾಗುತ್ತಾರೆ. ಅದು ಜಗದ ಮುಂದುವರಿಕೆಗೆ ಜಗದ ಸೃಷ್ಟಿಕರ್ತ ಮಾಡಿರುವ ಮಾಟ, ಅದನ್ನು ಹಿಡಿದು ಅನುಭವಿಸದಿದ್ದರೆ ಕಳೆದು ಹೋದೀತು ಎಂಬ ಭಾವದಲ್ಲಿ ಅವರಿರುತ್ತಾರೆ. ಸಮುದ್ರದಲ್ಲಿ ಎದ್ದ ಒಂದು ಅಲೆ ನೋಡು ನೋಡುವಷ್ಟರಲ್ಲಿ ಇಲ್ಲವಾಗುವಂತೆ ಯೌವನ ಎಂಬುದು ನಮ್ಮಿಂದ ಹಾರಿಹೋಗಿರುತ್ತದೆ. ಆದರೆ ಅಲ್ಲಿ ಬಂಧನಕ್ಕೆ ಒಳಗಾದ ಜೀವಗಳು ಈ ಜೀವವಿರುವ ತನಕ ಸೇರಿ ಬಾಳುವುದು ಭಾರತೀಯ ಕೌಟುಂಬಿಕ ನೆಲೆಯ ಆದರ್ಶವಾಗಿದೆ. ಅದನ್ನು ಅರಿತು 'ಜೀವನ ಕಲ್ಯಾಣ'ಕ್ಕಾಗಿ ಸಖಿಯನ್ನು ಕರೆಯಬೇಕು.

ಹರಯೆಂಬೋದು ತೆರಿಹಾಂಗ
ಬಂತ ಅಂತ ಹೊರಟಿತು ಬ್ಯಾಗ ॥
ಬಾ ಸಿಂಗಾರದ ಬ್ಯಾಟಕಽ
ಮುಗಿಯಽದ ಆಟಕಽ ॥

ಆ ಸುಖದಲ್ಲಿ ಪುರುಷ ತನ್ನ ಮಿತಿಗಳನ್ನು ತಿಳಿದು, ಆ ಗೆಳತಿಯ ಮೌಲ್ಯವನ್ನು ಅರಿತು ನಡೆಯಬೇಕು. ಹೆಣ್ಣಿನಿಂದ ಪುರುಷನಿಗೆ ಎಲ್ಲ ಸುಖ, ಸೌಲಭ್ಯ, ಶಾಂತಿ, ಸಮಾಧಾನ ದೊರೆತಿದೆ. ಅವನೊಬ್ಬ ಒರಟು ಬಂಜರು ನೆಲ. ಅದನ್ನು ಸಾಗು ಮಾಡಿ ಅದು ಜಗಕ್ಕೆ ಬೆಳೆ ನೀಡುವಂತೆ ಮಾಡುವುದು ಒಕ್ಕಲಿತಿಯಾದ ಹೆಣ್ಣು. ಆ ಅರಿವನ್ನು ಪುರುಷನಿಗೆ ಬೇಂದ್ರೆ ಕಾವ್ಯ ಹೀಗೆ ನೀಡಿದೆ.

'ಹಾಳು ಮಾತುಗಳೇಕೆ? ಬೇರೆ ಲಕ್ಷಣ ಬೇಕೆ?
ನೀ ನೊಕ್ಕಲಾಗಿ ನಿಂತೆ.
ಬೀಳು ಬಿದ್ದಿಹ ಹೊಲವ ಸಾಗು ಮಾಡೆನ್ನೊಡತಿ
ನನ್ನ ಒಕ್ಕಲಿಗನಂತೆ' (ಗೆ–5)

ಗಂಡು ಹೆಣ್ಣಿನ ಸಂಬಂಧದಲ್ಲಿ ಬರೀ ಮೋಹ ಮಾತ್ರವಿದ್ದರೆ ಅದು ಅಭದ್ರತೆ, ಭವಿಷ್ಯದ ಬಗೆಗೆ ಅನಿಶ್ಚಿತತೆ ತಂದೊಡ್ಡುತ್ತದೆ. ಪರಸ್ಪರರು ಸ್ವಾಮ್ಯ ಭಾವಕ್ಕೆ ಒಳಗಾಗಿ ಅಪನಂಬಿಕೆಗೆ ಈಡಾಗುತ್ತಾರೆ. ಅವರು ಒಬ್ಬರು ಇನ್ನೊಬ್ಬರನ್ನು ಕಳೆದುಕೊಳ್ಳುವ ಭಾವಕ್ಕೆ ಒಳಗಾಗಿರುತ್ತಾರೆ. ಆ ಮೋಹವು ಪ್ರೇಮವಾಗಿ ಪರಿವರ್ತನೆಗೊಂಡು ಅದರ ವಿಶಾಲ ಹರಹಿನಲ್ಲಿ ಒಬ್ಬರು ಇನ್ನೊಬ್ಬರನ್ನು ಆಪ್ತವಾಗಿಸಿಕೊಳ್ಳಲು ಮದುವೆ ಒಂದು ಸಾಮಾಜಿಕ ವ್ಯವಸ್ಥೆಯಾಗಿದೆ. ಕಾಮದಲ್ಲಿ ಅರಳಿದ ಪರಸ್ಪರ ನಂಬಿಕೆಯ ಆಹ್ಲಾದವೇ ಪ್ರೇಮ. ಪತಿ ಪತ್ನಿಯರು ಒಂದು ಇಡಿಗಾಳಿನಂತಿರಬೇಕು. ಬೇಳೆಯಾಗಿ ಒಡೆದು ಹೋಗಬಾರದು. ಇಡಿಗಾಳಿನಲ್ಲಿ ಮೊಳಕೆ ಹೊಮ್ಮುತ್ತದೆ. ಅವು ಒಟ್ಟಿಗಿದ್ದುದರ ಸಂಕೇತ ಈ ಜಗಕ್ಕೆ ಒದಗುತ್ತದೆ. ಅದು ದಾಂಪತ್ಯದ ಜೀವ ಪೋಷಕ ತತ್ತ್ವ

'ಮಾಡದಿರು ಬಾಳನ್ನು ಬೇಳೆಯಂತೆ
ಕೂಡಿರಲಿ ಬಾಳು ಇಡಿಗಾಳಿನಂತೆ' (ಮನದನ್ನೆ)

ಬೇಂದ್ರೆಯವರು ಸೀದಾ ಸಾದಾ ಮನುಷ್ಯರಾಗಿದ್ದು ಸರಳ ಜೀವಿಗಳಾಗಿದ್ದರು. ಅವರ ನಿಷ್ಕಲ್ಮಶ ಜೀವನ ಪ್ರೀತಿ ಅವರನ್ನು ಉದಾತ್ತ ಚಿಂತನೆಗಳತ್ತ ವಿಹರಿಸುವಂತೆ ಮಾಡುತ್ತಿತ್ತು. ಹೊರಗಿನ ಬೆಡಗು ಬಿನ್ನಾಣಕ್ಕಿಂತ ಆಂತರಿಕ ಚೆಲುವನ್ನು ಅವರು ತಮ್ಮ ಬಲವಾಗಿಸಿಕೊಂಡಿದ್ದರು. ಹೊರಗಣ ಲಾವಣ್ಯಗಳು ಕುಂದಿ ಬಣ್ಣಗೆಡುತ್ತವೆ ಎಂಬ ಅರಿವಿನೊಡನೆ ಅವರು ಒಳಗಿನ ಪ್ರೀತಿ, ವಿಶ್ವಾಸ, ಗೌರವ, ವಿನಯ, ಆತ್ಮಸ್ಥೈರ್ಯ ವನ್ನೊಳಗೊಂಡ ಸೌಂದರ್ಯಾನುಭವವನ್ನು ತಮ್ಮ ಕಾವ್ಯದಲ್ಲಿ ಪ್ರಕಟಪಡಿಸಿದರು. ಆ ಸೌಂದರ್ಯಪ್ರಜ್ಞೆಗೆ ಒಳಗಾದ ಸಹೃದಯ ತನ್ನ ಮನದ ಹಿಗ್ಗಿನಲ್ಲಿ ವಿಕಾಸಗೊಂಡಿದ್ದು ಕನ್ನಡ ಸಂಸ್ಕೃತಿಯ ಬೆಡಗು.

'ಸೌಂದರ್ಯವೆಂಬುದು ಕಣ್ಣಿನ ತುತ್ತಲ್ಲ
ಕಣ್ಣಿಗೂ ಕಣ್ಣಾಗಿ ಒಳಗಿಹುದು
ರೂಪ-ಲಾವಣ್ಯಕೆ ಅಳೆಯಲು ಬಾರದು
ಅವುಗಳೆ ಇದರೊಂದು ಕಣವಿಹವು' (ಸಖಿಗೀತ)

ಬೇಂದ್ರೆಯವರು ಅಸ್ಥಿರವಾದ ಬಣ್ಣ, ಹೊಳಪು, ಮೆರುಗುಗಳಿಗಿಂತ ಹೃದಯದಲ್ಲಿ ಶಾಶ್ವತವಾಗಿರುವ ಸತ್ಯ, ಶಾಂತಿ, ಪ್ರೀತಿಗಳಿಗೆ ತಮ್ಮ ಕಾವ್ಯದಲ್ಲಿ ಸ್ಥಾನವನ್ನು ಕೊಟ್ಟರು. ಅವುಗಳನ್ನು ಅಪ್ಯಾಯಮಾನವಾಗಿ ಒಂದು ಮಧುರ ಭಾವದಂತೆ ಚಿತ್ರಿಸುತ್ತಲೇ ಅದು ನೀಡುವ ಮಾನವತಾವಾದದ ಕಡೆಗೆ ಸಹೃದಯರನ್ನು ಕೊಂಡೊಯ್ದರು. ಪ್ರಾಪಂಚಿಕವಾದ ಸುಖ ಸಂತೋಷದಲ್ಲಿಯೇ ಶಾಶ್ವತವಾದ ಜೀವನ ಮೌಲ್ಯಗಳನ್ನು ಅತಿ ಸೂಕ್ಷ್ಮವಾಗಿ ಕಾವ್ಯದಲ್ಲಿ ಹೆಣೆದರು. ಆ ಒಂದು ವಿಶಿಷ್ಟ ಕಾವ್ಯಶೈಲಿ ಅವರ ಅಧ್ಯಾತ್ಮಿಕ ಮನೋಲಹರಿಯ ಭಾವವೂ ಆಗಿತ್ತು. ಅದು ಜಗದ ಹೆಣ್ಣು ಗಂಡುಗಳನ್ನು ತಮ್ಮ ನಿಜ ನೆಲೆಯ ಅರಿವಿನಲ್ಲಿ ವಿಕಾಸಪಥದತ್ತ ಕೊಂಡೊಯ್ಯುವುದಾಗಿತ್ತು. ಆಕರ್ಷಣೆ, ಮೋಹ, ಪ್ರಲೋಭನೆಗಳ ಪರಿಧಿಯಲ್ಲಿಯೇ ಚಿತ್ರಣವನ್ನು ನೀಡುತ್ತ, ಅದರಿಂದ ಭಂಗನೆ ಏರಿ ಪ್ರೀತಿ ಪ್ರೇಮದ ಆತ್ಮೀಯ ಭಾವದಲ್ಲಿ ಸ್ಥಿರಗೊಳ್ಳುವಂತೆ ಮಾಡುವ ಬೇಂದ್ರೆ ಕನ್ನಡ ಕಾವ್ಯಲೋಕದ ಅಚ್ಚರಿ.

'ಪ್ರೇಮಾನಃ ಪಲ್ಲವಿಸಃದ ಕಾಮದ ಕಾವಿನ್ಯಾಗ
ದೇವ- ದಾನವ- ಮಾನವರೆಲ್ಲಾ ಬೂದಿ.
ಎಷ್ಟು ಓದಿ, ಏನು ಓದಿ, ಊದುಗೊಳವೀ ಗಾಳೀ ಬಾಳು
ಕೊಳಲೀನ ದನಿ ಬರಲಿ ಸನಿ.' **(ಪರಾಕಿ)**

(ವಿಜಯ ಕರ್ನಾಟಕ, ಸಾಪ್ತಾಹಿಕ, ಲವಲವಿಕೆ, 30.1.2011)

■



ಗಮಗಮಾ ಗಮಾಡಸತಾವ ಮಲ್ಲಿಗಿ

ಪ್ರಿಯರ ಅಗಲಿಕೆಯ ವಿಪ್ರಲಂಭ ಶೃಂಗಾರದ, ಕಾವ್ಯನಾಯಕಿ ಮುಡಿದ ಮಲ್ಲಿಗೆಯ ಕಂಪಿನೊಂದಿಗೆ ಹರಿದಾಡುವ ಮನಮೋಹಕ ಕವನ–ಗಮಗಮಾ ಗಮಾಡಸತಾವ ಮಲ್ಲಿಗಿ. ಹೆಣ್ಣಿನ ರಾಗಭಾವಗಳು ನಿಖರ ನೆಲೆ ಕಾಣದೆ ವಿರಹದ ಆವರಣದಲ್ಲಿ ಸಿಲುಕಿದ ಪ್ರತಿಕ್ಷಣದ ಸೂಕ್ಷ್ಮ ಭಾವ ಲಹರಿಯ ಈ ಕವನ ರಸಿಕರ ಆಹ್ಲಾದವಾಗಿದೆ. ಶೃಂಗಾರದ ರಸಾನುಭಾವವನ್ನು ಅಪೇಕ್ಷಿಸುವ ಕಾವ್ಯನಾಯಕಿಯ ಹೃದಯದ ಮಿಡಿತ ಪ್ರಕೃತಿಯ ಪ್ರತಿಮೆಗಳಲ್ಲಿ ಅಪೇಕ್ಷಾಲಂಕಾರವನ್ನು ಸೃಷ್ಟಿಸಿದೆ.

ಪ್ರಕೃತಿ ಸಹಜ ರತಿ ಅಪೇಕ್ಷೆ ಅವಳ ದೇಹ ಪ್ರಕೃತಿಯಲ್ಲಿ ಮಿಡುಕಾಡಿರುವ ರೀತಿಯನ್ನು ಬೇಂದ್ರೆಯವರು ಕಟ್ಟಿಕೊಟ್ಟಿರುವ ಬಗೆಯು ಹೊಸತಾಗಿ, ಸಹೃದಯನನ್ನು ತನ್ನತ್ತ ಸೆಳೆಯುತ್ತದೆ.

ಗಮಗಮಾ ಗಮಾಡಸತಾವ ಮಲ್ಲಿಗಿ
ನೀ ಹೊರಟಿದ್ದೀಗ ಎಲ್ಲಿಗಿ ?
ತುಳುಕ್ಯಾಡತಾವ ತೂಕಡಿಕಿ
ಎವಿ ಅಪ್ಪತಾವ ಕಣ್ಣ ದುಡುಕಿ
ಕನಸು ತೇಲಿ ಬರತಾವ ಹುಡುಕಿ ॥
ನೀ ಹೊರಟಿದ್ದೀಗ ಎಲ್ಲಿಗಿ ? (ಗಂಗಾವತರಣ)

ಕಾವ್ಯ ನಾಯಕಿಯ ವಿರಹ ಇಡೀ ರಾತ್ರಿಯನ್ನು ಆವರಿಸಿ, ಅವಳ ವಿರಹ ವೇದನೆ ಮತ್ತೂ ಹಿರಿದಾಗುವಂತಹ ರೂಪಕವನ್ನು ಬೇಂದ್ರೆ ಸೃಷ್ಟಿಸಿದ್ದಾರೆ.

ಚಿಕ್ಕಿ ತೋರಸ್ತಾವ ಚಾಚಿ ಬೆರಳ
ಚಂದ್ರಾಮ ಕನ್ನಡೀ ಹರಳ
ಮನ ಸೋತು ಆಯಿತು ಮರುಳ ॥

ವಿರಹ ಅವಳ ಸ್ವಂತ ಅನುಭವವಾಗಿ ವೃದ್ಧಿಗೊಳ್ಳುತ್ತ ಇಡೀ ಪ್ರಕೃತಿಯನ್ನು ಆವರಿಸಿಕೊಂಡು ಅವಳ ಸೂಕ್ಷ್ಮ ಮಧುರ ಪ್ರೇಮ ಭವ್ಯ ಭಾವಾವರಣಕ್ಕೆ ಸಹೃದಯನನ್ನು

ಕೊಂಡೊಯ್ಯುತ್ತದೆ. ಅದು ವ್ಯಷ್ಟಿಯ ಭವ್ಯಾನುಭವವಾಗದೆ ಸಮಷ್ಟಿಯ ಭವ್ಯಾನುಭವವಾಗುತ್ತದೆ. ಅದು ಕವಿಯ ಶ್ರೇಷ್ಠ ಕರ್ಮ ಕೌಶಲ.

ಗಾಳಿ ತಬ್ಬತಾವ ಹೂಗಂಪ
ಚಂದ್ರನ ತೆಕ್ಕಿಗಿದೆ ತಂಪ
ನಿನ ಕಂಡರ ಕವದಾವ ಜೊಂಪ ॥

ಕಾವ್ಯ ನಾಯಕಿಯ ಪ್ರೇಮಾಕಾಂಕ್ಷೆಯಂತೆಯೇ ನಿಸರ್ಗದ ಸುಂದರ ಪ್ರೇಮಾಕಾಂಕ್ಷೆಗೆ ಜೀವ ಬಂದಂತಿದೆ ಬೇಂದ್ರೆ ಸೃಷ್ಟಿಸಿರುವ ಪ್ರತಿಮೆಗಳಲ್ಲಿ:

ನೆರಳಲ್ಲಾಡತಾವ ಮರದ ಬುಡಕ
ಕೆರೆ ತೆರಿ ನೂಗತಾವ ದಡಕ
ಹೀಂಗ ಬಿಟ್ಟು ಇಲ್ಲಿ ನನ್ನ ನಡಽಕ ॥
ನೀ ಹೊರಟಿದ್ದೀಗ ಎಲ್ಲಿಗಿ ?

ಲೋಕ ಪ್ರಕೃತಿಯ ಸಹಜ ನಡೆಯೂ ಇಲ್ಲಿ ಕಾವ್ಯಧ್ವನಿಯಾಗಿದೆ. ನಿಸರ್ಗದ ಸ್ವಭಾವಸಿದ್ಧ ಲಕ್ಷಣಗಳು ಇಲ್ಲಿ ವಿಪ್ರಲಂಭ ಶೃಂಗಾರವನ್ನು ಧ್ವನಿಸುತ್ತವೆ. ಕಾವ್ಯದ ನಾಯಿಕೆ ವಿರಹಿಣಿಯ ಅಗಲಿಕೆಯನ್ನು ಪ್ರಕೃತಿಯು ತಾನು ಅನುಭವಿಸುತ್ತಿದೆ ಎಂಬ ಪರಿಸರ ಸೃಷ್ಟಿ ಕವಿಯ ಚತುರ ಕಾವ್ಯ ನಿರ್ಮಿತಿಯಾಗಿದೆ. ಅದು ಉತ್ಪ್ರೇಕ್ಷಾಲಂಕಾರ ವೆನಿಸದೆ, ಭಾವಸಂದರ್ಭದಿಂದ ಸ್ವಭಾವೋಕ್ತಿಯಾಗಿ ಸಹೃದಯನನ್ನು ವಿರಹ ಭಾವದಲ್ಲಿ ಮೀಯುವಂತೆ ಮಾಡುತ್ತದೆ.

ಕಾವ್ಯನಾಯಕಿಯ ವಿರಹದ ಅಂತರ್ವೇದನೆಗೆ ಪ್ರಕೃತಿಯಲ್ಲಿ ಇಂದ್ರಿಯ ಗೋಚರವಾಗುವ ಪ್ರತಿಮೆಗಳು ಅವಳ ದೇಹ ಮತ್ತು ಮನದ ಬಯಕೆಗಳ ಜೊತೆ ಸ್ಪರ್ಧೆ ಹೂಡಿದಂತಿವೆ.

ನಾವು ಬಂದೆವಲ್ಲಿದಿಲ್ಲಿಗಿ
ಬಾಯಿ ಬಿಟ್ಟವಲ್ಲ ಮಲ್ಲಿಗಿ
ನೀರೊಡೆದಿತಲ್ಲ ಕಲ್ಲಿಗಿ ॥
ನೀ ಹೊರಟಿದ್ದೀಗ ಎಲ್ಲಿಗಿ ?

ಇದು ಬರಿ ನಿರೀಕ್ಷೆ ಅಲ್ಲ. ಬಯಕೆ, ಆಕಾಂಕ್ಷೆ ಕಾವ್ಯಾಲಂಕಾರವಾಗಿ ರೂಪುಗೊಂಡ ವಿಶಿಷ್ಟ ಶೃಂಗಾರದ ಬೆಡಗು. ಸುಂದರ ನಿಸರ್ಗದಲ್ಲಿ ಪ್ರೇಮಾನುರಾಗ ಅತೀ ಸಹಜವೆಂದು ತಿಳಿದು ಅದರ ಪ್ರಣಯದಾಟವನ್ನು ಬೇಂದ್ರೆ ವರ್ಣಿಸಿರುವ ರೀತಿ ಅನನ್ಯವಾಗಿದೆ. ಇಡೀ ಕವನ ಕಾವ್ಯನಾಯಕಿಯ ಪ್ರಣಯದಾಸೆಯ ರೂಪಕ ಪ್ರತಿಮೆಯಾಗಿದೆ. ಶೀಲವಂತ ಹೆಣ್ಣಿನ ಅತಿ ಸಹಜ ಶೃಂಗಾರಾಪೇಕ್ಷೆಯ ಸುಸಂಸ್ಕೃತ ಒಲವು ಎಲ್ಲ ಕನ್ನಡಿಗರ ಪ್ರಿಯ ಮನದ ಗುನುಗಾಗಿ ಉಳಿದಿದೆ. ಇದು ಮೋಹವನ್ನು ಹಿಡಿತದಲ್ಲಿಟ್ಟುಕೊಂಡು ಭಾವವನ್ನು ಪ್ರತಿಮಿಸಿದ ಶ್ರೇಷ್ಠ ಕವನವಾಗಿದೆ.

(ವಿಜಯ ಕರ್ನಾಟಕ, ಸಾಪ್ತಾಹಿಕ, ಲವಲವಿಕೆ, 13.9.2013)

■



ಜೀವ ಜೀವ್ಗಳ ನೋತವು

ಪೂತ ಚೆಲುವಲಿ ಪಟ್ಟಿತು
ಒಲವಿನೊಲವನು ಒಟ್ಟಿತು (ನಾದಲೀಲೆ: ಕವನ)

ಕವನವೆಂದರೆ ಬೇಂದ್ರೆ ಅವರಿಗೆ ಅರಳಿದ ಹೂವು. ಅದು ಕಂಪು ಬೀರಿ ಚೆಲುವನ್ನು ಅನುಭವಿಸುತ್ತದೆ. ಅದು ಪೂತ ಚೆಲುವು. ಅಂದರೆ ಶುದ್ಧ, ಪವಿತ್ರ ಸೌಂದರ್ಯ. ಅದೇ ಅದರ ಸಂತಸ. ಅದರ ಕಂಪು ಸವಿದ ರಸಿಕನ ಸಂತೋಷಾನುಭವವೇ ಅವನ ಮನುಜ ಜನ್ಮದ ಸಾಫಲ್ಯ. ಹೀಗೆ ನಿಸರ್ಗ ನೀಡಿದ ಪಂಚೇಂದ್ರಿಯಗಳ ಆನಂದದಲ್ಲಿ ಮನುಷ್ಯ ನಲಿಯುತ್ತಾನೆ. ಆ ನಲಿವು ಅವನನ್ನು ಪ್ರೀತಿಯ ಹದಕ್ಕೆ ತರುತ್ತದೆ. 'ನಲ್'ನ ಆಹ್ಲಾದದಲ್ಲಿ ಒಲವನ್ನು ಕಾಣುತ್ತ ಪ್ರಕೃತಿಯಲ್ಲಿ ಒಂದಾಗುತ್ತಾನೆ.

ಕವನವು 'ಒಲವಿನೊಲವನು ಒಟ್ಟಿತು' ಎಂಬ ಸೂಕ್ಷ್ಮಾತಿಸೂಕ್ಷ್ಮ ಭಾವಕ್ರಿಯೆಯನ್ನುಂಟು ಮಾಡುತ್ತದೆ. 'ಕವನ' ಎಂಬುದು ತೂರಿಕ್ಕಿದ ಧಾನ್ಯ. ಅದು ಒಲವಿನಿಂದ ಒಕ್ಕಿದ–ಒಟ್ಟುಗೂಡಿಸಿ, ರಾಶಿ ಮಾಡಿದ, ಸ್ವಚ್ಛ ಮನದ ಭಾವ. ಜೀವಪೋಷಕ ದ್ರವ್ಯ.

ಜೀವ ಜೀವ್ಗಳ ನೋತವು ।
ಸವಿಯ ಸುಗ್ಗಿಗೆ ಸೋತವು ।

ಕವನ ಮಾಡುವ ಅದ್ಭುತ ಕೆಲಸವೆಂದರೆ ಜೀವ ಜೀವಗಳು ಒಲಿಯುವ ಹಾಗೆ ಮಾಡುವುದು. ಓತು ಅಂದರೆ ಪ್ರೀತಿಸು. ಅದು ಉಂಟು ಮಾಡುವ ಸವಿ ಎಂದರೆ ಸುಗ್ಗಿಗೆ ಸೋತು ಅದರಲ್ಲಿ ಆನಂದ, ಆಹ್ಲಾದ, ನೆಮ್ಮದಿ ಪಡುವ ಶಾಂತ ಸ್ಥಿತಿ.

ಬೇಂದ್ರೆ ಅವರು ತಮ್ಮ ಕಾವ್ಯದಲ್ಲಿ 'ಓತು' ಪದ ಬಳಸಿದಾಗ 'ಸೋತು' ಎಂಬ ಪದವನ್ನು ತಪ್ಪದೆ ಸೇರಿಸಿದ್ದಾರೆ. ಅದು ಪ್ರಾಸಕ್ಕಾಗಿ ಸೇರ್ಪಡೆಯಾದುದು ಎಂದು ಮೇಲ್ನೋಟಕ್ಕೆ ಕಾಣುತ್ತದೆ. ಆದರೆ ಆಂತರ್ಯದಲ್ಲಿ ಒಲವಿನಲ್ಲಿ ಒಂದಾದ ಜೀವಿಗಳು

ಪರಸ್ಪರರಿಗೆ ಸೋಲುವುದು ಸಹಜ. ಹಾಗಾಗಿ ಆ ಪ್ರೀತಿಯ ಸೆಳೆತದಲ್ಲಿ ಸೋಲುವ ಹಾಗೆ ಸೋತು ಗೆಲ್ಲುವ ಪ್ರೇಮದ ನವಿರು ಅಲ್ಲಿದೆ. ಅದು ದಾಂಪತ್ಯದ ಸಹಜ ಭಾವದ ಪ್ರೇಮಲಹರಿಯ ಏರು ಇಳಿವು.

ಓತು ಆಡಿದ ಮಾತು
ಸೋತು ಆಡಿದ ಮಾತು
ಒಲವಿನೋತಪ್ರೋತವಾದ ಮಾತು (ನಮನ: ತೂತುಮಾತು)

'ನಲ್ಲ ನಲ್ಲೆಯರ ಲಲ್ಲೆ'ಯಲ್ಲಿ ನಲ್ಲ ಹೇಳುತ್ತಾನೆ :

'ನಲ್ಲೆ ! ನಿನ್ನ ಲಲ್ಲೆವಾತು
ಮುಗುಳುನಗೆಯಲಲ್ಲೆ ಹೂತು
ಸೋತು, ಓತು, ಬಂತು, ಹೋತು
ನಲ್ಲೆ, ನಿನ್ನ ಲಲ್ಲೆ ವಾತು ?' **(ಸಖೀಗೀತ)**

ಆ ನಲ್ಲೆಯ ಮಾತು ಮುಗುಳುನಗೆಯಲ್ಲಿ ಹೂತು ಹೂಬಿಟ್ಟು ಕಂಪಾಗಿ, ಸೋತು ಪ್ರೀತಿಸಿ ಬಂತು, ಹೋತು ! ಅದಕ್ಕೆ ನಲ್ಲೆ ನುಡಿಯುತ್ತಾಳೆ :

ನಲ್ಲ ! ನಿನ್ನ ಲಲ್ಲೆವಾತು
ಮೀಸೆ ಕುಡಿಯಲಲ್ಲೆ ಹೂತು
ಕುಣಿದು, ಮಣಿದು ಬಂತು, ಹೋತು
ನಲ್ಲ. ನಿನ್ನ ಲಲ್ಲೆವಾತು.'

ಅದಕ್ಕೆ ರಸಿಕ ನಲ್ಲನ ನುಡಿ:

'ನಲ್ಲೆ ! ನಿನ್ನ ಲಲ್ಲೆವಾತು
ಕಣ್ಣ ಕಿರಣದಲ್ಲಿ ನೂತು,
ನೇತು, ಜೋತು, ಬಂತು, ಹೋತು
ನಲ್ಲೆ, ನಿನ್ನಲಲ್ಲೆವಾತು.

(ಆಕಾಶವಾಣಿ–ಚಿಂತನ)

■



ಮಂಗಲವೆ ಬಾರೆಂದು ಕರೆಯುವಾಕೆ

ಈ ಪೃಥ್ವಿಯಲ್ಲಿ ಮಾನವನನ್ನು, ಸಂಸ್ಕೃತಿಯನ್ನು ರೂಪಿಸಿದ್ದು ಸ್ತ್ರೀಶಕ್ತಿ. ಅವಳು ಮೃಗನಾದ ಗಂಡಸನ್ನು ಮಾನವನನ್ನಾಗಿ ಮಾಡಿದ ಚೈತನ್ಯ ಶ್ರೀ. ತಾಯಿಯಾದ ಶಕ್ತಿಯ ರೂಪ ಗೃಹಿಣಿ. ಗೃಹಿಣಿಗೆ ದೊರೆತಿರುವ ಪ್ರಾಮುಖ್ಯ ಅವಳು ಸಾಧಿಸಿ ಪಡೆದದ್ದು.

ಬೇಂದ್ರೆಯವರಿಗೆ ಬಾಲ್ಯದಲ್ಲಿ ಅವರ ತಾಯಿ ಅಂಬವ್ವ ವಿಶದಪಡಿಸಿ ಹೇಳಿದ್ದನ್ನು ಅವರು 'ಬಾಲ್ಯಕಾಂಡ'ದಲ್ಲಿ ಹೀಗೆ ದಾಖಲಿಸಿದ್ದಾರೆ:

'ಹೆಣ್ಣು ಎನ್ನುವ ಮಾತು ತಾಯಿ ಎನ್ನುವ ಮಾತು
ಎರಡಲ್ಲ ಒಂದೆಂದು ತಿಳಿಸಿದಳು'.

ತಾಯಿ ಬೋಧಿಸಿದ 'ಹೆಣ್ಣೇ ತಾಯಿ' ಎಂಬ ತತ್ತ್ವವನ್ನು ಧ್ಯಾನಿಸುತ್ತಾ ಅವರು 'ಅಂಬಿಕಾತನಯದತ್ತ' ರಾದರು. ಸ್ತ್ರೀಯ ಬಗ್ಗೆ ಈ ರೀತಿಯ ಉನ್ನತ ಭಾವವಿದ್ದುದರಿಂದಲೇ ಅವರು ಸ್ತ್ರೀಯನ್ನು ಪುರುಷನಿಗಿಂತ ಉತ್ತಮಳೆಂದು ಹೇಳಲು ಸಾಧ್ಯವಾಯಿತು. ಅವರು 'ಗೃಹಿಣಿ' ಎಂಬ ಕವನದಲ್ಲಿ ಸ್ತ್ರೀ ಚೇತನವನ್ನು ಹೀಗೆ ಚಿತ್ರಿಸಿದ್ದಾರೆ:

'ಏಳು ಮೆಟ್ಟಿನ ಹುಲಿಯ ಬೀರಬೇಂಟೆಯ ಬಿಡಿಸಿ
ಮಗುವ ಮುದ್ದಾಡುವೊಲು ಮಾಡಿದಾಕೆ.
ಗುರಿಯಿಟ್ಟ ಕಣ್ಣುಗಳ, ಕಿವಿಯೂದಿ ಹೊರಳಿಸುತ
ತಾನೆ ತನ್ನಷ್ಟಕ್ಕೆ ಹಾಡಿದಾಕೆ.' (ಉಯ್ಯಾಲೆ)

ಮೃಗನಾದವನು ಮಾನವನಾಗುತ್ತ ಮಗುವನ್ನು ಮುದ್ದಾಡಿ ಪ್ರೀತಿ, ಸಹನೆ, ಶಾಂತಿ ಪಡೆದಾಗ ; ಅವನು 'ಗುರಿಯಿಟ್ಟ ಕಣ್ಣು'ಗಳಿಂದ ನೋಡಿದಾಗ ಅಂದರೆ 'to think of, to take aim, to keep in view' ಆದಾಗ ಅವಳು ಅವನನ್ನು ಗೃಹಸ್ಥನನ್ನಾಗಿ ಮಾಡಿದ್ದಾಳೆ. ಅವನನ್ನು ಪ್ರೇಮದ ಸೆಳೆತದಲ್ಲಿ ಸಂಸಾರಿಯಾಗಿಸಿ 'ಕಿವಿಯೂದಿ

ಹೊರಳಿಸುತ । ತಾನೆ ತನ್ನಷ್ಟಕ್ಕೆ ಹಾಡಿದಾಕೆ' ಆಗಿದ್ದಾಳೆ. ಮಾನವರು ಕುಟುಂಬರೂಪಿಗಳಾಗಲು ಕಾರಣಳಾಗಿದ್ದಾಳೆ.

ಅವನು 'ಗುರಿಯಿಟ್ಟ ಕಣ್ಣಿ'ನವನಾಗಿ ಬೇಟೆಯನ್ನು ಬಿಟ್ಟು ಒಂದೆಡೆ ನಿಂತಾಗ ಅವಳು 'ತಳಿರಿನುಡುಗೆಯನುಟ್ಟು ಗರಿ ತೊಡುವುಗಳ ತೊಟ್ಟು' ಸೌಂದರ್ಯವನ್ನು ಸೃಷ್ಟಿಸಿಕೊಳ್ಳುತ್ತ ಕಾಡಿನಲ್ಲಿ ಸಂಸ್ಕೃತಿಯು ಮೊದಲಾಗಲು ಕಾರಣಳಾಗಿದ್ದಾಳೆ. ಗಂಡ ಮಕ್ಕಳ ಪೋಷಣೆಗಾಗಿ ಅವಳೇ ಬೇಸಾಯದ ಬೆಳೆಯನ್ನು ಈ ಪೃಥ್ವಿಯಲ್ಲಿ ಮೊದಲು ಮಾಡಿದವಳು. ಈ ಎಲ್ಲ ಕಾರಣದಿಂದ ಬೇಂದ್ರೆಯವರು ಗೃಹಿಣಿಯನ್ನು 'ಅಡವಿಯಲಿ ಹೂದೋಟ ಹೂಡಿದಾಕೆ' ಎಂದಿದ್ದಾರೆ.

ಅರಣ್ಯದ ಪಶು ವೃತ್ತಿಯಿಂದ ಇಡೀ ಮನುಕುಲವನ್ನು ಪ್ರತ್ಯೇಕವಾಗಿಸಿ 'ಗೃಹಿಣಿ'ಯಾದ ಹೆಣ್ಣಿಗೆ ಮಕ್ಕಳೇ ಸರ್ವಸ್ವವಾಗಿದ್ದಾರೆ. ಅವಳು ತನ್ನ ಸಂತತಿಯ ಉಳಿವಿಗಾಗಿ ಪಶು ಪ್ರಾಣಿಗಳೊಡನೆ ಹೋರಾಡಿ ಪ್ರಕೃತಿ ವಿಕೋಪ ಕಂಡು ಅದರಿಂದಲೂ ತನ್ನನ್ನು ತನ್ನವರನ್ನು ರಕ್ಷಿಸಿಕೊಳ್ಳಲು ಪ್ರಕೃತಿಯನ್ನು ಪ್ರಾರ್ಥಿಸಿದ್ದಾಳೆ. ಹೀಗೆ ಪಂಚಭೂತಗಳ ಆರಾಧನೆಯನ್ನು ಪ್ರಾರಂಭಿಸಿದವಳು ಹೆಣ್ಣು ಎಂದು ಬೇಂದ್ರೆಯವರು 'ಬೇರೊಂದು ಲೋಕವನ್ನು ಮೂಕ ಮಾತುಗಳಿಂದ ಬೇಡಿದಾಕೆ' ಎಂದಿದ್ದಾರೆ.

'A wife, Verily, is home' (ದಿಟವಾಗಿ ಹೆಂಡತಿಯೇ ಗೃಹ) ಎಂದು ಋಗ್ವೇದ ಸಾರಿದೆ. ಹೀಗೆ ಸಂಸ್ಕೃತಿ ರೂಪಿಯಾದ ಮಹಿಳೆ ಇಡೀ ಕುಟುಂಬಕ್ಕೆ ಮಂಗಲಮಯಿ ಯಾಗಿದ್ದಾಳೆ. ಅವಳು ಭಾರತೀಯ ಆರ್ಷ ಸಂಸ್ಕೃತಿಯನ್ನು ರೂಪಿಸಿದವಳು. ಬೆಳಗ್ಗೆ ಎದ್ದು ಮನೆಯ ಮುಂದೆ ನೀರು ಚಿಮುಕಿಸಿ ರಂಗೋಲಿ ಹಾಕಿ ತನ್ನ ಒಳಗಿನ ಕಲೆಯನ್ನು ಪ್ರತಿ ದಿನ ಅನಾವರಣಗೊಳಿಸುತ್ತ ಕಲೆಯ ಪೋಷಕ ಶಕ್ತಿ ಆಗಿದ್ದಾಳೆ. ಅದು ಅವಳ ಗೃಹ ಲಕ್ಷಣದ ಪ್ರತೀಕ. ಇಡೀ ಕುಟುಂಬದ ಕಲೆ, ಸಾಹಿತ್ಯ, ಸಂಗೀತದ ಪ್ರಕಟರೂಪ.

ಹೊಸ್ತಿಲನ್ನು ತೊಳೆದು ಶುಭ ಸಂಕೇತ ಹರಿಷಿಣ ಕುಂಕುಮ ಹಚ್ಚಿ 'ಮನೆಯ ಹೊಸ್ತಿಲಕೆ ಶುಭ ಬರೆಯು'ತ್ತಾಳೆ. ಹಾಗೆ ಬರೆಯುವಾಗ ತನ್ನ ಮನದ ಆನಂದವನ್ನು ಮಂಗಳ ಹಾಡುಗಳಲ್ಲಿ ಹೇಳುತ್ತಾ ಮಧುರ ಕುಟುಂಬದ ನಾದದೇವಿ ಯಾಗುತ್ತಾಳೆ. ಆ ಮೂಲಕ ಇಡೀ ಕುಟುಂಬಕ್ಕೆ ಲೋಕಪೋಷಕ ಶಕ್ತಿಯಾದ ಅನಂತಶಕ್ತನು ಬಂದು ಆಶೀರ್ವದಿಸಲು 'ಮಂಗಲವೆ ಬಾರೆಂದು' ಕರೆಯುತ್ತಾಳೆ. ಈ ನೆಲದ ಬಾಳ ಸುಳಿಯಲ್ಲಿ ಸಂತಸದ ಮಗುವಿನ ಬೆಳೆ ತಂದು ತನ್ನ ಇಡೀ ಕುಟುಂಬಕ್ಕೆ 'ದಿನ ದಿನವು ನವಜಯವ ಕೋರುವಾಕೆ' ಆಗಿದ್ದಾಳೆ.

'ಮನೆಯ ಹೊಸ್ತಿಲಕೆ ಶುಭ ಬರೆಯುವಾಕೆ.
ಮಂಗಲವೆ ಬಾರೆಂದು ಕರೆಯುವಾಕೆ.
ಬಾಳ ಸುಳಿಯಲಿ ಬೆಳೆಯ ತೋರುವಾಕೆ.
ದಿನದಿನವು ನವಜಯವ ಕೋರುವಾಕೆ.'

(ವಿಜಯ ಕರ್ನಾಟಕ, ಬೋಧಿವೃಕ್ಷ, 20.5.2017)

■



ನೀ ಹೀಂಗ ನೋಡಬ್ಯಾಡ ನನ್ನ

ವರಕವಿ ದ.ರಾ. ಬೇಂದ್ರೆಯವರ 'ನೀ ಹಿಂಗ ನೋಡಬ್ಯಾಡ ನನ್ನ' ಕವನ ದಾಂಪತ್ಯದ ಅತಿನೋವಿನ, ಮಗುವಿನ ಸಾವಿನ ಸಂದರ್ಭದ ಎದೆಮಿಡಿತ. ಅದು 1990ರಲ್ಲಿ 'ಪ್ರೇಮತರಂಗ' ಸಿನಿಮಾದಲ್ಲಿ ಪ್ರೇಮಗೀತೆಯಾಗಿ ಚಿತ್ರಿತವಾಗಿದ್ದು ತನ್ನ ಮೂಲಭಾವದಿಂದ ಚ್ಯುತವಾಗಿದೆ. ಅದು ಪ್ರೇಮಾಭಿವ್ಯಕ್ತಿಯ ಕುಣಿತದ ಸಂದರ್ಭದ್ದು ಅಲ್ಲ. ಅದು ದಾಂಪತ್ಯದ ನೋವು, ದುಗುಡ ದುಮ್ಮಾನ ಒಳಗೊಂಡದ್ದು.

* * *

ಸ್ತ್ರೀಯ ಸಂತಾನಶಕ್ತಿ ಪುರುಷನ ಪೌರುಷಕ್ಕಿಂತ ಸಹಸ್ರ ಪಾಲು ಮಿಗಿಲಾದುದು. ಅದನ್ನು ಅರಿತು ಅವಳನ್ನು, ಸಂತಾನವನ್ನು ಪೋಷಿಸುವ ಜವಾಬ್ದಾರಿ ಪುರುಷನಾದ ಗಂಡನದಾಗಿದೆ. ಆ ಸತ್ಯವನ್ನು ತಿಳಿದು ಅಂತಹ ಶಕ್ತಿಯ ತೇಜಸ್ವಿ ಪತ್ನಿಯನ್ನು ಸರಿಯಾಗಿ ಕಾಪಾಡಲು ಆಗುತ್ತಿಲ್ಲ ಎಂಬ ಒಳಗುದಿಯಲ್ಲಿ ದ.ರಾ. ಬೇಂದ್ರೆಯವರು 'ನೀ ಹೀಂಗ ನೋಡಬ್ಯಾಡ ನನ್ನ' ಕವನ ರಚಿಸಿದ್ದಾರೆ. ಇದು ಸ್ತ್ರೀಪರ ಧೋರಣೆ, ಸ್ತ್ರೀಸಂವೇದನೆ ಎಂಬ ನುಡಿಗಳನ್ನು ಮೀರಿದ ಜೀವ ಜೀವಗಳ ಅರಿವಿನ ಮಿಡಿತವಾಗಿದೆ. ದಾಂಪತ್ಯದ ಸೆಲೆಯೊಡೆದು ಚಿಮ್ಮಿದ ಭಾವಲಹರಿಯಾಗಿದೆ.

ಪತ್ನಿಯ ತೊಡೆಯ ಮೇಲೆ ಈಗಲೊ ಆಗಲೊ ಸಾಯುವ ಸ್ಥಿತಿಯಲ್ಲಿರುವ ಮಗುವಿದೆ. (1934ರಲ್ಲಿ ಹುಟ್ಟಿ ತೀರಿಹೋದ ಮಗಳು ಲಲಿತಾ.) ಆ ಸಾವಿನ ತಣ್ಣನೆಯ ಕೊರೆತ ಇಡೀ ಕವನದ ಪ್ರತಿ ಪದದಲ್ಲಿದೆ. 'ನೀ ಹೀಂಗ ನೋಡಬ್ಯಾಡ ನನ್ನ । ನೀ ಹೀಂಗ ನೋಡಿದರ ನನ್ನ ತಿರುಗಿ ನಾ ಹ್ಯಾಂಗ ನೋಡಲೇ ನಿನ್ನ' (ನಾದಲೀಲೆ) ಎಂಬ ಪಲ್ಲವಿಯು ಸಾವನ್ನು ಎದುರಿಸಲಾಗದ, ಅದಕ್ಕೆ ಪ್ರತಿ ನಡೆ ನುಡಿ ಇಲ್ಲದ ಕವಿಯ ಮನೋಸ್ಥಿತಿಯನ್ನು ಧ್ವನಿಸುತ್ತದೆ. ಅದೊಂದು ದಾರುಣತೆ ಮಡುಗಟ್ಟಿದ, ಪತ್ನಿಯ ನೋಟ ಎದುರಿಸಲಾಗದ ಅಸಹಾಯ ಮನಸ್ಸು ಹೊರಹೊಮ್ಮಿಸಿದ ನುಡಿ. ಅದೇ ಸಂದರ್ಭ ನೆನೆದು 'ಸಖೀಗೀತ' ಕಾವ್ಯದಲ್ಲಿ 'ಆ ಕಣ್ಣು ಎಂದಾರೆ ಈ ಕಣ್ಣ

ತಾಗಿದರೆ । ಗೊಂಬಿ ಮೂಡದ ಕುರುಡು ಗಾಜಾಗಿರೆ' ಎಂದು ಹೃದಯ ವಿದ್ರಾವಕ ರೀತಿಯಲ್ಲಿ ತನ್ನನ್ನೇ ಚಿತ್ರಿಸಿಕೊಂಡಿದ್ದಾರೆ.

'ನರಬಲಿ' ಕವನ ರಚಿಸಿ ಹಿಂಡಲಗಾ ಜೇಲು ವಾಸವಾದ ನಂತರ ಅವರಿಗೆ ಯಾರೂ ನೌಕರಿ ಕೊಡಬಾರದೆಂದು ಬ್ರಿಟೀಷ್ ಸರ್ಕಾರ ಆಜ್ಞೆ ಹೊರಡಿಸಿತು. ಆಗ ಅವರು ತಮ್ಮ 37ನೇ ವಯಸ್ಸಿನಲ್ಲಿ ಎಂ.ಎ. ಅಭ್ಯಾಸ ಮಾಡಲು ಪುಣೆಗೆ ಹೋದರು. ಅವರ ಎಲ್ಲ ಖರ್ಚು ವೆಚ್ಚವನ್ನು ಅವರ ಚಿಕ್ಕಪ್ಪ ನೋಡಿಕೊಳ್ಳುತ್ತಿದ್ದರು. ಆ ಸಮಯದಲ್ಲಿ ಹುಟ್ಟಿದ್ದು ಲಲಿತಾ.

ಕವನದ ಭಾವಸಂದರ್ಭವನ್ನು ವಾಮನ ಬೇಂದ್ರೆಯವರು ಹೀಗೆ ನೀಡಿದ್ದಾರೆ : 'ನನ್ನ ಅಕ್ಕ ಲಲಿತಾ ಇವಳ ಮರಣದ ವಿವರವಾದ ಸಂದರ್ಭ 1966ರ ಅನಂತರ ನನಗೆ ಬೇಂದ್ರೆ ಹೇಳಿದರು. ಲಲಿತಾಳನ್ನು ಪ್ರಥಮ ನೋಡಲು ಪುಣೆಯಿಂದ ಹೊರಟು ರಾಣೆಬೆನ್ನೂರು ತಲುಪುವ ಮೊದಲೇ ಮಗು ಸತ್ತ ದೃಶ್ಯ ಕಂಡು ಬರೆದ ಶೋಕಗೀತ. ಭವಿಷ್ಯ ದರ್ಶನದ ಕವಿತೆ ಇದಾಗಿದ್ದರೂ ಬೇಂದ್ರೆಯವರು ನನ್ನ ತಾಯಿಯ ಮರಣ ಆಗುವವರೆಗೂ ಯಾರ ಮುಂದೆಯೂ ಇದನ್ನು ಹೇಳಿರಲಿಲ್ಲ. ಅವರು ಅದುಮಿಟ್ಟುಕೊಂಡ ದುಃಖವನ್ನು ನನ್ನ ಮುಂದೆ ನಿವೇದಿಸಿ ಎದೆ ಹಗುರು ಮಾಡಿಕೊಂಡರು ಎಂದು ತೋರುತ್ತದೆ.'

ವಿಧಿ ತಂದ ವಧು ಲಕ್ಷ್ಮೀಬಾಯಿಯನ್ನು ಧಾರೆಯಲ್ಲಿ ಕೈ ಹಿಡಿದಾಗ ಕವಿ ಕಂಡ ಸೌಂದರ್ಯದ ಬೆಡಗು,

'ಮುತ್ತಿಗು ಮಿಗಿಲಾಗಿ ಹೂವೀಗು ಹಿರಿದಾಗಿ
ಬೆವರ್ಹನಿ ಬಾಸಿಂಗ ತುಳುಕುತಿರೆ
ನತ್ತನು ನಾಚಿಸಿ ಬೆವರಿನ ಹನಿಯೊಂದು
ಮೂಗು ಬಟ್ಟಿನ ಅಂದ ಮಿನುಗುತಿರೆ.'

ಎಂಬ ಕಾಂತಿ ಸೂಸುತ್ತಿತ್ತು. ಅದು ಮಸುಳಲು ತಾನೇ ಕಾರಣ ಎಂಬುದನ್ನು ಕವಿ ಈ ಕವನದಲ್ಲಿ ಹೇಳುವ ರೀತಿಯಲ್ಲಿ ದಾಂಪತ್ಯದ ಹೊಳಪು ಮಿಸುನಿಯಂತೆ ಕಂಗೊಳಿಸುತ್ತದೆ. ಬೇಂದ್ರೆಯವರು ಬಡತನದ ಸಂಸಾರವನ್ನು 'ದುಃಖದ ಬಂಡಿ' ರೂಪಕದಲ್ಲಿ ಚಿತ್ರಿಸಿದ್ದರೂ, ಆಶಾವಾದಿಯಾಗಿ 'ನಾ ಬಲ್ಲೆ ನನಗೆ ಗೊತ್ತಿಲ್ಲದಿದ್ದರೂ ಎಲ್ಲಿ ಆಚೆಯಾ ದಂಡಿ' ಎಂಬ ವಿಶ್ವಾಸದಿಂದ ಅನಂತಶಕ್ತನಲ್ಲಿ ನಂಬಿಕೆಯಿಟ್ಟು ಬಂಡಿ ದೂಡುತ್ತಿದ್ದಾರೆ. ಯಾವುದೇ ತರ್ಕಗಳನ್ನು ವ್ಯಕ್ತಪಡಿಸದೆ ತನ್ನ ಮಿತಿಗಳನ್ನು ಹೇಳುತ್ತಲೇ, ಪತ್ನಿಯನ್ನು ಸಾಂತ್ವನದ ನುಡಿಗಳಿಂದ, ಪ್ರೀತಿಯ ಅಂತರ್ಬೋಧೆಯಿಂದ ಮೃದುವಾಗಿಸುತ್ತಿದ್ದಾರೆ.

'ಮಲಗಿರುವ ಕೂಸು ಮಲಗಿರಲಿ ಅಲ್ಲಿ, ಮುಂದಿನದು ದೇವರ ಚಿತ್ತ
ನಾ ತಡೀಲಾರೆ ಅದು, ಯಾಕ ನೋಡತೀ ಮತ್ತ ಮತ್ತ ನೀ ಇತ್ತ.'

ಎಂಬ ನುಡಿಯು ಸಾವಿನ ಎದುರು ಅಸಹಾಯಕತೆಯ ಅಸಾಧಾರಣ ಅಭಿವ್ಯಕ್ತಿಯಾಗಿದೆ.

ತಾಂಬೂಲ ಹಾಕದೆಯೆ ಗಿಣಿ ಕಚ್ಚಿದ ಹಣ್ಣಿನಂತೆ ಹೊಳೆಯುತ್ತಿದ್ದ ಆಗಿನ ಅವಳ ಕೆಂಪು ತುಟಿಯು ಕೆಲವೇ ವರ್ಷಗಳಲ್ಲಿ ಸಂಸಾರದ ಕೋಟಲೆಗೆ ಸಿಕ್ಕಿ ಕಂದು ಬಣ್ಣಕ್ಕೆ ತಿರುಗಿದೆ. ಅದನ್ನು ಕವಿ 'ತುಟಿಯ ಬಣ್ಣೆತ್ತ ಹಾರಿತು ? ಯಾವ ಗಾಳಿಗೆ ಹೀಂಗ ?' ಎಂದು ಪ್ರಶ್ನಿಸಿದ್ದಾರೆ. ಅದರಲ್ಲಿ ಬದುಕಿನ ಜಂಜಾಟ ಬವಣೆಯ ಗಾಳಿ ಎಂಬ ಅರ್ಥ ಹೊಮ್ಮಿದರೂ ಅದಕ್ಕೆ ಕಾರಣ ತಾನು ಎಂಬ ಭಾವವನ್ನು ವ್ಯಕ್ತಪಡಿಸುವ ಧ್ವನಿ ಇದೆ.

ಅವಳ ಮುಖ ಜೀವವಿಲ್ಲದಂತೆ ಎಷ್ಟು ನಿಸ್ತೇಜವಾಗಿತ್ತು ಎಂಬುದನ್ನು 'ಸಾವನs ತನ್ನ ಕೈ ಸವರಿತಲ್ಲಿ' ಎಂದು ಪ್ರತಿಮಾತ್ಮಕವಾಗಿ ಹೇಳಿ, ಅಲ್ಲಿ ಸಾವು ಹರಿದಾಡುತ್ತಿದ್ದುದರ ಸುಳಿವು ನೀಡುವ ಕವಿ ಅದನ್ನು ಕಂಡು 'ಬಂತೆನಗೆ ಇಲ್ಲದ ಭೀತಿ' ಎಂದು ನಡುಗಿಹೋಗಿದ್ದಾರೆ.

ದಂಪತಿಗಳನ್ನು ಒಂದುಗೂಡಿಸಿದ ಧಾರೆಯ ತಣ್ಣನೆಯ ಅರಿವು-ದಾಂಪತ್ಯದ ಫಲದ ಸಾವಿನ ತಣ್ಣನೆಯ ಸ್ಥಿತಿಯಲ್ಲಿ ನೆನಪಾಗುವುದು ಜೀವನ ವೈರುಧ್ಯವನ್ನು ಕಾವ್ಯದಲ್ಲಿ ಸೂಕ್ಷ್ಮವಾಗಿ ಕಾಣಿಸುವ ಬೇಂದ್ರೆ ಪ್ರತಿಭೆ. ಕವಿ ಪತ್ನಿಯು ತನ್ನ ಪಾರಂಪರಿಕ ನಂಬಿಕೆಯಲ್ಲಿ ಬದುಕಿ ಜನಪದರು ಹೇಳುವ 'ಗಂಡನ ಕಂಡರೆ ದೇವರೆಂದೆರಗಿಕೊ' ಎಂಬುದನ್ನು ತಿಳಿದು ಪತಿಯನ್ನು ನೋಡುತ್ತಾಳೆ. ಆದರೆ ಆ ಪತಿಯು – ತಾನು ದೇವರಲ್ಲ, ನಿನ್ನಂತೆ ನೆಲದ ಜೀವಿ. ನನಗೂ ನಿನಗೂ ವ್ಯತ್ಯಾಸವಿಲ್ಲ-ಎಂಬ ತಿಳಿವಿನಲ್ಲಿ ತನ್ನ ಪುರುಷನೆಂಬ ಅಹಂ ಅನ್ನು ನಿರಸನಗೊಳಿಸಿಕೊಂಡು ನುಡಿಯುತ್ತಾನೆ:

'ಮುಗಿಲsನ ಕಪ್ಪರಿಸಿ ನೆಲಕ ಬಿದ್ದರ ನೆಲಕ ನೆಲಿ ಎಲ್ಲಿನ್ನs
ಆ ಗಾದಿಮಾತು ನಂಬಿ, ನಾನು ದೇವರಂತ ತಿಳಿದಿಯೇನ ನೀ ನನ್ನ.'

ಇದೊಂದು ಅಪ್ರತಿಮ ಮಾನವೀಯ ಕೌಟುಂಬಿಕ ನೋವಿನ ಉಕ್ತಿ. ಪತಿಯನ್ನು ಪೂರ್ಣವಾಗಿ ಅವಲಂಬಿಸಿ ನಡೆಯುವ ಪತ್ನಿಯ ಚಿತ್ರಣವನ್ನು ಬೇಂದ್ರೆ ಅವರು ಇಲ್ಲಿ ಸಾದೃಶ್ಯವಾಗಿ ನೀಡಿದ್ದಾರೆ. ಭೂಮಿಯಾದ ಅವಳಿಗೆ ಪತಿಯು ಮುಗಿಲು. ಅವರದು ಭುವಿ-ಭಾನು ಸಂಬಂಧ, ಮುಗಿಲು ಕಪ್ಪರಿಸಿ ಬಿದ್ದರೆ ಅರ್ಥಾತ್ ಕತ್ತರಿಸಿಕೊಂಡು ಒಮ್ಮೆಲೆ ಬಿದ್ದರೆ ತನಗೆ ನೆಲಿ (ಆಧಾರ) ಎಲ್ಲಿ ಎಂದು ತಿಳಿದು, ನೀನು ನನ್ನನ್ನು ಹೀಗೆ ನೋಡಬ್ಯಾಡ. ನಾನು ದೇವರೆಂದು ತಿಳಿಯಬೇಡ ಎಂದು ಕಾವ್ಯನಾಯಕ ಹೇಳುತ್ತಿದ್ದಾನೆ. ಇದು ದಾಂಪತ್ಯದ ಅನುಪಮ ಸವಿ.

ಬೇಂದ್ರೆಯವರು ಬಾಲ್ಯದಲ್ಲಿ ಕಾಡಿನಲ್ಲಿ ತಿಂದು ಸವಿದ ಹುಳಿ ಒಗರಿನ ಕವಳಿಕಂಟಿಯ ಹಣ್ಣಿನಿಂದ ತನ್ನ ಪತ್ನಿಯ ಕಣ್ಣನ್ನು ಹೀಗೆ ಬಣ್ಣಿಸಿದ್ದಾರೆ :

'ಇಬ್ಬನ್ನಿ ತೊಳೆದರೂ ಹಾಲು ಮೆತ್ತಿದಾ ಕವಳಿಕಂಟಿಯಾ ಹಣ್ಣು
ಹೊಳೆ ಹೊಳೆವ ಹಾಂಗ ಕಣ್ಣಿರುವ ಹೆಣ್ಣ, ಹೇಳು ನಿನ್ನವೇನ ಈ ಕಣ್ಣು ?'

ಕವಳಿ ಹಣ್ಣುಗಳು ಕಣ್ಣಿನ ಗುಡ್ಡೆ ಗಾತ್ರ ಇರುತ್ತವೆ. ಆ ಹಣ್ಣಿನ ತೊಟ್ಟಿನಿಂದ

ಬೀಳುವ ಹಾಲು ಜಿಗುಟಾಗಿರುತ್ತದೆ. ಆ ಶುಭ್ರ ಹಾಲು ಹಣ್ಣಿಗೆ ಅಂಟಿಕೊಳ್ಳುತ್ತದೆ. ಅದು ಕಣ್ಣಿನ ಬಿಳಿ ಮತ್ತು ಕರಿ ಗುಡ್ಡೆಯನ್ನು ಪ್ರತಿಮಿಸುತ್ತದೆ. ಆ ಹಣ್ಣು ಹೊಳೆ ಹೊಳೆಯುವ ಕಣ್ಣಿನ ಹೊಳಪನ್ನು ಹೊಂದಿದೆ. ರಮಣೀಯ ನಿಸರ್ಗದಿಂದ ಆಯ್ದ ಈ ದೇಸಿ ಪ್ರತಿಮೆ ಕನ್ನಡ ಕಾವ್ಯದಲ್ಲಿ ಹೊಸತು.

ತಾನು ವಿವಾಹವಾದಾಗ ಹೊಳೆ ಹೊಳೆಯುವ ಕವಳಿ ಕಂಟಿಯ ಹಣ್ಣಿನಂತಿದ್ದ ಪತ್ನಿಯ ಕಣ್ಣು ಸಂಸಾರದಲ್ಲಿ ನೊಂದು ಬೆಂದು ತನ್ನ ಕಾಂತಿಯನ್ನು ಕಳೆದುಕೊಂಡಿದೆ ಎಂದು ಕವಿ ದುಃಖಿಸಿದ್ದಾರೆ. ಅದಕ್ಕೆ ತಾನೇ ಕಾರಣ ಎಂಬ ಆತ್ಮಶೋಧದಲ್ಲಿ ಈ ಕವನ ರಚಿಸಿದ್ದಾರೆ. ಆಕೆಯನ್ನು ಪ್ರಶ್ನಿಸಿದ್ದಾರೆ : 'ಹೇಳು ನಿನ್ನವೇನ ಈ ಕಣ್ಣು ?'

ವಿಶ್ವಾಮಿತ್ರನಿಗೆ ರಾಜ್ಯ ಸಮರ್ಪಣ ಮಾಡಿದ ಮೇಲೆ ಮುಖ ಕಂದಿ, ಕಳೆಗುಂದಿ, ಮಲಿನವಸ್ತ್ರ ಉಟ್ಟು ಸೊಗಸುಗೆಟ್ಟ ರಾಜ ಹರಿಶ್ಚಂದ್ರನು ಇದ್ದ ಸ್ಥಿತಿಯನ್ನು ರಾಘವಾಂಕ ಕವಿ 'ಹಗಲೊಡೆದ ಚಂದ್ರಕಳೆಯಂತೆ' ಎಂಬ ಪ್ರತಿಮೆಯಲ್ಲಿ ಹಿಡಿದಿಟ್ಟಿದ್ದಾರೆ. ಬೇಂದ್ರೆಯವರು ತನ್ನ ಪತ್ನಿಯ ಸೊರಗಿ ಸೊಪ್ಪಾದ ದೆಸೆಯನ್ನು ವರ್ಣಿಸಲು ರಾಘವಾಂಕನ ಪ್ರತಿಮೆಯನ್ನು ಅನುಸರಿಸಿ 'ಹುಣ್ಣಿಮೆ ಚಂದಿರನ ಹೆಣಾ ಬಂತೊ ಮುಗಿಲಾಗ ತೇಲುತ ಹಗಲ' ಎಂದು ಬಣ್ಣಿಸಿದ್ದಾರೆ. ಹಗಲಲ್ಲಿ ಕಂಡ ಹುಣ್ಣಿವೆ ಚಂದ್ರನ ಹೆಣಕ್ಕೆ ಅವಳ ಬತ್ತಿಹೋದ ಮುಖವನ್ನು ಹೋಲಿಸಿರುವುದು ಹೆಚ್ಚು ಪರಿಣಾಮಕಾರಿಯಾಗಿದೆ. ಇದು ದೇಸಿ ಅನುಭವ. ಕನ್ನಡ ಕಾವ್ಯ ಪರಂಪರೆಯ ಲಕ್ಷಣ ನವೋದಯದಲ್ಲಿ ಅರಳಿದ ರೀತಿ.

ಈ ಕವನದಲ್ಲಿ ಕವಿ ಪತ್ನಿ ಮೌನಿ. ಆ ಅಸಹಾಯಕ ಬಾಣಂತಿಯ ನೋವು, ಆತಂಕ, ದುಗುಡ ದುಮ್ಮಾನ, ನಿಷ್ಪ್ರಯೋಜಕ ಭಾವ ಅವಳ ಕಣ್ಣಲ್ಲಿ ಪ್ರಕಟಗೊಂಡು- ಒತ್ತುವ ದುಃಖದ ಬಿಕ್ಕಳಿಕೆಯನ್ನು ತುಟಿ ಕಚ್ಚಿ ತಡೆ ಹಿಡಿದಿದೆ. ಅವಳು ಅಳಲಾರದೆ ಕೂತಿದ್ದಾಳೆ. ಅದು ಮಂಜಿನ ಅಲಗಿನಂತೆ ಕವಿಯನ್ನು ತಿವಿಯುತ್ತಿದೆ. ಆಗ ಅವನು 'ಅತ್ತಾರೆ ಅತ್ತುಬಿಡು ಹೊನಲು ಬರಲಿ, ನಕ್ಯಾಕ ಮರಸತಿ ದುಕ್ಕ ? ಎವೆ ಬಡಿಸಿ ಕೆಡವು, ಬಿರಿಗಣ್ಣು ಬ್ಯಾಡ, ತುಟಿ ಕಚ್ಚಿ ಹಿಡಿಯದಿರು ಬಿಕ್ಕ.' ಎಂದು ಹೇಳಿದ್ದಾನೆ. ಆ ನುಡಿಯಲ್ಲಿ ಹುಸಿ ನಗುವಿನಿಂದ ದುಃಖವನ್ನು ಮರೆಸಬಾರದು. ಈ ಜೀವನದಲ್ಲಿ ಸುಖದಂತೆ ದುಃಖಕ್ಕೂ ಸಮಪಾಲಿದೆ. ಅದು ಕತ್ತಲು ಬೆಳಕಿನಂತೆ ಅನುಭವಿಸಬೇಕಾದುದು ಎಂಬ ಲೋಕಸತ್ಯವಿದೆ. ಜೊತೆಗೆ ಅತಿ ದುಃಖವಾದಾಗ ಅದನ್ನು ಹೊರಹಾಕದಿದ್ದರೆ ಎದೆ ಹೊಡೆಯುವ ಸಾಧ್ಯತೆ ಇರುವುದರಿಂದ ಅಳುವುದು ಉತ್ತಮ ಎಂಬ ದೇಹಾರೋಗ್ಯದ ಸತ್ಯವಿದೆ.

ಮಗುವಿನ ಸಾವಿನಿಂದ ಉಂಟಾಗುವ ಭಾವ ಶೂನ್ಯತೆಯ ಅನುಭವ ಇಲ್ಲಿ ಕಾವ್ಯವಾಗಿ ಹರಿದಿದೆ. ಈ ಕವನದ ದಂಪತಿಗಳಲ್ಲಿ ಲೌಕಿಕವಾದ ಸಿರಿಸಂಪತ್ತು ಇಲ್ಲದಿದ್ದರೂ ಆಂತರ್ಯದಲ್ಲಿರುವ ಪ್ರೀತಿಯ ಝರಿಯನ್ನು ಒಬ್ಬರಿಗೊಬ್ಬರು ಅರಿತು ಸವಿಯುವ ಬಗೆ ಸಹೃದಯರನ್ನು ಸೆಳೆಯುತ್ತದೆ.

(ವಿಜಯ ಕರ್ನಾಟಕ, ಬೋಧಿವೃಕ್ಷ, 8.7.2017)

■



ಹುಬ್ಬಳ್ಳಿಯಾಂವಾ

ದ.ರಾ. ಬೇಂದ್ರೆಯವರು 1935ರಲ್ಲಿ ರಚಿಸಿದ 'ಹುಬ್ಬಳ್ಳಿಯಾಂವಾ' ಕವನ ಇಂದಿಗೂ ನಾಡಿನ ಮಕ್ಕಳನ್ನು, ಹಿರಿಯರನ್ನು ಆಲೋಚನಾಪರರನ್ನಾಗಿಸುತ್ತಿದೆ. ಅದು ಓರ್ವ ಜೋಗಿತಿ ತನ್ನನ್ನು ಪ್ರೀತಿಸಿದ ಗಂಡನ್ನು ನೆನೆಸಿಕೊಂಡ ವಿಶಿಷ್ಟ ಪರಿ. ಅದು ಕವಿಯ ಭಾವ ಗ್ರಹಿಸಿ ವ್ಯಕ್ತಪಡಿಸಿದ ಹೆಣ್ಣಿನ ಅಮೂಲ್ಯಪ್ರೀತಿ.

ಲಿಂಗ ಭಿನ್ನತೆಯಲ್ಲಿ ಸ್ತ್ರೀಜೀವಿ ಆಶಿಸುವ ಸಹಜ ಒಲವು ಅವಳ ಅಂತರ್ಯದ ಹಸಿವು. ಅದು ಇನ್ನೊಬ್ಬರಿಂದ ವ್ಯಕ್ತವಾಗುವ ಮರುಕ ಮಮಕಾರವನ್ನು ಮೀರಿದ ಶೋಷಣಾರಹಿತವಾದ, ಬಂಧನಕ್ಕೆ ಒಳಗಾಗದ–ತನ್ನ ದೇಹ ಮತ್ತು ಮನಸು ಆಶಿಸುವ ಪ್ರೀತಿ. ಅದನ್ನು ಪಡೆದ ಗಂಡಿನ ಭಾಗ್ಯ ಈ ನೆಲದ ಸುಖ.

ಮಾನವ ಚಾರಿತ್ರ್ಯದಲ್ಲಿ
ಎಷ್ಟೊ ಪ್ರಳಯವಾಗಿವೆ. ಸ್ತ್ರೀಯ ಪ್ರೇಮ, ಪುರುಷ ಭಾಗ್ಯ
ಕಾದು ಕಾದು ಮಾಗಿವೆ (ಗಂಗಾವತರಣ)

'ಹುಬ್ಬಳ್ಳಿಯಾಂವಾ' – ಕವನದ ಜೋಗತಿ ಯಲ್ಲಮ್ಮನ ಸೇವೆಗೆ ಮುಡಿಪಾದವಳು. ರಸಿಕನಾದ ಶೆಟ್ಟರ ಹುಡುಗನು ಅಂತಹವಳಲ್ಲಿ ಯಾವುದೋ ವಿಶಿಷ್ಟ ಲಕ್ಷಣವನ್ನು ಕಂಡು ಅನುರಕ್ತನಾಗಿದ್ದಾನೆ. ನಮ್ಮ ಭಾರತೀಯ ಸೌಂದರ್ಯ ಪರಂಪರೆಯಲ್ಲಿ ಹೆಣ್ಣಿನ ಲಕ್ಷಣ ಪ್ರಕಾಶಗೊಳ್ಳುವುದು ಅವಳ ಮೂಗುತಿಯಿಂದ. ಜೋಗತೆಯರಲ್ಲಿ ಅವಳು ಅತ್ಯಂತ ಅಮೂಲ್ಯವಾದವಳು ಎಂಬ ಭಾವ ಅವನದು. ಅದು ಅವರಲ್ಲಿಯ ನಿಷ್ಕಲ್ಮಷ ಪ್ರೀತಿ. ಅದರ ನೆನಪೇ ಅವಳಿಗೆ ಪುಳಕ; 'ಜೋಗತೇರಿಗೆ ಮೂಗುತಿ ಅಂತ ನನಽಗ ಅಂದಾಂವಾ'. ಅದನ್ನು ನೆನೆಸಿ ಹಾಡುತ್ತಿರುವ ಆಕೆಯ ಅಂತಃಕರಣದ ಕೂಗನ್ನು ಬೇಂದ್ರೆಯಂತಹ ಕವಿ ಮಾತ್ರ ಅರಿತು ಅವಳಲ್ಲಿಯ ಅಕ್ಕರತಿಗೆ ದನಿಯಾಗಬಲ್ಲರು. ಅದು ಜೋಡಿ ಹಕ್ಕಿ ಅಗಲಿದ ಕೂಗು.

ಅಂತರಗಂಗೀ ಮ್ಯಾಗ ಕುಂತ ಹಕ್ಕೀ ಜೋಡ
ಅಂತಃಕರಣವ ನೋಡೇನ, ಅಗಲುತಲೆ
ಅಂತರಕೀಲೇನ ಕೂಗ್ಯಾವ' (ಕಾಮ ಕಸ್ತೂರಿ)

* * * *

ಈ ಕವನದ ಮೂರನೆ ಮತ್ತು ನಾಲ್ಕನೆ ನುಡಿಯಲ್ಲಿ ಕವನದ ನಾಯಕಿ ಅಭಿಸಾರಿಕೆ–ತನ್ನ ಗೆಳೆಯನನ್ನು ಅಶಿಸುತ್ತಿರುವ ಲವಲವಿಕೆಗೆ ಕಾರಣವಾದ ವೈಯಕ್ತಿಕ ಆಪ್ತತೆಯಿದೆ.

ಇರು ಅಂದರ । ಬರತೇನಂತ । ಎದ್ದು ಹೊರಡಾಂವಾ
ಮಾರೀ ತೆಳಗ ಹಾಕಿತೆಂದರೆ । ಇದ್ದು ಬಿಡಾಂವಾ
ಹಿಡಿ ಹಿಡೀಲೆ । ರೊಕ್ಕಾ ತಗದು । ಹಿಡಿ ಹಿಡಿ ಅನ್ನಾಂವಾ
ಖರೇ ಅಂತ । ಕೈ ಮಾಡಿದರ । ಹಿಡsದ ಬಿಡಾಂವಾ

(ಸಖೀಗೀತ)

ಚುಂಬಕ ಶಕ್ತಿಗೆ ಒಳಗಾದ ಅವರಲ್ಲಿ ಪುರುಷನಾದವನು ಹೆಣ್ಣಿನ ಸೌಂದರ್ಯ ಹೆಚ್ಚಲು ಕಾರಣವಾಗುವ ಒಡವೆ ನೀಡಿ, ಅವಳನ್ನು ತನ್ನವಳನ್ನಾಗಿಸಿಕೊಂಡದ್ದು ನಾಲ್ಕನೆಯ ನುಡಿಯಲ್ಲಿದೆ. ಅದು ಶೃಂಗಾರ ರಸಾಭಿವ್ಯಕ್ತಿಯಲ್ಲಿ ಹೆಣ್ಣು–ಗಂಡು ಪ್ರತ್ಯೇಕಿಸಲಾಗದಂತೆ ಒಂದಾಗಿ ಹೋದ ನಿತ್ಯ ಸುಖದ ತಾಜಾ ಪ್ರಕಟರೂಪ. ಅವರು ಸವಿಯುವ ಚಹಾ ಮತ್ತು ಚೂಡಾದ, ಕಣ್ಣಿನ ಗೊಂಬಿಯಾಗಿ ಒಂದಾದ ಎರಡು ಉಪಮಾನಗಳು ಒಂದಕ್ಕೊಂದು ಪೂರಕವಾದ ಕಾವ್ಯ ಲಾವಣ್ಯ. ಅದು ಕಾವ್ಯದ ನಾಯಕ–ನಾಯಕಿಯರಿಗಷ್ಟೆ ಅಲ್ಲ, ಸಹೃದಯರ ಎದೆಗೂ ಸರಿಯುವ ಒಲ್ಮೆ.

ಚಾಹಾದ ಜೋಡಿ । ಚೂಡಾಧಾಂಗ । ನೀ ನನಗಂದಾಂವಾ
ಚೌಡಿಯಲ್ಲ ನೀ । ಚೂಡಾಮಣಿಯಂತ ರಮಿsಸ । ಬಂದಾಂವಾ
ಬೆರಳಿಗುಂಗುರಾ । ಮೂಗಿನ್ಯಾಗ । ಮುಗಬಟ್ಟಿಟ್ಟಾಂವಾ
ಕಣ್ಣಿನಾಗಿನ ಗೊಂಬೀ ಹಾಂಗ । ಎದ್ಯಾಗ ನಟ್ಟಾಂವಾ

ಸಾಮಾಜಿಕ, ಆರ್ಥಿಕ, ಮಾನಸಿಕ ಹಿಂಸೆಯ ಭಾಗವಾಗಿ ಆಂತರಿಕ ಕ್ಷೋಭೆಗೆ ಒಳಗಾದ ಆಕೆ ತನ್ನ ಪರಿಸ್ಥಿತಿಗೆ ಹೇಸಿದ್ದರೂ ಅದನ್ನು ಪಕ್ಕಕ್ಕೆ ಸರಿಸಿದ್ದಾಳೆ. ಅದು ಅವಳ ಯುಕ್ತ ಆರೋಗ್ಯ ಲಕ್ಷಣ. ಹೊರಜಗತ್ತಿಗೆ ಅದು ಅತಿಯಾದ ವರ್ತನೆಯೆನಿಸಿದರೂ ಅದು ಅವಳ ಸ್ವಾಸ್ಥ್ಯ ಮನದಾಶೆಯ ಪ್ರಕಟರೂಪ. ಒತ್ತಡದ ಬಿರಿಭಾರದಿಂದ ಬಿಡುಗಡೆಗೊಂಡು, ಜಿಗಿದು ಹಾರಿ, ಹಕ್ಕಿಯ ರೀತಿ ಮುಕ್ತವಾಗಿ ಆಗಸದಲ್ಲಿ ರೆಕ್ಕೆಯಾಡಿಸಿ ತೇಲುವ ಅದ್ಭುತ ಮಾನಸಿಕ ಲಹರಿ.

ವ್ಯವಹಾರ ಜಗತ್ತಿನ ಅಪೇಕ್ಷೆಗಳನ್ನು ಮೀರಿ ನಿಲ್ಲಬಲ್ಲ ಮನೋಸ್ಥೈರ್ಯದವಳು ಈ ಕವನದ ನಾಯಕಿ. ಆಕೆ ತನ್ನ ಕಿರಣದಲ್ಲಿ ಹಗಲನ್ನು ಕಾಣುವ ದೃಢ ಚಿತ್ತದವಳು. ಅವಳ ಹೆಣ್ತನ ಜೋಗಿತಿಯಾಗಿ ದೇವರ ಪ್ರತಿನಿಧಿಯಾಗಿ ಬಾಳಬಹುದು. ಸಂಸಾರಿ

ಹೆಣ್ಣು ವೇಶ್ಯೆಯ ಮನಸ್ಥಿತಿ ಹೊಂದಿರಬಹುದಾದರೆ ಜೋಗಿತಿ ಪ್ರೀತಿಯ ವೀಳ್ಯ ಮಡಿಚಿಕೊಟ್ಟ ಹುಡುಗನಲ್ಲಿ ಶುದ್ಧ ಪ್ರೀತಿ ಹೊಂದಿರಬಹುದು.

ಈ ಕವನದ ಆಂತರ್ಯದಲ್ಲಿ ಮಿಡಿಯುವ ತೀವ್ರ ಪ್ರೇಮಾಕಾಂಕ್ಷೆ ಒಂದು ಅವರ್ಣನೀಯ ಭಾವಲೋಕವನ್ನು ಸೃಷ್ಟಿಸುತ್ತದೆ. ಆದುದರಿಂದ ಸಿದ್ಧಾರೂಢರ ಭಕ್ತರು ಅದನ್ನು ಒಂದು ಪ್ರಾರ್ಥನಾಗೀತೆಂಯಾಗಿ ಹಾಡುತ್ತಿದ್ದಾರೆ. ಅದು ನಾದಲಯದಿಂದೊಡಗೂಡಿದ ಪ್ರೇಮಹಲಹರಿಯಲ್ಲಿ ಆ ಭಕ್ತರಿಗೆ ತತ್ತ್ವಪದವೂ ಆಗಿದೆ, ಅದು ಸಿದ್ಧಾರೂಢರ ಪ್ರೇಮಾರಾಧಕರ different reading.

* * * *

ಮಾತು ಮಾತಿಗೆ । ನಕ್ಕು ನಗಿಸಿ । ಆಡಿಸ್ಯಾಡಾಂವಾ
ಏನೋ ಅಂದರ । ಏನೋ ಕಟ್ಟಿ । ಹಾಽಡ ಹಾಡಾಂವಾ

ಎಂಬ ಸಹಜ ಪ್ರೀತಿಯ ಅಭಿವ್ಯಕ್ತಿಯಾದ ಈ ಕವನದಲ್ಲಿ ಅಶ್ಲೀಲತೆಯ ಸೋಂಕಿಲ್ಲ. ಇದು ಮಾನವಂತ ಹಿರಿಕಿರಿಯರಿಗೆ ಕಚಗುಳಿ ಇಡಿಸಿ ತನ್ನತ್ತ ಸೆಳೆಯುವ ಬೇಂದ್ರೆ ಗಾರುಡಿ. ಕವನದ ನಾಯಕಿಯ ಮನಸಿನಲ್ಲಿ ಹುಟ್ಟಿದ ಸ್ವಾಭಾವಿಕ ಅಪೇಕ್ಷೆ ಪ್ರೀತಿ ತುಂಬಿದ ಚಿತ್ತ ಈ ಕವನದ ನುಡಿನುಡಿಯಲ್ಲಿ ಹಿಗ್ಗಿದೆ.

ಪ್ರೇಮವನ್ನು ಕುರಿತ ಬೇಂದ್ರೆಯವರ ಚಿಂತನೆ'ಒಲವಲ್ಲ ವ್ಯಾಪಾರ' ಮತ್ತು 'ಪ್ರೇಮ ಯುಕ್ತಿಯಲ್ಲ' ಎಂಬುದಾಗಿದೆ. ಈ ಕವನದ ಪದಪದದಲ್ಲಿಯೂ ಆ ಚಿಂತನೆ ಅಂತಃಸ್ರೋತವಾಗಿರುವುದರಿಂದ ಇದು ಸಹೃದಯರ ಹಾಡಾಗಿ ಅವರನ್ನು ಹಿಗ್ಗಿಸುತ್ತಿದೆ.

ಜೋಗತಿಯನ್ನು ದೈವದ ಆವರಣದಲ್ಲಿಯೇ ಪ್ರೀತಿಯ ದೈವಿಕತೆಗೆ ಒಲಿದ ಭಾವದಲ್ಲಿ ಬೇಂದ್ರೆ ಚಿತ್ರಿಸಿದ್ದಾರೆ. ಅದು ಈ ಸಮಾಜದ ಮೈರುಧ್ಯದಲ್ಲಿ ಅಡಗಿರುವ ಹೆಣ್ಣಿನ ಅಂತರಿಕ ನೋವನ್ನು ವಿಭಿನ್ನವಾಗಿ ವ್ಯಕ್ತಪಡಿಸಿರುವ ಬೇಂದ್ರೆ ಶೈಲಿಯಾಗಿದೆ. ಕವಿಯ ಸೂಕ್ಷ್ಮಾವಲೋಕನದ ಹಲವು ಆಯಾಮಗಳ ಚಿಂತನೆಯನ್ನು ತನ್ನಲ್ಲಿ ಅಡಗಿಸಿಕೊಂಡಿರುವ ವಿಶಿಷ್ಟ ಕವನ ಇದಾಗಿದೆ. ಕನ್ನಡ ಕಾವ್ಯ ಪ್ರಪಂಚದ ಈ ಅಮರ ನಾಯಕಿಯಲ್ಲಿ ಅಹಂ ಇಲ್ಲ. ಅನಂಗಭಾವದ ಕೊಡುಕೊಳ್ಳುವ ಮಧುರ ಲಹರಿಯ ನೆನಪು, ಹಸಿರಾಗಿ ಕಾಡುವ ಉಲ್ಲಾಸ ಮಾತ್ರ ಇಲ್ಲಿದೆ. ಹೆಣ್ಣು ಗಂಡನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಅವಳಲ್ಲಿಯ ಅನೇಕ ಮಾನಸಿಕ ಪ್ರತಿಮೆಗಳು ಒಂದನ್ನೊಂದು ವಿರೋಧಿಸುತ್ತವೆ, ಸಹಕರಿಸುತ್ತವೆ. ಆ ಸಂಘರ್ಷದಿಂದ ಹೊರಬಂದ ಹೆಣ್ಣು ಒಂದು ಗಂಡಿನ ಜೊತೆಗೂಡಿ ಹೊಸತನ್ನು ಸೃಷ್ಟಿಸಿ ಸೃಜನಶೀಲ ಪ್ರತೀಕವಾಗಿ ಹೋಗುತ್ತಾಳೆ. ಅಂತಹ ಹೆಣ್ಣಿನ ಸೃಷ್ಟಿಯನ್ನು ಬೇಂದ್ರೆ ಈ ಕವನದಲ್ಲಿ ನೀಡಿದ್ದಾರೆ.

ಹೆಣ್ಣು ಗಂಡಿನ ಸಂಬಂಧ ತುಂಬಾ ಮಹತ್ವದ್ದು. ನಮ್ಮ ವ್ಯಕ್ತಿತ್ವವನ್ನು ನಿಯಂತ್ರಿಸುವ ಮೂರು ಪ್ರಬಲ ಘಟಕಗಳೆಂದರೆ ಭೌತಿಕ ಶರೀರ, ಮನಸು ಮತ್ತು ಸಮಾಜ. ಸಮಾಜದ ಪ್ರಭಾವದಿಂದ ಬಿಡುಗಡೆ ಹೊಂದಲು ತವಕಿಸುವ ಒಳತುಡಿತ ವ್ಯಕ್ತಿಯಲ್ಲಿರುತ್ತದೆ.

ಅದು ಸಮಾನತೆಯ greater socialism ನತ್ತ ನಡೆವ ಮಾನವೀಯ ಮೌಲ್ಯ.

ಆ ಹಿನ್ನೆಲೆಯಲ್ಲಿ ಈ ಕವನವನ್ನು ಅಧ್ಯಯನ ಮಾಡಿದಾಗ, ಬೇಂದ್ರೆಯವರು ಕವನದ ನಾಯಕಿ ಜೋಗಿತಿಯಲ್ಲಿರುವ ಹೆಣ್ತನವನ್ನು ಗುರುತಿಸಿ ಪ್ರೀತಿಯ ವಿಶ್ವರೂಪ ದರ್ಶನ ಮಾಡಿಸಿರುವುದನ್ನು ಕಾಣಬಹುದು.

ಯಾವುದೋ ಸಾಮಾಜಿಕ ಬಂಧದಿಂದ ಜೋಗಿತಿಯಾಗಿರಬಹುದಾದ ಆಕೆ ಅದನ್ನು ಮೀರಿದ ತನ್ನ ಅಂತಃಶಕ್ತಿಯಿಂದ ಒಲ್ಮೆಯ ಆರಾಧಕಳಾಗಿ ಮೀರಾಳ ಭಾವಲಹರಿಗೆ ಏರಿದ್ದಾಳೆ. ಅವಳ ಬಾವಾಭಿವ್ಯಕ್ತಿಯಲ್ಲಿ ಮಾನವೀಯತೆಯ ಪ್ರವಾಹವೇ ಧುಮ್ಮಿಕ್ಕಿದೆ.

ಅದೊಂದು ಇಂದ್ರಿಯಗಳ ಹಂಗಿಲ್ಲದ ಭಾವಾನುಭಾವ. ಹಾಗಾಗಿ ಈ ಕವನ ಕನ್ನಡ ಭಾವಗೀತ ಪ್ರಕಾರದಲ್ಲಿಯೇ Masterpiece ಆಗಿದೆ.

(ವಿಜಯ ಕರ್ನಾಟಕ, ಸಾಪ್ತಾಹಿಕ ಲವಲವಿಕೆ, 2011)

■



ಕೃಷ್ಣಾಕುಮಾರಿ

ಉದಯಪುರದ ರಾಣಾ ಭೀಮಸಿಂಹನು ತನ್ನ ಪ್ರೀತಿಯ ಸುಂದರ ಮಗಳು ಕೃಷ್ಣಾಕುಮಾರಿಯನ್ನು ಜೋಧಪುರದ ರಾಜನಿಗೆ ಕೊಡಬೇಕೆಂದು ಮೊದಲೆ ಗೊತ್ತುಮಾಡಿದ್ದನು. ಅಕಸ್ಮಾತ್ತಾಗಿ ಜೋಧಪುರದ ರಾಜ ತೀರಿಹೋಗಲು ಜಯಪುರದ ಜಗತ್ಸಿಂಹನು ಕೃಷ್ಣಾಕುಮಾರಿಯನ್ನು ತನಗೆ ವಿವಾಹ ಮಾಡಿಕೊಡಲು ಭೀಮಸಿಂಹನಿಂದ ಒಪ್ಪಿಗೆ ಪಡೆದನು.

ಅದೇ ಸಮಯದಲ್ಲಿ ಜೋಧಪುರದ ರಾಜನ ಸ್ಥಾನಕ್ಕೆ ಬಂದ ಮಾನಸಿಂಹನು ತಾನು ಕೃಷ್ಣಾಕುಮಾರಿಗೆ ತಕ್ಕ ವರನೆಂದು ಭೀಮಸಿಂಹನಿಗೆ ಹೇಳಿ ಕಳುಹಿಸಿದನು. ಸಿಂಧಿಯನು ಮಾನಸಿಂಹನ ಬೆಂಬಲಕ್ಕೆ ನಿಂತು ಭೀಮಸಿಂಹನನ್ನು, ಜಗತ್ಸಿಂಹನನ್ನು ಸೋಲಿಸಿದನು. ಅದೇ ಸಮಯಕ್ಕೆ ವಿಧಿ ಅಮೀರಖಾನನನ್ನು ಅಲ್ಲಿಗೆ ಕಳುಹಿಸಿತು. ಅವನ ಕ್ರೌರ್ಯಕ್ಕೆ ರಜಪೂತರು ನಡುಗಿ ಹೋದರು.

ಅಂತಹ ಪರಿಸ್ಥಿತಿಯ ಒಂದು ರಾತ್ರಿ ಕೃಷ್ಣಾಕುಮಾರಿಯು ವಿಷಸೇವಿಸಿ ಕಾಳನಿದ್ರೆಗೆ ವಶವಾದಳು. ಆ ದಾರುಣ ಕಥೆಯನ್ನು ದ.ರಾ.ಬೇಂದ್ರೆಯವರು ವಾರ್ಧಕ ಷಟ್ಪದಿಯಲ್ಲಿ ಖಂಡಕಾವ್ಯವಾಗಿ ರಚಿಸಿದರು. ಅದನ್ನು ಕನ್ನಡ ಕುಲಪುರೋಹಿತ ಆಲೂರ ವೆಂಕಟರಾಯರು 1922ರಲ್ಲಿ ಪ್ರಕಟಿಸಿದರು. ಅದು ಬೇಂದ್ರೆಯವರ ಮೊದಲ ಪ್ರಕಟಿತ ಕೃತಿ.

ಬೇಂದ್ರೆಯವರನ್ನು ಸೆಳೆದು ಆಡಿಸಿದ ಕವಿ ಲಕ್ಷ್ಮೀಶ. ಆತನ ಕಾವ್ಯರಚನಾ ಶೈಲಿ, ಶಬ್ದ ಪ್ರಯೋಗ ಚಾತುರ್ಯ, ಪ್ರತಿಮಾ ಕೌಶಲ್ಯಗಳನ್ನು 'ಕೃಷ್ಣಾಕುಮಾರಿ'ಯಲ್ಲಿ ಕಾಣಬಹುದು. ಈ ಕೃತಿಯನ್ನು ಅವರು 'ಪಾಮರರನ್ನು ರಂಜಿಸಿದ ಕವಿ ಲಕ್ಷ್ಮೀರಮಣನಾಸ್ಯ ಚಂದ್ರನಿಗೆ ಈ ನಕ್ಷತ್ರ ಮಾಲೆಯನ್ನು ಸಮರ್ಪಿಸುವೆನು' ಎಂದು ಅರ್ಪಿಸಿದ್ದಾರೆ. 'ನಕ್ಷತ್ರ ಮಾಲೆ' ಎಂಬ ನುಡಿಗೆ ತಕ್ಕಂತೆ ಈ ಕಾವ್ಯದಲ್ಲಿ 27 ಷಟ್ಪದಿಗಳಿವೆ. ಇದರಲ್ಲಿ ಯುವಕವಿಯ ಕಾವ್ಯ ಪ್ರಯೋಗದ ಉತ್ಸಾಹ, ಅದರ್ಶ, ಹೆಣ್ಣಿನ ಬಗೆಗಿನ ಗೌರವ, ಅಂತಃಕರಣದ ಪ್ರಕಾಶವಿದೆ.

ಈ ಕಾವ್ಯದಲ್ಲಿ ಮೇಲ್ನೋಟಕ್ಕೆ ಕೃಷ್ಣಾಕುಮಾರಿ ದುರಂತವಾಗಿ ಕೊನೆಯಾದಳೆಂದು ಓದುಗರಿಗೆ ತೋರಿದರೂ ಅದು ಸಾವಲ್ಲ, ಬದಲಾಗಿ ಅವಳ ಇಚ್ಛಾಪೂರ್ವಕ ಆತ್ಮಾರ್ಪಣೆಯಾಗಿದೆ. ಅವಳ ಸಾವನ್ನು ಬೇಂದ್ರೆಯವರು 'ಸ್ವಸಂತೋಷದ ಆತ್ಮಾರ್ಪಣೆ' ಎಂದು ವರ್ಣಿಸಿದ್ದಾರೆ.

ಭಾರತೀಯ ಸಾಹಿತ್ಯ ಪರಂಪರೆಯ ನಂಬುಗೆಯ ಪ್ರಕಾರ ಕಾವ್ಯ ಮತ್ತು ನಾಟಕಗಳಲ್ಲಿ ಸಾವು, ಆತ್ಮಹತ್ಯೆಯ ನಿರೂಪಣೆಗಳು ಅಮಂಗಳಕಾರಿಯಾದುದಾಗಿವೆ, ಆದರೆ ಪಶ್ಚಿಮದ ಸಾಹಿತ್ಯದಲ್ಲಿ ಆತ್ಮಹತ್ಯೆ ಘನತೆಯ ಸಂಕೇತವಾಗಿದೆ. ಶ್ರೇಯಸ್ಸಿನ ದ್ಯೋತಕವಾಗಿದೆ. ಗ್ರೀಕ್ ನಾಟಕಗಳಲ್ಲಿ, ಹಾಗೆಯೇ ಶೇಕ್ಸ್‌ಪಿಯರ್ ದುರಂತ ನಾಟಕಗಳಲ್ಲಿ ಆತ್ಮನಾಶದತ್ತ ಮುಖ ಮಾಡುವ (ಈಡಿಪಸ್, ಅಗಮೆಮ್ನನ್, ಒಥೆಲೋ, ಹ್ಯಾಮ್ಲೆಟ್, ಲಿಯರ್ ಮಹಾರಾಜ ಇತ್ಯಾದಿ) ವೀರೋದಾತ್ತ ಪಾತ್ರಗಳು ಪೇಕ್ಷಕನ ಮಟ್ಟಿಗೆ ದುರಂತಮಯವೆಂಬಂತೆ ತೋರಬಹುದು. ಆದರೆ ಆಯಾ ಪಾತ್ರಗಳ ಮಟ್ಟಿಗೆ ಅವರ ಸಾವು ಅಮಂಗಳಕಾರಿಯಲ್ಲ. ಆ ಪಾತ್ರಗಳ ಸಾವಿನ ಹಂಬಲ ಬದುಕಿನ ಹಂಬಲಕ್ಕಿಂತಲೂ ತೀವ್ರವಾಗಿರುತ್ತದೆ. ಆ ಪಾತ್ರಗಳಿಗೆ ಸಾವು ಒಂದು ಪಲಾಯನವಲ್ಲ. ಭವದ ಆಸೆ ಆಕಾಂಕ್ಷೆಗಳಿಂದ ತೃಪ್ತವಾಗದ ಆ ಪಾತ್ರಗಳು ಸಾವಿನ ಮೂಲಕ ಬದುಕಿನ ನಿಗೂಢಗಳನ್ನು ಬಗೆಯಲು ಮುಂದಾಗುತ್ತವೆ, ಇಲ್ಲಿ ಕೃಷ್ಣಾಕುಮಾರಿಯೂ ಇದೇ ಹಂಬಲದಿಂದ ಸಾವನ್ನಪ್ಪುತ್ತಿದ್ದಾಳೆ.

'ಕೃಷ್ಣಾಕುಮಾರಿ' ರಚಿಸುವಾಗ ಬೇಂದ್ರೆಯವರಿಗೆ ಕೇವಲ ಇಪ್ಪತ್ತಾರರ ಹರೆಯ. ಆಗಷ್ಟೆ ವಿಶ್ವಸಾಹಿತ್ಯದ ಪ್ರಭಾವಕ್ಕೆ ತೆರೆದುಕೊಳ್ಳುತ್ತಿದ್ದ ಅವರಿಗೆ ಸಹಜವಾಗಿ ಒಂದು ಭಾರತೀಯ ಕಥಾಹಂದರಕ್ಕೆ ಪಶ್ಚಿಮದ ದುರಂತದ ಎಳೆಯನ್ನು ತಂದು ಸೇರಿಸುವ ಬಯಕೆಯಾಗಿತ್ತು ಎನಿಸುತ್ತದೆ. ಅಲ್ಲದೆ ಸಾವು ಬದುಕಿನ ಶತ್ರುವಲ್ಲ ಬದಲಾಗಿ ಬದುಕಿಗೆ ಪೂರಕವಾದುದು ಎಂಬ ಭಾರತೀಯ ಅಧ್ಯಾತ್ಮಿಕ ವಿವೇಕವು ಈ ಕಾವ್ಯ ರಚನೆಯ ಹಿನ್ನೆಲೆಯಲ್ಲಿತ್ತು. ಹಾಗಲ್ಲದೆ ಕಠೋಪನಿಷತ್ತಿನಲ್ಲಿ ನಚಿಕೇತನು ಮೃತ್ಯುದೇವತೆಯ ಪದದಲ್ಲಿ ಕುಳಿತು ಬದುಕಿನ ರಹಸ್ಯವನ್ನು ತಿಳಿಯುತ್ತಿರಲಿಲ್ಲ.

ಬೇಂದ್ರೆಯವರು ಕೃಷ್ಣಾಕುಮಾರಿಯ ಸಾವಿನ ರಾತ್ರಿಯನ್ನು ಅಮಾವಾಸ್ಯೆ ಎಂದು ಕಲ್ಪಿಸಿಕೊಂಡಿದ್ದಾರೆ. ಆ ತೆರೆಯ ಹಿಂದೆ ಮೇಳಗೂಡಿದ ಚಿಕ್ಕಿಗಳು ಸೌಂದರ್ಯ ಶಕ್ತಿಯನ್ನು ಕುರಿತು ಹಾಡಿದವು ಎಂದು ಚಿತ್ರಿಸಿದ್ದಾರೆ. 'ಮದದಿಂದಂಧವಾದ ಕಾಮವ ಕೊಂದು ಹೆಸರಾದ ಸೌಂದರ್ಯವೆಂಬ ಸಾವೇ' ಎಂದು ಅವು ವರ್ಣಿಸಿವೆ. ಹೆಣ್ಣಿನ ಸೌಂದರ್ಯ ಅಮೃತ, ಮಾವು, ಕಾಮಧೇನು. ಅಂದವೇ ಅದರ ಐಸಿರಿ. ಆ ಪವಿತ್ರಾತ್ಮಳನ್ನು ಕುಟುಂಬ ಮತ್ತು ಸಮಾಜ ಉತ್ತಮವಾಗಿ ಕಂಡು ಪೋಷಿಸದಿದ್ದರೆ ಆಕೆ ಕಟುವಿಷ, ಬೇವು, ಹಾವು ಆಗುತ್ತಾಳೆ ಎಂಬ ಚಿಂತನೆಯನ್ನು ಸಾರಿದ್ದಾವೆ.

ವಿಷದ ಮೊದಲ ಬಟ್ಟಲನ್ನು ಕುಡಿಯುವಾಗ ತಮೋವಿಕಾರಗಳು ಪ್ರಬಲವಾಗುತ್ತವೆ. ಆಗ ಕೃಷ್ಣಾಕುಮಾರಿಯು ತನ್ನ ಜನ್ಮ, ಬಾಲ್ಯ, ಯೌವನ, ಹೆಣ್ತನ, ಚೆಲುವನ್ನು ನೆನೆದು ನೋಯುತ್ತಾಳೆ. ಕನ್ನೆಯಾದ ತನ್ನನ್ನು ರಕ್ಷಿಸಲಾಗದ ರಾಜಪುತ್ರಕುಲದ ಷಂಡಗಂಡಸುತನಕ್ಕೆ

ಥೂ ಎಂದಿದ್ದಾಳೆ.

ವಿಷದ ಎರಡನೆ ಬಟ್ಟಲನ್ನು ಕುಡಿಯುವಾಗ ರಜೋಗುಣಗಳು ಮೇಲೆದ್ದು ಬರುತ್ತವೆ. 'ಗರ್ವದಿಂದಿರಾಗು ಕ್ಷತ್ರಿಯನ ಪ್ರೇಮ ಪುತ್ರಿ' ಎಂದು ಸಾವನ್ನು ಎದುರಿಸಲು ಸಿದ್ಧಳಾಗುತ್ತಾಳೆ.

ವಿಷದ ಮೂರನೆ ಬಟ್ಟಲನ್ನು ಕುಡಿಯುವಾಗ ಸಾತ್ವಿಕ ಬುದ್ಧಿಯು ಪ್ರಬಲವಾಗುತ್ತದೆ. 'ಸಾಯುವೆನು ಆತ್ಮಸಂತೋಷದಿಂದ' ಎಂದು ತೀರ್ಮಾನಿಸುತ್ತಾಳೆ.

ಪರಾಂತಃಕರಣ ಪ್ರವೇಶವುಳ್ಳ ಕವಿ ಅಂಬಿಕಾತನಯದತ್ತರು ಕಾವ್ಯನಾಯಿಕೆಯ ನಿರ್ಯಾಣ ಮಂಗಳವನ್ನು ಹೀಗೆ ಹಾಡಿದ್ದಾರೆ:

'ಪ್ರೇಮಲತೆ! ಮೂರ್ತಿಮಾನ್ ಪ್ರೇಮಲತೆಯೇ ! ನಿನ್ನ ।
ಕಾಮಲತೆಯೆಂದು ಕಾಮಿಸಿದರೌ ! ನಿನ್ನನ್ನು ।
ಹೋಮಿಸಿದರೌ ಕುಸುಮ ಸುಕುಮಾರ ಕುವರಿಯೇ !
ಕಾಮಾಗ್ನಿ ಹೋತ್ರದಲ್ಲಿ ॥

ಕೃಷ್ಣಾಕುಮಾರಿ ಸೌಂದರ್ಯದ ಸಂಕೇತವಾಗಿದ್ದಾಳೆ. ಸೌಂದರ್ಯಕ್ಕೆ ಎಲ್ಲಾದರೂ ಸಾವುಂಟೇ, ದಿವ್ಯಾನುಭವದ (ಸತ್ಯ, ಶಿವ, ಸುಂದರ) ಮೂಲ ಲಕ್ಷಣಗಳಲ್ಲಿ ಒಂದಾದ ಸೌಂದರ್ಯವು ನಾಶವಾಗುತ್ತದೆ ಎನ್ನುವುದಾದರೆ – ದಿವ್ಯಾನುಭವದ ಕಲ್ಪನೆಯನ್ನೇ ನಾವು ಮರು ವಿವೇಚಿಸಬೇಕಾಗುತ್ತದೆ. ಹಾಗಾಗಿ ಈ ಖಂಡಕಾವ್ಯದಲ್ಲಿ ಕೃಷ್ಣಾಕುಮಾರಿ ಅಥವಾ ಸೌಂದರ್ಯ ಸಾಯುವುದಿಲ್ಲ. ಬದಲಾಗಿ ಇಲ್ಲಿ ಸೌಂದರ್ಯವೆಂಬುದು ತನ್ನ ಲೌಕಿಕ ಕೈಂಕರ್ಯವನ್ನು ನೀಗಿಕೊಂಡು ಅಲೌಕಿಕದ ಸೇವೆಗೆ ನಿಲ್ಲುತ್ತದೆ.

'ಯಾವನೆನ್ನನು ದಿವ್ಯಗತಿಯ ಸೋಪಾನವನು ।
ಜೀವಭಾವದ ಬೆರಳು ಕೊಟ್ಟು ಹತ್ತಿಸಿದನೋ ।
ಆ ವರಗೆ ಈಶ್ವರಗೆ ಶಾಶ್ವತದಿ ಈ ಪಂಚ ಪ್ರಾಣವನ್ನರ್ಪಿಸಿದೆನು ॥'


ಎಂದು ಹಾಡಿ ದಿವ್ಯಜೀವನದ ಹೊಸ್ತಿಲಿಗೆ ಆಕೆ ಬರುತ್ತಾಳೆ. ಕೊನೆಗೂ ಸೌಂದರ್ಯ ಸಾಯುವುದಿಲ್ಲ, ಅರ್ಪಣೆಯಾಗುತ್ತದೆ.

ಈ ಕಾವ್ಯವನ್ನು ಕುರಿತು ವಾಮನ ಬೇಂದ್ರೆಯವರು ಹೇಳಿರುವ ಮಾತು ಮನನೀಯವಾಗಿದೆ;

'ಕಾಮರಜದಿಂದ ಕೂಡಿದ ಹೃದಯಗಳು ಕೃಷ್ಣಾಕುಮಾರಿಯ ಪತನದಿಂದ ಪ್ರೇಮ ಪರಿವರ್ತನ ಪಾವಿತ್ರ್ಯವನ್ನು ಪಡೆಯಬೇಕು ಎಂಬಲ್ಲಿ ಈ ಕೃತಿಯ ಸಾರ್ಥಕತೆ ಅಡಗಿದೆ. ಅಧ್ಯಾತ್ಮಿಕ ವಿಕಾಸವು ಈ ಖಂಡಕಾವ್ಯದ ಗುರಿಯಾಗಿದೆ.' (ಕೃಷ್ಣಕುಮಾರಿ : ಸಂನುಡಿ)

(ವಿಜಯ ಕರ್ನಾಟಕ, ಬೋಧಿವೃಕ್ಷ, 15–7–2017)

■



ಗರಿ

ದ.ರಾ.ಬೇಂದ್ರೆಯವರ ಮೊದಲ ಪ್ರಕಟಿತ ಕವನ ಸಂಕಲನ 'ಗರಿ'. ಅದನ್ನು ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು 1932ರಲ್ಲಿ ಪ್ರಕಟಿಸಿದರು. ಅದರಲ್ಲಿ ಬೇಂದ್ರೆಯವರು 1918ರಿಂದ 1932ರವರೆಗೆ ರಚಿಸಿದ ಒಟ್ಟು 55 ಕವನಗಳಿವೆ. ಬೇಂದ್ರೆಯವರ ತಾರುಣ್ಯದ ಉತ್ಸಾಹ, ಆದರ್ಶ, ಪ್ರತಿಭೆಯು ವಿವಿಧ ಛಂದೋಲಯಗಳಲ್ಲಿ ನಾದ ಮಾಧುರ್ಯದಲ್ಲಿ, ಕಾವ್ಯಾಲಂಕಾರಗಳ ಸೊಬಗಿನಲ್ಲಿ ಜೀವಪೋಷಕ ಚಿಂತನೆಯನ್ನು ಹೊಸಕಾವ್ಯವಾಗಿ ನೀಡಿದೆ.

ಬೇಂದ್ರೆಯವರು 'ಭಾವಗೀತೆಗಳಲ್ಲಿ ನಾನು ಗತಾನುಗತಿಕ ಷಟ್ಪದಿಗಳನ್ನು ಬಳಸಿದೆ. ಸಂಗಡವೇ ಹೊಸ ಛಂದಸ್ಸುಗಳ ಪ್ರಯೋಗವನ್ನು ಮಾಡಿದೆ. ಮುಂದೆ ಮಾಸ್ತಿಯವರಿಗೂ ನನಗೂ ಗಹನ ಸ್ನೇಹಕ್ಕೆ ದಾರಿಮಾಡಿಕೊಟ್ಟ, ಮೊದಲು 'ಸ್ವಧರ್ಮ'ದಲ್ಲಿ ಬೆಳಕುಕಂಡ ಮತ್ತು 'ಗರಿ' ಯಲ್ಲಿ ಪ್ರಥಮ ಪದ್ಯವಾಗಿ ಮುದ್ರಿತವಾದ 'ಬೆಳಗು' (ಮೂಡಲ ಮನೆಯ ಮುತ್ತಿನ ನೀರಿನ) ಕವಿತೆಯೇ ಬಹುಶಃ ನನ್ನ ಮೊದಲ ನೂತನ ಛಂದಃ ಪ್ರಯೋಗ (1919). ಇದು ಹೊಸ ಛಂದಸ್ಸು... ಬಹುಶಃ ಇಕ್ಕಟ್ಟಾದ ಮಾತ್ರಾಮಿತಿಗಳುಳ್ಳ ಷಟ್ಪದಿಗಳು ನನ್ನ ಸ್ವಾಭಾವಿಕ ಸ್ವಾತಂತ್ರ್ಯಪ್ರಿಯ ಆತ್ಮಕ್ಕೆ ಹಿಡಿಸಿರಲಿಕ್ಕಿಲ್ಲ. ಧಾರವಾಡದಲ್ಲಿ ಯಾವಾಗಲೂ ಕಿವಿದೆರೆದು ಓಡಾಡುವ ನನಗೆ ದಾಸರ ಪದದಿಂದ ಗೊಲ್ಲರ ಹಾಡಿನವರೆಗೆ ಎಲ್ಲವನ್ನೂ ಕೇಳಿ, ಕೇಳಿ, ಒಂದು ಸಂಸ್ಕಾರ ಬಂದಿರಬೇಕು. ಸಾಂಗತ್ಯ ಮತ್ತು ಲೋಕಗೀತೆಗಳ ಅಂಶಗಣಗಳು ಕೊಡುವ ಸ್ವಾತಂತ್ರ್ಯ, ಮಾಧುರ್ಯಗಳು ರಕ್ತಗತವಾಗಿರಬೇಕು. ಇದೆಲ್ಲ ಸೇರಿ ಛಂದಸ್ಸುಗಳಲ್ಲಿ ನವನವೋನ್ಮೇಷಣೆ ನನಗೆ ಸಾಧ್ಯವಾಗಿರಬೇಕು'. ಎಂದು ಹೇಳಿದ್ದಾರೆ. (ಸಾಹಿತ್ಯ ಮತ್ತು ಸಾರ್ಥಕತೆ)

1917 ಮೇ ತಿಂಗಳ 'ಆರ್ಯ' ಪತ್ರಿಕೆಯಲ್ಲಿ ಶ್ರೀ ಅರವಿಂದರು ಕೀಟ್ಸ್‌ಕವಿಯ ಕಾವ್ಯ ವಿಮರ್ಶೆಮಾಡುತ್ತ ಸೌಂದರ್ಯದ ನಾಲ್ಕುನೆಲೆಗಳನ್ನು ಮುಟ್ಟಿದರೆ ಪೂರ್ಣತೆ ಬರುತ್ತದೆ ಎಂದು ತಿಳಿಸಿದ್ದರು. ಪ್ರತಿಯೊಂದು ನುಡಿಯಲ್ಲಿ ಒಂದೊಂದು ನೆಲೆ ನಾಲ್ಕು ನುಡಿಯಲ್ಲಿ ನಾಲ್ಕುನೆಲೆ. ಬೇಂದ್ರೆಯವರು ಅದನ್ನು ನಾಲ್ವರಿ – ನಾಲ್ಕು ಬಗೆಯ

ತಿಳುವಳಿಕೆ ಎಂದು ಅರ್ಥಮಾಡಿಕೊಂಡರು. ಅದನ್ನು ಚತುರ್ಮುಖ ಸೌಂದರ್ಯ ಎಂಬುದಾಗಿ ಸಿದ್ಧಪಡಿಸಿದರು.

1. Sensuous Beauty- ಐಂದ್ರಯಿಕ ಸೌಂದರ್ಯ

2. Imaginative Beauty- ಕಾಲ್ಪನಿಕ ಸೌಂದರ್ಯ

3. Intellecual Beauty- ಬೌದ್ಧಿಕ ಸೌಂದರ್ಯ

4. Ideal Beauty- ಆದರ್ಶ ಸೌಂದರ್ಯ

ಬೇಂದ್ರೆಯವರು ಚತುರ್ಮುಖ ಸೌಂದರ್ಯ ಸಿದ್ಧಾಂತದಿಂದ 'ಚಂದ್ರ', 'ಗಂಡುಸು ಹೆಂಗುಸಿಗೆ', 'ಚತುರ್ಮುಖ ಸೌಂದರ್ಯ', 'ಹಂಪೀ–ವಿಜಯನಗರ ದರ್ಶನ' ಕವನಗಳನ್ನು ರಚಿಸಿದರು. ಅವು ಈ ಸಂಕಲನದಲ್ಲಿವೆ. ಒಂದೊಂದು ನುಡಿಯಲ್ಲಿ ಒಂದೊಂದು ಸೌಂದರ್ಯವನ್ನು ಸೃಷ್ಟಿಸಿ ಸುಖಿಸಿದ್ದಾರೆ.

ಪಕ್ಷಿಯದು ಸ್ವತಂತ್ರ, ಸ್ವಚ್ಛಂದವಾದ ಬದುಕು. ಅದರ ಶಕ್ತಿ ಸಾಮರ್ಥ್ಯ, ಚೈತನ್ಯ, ಮಧುರಕಂಠ, ಬಣ್ಣ ಬೆಡಗು, ನಲಿವ ಲಾಸ್ಯ – ತನ್ನ ಸ್ವಸಾಮರ್ಥ್ಯದಿಂದ ಪಡೆದಿದ್ದು. ಅದರಲ್ಲಿ ಬದುಕುವ ಛಲವಿದ್ದು ಸದಾ ಜಾಗೃತಮನವಿದೆ. ಅದರ ಎಲ್ಲ ಗುಣಲಕ್ಷಣಗಳ ಪ್ರತೀಕ ಅದರ ಗರಿ. ಹಾಡುಹಕ್ಕಿ ಅಂಬಿಕಾತನಯದತ್ತರ ಯುವ ಕಾವ್ಯಶಕ್ತಿ ಚೈತನ್ಯವು 'ಗರಿ' ಕವನ ಸಂಕಲನದಲ್ಲಿ ಗರಿಗರಿಯಾಗಿ ಹರಡಿಕೊಂಡಿದೆ.

ಅವರು 'ಗರಿ'ಯ ಮುನ್ನುಡಿಯಲ್ಲಿ 'ಇವು ನನ್ನವಲ್ಲ ; ಕನ್ನಡದ ಕವನಗಳು' ಎಂದು ಹೇಳಿದ್ದಾರೆ. ಅವು 'ಹಾರಲೆಂದು ಹುಟ್ಟಿದಾ । ಹಕ್ಕಿ ಮೈಯ ಗರಿಗಳು.' ಅದನ್ನು ಸಹೃದಯ ತೂರಿ ಹಾರಿಸಿ ನಲಿಯಲಿ ಎಂದು ಆಶಿಸಿದರು. ಇಲ್ಲಿ ಹಾರುವ ಹಕ್ಕಿ ಕವಿಯಾಗಿ ಅವನಿಂದ ಉದುರಿದ 'ಗರಿ'ಗಳು ಎಂಬುದಾಗಿ ರೂಪಕಾತ್ಮಕವಾಗಿ ಕವನಗಳು ರಚನೆಯಾಗಿವೆ.

ಅವರ ಜೀವ ಭಾವವಾದ ಅವರ ಎಲ್ಲ ಅರಿವಿನ ಪ್ರತೀಕ 'ಗರಿ'. ಅವರು ಸಹೃದಯನನ್ನು ಹೀಗೆ ಕೇಳಿಕೊಂಡಿದ್ದಾರೆ:

'ಅಪ್ಪಿ ತಪ್ಪಿ ನೆಲದಲಿ
ಬಂದು ಇಳಿದರಿವುಗಳ
ಊದಿ ತೂರಿ ಹಾರಿಸು
ಮತ್ತೆ ಮೇಲೆ ಮುಗಿಲಲಿ'.

'ಗರಿ' ಕವನ ಸಂಕಲನವು ರಸಿಕ ಸಹೃದಯರನ್ನು ಗಗನಮುಖಿಯಾಗಿಸಿ ನಲಿಯುವಂತೆ ಮಾಡುತ್ತದೆ. ಮನಸ್ಸನ್ನು ಹಗುರವಾಗಿಸಿ ನಿರಾಳವಾಗುವಂತೆ ಮಾಡುತ್ತದೆ. ನೆಲದ ಮೇಲೆ ನಿಂತವರಿಗೆ ಹಾರುವ ಹಂಬಲ ಉಂಟು ಮಾಡುತ್ತದೆ. ಕಾವ್ಯ

ಕುತೂಹಲಿಗಳಿಗೆ ಅದರಂತೆ ತಾವು ಕಾವ್ಯ ರಚಿಸಬೇಕೆಂಬ ಇಂಬುಂಟು ಮಾಡುತ್ತದೆ.

ಈ ವಿಶ್ವದಲ್ಲಿ 'ಪ್ರೀತಿಯಿಂದ ಶಾಂತಿಸ್ಥಾಪನೆ ಸಾಧ್ಯ' ಎಂಬ ಚಿಂತನೆಯನ್ನು ಅವರು 'ಬೆಳಗು' ಕವನದಲ್ಲಿ ನೀಡಿದ್ದಾರೆ. ವಿಶ್ವಚೈತನ್ಯವನ್ನು ಆರಾಧಿಸುತ್ತ ಅದಕ್ಕೆ ಶರಣುಹೋಗಿ ವಿಶ್ವಾತ್ಮಕ ದರ್ಶನವನ್ನು 'ನನ್ನ ಹಾಡು' ಕವನದಲ್ಲಿ ನೀಡಿದ್ದಾರೆ. ಅದುಸಾರುವ ತತ್ತ್ವ;

'ರಸವೆ ಜನನ
ವಿರಸ ಮರಣ
ಸಮರಸವೇ ಜೀವನ.'

'ಯುಗಾದಿ' ಕವನದಲ್ಲಿ 'ಬೇವಿನ ಕಹಿಬಾಳಿನಲ್ಲಿ । ಹೂವಿನ ನಸುಗಂಪು ಸೂಸಿ। ಜೀವಕಳೆಯ ತರುತಿದೆ' ಎಂದು ಪ್ರಕೃತಿಯು ಮನುಕುಲವನ್ನು ಪೋಷಿಸುತ್ತಿರುವುದನ್ನು ಕಾವ್ಯವಾಗಿಸಿದ್ದಾರೆ. 'ಹಕ್ಕಿಹಾರುತಿದೆ ನೋಡಿದಿರಾ' ಕವನವು ಕಾಲಪಕ್ಷಿಯ ಓಘವನ್ನು ಅಮೋಘ ರೂಪಕದಲ್ಲಿ ಪ್ರಕಟಪಡಿಸಿದೆ. 'ಹೂ', 'ಚಳಿಯಾಕೆ' ಅಪ್ತ ಅನುಭವನೀಡುವ ಪ್ರಕೃತಿ ಗೀತಗಳಾಗಿವೆ.

ಅವರ ಪ್ರಣಯಗೀತಗಳು ದೇಸಿನುಡಿಯಲ್ಲಿ, ಸಹಜ ಭಾವದಲ್ಲಿ, ಸರಳವಾಗಿ ಪ್ರಕಟಗೊಂಡು ಮಧುರ ಲಹರಿಯಲ್ಲಿ ಆಕರ್ಷಣೀಯವಾಗಿವೆ. 'ರಾಗರತಿ'ಯಲ್ಲಿ ಪ್ರಕೃತಿಯರಾಗ ಗಂಡುಹೆಣ್ಣಿನ ಪ್ರಣಯಕ್ಕೆ ರೂಪಕವಾಗಿ ಹೊಸಕಾವ್ಯ ಸೃಷ್ಟಿಯಾಗಿದೆ. 'ನಗೀನವಿಲು', 'ಬಿಸಿಲುಗುದುರೆ', 'ನನ್ನ ಕೈಯ ಹಿಡಿದಾಕೆ' ಮುಂತಾದ ಕವನಗಳು ಓದುಗರನ್ನು ತನ್ನ ನವಿರು ಭಾವದಿಂದ ಸದಾ ಸೆಳೆಯುತ್ತಿವೆ.

ಹಣ ಮತ್ತು ಅನ್ನವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡ ಅಮಾನವೀಯ ಬಂಡವಾಳಷಾಹಿ, ಆಡಳಿತಷಾಹಿ, ಧನದಾಹಿಗಳ ಕಾರಣದಿಂದ ಅನ್ನದ ಆಹಾಕಾರ ಉಂಟಾಗಿದೆ. ಅನ್ನಕ್ಕಾಗಿ ಪರಿತಪಿಸುವ ಜೀವಗಳ ನೋವು ನರಳಾಟವನ್ನು ಬೇಂದ್ರೆ ಹೀಗೆ ಚಿತ್ರಿಸಿದ್ದಾರೆ;

'ಆದರಿನ್ನು ತಿನ್ನುವದೇನನ್ನ?
ಅನ್ನವೆಲ್ಲವೂ ಆಯಿತು ಚಿನ್ನ !
ನಾನೇ ನನ್ನನ್ನು ತಿನ್ನುವ ಅನ್ನ !

ತುತ್ತು ಸಿಗದೆ ಸಂಕಟಕ್ಕೊಳಗಾದ ದೀನದಲಿತರ. 'ತುತ್ತಿನ ಚೀಲ'ವು ಅನ್ನಬ್ರಹ್ಮದ ದೇಗುಲದಲ್ಲಿ ಕಾಣುವುದು: 'ಡೊಂಬರ ಪೂಜೆಯು । ಕಾಗೆಯ ಮಂತ್ರ । ಗಾಳಿಯ ಎಡೆಯು । ಬೊಬ್ಬೆಯ ಗಂಟೆ,' ದೀನದಲಿತ ಕೂಲಿಕಾರ್ಮಿಕರ ಹಸಿವನ್ನು ಬೇಂದ್ರೆ 'ಹಸಿದವ ಬಲ್ಲ, ಹಸಿವೆಯ ಶೂಲಿ' ಎಂದು ಹಸಿವಿನ ಕ್ರೂರ ತಿವಿತಕ್ಕೆ ವಿಲಿವಿಲಿ ಒದ್ದಾಡುವ ಚಿತ್ರ ನೀಡಿದ್ದಾರೆ. ಹಸಿವಿನ ಕರಾಳತೆಗೆ ಒಳಗಾದ 'ತುತ್ತಿನಚೀಲ'ವು ನಿರಾಶೆಗೊಂಡು, ಆಕ್ರೋಶದಿಂದ ನುಡಿಯುತ್ತದೆ :

‘ದೇವರದೊಂದು ಗೋರಿಯಕಟ್ಟಿ
ಧರ್ಮದ ಧೂಪಕೆ ಬೆಂಕಿಯನಿಕ್ಕಿ’

‘ಕರಿಮರಿನಾಯಿ’ಯಲ್ಲಿ ಪ್ರಾಣಿದಯಾರಹಿತ ಮನುಜನ ಕ್ಷುಲ್ಲಕತೆಯನ್ನು ವಿಡಂಬಿಸಿದ್ದಾರೆ. ‘ಬಾಳ ಕರವಾಳ’, ‘ಕೆಲಸವಿಲ್ಲದವರ ಹಾಡು’, ಮುಂತಾದವುಗಳು ಸಾಮಾಜಿಕ ಚಿಂತನೆಯ ಕೆಂಡದ ಉಂಡೆಗಳಾಗಿವೆ.

ದೇಶಭಕ್ತ, ರಾಷ್ಟ್ರಚಿಂತಕ, ಆದರ್ಶವಾದಿ ಬೇಂದ್ರೆಯವರು ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ರಚಿಸಿದ ‘ಅಹಹ ಸ್ವಾತಂತ್ರ್ಯದೇವಿ’, ‘ನರಬಲಿ’, ‘ತರುಣತಪಸ್ವಿ’, ‘ಮೂವತ್ತು ಮೂರು ಕೋಟಿ’, ಅವರ ಉಜ್ವಲ ರಾಷ್ಟ್ರೀಯ ಭಾವದ ಕವನಗಳಾಗಿವೆ.

ಕನ್ನಡ ನಾಡು-ನುಡಿಯನ್ನು ಪೋಷಿಸಿ ಬೆಳೆಸುವ ತೀವ್ರಕಾಳಜಿ ಹೊಂದಿದ್ದ ಬೇಂದ್ರೆಯವರು ‘ಕನಸಿನೊಳಗೊಂದು ಕಣಸು’ ಕವನದಲ್ಲಿ ಕನ್ನಡ ತಾಯಿಯು ‘ಗಂಡಸಾದರೆ ನಿನ್ನ ಬಲಿಕೊಡುವೆಯೆನು ?’ ಎಂದು ಪ್ರಶ್ನಿಸಿರುವುದನ್ನು ಚಿತ್ರಿಸಿದ್ದಾರೆ. ನಾಡು-ನುಡಿರಕ್ಷಣೆಗೆ ತ್ಯಾಗಬೇಕು ಇನ್ನೇನೂ ಅಲ್ಲ ಎಂಬುದನ್ನು ಧ್ವನಿಸಿದ್ದಾರೆ. ‘ಹಂಪೀ ವಿಜಯನಗರ ದರ್ಶನ’, ‘ಸೀಮೋಲ್ಲಂಘನ’ದ ಜೊತೆಗೆ ಕನ್ನಡದ ಆದಿಕವಿ ಪಂಪ, ನವೋದಯಕವಿ ಮುದ್ದಣನನ್ನು ಕುರಿತು ಕವನ ರಚಿಸಿದ್ದಾರೆ.

‘ಪಾತರಗಿತ್ತಿ ಪಕ್ಕ’, ‘ಕುಣಿಯೋಣು ಬಾರ’ ಕವನಗಳಲ್ಲಿ ಬಳಸಿರುವ ದೇಸಿಪದಗಳ ಅರ್ಥವನ್ನು ನಾವು ಇನ್ನೂ ಅರಿಯಬೇಕಾಗಿದೆ. ಅವರ ಜೀವನ ತತ್ತ್ವ : ‘ಲೀಲೆಯಲಿ ಯಾವುದೂ ವಿಫಲಮಲ್ಲ’.

(ವಿಜಯ ಕರ್ನಾಟಕ, ಬೋಧಿವೃಕ್ಷ, 1.7.2017)

■



ಸಖೀಗೀತ

'ಸಖಿ! ನಮ್ಮ ಸಖ್ಯದ ಆಖ್ಯಾನ ಕಟು–ಮಧುರ
ವ್ಯಾಖ್ಯಾನದೊಡಗೂಡಿ ವಿವರಿಸಲೇ'

ಎಂದು ಬೇಂದ್ರೆಯವರು 'ಸಖೀಗೀತ' ಕಾವ್ಯ ರಚಿಸುವ ಮೊದಲು ತನ್ನ ಪತ್ನಿ ಲಕ್ಷ್ಮೀಬಾಯಿಯ ಅನುಮತಿಯನ್ನು ಕೇಳಿದ್ದಾರೆ. ಶೃಂಗಾರ ರಸ ಪ್ರಧಾನವಾದ ಲಾವಣಿಯನ್ನು ಮರಾಠಿಯಲ್ಲಿ 'ಸಖೀ' ಎಂದು ಕರೆಯುತ್ತಾರೆ. ಬೇಂದ್ರೆಯವರು ರಚಿಸಿರುವ ಸಖೀಗೀತವು

'ಗರತಿಯರೆದೆವಾತು, ನೆರೆವಾತುಗಳ ಬೆರೆತು
ಲಾವಣಿಯಲಂಕಾರದಲಿ ಹೊಂದಿದೆ.'

ಗೃಹಿಣಿ, ಪತಿವ್ರತೆಯರು ಗರತಿಯರು. ಅಂತಹ ಹದಿಬದೆಯ ಕಾವ್ಯ 'ಸಖೀಗೀತ'. ಅದು ದಂಪತಿಗಳ ಪ್ರೇಮ–ವಿರಹಗಳ ಹೃದಯಂಗಮ ಸಮರಸ ಗೀತ. ಅದರಲ್ಲಿ ನೆರೆವಾತು ಅರ್ಥಾತ್ ಶೃಂಗಾರದ ಮಾತು ಸಹಜ. ಎದೆವಾತು ನೆರೆವಾತು ಒಂದಾಗಿ ಮೂಡುವುದು ಜನಪದ ಹಾಡು. ಅಂತಹ ಜನಪದ ಹಾಡಿನ ಲಾವಣಿಯ ಅಲಂಕಾರದಲ್ಲಿ ಈ ಕಾವ್ಯ ರೂಪುಗೊಂಡಿದೆ. ಈ ಲಾವಣಿಯು ನಿಯತವಾದ ಚರಣಗಳ ಚೌಪದಿಯಲ್ಲಿದೆ.

ವಿವಾಹ ವರ್ಷ 1919 ರಿಂದ 1935 ರ ವರೆಗಿನ ಬೇಂದ್ರೆಯವರ ಆತ್ಮಕಥೆಯೇ 'ಸಖೀಗೀತ'. ಇದು 960 ಸಾಲುಗಳಿರುವ ಒಂದು ಖಂಡಕಾವ್ಯ. ಇದು ಒಂದು ಇತಿಹಾಸ. ಈ ಕಾವ್ಯವು ನಲವತ್ತು ವಿಶಿಷ್ಟ ವಸ್ತು ವಿಭಾಗವನ್ನು ಹೊಂದಿದೆ. ಪ್ರತಿಭಾಗದ ಆರು ನುಡಿಗಳ ಕೊನೆಯ ಎರಡು ಸಾಲುಗಳಲ್ಲಿ ಬರುವ 'ನನಗೂ ನಿನಗೂ ಅಂಟಿದ ನಂಟಿನ ಕೊನೆಬಲ್ಲವರಾರು ಕಾಮಾಕ್ಷಿಯೇ !' ಎಂಬ ಪಲ್ಲವಿಯಿಂದ ಲಾವಣಿಯಗತ್ತು, ನಾದದ ಸೊಬಗು ಹೆಚ್ಚಿದಂತೆ ದಾಂಪತ್ಯದ ಅರ್ಥ ವಿಸ್ತಾರವಾಗುತ್ತ ಸಾಗುತ್ತದೆ. ಜೊತೆಗೆ ಅಚ್ಚರಿಯನ್ನು ವ್ಯಕ್ತಪಡಿಸುತ್ತ ತನ್ನ ಜೀವನಾನುಭವವನ್ನು ಅನುಭಾವಿಯ

ರೀತಿ ಚಿತ್ರಿಸುತ್ತ ಸಾಗುತ್ತದೆ. ಆ ಅಮೃತದನಂಟು ನಿರಂತರ ಜೀವ ಪ್ರವಾಹದ ಸತ್ಯ.

ಲಯಾನ್ವಿತವಾಗಿ ಸಾಗುವ ಈ ಕಾವ್ಯ ಪ್ರಾಸ, ಒಳಪ್ರಾಸಗಳ ಆಂತರ್ಯದ ಸೊಬಗು, ರೂಪಕಾತ್ಮಕ ಬೆರಗಿನ ರಚನೆಯಿಂದ – ಒಂದು ವಿಶಿಷ್ಟ ಬಾಗು ಬಳುಕಿನ ಒನಪನ್ನು ಹೊಂದಿದೆ. ಇದು 'ಅಕ್ಕರ ಛಂದವು ಸಾಂಗತ್ಯ–ಸಂಸ್ಕಾರ' ಹೊಂದಿದ ಹೊಸ ಕಾವ್ಯವಾಗಿದೆ.

ತತ್ತ್ವಜ್ಞಾನಿ ಫ್ರೆಡ್ರಿಕ್ ನೀಷೆ 'ಮದುವೆಗಳು ಮುರಿದು ಬೀಳುವುದಕ್ಕೆ ಗಂಡ–ಹೆಂಡಿರ ನಡುವಿನ ಪ್ರೀತಿಯ ಕೊರತೆ ಕಾರಣವಲ್ಲ; ಸ್ನೇಹದ ಕೊರತೆ ಕಾರಣ' ಎಂದು ಹೇಳಿದ್ದಾನೆ. ಆ ಸೂಕ್ಷ್ಮ ಅರಿತ ಬೇಂದ್ರೆಯವರು ತನ್ನ ಪತ್ನಿ ಲಕ್ಷೀಬಾಯಿಯನ್ನು ನಲ್ಮೆಯಿಂದ ನೇಹದಲ್ಲಿ ಒಂದಾಗಿಸಿಕೊಂಡರು.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮೊಟ್ಟಮೊದಲಿಗೆ ಪತ್ನಿಯನ್ನು ಸಖಿ, ಗೆಳತಿ, ಸ್ನೇಹಿತೆಯೆಂದು ಕರೆದು ತನ್ನ ಸ್ನೇಹದ ಸುಖದಿಂದ ಸಮಾನತೆಯ ಆಪ್ತತೆ ನೀಡಿದವರು ಬೇಂದ್ರೆ. ಅವರು ಸಖೀಗೀತದ ನಾಯಕ. ಅದು 'ಕಟು–ಮಧುರ' – ಕಹಿಯಾಗಿದ್ದು ಸಿಹಿಯಾಗಿರುವ ವ್ಯಾಖ್ಯಾನ.

* * *

ಬೇಂದ್ರೆಯವರು ಈ ಕಾವ್ಯದ ಮುನ್ನುಡಿಯಲ್ಲಿ 'ನನ್ನ ಜೀವನ ಕಥೆಯ ಹಂದರದ ಮೇಲೆ ಸಾಮಾನ್ಯ ಸಂಸಾರದ ಸುಖ–ದುಃಖದ ಹಂಬನ್ನು ಹಬ್ಬಿಬಿಟ್ಟಿದ್ದೇನೆ'. ಎಂದು ತಿಳಿಸಿದ್ದಾರೆ. ಈ ನೆಲದ ಬದುಕಿನಲ್ಲಿ ಪ್ರತಿ ಕುಟುಂಬವು ಅರ್ಥಪೂರ್ಣವಾಗಿ ಬಾಳಬೇಕು. ಆದುದರಿಂದ ಅದರ ಪ್ರಮುಖ ಪಾತ್ರಗಳಾದ ದಂಪತಿಗಳು ಅರಿತು ಬಾಳುವುದು ಲೋಕಕಲ್ಯಾಣಕ್ಕೆ ಆಧಾರಭೂತವಾದುದು. ಆ ಹಿರಿಯ ಭಾವದಿಂದ ಕವಿ ಕಾವ್ಯಾವನ್ನು ರಚಿಸಿರುವುದಾಗಿ ಹೇಳಿಕೊಂಡಿದ್ದಾರೆ.

'ಏಕಾಂತದ ಜಿನುಗು ಲೋಕಾಂತಕೆಳೆಯಿತು
ಜನವು ಜನಾರ್ದನನೆಂದರಿತೇ!'

ಬೇಂದ್ರೆಯವರು ತನ್ನ ಮತ್ತು ತನ್ನ ಹೆಂಡತಿಯ ಆಂತರಿಕವಾದ ಏಕಾಂತದ ಒಲುಮೆಯನ್ನು ಲೋಕಾಂತವಾಗಿ ಹಾಡುವಾಗ ಒಂದು ಬಿಗುವಿನಲ್ಲಿ, ಸುಸಂಸ್ಕೃತ ರೀತಿಯಲ್ಲಿ, ಆಹ್ಲಾದಮಯ ವಾಗುವಂತೆ ರಚಿಸಿರುವುದು ಅವರ ಪರಿಣತ ಮನಸ್ಸಿಗೆ ಸಾಕ್ಷಿಯಾಗಿದೆ. ದಾಂಪತ್ಯದಲ್ಲಿ ಕಾಮ ಸಹಜ. ಅದು ಪ್ರೇಮವಾಗಿ ಅರಳಬೇಕು. ಲೈಂಗಿಕತೆಯನ್ನು ದೂರೀಕರಿಸಬಾರದು, ಅದರ ಕಾವಿನಲ್ಲಿ ವಿಕಾಸಗೊಳ್ಳುತ್ತ ಉದಾತ್ತ ದೃಷ್ಟಿಯನ್ನು ಪಡೆದು ಅದನ್ನು ಜಗತ್ತಿಗೆ ದರ್ಶಿಸಬೇಕು. 'ಸಾಹಿತ್ಯ ಕವಿಯು ಸಾಮಾಜಿಕ ರಸಗಳನ್ನುಪಯೋಗಿಸಿ ಸಾಮಾಜಿಕರ ದರ್ಶನ ಶಕ್ತಿಯನ್ನು ಹಿಗ್ಗಿಸುವನು.' (ಸಾಹಿತ್ಯದ ವಿರಾಟ್ ಸ್ವರೂಪ ಪು 195). 'ರಾಮನಾಗಲಿ ಕಾಮನಾಗಲಿ ಮನೆ ಒಡತಿ ಇಲ್ಲದೆ ಮಡದಿ ಇಲ್ಲದೆ ಎಂಥ ಶಕ್ತಿ ಇದ್ದವನಿಗೂ ರಮಣೀಯತೆ ಬರಲಾರದು, (ಮಾತೆಲ್ಲ

ಜ್ಯೋತಿ ಪು 21) ಎಂಬ ಸ್ಪಷ್ಟ ಆಲೋಚನೆಯನ್ನು ಹೊಂದಿದ ಬೇಂದ್ರೆಯವರು ಈ ನೆಲದ ಬದುಕನ್ನು ಸವಿದು ಆಧ್ಯಾತ್ಮಿಕತೆಯ ಚಿಂತನಕ್ಕೆ ಮನಸ್ಸುಕೊಟ್ಟು ರಸಋಷಿಯಾದರು.

* * *

ಬೇಂದ್ರೆಯವರು ಹೆಣ್ಣಿನ ಮೃದುಭಾವ ಮತ್ತು ಆಕೆಗೆ ಸಮಾಜದಲ್ಲಿ ನೀಡಬೇಕಾದ ಸ್ಥಾನವನ್ನು ಅರಿತವರಾಗಿ ಸಮಾಜಕ್ಕೆ ಆ ಮುಖದ ಸತ್ಯವನ್ನು ದರ್ಶಿಸುತ್ತ ದಂಪತಿಗಳ ಪರಸ್ಪರ ಅರಿವಿನೊಡನೆ ಸಮಾಜ ವಿಕಾಸವಾಗಬೇಕೆಂದು ಕನಸು ಕಂಡರು. ಆದ ಕಾರಣ ತಮ್ಮ ದಾಂಪತ್ಯದ ನೋವು ನಲಿವು, ಸ್ನೇಹ ಪ್ರೇಮ, ಸೋಲು ಗೆಲುವು, ಆತಂಕ ಉಲ್ಲಾಸವನ್ನು ಸಖ–ಸಖಿ ಭಾವದಿಂದ 'ಸಖೀಗೀತ'ದಲ್ಲಿ ವಿಶ್ಲೇಷಿಸಿದರು. 'ವಿಧಿತಂದ ವಧು' ವನ್ನು ಸ್ನೇಹಿತಳನ್ನಾಗಿಸಿಕೊಂಡು ಬಾಳುವೆ ಮಾಡಿದ ಆತ್ಮಕಥೆ ಯನ್ನು ಕಾವ್ಯವಾಗಿ ಚಿತ್ರಿಸಿದರು.

ಅವರು ವಿವಾಹ ಸಂದರ್ಭದಲ್ಲಿ ಅಂತಃಪಟದಾಚೆ ನಿಂತಿರುವ ವಧುವನ್ನು ಕಾಣುವುದು – ಆ ಮಧುರ ಭಾವದ ಆಹ್ಲಾದದಿಂದ ಪ್ರಕೃತಿಸಹಜವಾಗಿ 'ಬೆವರಿನ ಬಾಸಿಂಗ' ಕಟ್ಟಿಕೊಂಡ ಬೆವರಿನ ಹನಿಯೊಂದನ್ನು ಮೂಗುಬಟ್ಟಾಗಿ ಧರಿಸಿದ ಸೌಂದರ್ಯದಲ್ಲಿ.

'ಮುತ್ತಿಗು ಮಿಗಿಲಾಗಿ ಹೂವಿಗು ಹಿರಿದಾಗಿ
ಬೆವರ್ಹನಿ ಬಾಸಿಂಗ ತುಳುಕುತಿರೆ
ನತ್ತನು ನಾಚಿಸಿ ಬೆವರಿನ ಹನಿಯೊಂದು
ಮೂಗುಬಟ್ಟಿನ ಅಂದ ಮಿನುಗುತಿರೆ.

ಹೀಗಾಗಿ ಕವಿಯು ತನ್ನ ಪ್ರಿಯ ಸಖಿಯು ಭೌತಿಕ ಒಡವೆಗಳಿಂದ ಶೃಂಗಾರಗೊಂಡಿರುವುದಕ್ಕಿಂತ ನಿಸರ್ಗಸಹಜ ಸೌಂದರ್ಯದಲ್ಲಿ ಪಲ್ಲವಿಸುತ್ತಿರುವುದನ್ನು ಕಂಡು ಬಣ್ಣಿಸಿರುವುದು ಅವರ ರೂಪಕಶಕ್ತಿಯು ಆ ಸಖ್ಯದಲ್ಲಿ ಅತಿ ಸಹಜವಾಗಿ ಮೂಡಿದುದಕ್ಕೆ ಪುರಾವೆಯಂತಿದೆ. ಅದು ವಿಕಾಸಗೊಂಡು ಈ ಕಾವ್ಯದಲ್ಲಿ 'ಸೌಂದರ್ಯವೆಂಬುದು ಕಣ್ಣಿನ ತುತ್ತಲ್ಲ । ಕಣ್ಣಿಗು ಕಣ್ಣಾಗಿ ಒಳಗಿಹುದು.' ಎಂಬ ತಾತ್ವಿಕ ಚಿಂತನೆಯನ್ನು ನೀಡುತ್ತದೆ. 'ಸಖೀಗೀತ' ಸೂಕ್ಷ್ಮಮನಸ್ಸಿನ ಮಡದಿಯನ್ನು ತಿಳಿಯಲು ಪ್ರಯತ್ನಿಸುವ ಪ್ರಯತ್ನದಂತೆ, ಅದರ ಒಡಲಿನಲ್ಲಿ ಕಾವ್ಯದೇವತೆಯ ಉಪಾಸನೆಯಲ್ಲಿ ತೊಡಗಿಕೊಂಡ ಕವಿಯ ಸೃಜನಶೀಲತೆಯನ್ನೂ ಒಳಗೊಂಡಿದೆ. ಇದು ಈ ಕಾಲಮಾನದ ಶ್ರೀಸಾಮಾನ್ಯರ ಬದುಕಿನ ಮಹತ್ವಪೂರ್ಣ ಕಾವ್ಯವಾಗಿದೆ.

(ವಿಜಯ ಕರ್ನಾಟಕ, ಬೋಧಿವೃಕ್ಷ, 29.7.2017)



ಪಾಡು

ಚೌಪದಿಯ 53 ನುಡಿಗಳ 'ಪಾಡು' ಒಂದು ಪುಟ್ಟ ಖಂಡಕಾವ್ಯ. ಅದು ಕವಿ ದ.ರಾ. ಬೇಂದ್ರೆಯವರಿಗೆ ಮಾತ್ರ ಸಂಬಂಧಿಸಿದ ಅವರ ತಡೆಯಲಾರದ ದುಃಖ, ದುಸ್ಥಿತಿಗೊಳಗಾದ ಮನಸ್ಸಿನ 'ಪಾಡು'. ಅದು 'ಸಖೀಗೀತ', 'ಬಾಲ್ಯಕಾಂಡ' ದಂತೆ ಅವರ ಆತ್ಮಕಥೆ ಕಾವ್ಯವಾಗಿ ಹರಿದ ಓಘ. ಅದು 'ಕೃಷ್ಣಾಕುಮಾರಿ ಮತ್ತು ಹಾಡು ಪಾಡು' ಕವನ ಸಂಕಲನದಲ್ಲಿದೆ.

'ಪಟ್ಟ ಪಾಡೆಲ್ಲವೂ ಹುಟ್ಟುಹಾಡಾಗುತ
ಹೊಸದಾಗಿ ರಸವಾಗಿ ಹರಿಯುತಿವೆ'

ಎಂದು ಸಖೀಗೀತದಲ್ಲಿ ತನ್ನ ದಾಂಪತ್ಯದ ಕಥೆ ಹೇಳಿಕೊಂಡ ಕವಿ ಸುಖದ ನೆಲೆ ಒದಗಿತು ಎಂದಾಗ ಆನಂದದ ಸೆಲೆ ಮಕ್ಕಳನ್ನು ಕಳೆದು ಕೊಂಡು ದುಃಖಕ್ಕೆ ಒಳಗಾದ ಜೀವನಗಾಥೆ 'ಪಾಡು'.

ಬೇಂದ್ರೆಯವರು ಎಂ.ಎ ಪದವೀಧರರಾಗಿದ್ದರೂ 1933 ರಿಂದ 1943 ರವರೆಗೆ ನಿರುದ್ಯೋಗಿಯಾಗಿದ್ದರು. 1943 ರಲ್ಲಿ ಸೊಲ್ಲಾಪುರದ ಡಿ.ಎ.ವಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕೆಲಸಕ್ಕೆ ಸೇರಿದರು. ಕುಟುಂಬವನ್ನು ಧಾರವಾಡದಿಂದ ಸೊಲ್ಲಾಪುರಕ್ಕೆ ಸೆಪ್ಟೆಂಬರ್ 1944 ರಲ್ಲಿ ಕೊಂಡೊಯ್ದರು. ಸಮಾಧಾನ ಜೀವನ ನಡೆಸಲು ಸಾಧ್ಯ ಎಂದುಕೊಂಡರು.

ಅಷ್ಟರಲ್ಲಿ ವಿಧಿ ಅವರ ಮೇಲೆ ಮುನಿಸಿಕೊಂಡಂತೆ ಸಾಂಸಾರಿಕ ದುರಂತ ಮೇಲಿಂದ ಮೇಲೆ ಆಗಿ ಅವರು ಜರ್ಝರಿತರಾಗಿ ಹೋದರು. 20–10–44 ರಲ್ಲಿ ಅವರ ಕೊನೆಯ ಮಗ ಆನಂದ ಮರಣ ಹೊಂದಿದ. ಆ ದುಃಖದಿಂದ ಚೇತರಿಸಿಕೊಳ್ಳುವಷ್ಟರಲ್ಲಿ ಅವರಿಗೆ 'ಎದೆಯ ಹತ್ತಿರ ಹೆಗಲ ಎತ್ತರ ಬೆಳೆದು ಬೆಂಬಲವಾಗುತ್ತ' ಇದ್ದ ಇಪ್ಪತ್ತು ವಯಸ್ಸಿನ ಹಿರಿಯ ಮಗ ರಾಮಚಂದ್ರ 27–10–44 ರಲ್ಲಿ ತೀರಿಹೋದ.

ಒಂದೇ ವಾರದಲ್ಲಿ ಚಿಗುರು, ಹೂ ಎರಡನ್ನೂ ಇಲ್ಲವಾಗಿಸಿಕೊಂಡ ಕವಿ ಮತ್ತು ಕವಿ ಪತ್ನಿ ದುಃಖದ ಮಡುವಿನಲ್ಲಿ ಬಿದ್ದರು. ಹಿರಿಯಮಗ ರಾಮಚಂದ್ರನನ್ನು ನೆನೆಯುತ್ತ 'ನನ್ನ ಚರಿತದ ಒಂದು ಮಗ್ಗಲು ನಿನ್ನೊಡನೆ ಕುಸಿದು ಬಿದ್ದಿತು' ಎಂದು ಕವಿ ಕುಗ್ಗಿಹೋದರು.

ಪ್ರಾಮಾಣಿಕ ಬದುಕಿನ, ಪಾರದರ್ಶಕ ವ್ಯಕ್ತಿತ್ವದ, ಶಿಸ್ತು ಬದ್ಧವ್ಯಕ್ತಿ ಕವಿ ಅಂಬಿಕಾತನಯದತ್ತರು ಮನುಜನ ಈ ನೆಲದ ಬದುಕಿನ ಶೋಧಕ್ಕೆ ತೊಡಗಿದರು. ಸತ್ಯದರ್ಶನದ ಕಾವ್ಯನೀಡಿದರು. 'ಬದುಕಿನಲ್ಲಿ ಬೆಂದು ಬೇಂದ್ರೆಯಾದರು' ಎಂಬ ನಾಣ್ಣುಡಿ ಜನರ ಬಾಯಿಂದ ಹೊಮ್ಮಿಬಂತು.

ಬೆಳೆದ ಮಗನನ್ನು ಕಳೆದುಕೊಂಡ ಹೆತ್ತ ಜೀವದ ಒಡಲ ಉರಿಯನ್ನು ತೀರಿಹೋದ ಮಗನಿಗೆ ಹೇಳುವಂತೆ ಕಾವ್ಯದಲ್ಲಿ 'ನಿನ್ನ ತಾಯಿಗೆ ನಿನ್ನ ನೆನವೇ ವಿಷದ ಬಟ್ಟಲವಾಗಿದೆ' ಎಂದು ಹಾಡಿದರು.

ಮಕ್ಕಳನ್ನು ಕಳೆದುಕೊಂಡ ಜನರಲ್ಲಿ ನಾನು ಮೊದಲಿನವನೂ ಅಲ್ಲ ಕೊನೆಯವನೂ ಅಲ್ಲ ಎಂಬ ಅರಿವಿನೊಡನೆ,

'ಸತ್ತ ದಶರಥ ಇದ್ದ ರಾಮನಿಗಾಗಿ ಅತ್ತನು ಅಂದಿಗೆ.
ಸತ್ತ ರಾಮಗೆ ಅತ್ತೆ ಅಳುವನು ಇರುವ ದತ್ತನು ಇಂದಿಗೆ.'

ಎಂದು ತನ್ನ ಎಲ್ಲ ನೋವನ್ನು ಬಸಿದು 'ಪಾಡು' ಕಾವ್ಯ ಬರೆದರು. ಅದು ಕವಿಯ ಅಳಲು, ನೋವು, ಎದೆಯ ತಳಮಳ, ಕರುಳಬಂಧ, ನಿರಾಶೆ ಹಾಗೂ ಅನುಭಾವ ಹೊಚ್ಚ ಹೊಸ ಪ್ರತಿಮೆಗಳಲ್ಲಿ ರೂಪಕಗಳಲ್ಲಿ ಪುಟಗೊಂಡ ದಿವ್ಯ ಕಾವ್ಯವಾಗಿದೆ.

ಮಗರಾಮಚಂದ್ರನನ್ನು ನೆನೆದು ಅವರು ಬರೆದ,

'ನುಂಗಿಕೊಂಡರು ಕಾರಿ ಕೂಂಡರು ಮರ್ಮಗಳ ಕಿತ್ತುತ್ತಿವೆ
ಎಣ್ಣೆಗೈಯಲ್ಲಿ ಕೆಂಡ ಹಿಡಿದೊಲು ಭಗ್ಗನೇ ಹೊತ್ತುತ್ತಿದೆ'

ಎಂಬುದನ್ನು ಓದಿದಾಗ ಆ ಕವಿಯ ಬೆಂದ ಒಡಲಿನ ಸ್ಪರ್ಶವಾಗುತ್ತದೆ.

ಗುರು ಯೋಗಿ ಶ್ರೀಅರವಿಂದ ಹಾಗೂ ಶ್ರೀಮಾತೆಯವರ ಕೃಪೆ ತನ್ನನ್ನು ಕಾಪಾಡುತ್ತಿದೆ ಎಂಬ ನಂಬಿಕೆಯಲ್ಲಿ 'ಜೀವ ಜೀವವು ಅಗಲದಂದದ ಅರಿವು ಬೆಳೆಯ ಬೇಕು' ಎಂಬ ಅನುಭಾವದ ತಿಳಿವಿನಲ್ಲಿ ಶೋಕವನ್ನು ಮರೆಯುವ ಕಾವ್ಯ 'ಪಾಡು' ರಚಿಸಿದರು.

ಈ ಕಾವ್ಯ ದುಃಖವನ್ನು ಗುಟುಕರಿಸಿ ವಿಷಕಂಠನಾದ ಅಂಬಿಕಾತನಯದತ್ತರ ನಿರ್ಲಿಪ್ತ ಮನದ ಹಾಡು. ಅಧ್ಯಾತ್ಮ ಜೀವಿಯ ಲೌಕಿಕ ಬದುಕಿನ ಧ್ಯಾನಫಲ.

(ಪ್ರಜಾವಾಣಿ, ಮುಕ್ತಛಂದ, 22.11.15)

■



ಗೆಳೆಯರ ಗುಂಪು

ದ.ರಾ. ಬೇಂದ್ರೆಯವರು ಸಖ್ಯಯೋಗದ ಸಾಧಕರು. ಅವರು 1914ರಿಂದ 1918ರವರೆಗೆ ಪುಣೆಯಲ್ಲಿ ಬಿ.ಎ. ಅಭ್ಯಾಸ ಮಾಡುತ್ತಿದ್ದರು. ಆಗ ಬಾಲ್ಯದ ಗೆಳೆಯ ಶ್ರೀಧರ ಖಾನೋಳಕರ ಹಾಗೂ ಇತರ ಸಾಹಿತ್ಯಾಭಿರುಚಿಯುಳ್ಳ ಸ್ನೇಹಿತರ ಜೊತೆಗೂಡಿ 'ಶಾರದಾ ಮಂಡಲ' ಸ್ಥಾಪಿಸಿದರು. ಅದರ ಕಾರ್ಯ ಚಟುವಟಿಕೆಗಳನ್ನು ತಿಳಿಸಲು 'ಕೊಳಲು' ಹಸ್ತಪ್ರತಿಯನ್ನು ಹೊರಡಿಸುತ್ತಿದ್ದರು. ಅದು ಸಾಹಿತ್ಯ ರಚನೆ, ಕಾವ್ಯ ವಾಚನ, ಸಾಹಿತ್ಯ ಸಂವಾದಗಳ ತಾಣವಾಗಿತ್ತು. ಆಗ ಅವರು ಕವಿ ರವೀಂದ್ರನಾಥ ಟ್ಯಾಗೋರರ 'ಸಾಧನ' ಉಪನ್ಯಾಸಗಳನ್ನು ಓದಿ ಮನನ ಮಾಡಿಕೊಂಡು ಕಾವ್ಯಫಲ ಪಡೆದರು. ಯೋಗಿ ಅರವಿಂದರ 'ಅರ್ಯ' ಅಂಗ್ಲ ಮಾಸಿಕ ಪುಸ್ತಕಗಳನ್ನು ಓದುತ್ತ ಯೋಗಫಲ ಹೊಂದಿದರು. ಆ ಧನ್ಯಭಾವವನ್ನು 'ಉಭಯವು ಅಭಯವಾದುದನ್ನು ನನ್ನಿಬ್ಬರು ಗುರುಗಳಲ್ಲಿ ಕಂಡೆ. ಎರಡು ಕಣ್ಣು ಒಂದು ನೋಟ. ರವಿ ಉದಯದಿಂದ ಅರವಿಂದ ಅರಳಿತು' ಎಂದು ಸಾಹಿತ್ಯದ ವಿರಾಟ್ ಸ್ವರೂಪದಲ್ಲಿ ಹೇಳಿಕೊಂಡಿದ್ದಾರೆ.

* * *

ಬ್ರಿಟೀಷ್ ವಸಾಹತಿನ ವಿರೋಧಿ ಶಾಂತ ಕವಿಗಳು ಬೇಂದ್ರೆ ಅವರ ಗುರುಗಳಾಗಿ ಆ ಚಿಂತನೆಯ ಕಾವ್ಯದುರಿಯನ್ನು ಅವರಲ್ಲಿ ಹೊತ್ತಿಸಿದ್ದರು. ರಾಷ್ಟ್ರೀಯ ಚಳವಳಿ ಧಾರವಾಡದಲ್ಲಿ ರೂಪುಗೊಂಡಾಗ ಕಾಮನಕಟ್ಟೆಯಲ್ಲಿಯೇ ಬೆಳೆಯುತ್ತಿದ್ದ ಬೇಂದ್ರೆಯವರು ರಾಷ್ಟ್ರೀಯ ಚಿಂತಕರಾದ ಅಲೂರು ವೆಂಕಟರಾಯರು, ರಾ.ಶ್ರೀ. ರಾಜ ಪುರೋಹಿತ, ಕಡಪಾ ರಾಘವೇಂದ್ರ ರಾವ್, ನರಗುಂದ ವಕೀಲ, ಗರಗ ಸಿದ್ಧಲಿಂಗಪ್ಪ, ವೆಂಕಟರಂಗೋ ಕಟ್ಟಿ ಮುಂತಾದವರಿಂದ ಪ್ರೇರಣೆಗೊಳಗಾದರು. ವಸಾಹತುವಿನ ಮೂಲ ಭಾವವನ್ನು ತಿಳಿಯುತ್ತ ಅದರ ಮೂಲೋತ್ಪಾಟನೆಗೆ ಜನಾಂಗವನ್ನು ರೂಪಿಸಬೇಕಾದ ಶಿಕ್ಷಕ ವೃತ್ತಿ ಹಾಗೂ ಕಾವ್ಯ ಮಾಧ್ಯಮದತ್ತ ತಮ್ಮನ್ನು ತೊಡಗಿಸಿಕೊಳ್ಳಲು ನಿರ್ಧರಿಸಿದರು.

ಬಿ.ಎ. ಪದವೀಧರರಾದ ಅವರಿಗೆ ತಹಸೀಲ್ದಾರ್ ಹುದ್ದೆ ಸಿಗುತ್ತಿತ್ತು. ಆದರೆ ಅವರು ಬ್ರಿಟೀಷರ ಅಡಿಯಲ್ಲಿ ಕೆಲಸ ಮಾಡದಿರಲು ತೀರ್ಮಾನಿಸಿದರು. ಉತ್ತಮವಾದ

ಲೌಕಿಕ ಜೀವನ ನಿರ್ವಹಣೆಗೆ ಸಾಧನವಾಗಿಸಿಕೊಳ್ಳಬಹುದಾದ ವಿದ್ಯೆಯನ್ನು, ಅವರು ನಾಡಿನ ವಿದ್ಯಾರ್ಥಿಗಳನ್ನು ರೂಪಿಸುವ ಶಿಕ್ಷಕ ವೃತ್ತಿಗೆ ಮೀಸಲಾಗಿರಿಸಿಕೊಂಡರು. ತಾವು ಓದಿದ ವಿಕ್ಟೋರಿಯಾ ಹೈಸ್ಕೂಲಿನಲ್ಲಿ ಶಿಕ್ಷಕ ವೃತ್ತಿಗೆ ಸೇರಿದರು. ಅವರು ಶಾಲೆಯಲ್ಲಿ 'ಜೇನುಹುಟ್ಟು', 'ಗೆಳೆಯ' ಹಸ್ತಪತ್ರಿಕೆಗಳನ್ನು ಪ್ರಾರಂಭಿಸಿ ವಿದ್ಯಾರ್ಥಿಗಳಿಗೆ ಸಾಹಿತ್ಯ ರಚನಾ ಆಸಕ್ತಿಯನ್ನು ಬೆಳೆಸಿದರು.

ಶಾಲಾ ಅವಧಿ ಮುಗಿದ ನಂತರ ವಿದ್ಯಾರ್ಥಿ ಗೆಳೆಯರಾದ ಚಿದಂಬರ ಸಗರ, ಪ್ರಹ್ಲಾದ ನರೇಗಲ್ಲ, ಗೋವಿಂದರಾವ್ ಚುಳಕಿ, ಕೃಷ್ಣಕುಮಾರ ಕಲ್ಲೂರ, ನಾರಾಯಣ ಸಂಗಮ, ಶೇ.ಗೋ. ಕುಲಕರ್ಣಿ ಮುಂತಾದವರಿಗೆ ಕರ್ನಾಟಕ ಸಂಸ್ಕೃತಿ, ಕರ್ನಾಟಕಾಭಿಮಾನ, ಕಾವ್ಯಾಭಿರುಚಿ ತಿಳಿಸುತ್ತ ಯೋಗಜೀವನದ ಸೂಕ್ಷ್ಮ ಅರಿವು ಮೂಡಿಸುತ್ತಿದ್ದರು. ಅವರು ಆಗ ಧಾರವಾಡದಲ್ಲಿದ್ದ ಮರಾಠಿ ಪ್ರಾಬಲ್ಯ ತಗ್ಗಿಸಲು, ಕನ್ನಡಾಭಿಮಾನ ಜನರಲ್ಲಿ ಬೇರೂರುವಂತೆ ಮಾಡಲು 'ಕನ್ನಡ ಓದಿರಿ' ಎಂದು ಭೇಟಿಯಾದವರಿಗೆಲ್ಲ ಹೇಳುತ್ತಿದ್ದರು. ಅವರ ಭಾಷಾಭಿಮಾನಕ್ಕೆ ಮನಸೋತವರೆಲ್ಲ ಗೆಳೆಯರಾಗುತ್ತಿದ್ದರು. ಹಾಗೆ 'ಮೈತ್ರಿಯ ಸೂತ್ರದ ಹೊಸಮಣಿ ಪೋಣಿಸಿ' ಕೊಳ್ಳುತ್ತ ಸಾಗಿದರು. ಅಂತಹ ಪ್ರೀತಿಯ ನೇಹ ಬೇಂದ್ರೆಯವರ ನೇತೃತ್ವದಲ್ಲಿ 1921ರಲ್ಲಿ 'ಗೆಳೆಯರ ಗುಂಪು' ಆಯಿತು. ಅವರು ಗೆಳೆಯರಿಗೆ ಸ್ನೇಹಾಮೃತವನ್ನು ಉಣಿಸುತ್ತ, ಸ್ಫೂರ್ತಿಯ ಸೆಲೆಯಾದರು. ಆ ವರ್ಷ ಅದು 'ಬಸವ ಜಯಂತಿ'ಯನ್ನು ಆಚರಿಸಿತು.

* * *

ಬೇಂದ್ರೆಯವರಿಗೆ 'ನಲ್' ಎಂಬುದು ವೇದದ 'ಮಧು' ಶಬ್ದಕ್ಕಿಂತಲೂ ಮೇಲ್ಮೈ ಹೊಂದಿದ ಪ್ರಿಯವಾದ ಕನ್ನಡ ನುಡಿ. 'ನಲ್'ದಲ್ಲಿ ರಸ, ಪ್ರೀತಿ, ಸೌಂದರ್ಯ, ಆನಂದಗಳು ಅಡಕವಾಗಿವೆ'. 'ಓಂಕಾರವು ವೇದಾಂತ ವಿಚಾರದಲ್ಲಿದ್ದಂತೆ ನಲ್ ಎಂಬುದು ಕಾವ್ಯ ವಿಚಾರದಲ್ಲಿ' ಎಂಬುದು ಅವರ ಆಲೋಚನೆಯಾಗಿತ್ತು. ಹಾಗಾಗಿ ಸ್ನೇಹಿತರಿಗೆ ಪತ್ರ ಬರೆಯುವಾಗ ಪತ್ರದ ಮೇಲ್ಭಾಗದಲ್ಲಿ 'ಓಂ ನಲ್' ಎಂದು ಬರೆಯುವ ರೂಢಿ ಇಟ್ಟುಕೊಂಡಿದ್ದರು. 'ಓಂ ನಲ್' ಮತ್ತು 'ತನ್ನ ತಾನರಿದಡೆ ತನ್ನರಿವೆ ಗುರು' ಎಂಬ ಮಂತ್ರಗಳು ಗೆಳೆಯರಿಗೆ ಸಂಜೀವಿನಿಯಾಗಿದ್ದವು.

'ಜಯ ಕರ್ನಾಟಕ', 'ವಾಗ್ಭೂಷಣ', 'ಸ್ವಧರ್ಮ' ಪತ್ರಿಕೆಗಳಲ್ಲಿ ಗೆಳೆಯರ ಗುಂಪಿನ ಲೇಖಕರು ಕವನ, ಕಥೆ, ವಿಮರ್ಶೆಗಳನ್ನು ಬರೆಯುತ್ತಿದ್ದರು. ಅವು ಅವರ ಕೀರ್ತಿ ಪತಾಕೆಗಳಾಗಿದ್ದವು. 'ಗೆಳೆಯರ ಗುಂಪು' ಪಂಪೋತ್ಸವ, ವಿದ್ಯಾರಣ್ಯೋತ್ಸವ, ರವೀಂದ್ರೋತ್ಸವ ಸೇರಿದಂತೆ ರಾಷ್ಟ್ರೀಯ ಪುರುಷರ ಪುಣ್ಯ ದಿನಗಳನ್ನು ಆಚರಿಸುತ್ತಿತ್ತು.

1922ರಲ್ಲಿ ದಾವಣಗೆರೆ ಸಾಹಿತ್ಯ ಸಮ್ಮೇಳನಕ್ಕೆ 'ಗೆಳೆಯರು' ಕೂಡಿ ಹೋಗಿದ್ದರು. ಅಲ್ಲಿ ಬಂದಿದ್ದ ಹಿರಿಯರಿಗೆ ಬೇಂದ್ರೆಯವರು ತಮ್ಮ ಮುದ್ರಿತ ನೀಳ್ಗವನ 'ಕೃಷ್ಣಾಕುಮಾರಿ'ಯನ್ನು ಹೊಸಕವನವೆಂದು ಓದಿ ಹೇಳಿದರು. ಆ ಗುಂಪಿನಲ್ಲಿ ವಿನೀತರಾಮಚಂದ್ರರಾವ್, ಬೆಟಗೇರಿ ಕೃಷ್ಣಶರ್ಮ, ಶಂ.ಬಾ. ಜೋಶಿ, ಸಾಲಿ ರಾಮಚಂದ್ರರಾಯರು, ಬೇಂದ್ರೆ ಲಕ್ಷ್ಮಣರಾವ್, ಜಿ.ಬಿ. ಜೋಶಿ, ಸಿದ್ಧವನಹಳ್ಳಿ ಕೃಷ್ಣಶರ್ಮ ಮುಂತಾದವರಿದ್ದರು.

* * *

'ಗೆಳೆಯರ ಗುಂಪು' 1923ರ ಹೊತ್ತಿಗೆ ಒಂದು ಸಂಘಟನೆಯಾಯಿತು. ಸ್ವಾತಂತ್ರ್ಯ ಹೋರಾಟದ ಕಾವಿನಲ್ಲಿದ್ದ ಭಾರತೀಯರ ಮನಸ್ಸು ಭಾರತೀಯ ಸಂಸ್ಕೃತಿಯ ಪುನರುತ್ಥಾನದ ಕನಸು ಕಂಡಿತ್ತು. ಅದನ್ನು ರಾಷ್ಟ್ರದಲ್ಲಿ ಹಲವಾರು ಸಂಘಟನೆಗಳು ನನಸು ಮಾಡುತ್ತಿದ್ದವು. ಅಂತಹ ಒಂದು ಅಪೂರ್ವ ಸಂಘಟನೆ 'ಗೆಳೆಯರ ಗುಂಪು' ಆಗಿತ್ತು. ಅದು ಯಾವುದೇ ಒಂದು ಸಾಂಸ್ಥಿಕ ಚೌಕಟ್ಟು, ಅಧಿಕಾರ ಕೇಂದ್ರಿತ ನಿಯಮಗಳ ಕಟ್ಟುಪಾಡಿಲ್ಲದ ಗೆಳೆತನದ ಮಧುರಭಾವದಲ್ಲಿ ಕೂಡಿ ಕೆಲಸ ಮಾಡಿತು. ವ್ಯಕ್ತಿಯ ಆತ್ಮೋನ್ನತಿ, ನಾಡುನುಡಿಯ ಏಳ್ಗೆ, ದೇಶದ ಸ್ವಾತಂತ್ರ್ಯ, ವಿಶ್ವ ಬಾಂಧವ್ಯ ಅದರ ಅಂತರ್ಯದ ತತ್ವಗಳಾಗಿದ್ದವು. ಅದು ಸ್ನೇಹ, ಪ್ರೇಮ, ಒಲವನ್ನು ತನ್ನ ಉಸಿರಾಗಿಸಿಕೊಂಡು ನಾಡಿನ ಸಂಸ್ಕೃತಿಯನ್ನು ರೂಪಿಸುವ ಶಾಂತ ಗುಂಪಾಗಿತ್ತು.

ಅದರಲ್ಲಿ ಎಳೆಯ ಗೆಳೆಯರು, ಸಮವಯಸ್ಕರು, ಹಿರಿಯ ಸಾಹಿತ್ಯಾಭ್ಯಾಸಿಗಳು ಇದ್ದರು. ಅದರದು 'ಅರ್ಥವಿಲ್ಲ, ಸ್ವಾರ್ಥವಿಲ್ಲ, ಬರಿಯ ಭಾವಗೀತ'ದಂತಹ ಹಿಗ್ಗಿನ ಕೆಲಸವಾಗಿತ್ತು. ಆ ಹಿಗ್ಗಿನಲ್ಲಿ ವ್ಯಕ್ತಿಗಳ ಆನಂದ ವಿಕಾಸದಂತೆ ನಾಡಿನ ಸಾಮಾಜಿಕ ಸಾಂಸ್ಕೃತಿಕ ಬದುಕಿನ ವಿಕಾಸವಾಯಿತು. ಅದು 'ಲಹರಿ ಲಹರಿ ಕಂಪಬಳ್ಳಿ'ಯಂತೆ ಉತ್ತಮ ನಡೆನುಡಿಯ ಕಂಪನ್ನು ಕರ್ನಾಟಕದಲ್ಲಿ ಪಸರಿಸಿತು.

* * *

ವಿಜಾಪುರ ಜಿಲ್ಲೆಯ ಹಲಸಂಗಿಯಲ್ಲಿ ಗೆಳೆಯರಾದ ಮಧುರಚೆನ್ನ, ಸಿಂಪಿ ಲಿಂಗಣ್ಣ, ಪಿ. ಧೂಲಾ ಸಾಹೇಬ, ಕಾಪಸೆ ರೇವಪ್ಪನವರು ಕೂಡಿ 1922ರಲ್ಲಿ 'ಶಾರದಾ ವಾಚನಾಲಯ' ಪ್ರಾರಂಭಿಸಿದರು. ಅದು 'ಹಲಸಂಗಿ ಗೆಳೆಯರ ಗುಂಪು' ಆಗಿ ನಾಡು ನುಡಿಯ ಸೇವೆಯಲ್ಲಿ ಕ್ರಿಯಾಶೀಲವಾಯಿತು. ಬೇಂದ್ರೆಯವರು 1922ರಲ್ಲಿ ವಿಜಾಪುರಕ್ಕೆ ಹೋದಾಗ ಶ್ರೀ ಕೊಣ್ಣೂರ ಹನುಮಂತರಾಯರ ಮನೆಯಲ್ಲಿ ಮಧುರ ಚೆನ್ನರನ್ನು ಭೇಟಿಯಾದರು. ಅದು ಹಲಸಂಗಿ ಮತ್ತು ಧಾರವಾಡದ ಗೆಳೆಯರ ಸ್ನೇಹ ವರ್ಧಿಸುವಂತೆ ಮಾಡಿತು.

ಧಾರವಾಡದ ಗೆಳೆಯರು 'ಗೆಳೆಯ', 'ನಸುಕು' ಎಂಬ ಕೈ ಬರಹದ ಸಾಹಿತ್ಯ ಪತ್ರಿಕೆಗಳನ್ನು ಹೊರ ತರುತ್ತಿದ್ದರು. ಅದನ್ನು ನೋಡಿ ಹಲಸಂಗಿ ಗೆಳೆಯರು 'ಮೊಗ್ಗೆ', 'ಮುದ್ದು' ಎಂಬ ಕೈ ಬರಹದ ಪತ್ರಿಕೆಗಳನ್ನು ಹೊರತಂದರು. 1923ರಲ್ಲಿ ನಡೆದ ವಿಜಾಪುರ ಸಾಹಿತ್ಯ ಸಮ್ಮೇಳನಕ್ಕೆ ಧಾರವಾಡದ ಗೆಳೆಯರು ಹೋಗಿ ಬಂದರು. ಬೇಂದ್ರೆಯವರ ಧಾರವಾಡದ 'ಗೆಳೆಯರ ಗುಂಪು' ಹಾಗೂ ಮಧುರ ಚೆನ್ನರ 'ಹಲಸಂಗಿ ಗೆಳೆಯರ ಗುಂಪು' ಒಂದಾಗಿ ದುಡಿದದ್ದು ಈ ನಾಡಿನ ಸಾಹಿತ್ಯ ಸಂಸ್ಕೃತಿಯ ಐಕ್ಯತೆಯ ಸಂಕೇತ. ವಿಜಾಪುರ, ದಾವಣಗೆರೆ, ಹೈದರಾಬಾದ್, ಸೊಂಡೂರು, ಕೊಪ್ಪಳ, ಮೈಸೂರು, ಬೆಂಗಳೂರುಗಳಲ್ಲಿ 'ಗೆಳೆಯರು' ಕೂಡಿ ನಡೆಸುವ ಉಪನ್ಯಾಸ, ಸಂವಾದಗಳಿಂದ 'ಗೆಳೆಯರ ಗುಂಪು' ಕರ್ನಾಟಕದಾದ್ಯಂತ ಪಸರಿಸಿತು.

* * *

1924ರಲ್ಲಿ 'ಗೆಳೆಯರ ಗುಂಪು' ಅನಂತಪುರದ ಕಾವ್ಯ ಸ್ಪರ್ಧೆಗಾಗಿ 116 ಕವಿತೆಗಳ 'ನಸುಕು' ಕೈಬರಹದ ಪತ್ರಿಕೆಯನ್ನು ಕಳುಹಿಸಿತು. 1925ರಲ್ಲಿ 'ಗೆಳೆಯರ ಗುಂಪು'

ನಾಡಹಬ್ಬವನ್ನು ಆಚರಿಸಿ ಅದರ ನಾಂದಿ ಹಾಡಿತು. ಅದನ್ನು 'ಹಲಸಂಗಿ ಗೆಳೆಯರು' ಅನುಸರಿಸಿದರು. ಅದು ನಾಡಿನ ವಿವಿಧ ಸ್ಥಳಗಳಲ್ಲಿ ಪ್ರತಿವರ್ಷ ಒಂದು ಆಚರಣೆಯಾಗಿ ನಡೆದು ಕರ್ನಾಟಕದಾದ್ಯಂತ ಹಬ್ಬಿತು. ಅದು 'ಅಖಂಡ ಕರ್ನಾಟಕ ಕಲ್ಪನೆ' ಕನ್ನಡಿಗರಲ್ಲಿ ಮೂಡುವಂತೆ ಮಾಡಿತು. ಅದು ಈಗಲೂ ಪರಂಪರೆಯಾಗಿ ಆಚರಣೆಗೊಳ್ಳುತ್ತಿರುವುದು 'ಗೆಳೆಯರ ಗುಂಪಿ'ನ ದೂರದೃಷ್ಟಿಯ ನಡೆಗೆ ಸಾಕ್ಷಿಯಾಗಿದೆ.

'ಗೆಳೆಯರ ಗುಂಪು' ಸಾಹಿತಿಗಳನ್ನಷ್ಟೇ ಅಲ್ಲದೆ ಕಾಲೇಜು ವಿದ್ಯಾರ್ಥಿಗಳನ್ನೂ ಸೆಳೆಯಿತು. ಹಾಗೆ ಬೇಂದ್ರೆಯವರ ಕಾವ್ಯಪ್ರಭೆಗೆ ಒಳಗಾಗಿ ಗುಂಪಿನ ಸದಸ್ಯರಾದವರು ವಿ.ಕೃ. ಗೋಕಾಕ್. ಅವರು 1925ರಲ್ಲಿ ಬೇಂದ್ರೆಯವರಿಂದ ಕನ್ನಡ ದೀಕ್ಷೆ ಪಡೆದುಕೊಂಡಿದ್ದನ್ನು ಹೀಗೆ ದಾಖಲಿಸಿದ್ದಾರೆ: 'ಬಹಳ ತಡವಾಗಿಯಾದರೂ ಅಂತೂ ಕಡೆಗೆ, ಇಂಗ್ಲಿಷಿನಲ್ಲಿ ಕವಿತೆ ಬರೆಯಬೇಕೆಂಬ ನನ್ನ ಮೋಹವನ್ನು ನಿವಾರಿಸುವುದರಲ್ಲಿ ಶ್ರೀ ಬೇಂದ್ರೆಯವರು ಯಶಸ್ವಿಯಾದರು. ಅವರು ನನ್ನನ್ನು ನನ್ನ ಮಾತೃಭಾಷೆಯ ಸಾಹಿತ್ಯಾಭ್ಯಾಸ ಮಾಡುವಂತೆಯೂ ಮಾತೃಭಾಷೆಯಲ್ಲಿ ಬರೆಯುವಂತೆಯೂ ಪ್ರೇರೇಪಿಸಿದರು' (ಗೆಳೆಯರ ಗುಂಪಿನ ಕಣಸು – ಕವಿವರ ಬೇಂದ್ರೆ).

* * *

ಬೇಂದ್ರೆಯವರು 'ಗಾಂಧೀ–ರವೀಂದ್ರ–ಅರವಿಂದ ಈ ಮೂರು ಮೂಲೆಯ ಮೇಲೆ ಗೆಳೆಯರ ಪಾಕಸಿದ್ಧಿ ನಡೆದಿದೆ. ಅವರವರ ಸಾಧನೆ ಅವರವರ ಸಿದ್ಧಿ' ಎಂದು ಹೇಳಿದ್ದಾರೆ. ಬೇಂದ್ರೆಯವರು ಈ ಗುರು ಮಹನೀಯರ ಜೊತೆಗೆ ಅಯರಿಶ್ ಕವಿ ಜಾರ್ಜ್ ರಸಲ್ ಮತ್ತು ಖಲೀಲ್ ಜಿಬ್ರಾನ್‌ರನ್ನು ತಮ್ಮ ಗುರುಗಳೆಂದು ಸ್ವೀಕರಿಸಿದ್ದರು. ಅವರು ಈ ಗುರುಗಳ ಕೃತಿಗಳನ್ನು ಹಲವು ಸದಸ್ಯರಿಗೆ ನೀಡಿ ಓದಲು ಹೇಳುತ್ತಿದ್ದರು. ಕೃತಿಗಳ ಮನನ, ಚಿಂತನ, ಚರ್ಚೆಯ ನಂತರ ತಮ್ಮ ಗೆಳೆಯರನ್ನು ಕುರಿತು ಬೇಂದ್ರೆಯವರು ಹೀಗೆ ತಿಳಿಸಿದ್ದಾರೆ! 'ಗೆಳೆಯರು ಅಯರಿಶ್ ಬ್ರಾಂಚಾಗಲಿಲ್ಲ ; ಥಿಯಾಸೋಫಿ ಬ್ರಾಂಚಾಗಲಿಲ್ಲ ; ಕನ್ನಡದ ಸ್ವಂತದ ಶಕ್ತಿ ಬೆಳೆಸುವುದೇ ಅವರ ಧ್ಯೇಯ ಧ್ಯಾನವಾಗಿತ್ತು.'

* * *

ಬೇಂದ್ರೆಯವರು 1928ರಲ್ಲಿ 'ನನ್ನದು ಈ ಕನ್ನಡನಾಡು' ಎಂಬ ಅಯ್ದು ಕವನಗಳನ್ನು ಸಿದ್ಧಪಡಿಸಿದರು. ಅದನ್ನು ಶಂ.ಬಾ. ಜೋಶಿಯವರು ಮುದ್ರಿಸಿ ಪ್ರಕಟಿಸಿದರು. ಅದರಲ್ಲಿ ಚಿಕುಪಾಧ್ಯಾಯ, ನೃಪತುಂಗ, ಬಿ.ಎಂ.ಶ್ರೀ., ಕವಿಶಿಷ್ಯ, ಬೇಂದ್ರೆ, ಆನಂದಕಂದ ಮುಂತಾದವರ ಕವನಗಳಿದ್ದವು.

1929ರಲ್ಲಿ 'ಗೆಳೆಯರ ಗುಂಪು' ಅಲೂರು ವೆಂಕಟರಾಯರಿಂದ 'ಜಯ ಕರ್ನಾಟಕ' ಪತ್ರಿಕೆಯ ಜವಾಬ್ದಾರಿಯನ್ನು ವಹಿಸಿಕೊಂಡಿತು. ಅದೇ ವರ್ಷ ಬೇಂದ್ರೆಯವರ ಚಿಕ್ಕಪ್ಪ ಬಂಡೋಪಂತರು ಅವರಿಗೆ ಸಾಧನಕೇರಿಯ ಮನೆ ಖರೀದಿಸಿಕೊಟ್ಟರು. ಆ ಮನೆಯೇ 'ಜಯ ಕರ್ನಾಟಕ'ದ ಕೇಂದ್ರ ಕಚೇರಿಯಾಯಿತು. ಆ ಪತ್ರಿಕೆಗೆ ಚಂದಾದಾರರನ್ನು ಹುಡುಕುತ್ತ ಶೇ.ಗೋ. ಕುಲಕರ್ಣಿ ಅವರು ಕರ್ನಾಟಕದ ಮೂಲೆ ಮೂಲೆಯನ್ನು ಸುತ್ತಾಡಿದರು. ತಮ್ಮ ನಿಸ್ವಾರ್ಥ ಸೇವಾ ಮನೋಭಾವದಿಂದ 'ಜಯ ಕರ್ನಾಟಕ'

ಪತ್ರಿಕೆ ನಾಡಿನ ವಿದ್ಯಾವಂತ ಸಹೃದಯರನ್ನು ತಲುಪುವಂತೆ ಮಾಡಿದರು. ಅದರಿಂದ ಬೇಂದ್ರೆ ಮತ್ತು ಅವರ ಗೆಳೆಯರ ಸಾಹಿತ್ಯ ನಾಡಿನ ಸಹೃದಯರ ಮನೆ ಮನಗಳನ್ನು ಹೊಕ್ಕಿತು.

1929ರ ಬೆಳಗಾವಿ ಸಾಹಿತ್ಯ ಸಮ್ಮೇಳನದಲ್ಲಿ ಬೇಂದ್ರೆಯವರು 'ಹಕ್ಕಿ ಹಾರುತಿದೆ ನೋಡಿದಿರಾ?' ಕವನ ಓದಿದರು. ಆ ಓದು ಅವರನ್ನು ಜನಮನದ ಕವಿಯಾಗಿಸಿತು. 1930ರಲ್ಲಿ ಮೈಸೂರಿನಲ್ಲಿ ನಡೆದ ಲೇಖಕರ ಗೋಷ್ಠಿಗೆ ಬೇಂದ್ರೆಯವರು ಅಧ್ಯಕ್ಷರಾಗಿದ್ದರು. ಅದೇ ವರ್ಷ 'ಜಯ ಕರ್ನಾಟಕ' ಮಾಲೆಯ ಅಯ್ದ ಕವನಗಳ ಸಂಕಲನ 'ಹಕ್ಕಿ ಹಾರುತಿದೆ' ಪ್ರಕಟಿಸಿತು. ಅದಕ್ಕೆ ಮುನ್ನುಡಿ ಬರೆಯುತ್ತ ಬೇಂದ್ರೆಯವರು 'ಹಿಂದಿನವರು ಭಾಷೆಯಲ್ಲಿ 'ದೇಶಿ'ಯನ್ನು ಕವಿರಾಜ 'ಮಾರ್ಗ'ಕ್ಕೆ ಎಳೆದು ತರಬೇಕೆಂದರು; ಇಂದಿನವರು 'ದೇಶಿ'ಯ ಕವಿರಾಜ 'ಮಾರ್ಗ'ಗಳನ್ನು ಸಿದ್ಧಪಡಿಸುತ್ತಲಿದ್ದಾರೆ' ಎಂದು ಹೇಳಿರುವುದು ಅವರು ರೂಪಿಸಿದ ಕಾವ್ಯ ಮಾರ್ಗವನ್ನು ಸೂಚಿಸುತ್ತದೆ.

'ಗೆಳೆಯರ ಗುಂಪು' ಹೊಸ ಕಾವ್ಯವನ್ನು ಜನಪ್ರಿಯಗೊಳಿಸುವುದರ ಜೊತೆಗೆ ಜನಪದಸತ್ತ್ವದ ಪುನರುಜ್ಜೀವನವನ್ನು ಮಾಡಿತು. 'ಜಯ ಕರ್ನಾಟಕ' ಗ್ರಂಥಮಾಲೆಯಿಂದ 'ಹಲಸಂಗಿ ಗೆಳೆಯರು' ಸಂಗ್ರಹಿಸಿದ 'ಗರತಿಯ ಹಾಡು' ಪ್ರಕಟವಾಯಿತು.

* * *


'ಗರಿ' ಕವನ ಸಂಕಲನದಲ್ಲಿಯ 'ನರಬಲಿ' ಕವನದಿಂದ ಆಕ್ರೋಶಗೊಂಡ ಬ್ರಿಟೀಷರು ಬೇಂದ್ರೆಯವರನ್ನು ಬಂಧಿಸಿ ಹಿಂಡಲಗಾ ಜೇಲಿನಲ್ಲಿಟ್ಟರು. ಜೇಲಿಗೆ ಹೋಗಿ ಬಂದದ್ದರಿಂದ ಬೇಂದ್ರೆಯವರನ್ನು ಯಾರೂ ಕೆಲಸಕ್ಕೆ ತೆಗೆದುಕೊಳ್ಳಬಾರದೆಂದು ಸರ್ಕಾರ ಆದೇಶ ಹೊರಡಿಸಿತು. ಇದರೊಂದಿಗೆ ಸ್ನೇಹಕ್ಕಿಂತ ಹಣಕ್ಕೆ ಪ್ರಾಶಸ್ತ್ಯ ಕೊಡುತ್ತ ವಿರಸಭಾವ ಮೂಡಲು 'ಗೆಳೆಯರ ಗುಂಪು' 1933ರಲ್ಲಿ ಒಡೆದು ಹೋಯಿತು.

'Mine is but a flower's wish
To leave some seeds behind'

ಎಂಬ ಬೇಂದ್ರೆ ನುಡಿಯಂತೆ ಅವರ 'ಗೆಳೆಯರ ಗುಂಪು' ಎಂಬ ಹೂವು ಕೆಲವು ಬೀಜಗಳನ್ನು ಬಿಟ್ಟು ನಿರ್ಗಮಿಸಿತು. ಗೆಳೆಯರಲ್ಲಿ ಕೆಲವರು ನಾಡಿನ ಒಳ ಹೊರಗೆ ಶಿಕ್ಷಕ ವೃತ್ತಿಯಲ್ಲಿದ್ದರು. ಹಲವರು ಉದ್ದಾಮ ಸಾಹಿತಿಗಳಾಗಿದ್ದರು. ಹಲವರು ಸಾಹಿತ್ಯ ಪತ್ರಿಕೆಗಳನ್ನು ನಡೆಸಿದರೆ, ಮತ್ತೆ ಕೆಲವರು ಗ್ರಂಥಮಾಲೆಗಳನ್ನು ನಡೆಸಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಬೆಳವಣಿಗೆಗೆ ಕೈ ಜೋಡಿಸಿದರು. 'ಮನೋಹರ', 'ಮಿಂಚಿನ ಬಳ್ಳಿ', 'ಲಲಿತ', 'ಅರವಿಂದ' ಮುಂತಾದ ಗ್ರಂಥ ಮಾಲೆಗಳು, 'ಜಯಂತಿ', 'ಜೀವನ', 'ಕರ್ಮಧಾರ', 'ಪ್ರದೀಪ' ಮುಂತಾದ ಪತ್ರಿಕೆಗಳು ಗುಂಪಿನ ಹೊಸ ಹುಟ್ಟುಗಳು.

(ಪ್ರಜಾವಾಣಿ, ದೀಪಾವಳಿ ವಿಶೇಷಾಂಕ, 2015)

■



ಅಕ್ಕರೆಯ ಸಕ್ಕರೆ

ಬೇಂದ್ರೆ ಅವರು ಸಾಹಿತ್ಯ ಸಂಸ್ಕೃತಿಯ ಪುನರುತ್ಥಾನಕ್ಕಾಗಿ 'ಗೆಳೆಯರ ಗುಂಪು' ಕಟ್ಟಿದರು. 1930ರಲ್ಲಿ 'ಜಯಕರ್ನಾಟಕ' ಪತ್ರಿಕೆಯಲ್ಲಿ ಪ್ರಕಟವಾದ 'ನರಬಲಿ' ಕವನದಿಂದ ಆಕ್ರೋಶಗೊಂಡ ಬ್ರಿಟೀಷರು ಅವರನ್ನು 1932ರಲ್ಲಿ ಬಂಧಿಸಿ ಬೆಳಗಾವಿಯ ಹಿಂಡಲಗಾಗ ಜೇಲಿನಲ್ಲಿ ಸೆರೆಯಲ್ಲಿಟ್ಟರು. ಅವರಿಗೆ 1944ರವರೆಗೆ ನೌಕರಿಯಿಲ್ಲದೆ ಜೀವನ ದುರ್ಬರವಾಗಿತ್ತು. ಅವರ ಆದರ್ಶ ಹೆಂಡತಿ ಮಕ್ಕಳಿಗೆ ಸುಖ ಜೀವನದ ನೆಮ್ಮದಿ ತರುವುದಾಗಿರಲಿಲ್ಲ. ಅದು ಅವರಿಗೂ ಗೊತ್ತಿತ್ತು. ಅದನ್ನು ಅವರು 'ಸಖಿಗೀತ' ಕಾವ್ಯದಲ್ಲಿ ತನ್ನ ಪತ್ನಿಗೆ ಹೀಗೆ ಹೇಳಿದ್ದಾರೆ :

ಹರಿವ ನೀರಿನ ಮೇಲೆ ಹರಗೋಲ–ಮನೆ ಕಟ್ಟಿ
ಗೊತ್ತಿಲ್ಲವೆ ನಲ್ಲೆ ! ಹೊರಟಿಹೆವು ?
ನೆಲವೆಂದು ಸ್ಥಿರವೆಂದು ಅಸ್ತಿವಾರವ ಹಾಕಿ
ನಾಡಾಡಿ ಜನ, ಮನೆ ಕಟ್ಟಿಹುದು

ಬೇಂದ್ರೆಯವರು ಆದರ್ಶದ ಬೆಂಕಿಯಲ್ಲಿ ಕನಸುಗಳ ಬೆನ್ನತ್ತಿ ಹೋದರು. ನಿರುದ್ಯೋಗದ ದಿನಗಳಲ್ಲಿ ಸಂಸಾರ ನಿರ್ವಹಣೆ ಕುಂಟುತ್ತ ಸಾಗಿತ್ತು. ಆ ನೆಲೆಗೆಟ್ಟ ಸ್ಥಿತಿಯಲ್ಲಿ ಅವರ ದಾಂಪತ್ಯ ನೇಹವು ಪ್ರೀತಿ ದೂರವಾಗಿ ರಸವಿಂಗಿಸಿಕೊಂಡಿತು. ಆ ದಂಪತಿಗಳು ತಮ್ಮೊಳಗಿನ ತಪ್ಪಿಲ್ಲದೆ ಕಿಡಿಗೇಡಿ ದೈವದ ಅಟದಿಂದ ಒಡೆದ ಮನದವರಾಗಿ ಪರಸ್ಪರರು ಮುಖಭಂಗಿಸಿ ನಡೆವ ಆಘಾತ ಅವರಿಗೆ ಸಹಿಸಲು ಅಸಾಧ್ಯವಾಗಿತ್ತು. ಅದನ್ನು ಅವರು ಉಪಮಾನಾತ್ಮಕವಾಗಿ ಹೀಗೆ ಹೇಳಿಕೊಂಡಿದ್ದಾರೆ.

ಗಾಣಿಗಗೆ ಸಿಟ್ಟಾಗಿ ಒಣರೊಟ್ಟಿ ತಿಂದಂತೆ
ಅಸಮಾಧಾನಕೆ, ರಸವಿಂಗಿಸಿ
ಹಾದಿಯ ದೆವ್ವವ ಮನೆಯೊಳಗೆ ಕರೆದಂತೆ
ಒಬ್ಬರನೊಬ್ಬರು ಮುಖ ಭಂಗಿಸಿ

ದಿನ ದಿನ ಮಕ್ಕಳ ತುತ್ತಿನ ಚೀಲ ತುಂಬಿಸಲಾಗದ ಹತಾಶ ಬದುಕಿನ ನಿರಾಶೆಯನ್ನು, ಪತ್ನಿ ಲಕ್ಷ್ಮೀಬಾಯಿಯ ಉರಿಗಣ್ಣನ್ನು, ತಮ್ಮದೇನೂ ತಪ್ಪಿಲ್ಲದ ಮುಗ್ಧ ಮಕ್ಕಳ ಅಸಹಾಯ ನೋವಿನ ಬೇಗೆಯನ್ನು ಬೇಂದ್ರೆಯವರು ಪ್ರತಿಮಾತ್ಮಕವಾಗಿ ಹೇಳಿರುವ ರೀತಿಯು– ಕನ್ನಡ ಕಾವ್ಯದಲ್ಲಿ ಓರ್ವ ಅಸಹಾಯಕ ತಂದೆಯ ಒಳ ತುಮುಲದ ಅಪೂರ್ವ ಅಭಿವ್ಯಕ್ತಿಯಾಗಿದೆ. ಜೊತೆಗೆ ಅದು ಸ್ವಸಾಮರ್ಥ್ಯವಿಲ್ಲದ ನಿಷ್ಪಾಪದ ಮಕ್ಕಳ ದುರಂತಕ್ಕೆ ಕನ್ನಡಿ ಹಿಡಿದಂತಿದೆ.

ಉರಿಮೋರೆ ಬಿರಿಗಣ್ಣು ಮನೆಯ ಹೊತ್ತಿಸುತಿರಲು
ಕಾಡ–ಬೇಗೆಗೆ ಸಿಕ್ಕ ಮರಿಗಳೊಲು
ಪಕ್ಕಗಳು ಬಲಿತಿಲ್ಲ, ಹಾರಿಕೆ ಕಲಿತಿಲ್ಲ
ಮುಗಿಲನ್ನೆ ಮೊರೆಹೊಕ್ಕು ನೋಡುವವು

'ಉರಿಮೋರೆ ಬಿರಿಗಣ್ಣು' ಪ್ರತಿಮೆಯು ಅವರ ಮನೆಯಲ್ಲಿ ಒಲೆ ಹೊತ್ತಿ ಬೇಯಿಸಲು ಏನೂ ಇಲ್ಲದೆ ಇರುವ ಸ್ಥಿತಿಯನ್ನು ; ಪತ್ನಿಯ ಕೋಪ, ತಾಪ ಮತ್ತು ಉಪವಾಸದಿಂದ ಉರಿವ ಕುಟುಂಬದ ಬೇಗೆಯನ್ನು ಧ್ವನಿಸುತ್ತದೆ.


ಅವರ ಜೀವನ ಶ್ರದ್ಧೆ, ಬದುಕಿನ ಏಳುಬೀಳಿನಲ್ಲಿ ಉಳಿಯಬೇಕು ಎಂಬ ಛಲ ಅವರಿಂದ 'ಸಾವಿಗಿಂತ ಬಾಳು ಮೇಲು' ಎಂಬ ಚಿಂತನೆಯನ್ನು ಹೊಮ್ಮಿಸಿತು. ಸುಖದ ದಿನ ಬರುವುದೆಂಬ ಆಶಾಭಾವದಲ್ಲಿ ಅವರಿದ್ದರು.

'ಕತ್ತಲೆಯ ಮನೆಯಿಂದ ಬೆಳಕಿಂಡಿಯೊಳಗಿಂದ
ಗಗನದ ನೀಲಿಮೆಯನು ಕಂಡೆವು.'

ಬೇಂದ್ರೆಯವರು ಮನೆಗೆ ಬಂದವರಿಗೆ ನೀಡಲು ಏನು ಇಲ್ಲದ ಪರಿಸ್ಥಿತಿಯಲ್ಲಿ ಕಾವ್ಯದ ಸವಿಯ ಜೊತೆಗೆ ಒಂದು ಚಿಟಿಕೆ 'ಸಕ್ಕರಿ' ನೀಡುತ್ತಿದ್ದರು. ಅಕ್ಕರೆಯ ಬೇಂದ್ರೆ, ಸಕ್ಕರೆಯ ಬೇಂದ್ರೆ. ಈಗಲೂ ಅವರ ಮನೆಗೆ ಹೋಗುವವರಿಗೆ ಕವಿಪುತ್ರ ವಾಮನ ಬೇಂದ್ರೆಯವರು ಸಕ್ಕರೆ ನೀಡುತ್ತಾರೆ.

(ಪ್ರಜಾವಾಣಿ, ಮುಕ್ತಛಂದ, 1.11.2015)

■



ನಾಡಹಬ್ಬ ಹುಟ್ಟುಹಾಕಿದ್ದು

ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ಶತಶತಮಾನಗಳಿಂದ ನಿರಂತರವಾಗಿ ಆಚರಿಸುತ್ತಿರುವ ಶಕ್ತಿ ಆರಾಧನೆಯ ಉತ್ಸವ ನವರಾತ್ರಿ. ಅದರ ಕೊನೆಯ ದಿನ ಆಚರಿಸುವುದು ವಿಜಯದಶಮಿ. ಆ ಹತ್ತು ದಿನಗಳ ಹಬ್ಬವನ್ನು ದಸರಾ ಎಂದು ಕರೆಯುವರು. ಮೈಸೂರಿನ ದಸರ, ಕಲ್ಕತ್ತದ ದುರ್ಗಾಪೂಜೆ ಇಂದಿಗೂ ಜನಮನವನ್ನು ಭಕ್ತಿಯಲ್ಲಿ, ಸಂಭ್ರಮದಲ್ಲಿ ಮೀಯಿಸುತ್ತಿದೆ. ಅದು ಆಶ್ವೀಜ ಮಾಸ ಶುಕ್ಲ ಪಕ್ಷದ ಪಾಡ್ಯದಿಂದ ನವಮಿಯವರೆಗಿನ ಒಂಬತ್ತು ದಿನಗಳು ಮತ್ತು ಆ ದಿನಗಳಲ್ಲಿ ಆಚರಿಸುವ ಹಬ್ಬ. ಮೊದಲ ಮೂರು ರಾತ್ರಿ ಮಹಾಕಾಳಿಗೂ, ಮಧ್ಯದ ಮೂರು ರಾತ್ರಿ ಮಹಾಲಕ್ಷ್ಮಿಗೂ, ಕೊನೆಯ ಮೂರು ರಾತ್ರಿ ಮಹಾಸರಸ್ವತಿಗೂ ವಿಶೇಷ ಪೂಜೆ ಸಲ್ಲುತ್ತದೆ.

ವಿಜಯನಗರ ಸಾಮ್ರಾಜ್ಯದ (1336ರಿಂದ 1650) ಸಾಂಸ್ಕೃತಿಕ ವೈಭವವೆಂದರೆ ಮಹಾನವಮಿ ಉತ್ಸವ. ಈಗಲೂ ಹಂಪಿಯಲ್ಲಿ ಮಹಾನವಮಿ ದಿಬ್ಬವಿದೆ. ಆ ಸಾಮ್ರಾಜ್ಯದ ಪಥನದ ನಂತರ ಆ ಉತ್ಸವವನ್ನು ಒಂಭತ್ತು ದಿನಗಳ ದಸರಾ ಹಬ್ಬವಾಗಿ 1610ರಲ್ಲಿ ಶ್ರೀರಂಗಪಟ್ಟಣದಲ್ಲಿ ಪ್ರಾರಂಭಿಸಿದವರು ಒಂದನೇ ರಾಜ ಒಡೆಯರು (1578–1617).

ರಾಜಧಾನಿಯನ್ನು ಮೈಸೂರಿಗೆ ವರ್ಗಾಯಿಸಿದ ಅನಂತರ ಅದು ಮೈಸೂರು ದಸರ ಆಗಿ ಖ್ಯಾತಿ ಪಡೆಯಿತು. ವಿಜಯದಶಮಿಯ ದಿನ ಮಹಾರಾಜರು ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತು ಮೆರವಣಿಗೆ ಹೋಗುತ್ತಿದ್ದರು. ಈಗ ರಾಜರ ಬದಲು ಶ್ರೀ ಚಾಮುಂಡೇಶ್ವರಿ ಪ್ರತಿಮೆಯನ್ನು ಇಟ್ಟು ಆನೆಯ ಅಂಬಾರಿ ಮೆರವಣಿಗೆಯನ್ನು ಸರ್ಕಾರ ನಡೆಸುತ್ತಿದೆ. ಶತಮಾನಗಳ ವಿಜಯದಶಮಿ ಆಚರಣೆ ಇಂದಿಗೂ ಮುಂದುವರಿಯುತ್ತಿರುವುದು ಅದು ನಾಡಹಬ್ಬವಾಗಿ ಜನಮಾನಸದಲ್ಲಿರುವುದೇ ಕಾರಣವಾಗಿದೆ.

ಬೇಂದ್ರೆಯವರು ಕರ್ನಾಟಕ ಸಾಹಿತ್ಯ ಸಂಸ್ಕೃತಿಯ ಆಸಕ್ತಿಯನ್ನು ವಿದ್ಯಾರ್ಥಿಗಳಲ್ಲಿ ಉಂಟು ಮಾಡಿ ನಾಡಸೇವೆಗೆ ತೊಡಗುವಂತೆ ಮಾಡಲು ಶಿಕ್ಷಕರಾದರು. ಕರ್ನಾಟಕವನ್ನು

ಆಳಿದ ವೀರರ, ಕಲೆಯನ್ನು ರೂಪಿಸಿದ ಶಿಲ್ಪಿಗಳ, ಪಾರಮಾರ್ಥಿಕ ಚಿಂತನೆಯಲ್ಲಿ ಎತ್ತರಕ್ಕೇರಿದ ಸಂತ ಮಹನೀಯರ, ಕವಿ ಸಾಹಿತಿಗಳ ಮಹತ್ತ್ವವನ್ನು ತಿಳಿದ ಅವರು ಅದನ್ನು ಜನಮನದಲ್ಲಿ ಬಿತ್ತಲು 'ಗೆಳೆಯರ ಗುಂಪು' ಕಟ್ಟಿದರು. ಆ ಮೂಲಕ ಕರ್ನಾಟಕ ಏಕೀಕರಣ ಸಾಧನೆ ಕುರಿತು ವಿಚಾರ ಮಾಡಿದರು.

ದಸರೆಯ ಹಬ್ಬದಲ್ಲಿ ನಾಡಿನ ಜನರು ಜಾತಿ ಮತಗಳಿಂದ ಮುಕ್ತರಾಗಿ ಪರಸ್ಪರ ಬನ್ನಿಯ ಎಸಳುಗಳನ್ನು ಕೊಡುತ್ತ 'ಬಂಗಾರವನ್ನು ತೆಗೆದುಕೊಂಡು ಬಂಗಾರದಂತೆ ಇರೋಣ' ಎಂದು ಹೇಳುತ್ತ ಸಂಭ್ರಮಿಸುವರು. ಅದು ಕನ್ನಡಿಗರನ್ನು ಒಂದುಗೂಡಿಸಿದ ನಾಡಹಬ್ಬ; ಅದು ಕನ್ನಡಿಗರ ಐಕ್ಯತೆಯ ಸಂಕೇತ ಎಂದು ಅರಿತ ಬೇಂದ್ರೆಯವರು 1925ರಲ್ಲಿ 'ನಾಡಹಬ್ಬ' ವನ್ನು ಹುಟ್ಟುಹಾಕಿದರು. 'ಆ ಮೊದಲಲ್ಲೇ ವಿದ್ಯಾನಗರ ಕಟ್ಟಿದ ವಿದ್ಯಾರಣ್ಯ ಸ್ಮರಣೆಯನ್ನು ಗೆಳೆಯರು ಸ್ವಯಂ ಸ್ಫೂರ್ತಿಯಿಂದ ಮಾಡುತ್ತಿದ್ದೆವು' (ಸಾ.ವಿ.ಸ್ವ ಪು 51) ಎಂದು ಅದರ ಹಿನ್ನೆಲೆಗೆ ಇದ್ದ ಮನೋಬಲವನ್ನು ತಿಳಿಸಿದ್ದಾರೆ. ಆ ಹಬ್ಬದಲ್ಲಿ ನಾಡದೇವತೆ ಭುವನೇಶ್ವರಿಯನ್ನು ಆರಾಧಿಸಿದರು.

ಬೇಂದ್ರೆಯವರ ಪ್ರೇರಣೆಯಿಂದ 'ಹಲಸಂಗಿ ಗೆಳೆಯರ ಗಂಪು'ವಿನ ಮಧುರಚೆನ್ನ ಮತ್ತು ಸಿಂಪಿ ಲಿಂಗಣ್ಣನವರು ಹಲಸಂಗಿಯಲ್ಲಿ ಪ್ರತಿ ವರ್ಷ ನಾಡಹಬ್ಬ ಆಚರಿಸಿದರು. ಒಂಬತ್ತು ದಿನಗಳು ಬೆಳಗಿನಲ್ಲಿ ನಗರ ಸಂಕೀರ್ತನೆ, ಭುವನೇಶ್ವರಿ ದೇವಿಯ ಮೆರವಣಿಗೆ ನಡೆಯುತ್ತಿತ್ತು. ಪ್ರತಿಯೊಂದು ಮನೆಯವರು ಆರತಿ ಬೆಳಗಿ, ಧ್ವಜಕ್ಕೆ ಮಾಲಾರ್ಪಣೆ ಮಾಡುತ್ತಿದ್ದರು. ಸಂಜೆ ಅತಿಥಿಗಳ ಭಾಷಣ, ನಾಟಕ-ಪ್ರಹಸನಗಳ ಮನೋರಂಜನೆ ನಡೆಯುತ್ತಿತ್ತು. ಅದು ಅಥಣಿ, ಚಡಚಣ ಮುಂತಾದ ಕಡೆ ನಡೆದು ಕನ್ನಡಿಗರಲ್ಲಿ ಕನ್ನಡ ಜಾಗೃತಿಯನ್ನುಂಟು ಮಾಡಿತು. ಅದರಿಂದ ಸ್ಫೂರ್ತಿಗೊಂಡ ಅಂದಿನ ಯುವಕರು ಕನ್ನಡ ಸಂಘ, ಸಾಹಿತ್ಯ ಕೂಟಗಳನ್ನು ನಾಡಿನ ಹಲವು ನಗರ ಪಟ್ಟಣಗಳಲ್ಲಿ ಸಂಘಟಿಸಿದರು. 'ನಾಡಹಬ್ಬ' ಆಚರಣೆ ಕನ್ನಡಾಭಿಮಾನದ ದ್ಯೋತಕವಾಯಿತು.

ಗೆಳೆಯರ ಗುಂಪು 'ಮಹಾನವಮಿ, ಪಂಪೋತ್ಸವ, ವಿದ್ಯಾರಣ್ಯೋತ್ಸವ, ಶಾಂತಕವಿ ತಿಥಿ ಮುಂತಾದ ಉತ್ಸವಗಳನ್ನು ಆಚರಣೆಯಲ್ಲಿ ತಂದಿತು. ಈಗ ಇವುಗಳಲ್ಲಿ ಕೆಲವನ್ನು ಇಡೀ ನಾಡು ಆಚರಿಸುತ್ತಿದೆ' ಎಂದು ವಿ.ಕೃ. ಗೋಕಾಕರು ತಿಳಿಸಿದ್ದಾರೆ. (ಗೆಳೆಯರ ಗುಂಪಿನ ಕಣಸು)

'ಭಾರತ ಮಾತೆಯ ಅಂಗ ಕನ್ನಡ ಮಾತೆ ; ಅವರು ತಾಯಿ ಮಕ್ಕಳು' ಎಂದು ತಿಳಿದ ಬೇಂದ್ರೆಯವರು 'ಕನ್ನಡದ ಕಂದವ್ವನ ಲಾಲಿ' ಕವನವನ್ನು 1919ರಲ್ಲಿ ರಚಿಸಿದರು. ಪೂರ್ವ ಪಶ್ಚಿಮ ಘಟ್ಟದ ತೊಟ್ಟಿಲಲ್ಲಿರುವ ಕನ್ನಡ ನಾಡನ್ನು ತಾಯಿ ಭಾರತಿ ತೂಗುತ್ತಿರುವಳು ಎಂದು ಕಲ್ಪಿಸಿಕೊಂಡು ರಚಿಸಿದ ಕವನ ಮನನೀಯವಾಗಿದೆ.

ಓರ್ವ ತಾಯಿಯು ತನ್ನ ಕೂಸಿರುವ ತೊಟ್ಟಿಲವ ಕೈಯಿಂದ
ತೂಗುತಿಹಳೋ
ಪೂರ್ವ ಪಶ್ಚಿಮ ಘಟ್ಟದಲ್ಲಿ ಪಟ್ಟಿರುವಂಥ ನಾಡನ್ನೆ
ನೂಗುತಿಹಳೋ (ನಾದಲೀಲೆ)

ಅವರು 1921ರಲ್ಲಿ 'ಹಂಪೀ–ವಿಜಯನಗರ' ಕವನವನ್ನು ವಾರ್ಧಕ ಷಟ್ಪದಿಯಲ್ಲಿ ರಚಿಸಿದರು. ಅದರಲ್ಲಿ 'ಬಿದ್ದ ರಾಜ್ಯವಿದಲ್ಲ ಉದ್ದುದ್ಧವಾಗಿದ್ದು । ಎದ್ದ ರಾಜ್ಯದ ಮೊಳಕೆಯಿದು' ಎಂದು ಕನ್ನಡ ರಾಜ್ಯ ಮತ್ತೆ ಮೊಳಕೆಯೊಡೆಯುವ ಆಶಾಭಾವನೆಯನ್ನು ವ್ಯಕ್ತಪಡಿಸಿದರು. ಅವರು ಕರ್ನಾಟಕ ಒಂದಾಗಬೇಕು, ಅದರಲ್ಲಿ ಕನ್ನಡಿಗರು ಐಕಮತ್ಯದಿಂದಿದ್ದು ಸುಖ ಸಮೃದ್ಧಿಯಿಂದ ಬಾಳಬೇಕು ಎಂದು ಹಂಬಲಿಸುತ್ತಿದ್ದರು. ಆ ಸುಂದರ ಆಕಾಂಕ್ಷೆಯಲ್ಲಿ 'ಒಂದೇ ಕರ್ನಾಟಕ' ಕವಿತೆ ರಚಿಸಿದರು.

ಒಂದೇ ಒಂದೇ ಒಂದೇ ಕರ್ನಾಟಕ ಒಂದೇ ॥ ಪ ॥
ಇಂದೇ ಮುಂದೇ ಎಂದೇ ಕರ್ನಾಟಕ ಒಂದೇ
ಜಗದೇಳಿಗೆಯಾಗುವದಿದೆ ಕರ್ನಾಟಕದಿಂದೆ
ಇಲ್ಲಿಯ ಜನ–ಮನ–ಭಾಷೆಯು ಕನ್ನಡವದು ಒಂದೇ
ಒಂದೇ ಜನವೂ ಒಂದೇ ಮನವೂ ಕನ್ನಡಿಗರು ಎಂದೇ
ಕುಲವೊಂದೇ ಸ್ಥಲವೊಂದೇ ನೀತಿಯ ನೆಲೆಯೊಂದೇ
ಹೀಗೆನ್ನದ ಹೆರವರು ಅವರಿದ್ದರು ಒಂದೇ
ಇರದಿದ್ದರು ಒಂದೇ ! (ಗಂಗಾವತರಣ)

'ನಾಡಿನ ನಾಡಿಯೂ ಕೂಡ ನುಡಿಯ ನೆತ್ತರಿನೊಡನೆ ಕುಣಿಯುತ್ತಿರಬೇಕು' ಎಂದು ಹೇಳಿ ಅದರಂತೆ ನಡೆಯುತ್ತಿದ್ದ ವರಕವಿ ನಾಡಿಗೆ ಆದರ್ಶಪ್ರಾಯರಾಗಿದ್ದರು. ಶ್ರೀಧರ ಖಾನೋಳಕರ ಬೇಂದ್ರೆಯವರ ಬಾಲ್ಯ ಸ್ನೇಹಿತ. ಅವರು ತನ್ನ ಗೆಳೆಯನ ಕನ್ನಡಾಭಿಮಾನ, ತ್ಯಾಗ, ಸಾಹಸ ಕುರಿತು ಹೀಗೆ ಹೇಳಿದ್ದಾರೆ : 'ಇದು ನೋಡಿರಿ ನಮ್ಮ ಕರ್ನಾಟಕ ಇಷ್ಟು ದೊಡ್ಡದು. ಇದರ ವಿಷಯವಾಗಿ ಅಭಿಮಾನ ತಾಳಿ' ಎಂದು ತೋರಿಸುವದು. ಈ ಧ್ಯೇಯವನ್ನು ಸಾಧಿಸುವದಕ್ಕೋಸ್ಕರ ಅವರು ಪಟ್ಟ ಕಷ್ಟಗಳು, ಅವರು ಮಾಡಿದ ಸಾಹಸ, ಅವರು ಕೈಕೊಂಡ ದಾರಿದ್ರ್ಯ, ಅವರು ಆಚರಿಸಿದ ಧೀರ್ಘೋದ್ಯೋಗ–ಇವುಗಳನ್ನೆಲ್ಲ ನೋಡಿದರೆ, ಎದೆಯು ತಣ್ಣಗಾಗುವದು ! (ಕವಿವರ ಬೇಂದ್ರೆ, ಪು. 16)

ಅಂತಹ ಕನ್ನಡ ತೇಜಸ್ವಿ ಬೇಂದ್ರೆ 'ನನ್ನದು ಈ ಕನ್ನಡ ನಾಡು' ಎಂದು ಕವನ ರಚಿಸಿ ಜನರಲ್ಲಿ ಈ ನಾಡು ನಮ್ಮದು ಎಂಬ ಅಭಿಮಾನ ಮೂಡಿಸಿದರು.

ನನ್ನದು ಈ ಕನ್ನಡ ನಾಡು ನನ್ನದೋ !
ಅವರಿವರದೆಂದು ಎಂದೂ ಎನ್ನದೋ !
ಅದು ನನ್ನದೆಂತು ಹಾಗೇಽ ನಿನ್ನದೋ !
ನನ್ನದು ಈ ಕನ್ನಡ ನಾಽಡು
ಈ ಕನ್ನಡ ನಾಡು ನನ್ನದು ॥ (ನಮನ)

(ವಿಜಯ ಕರ್ನಾಟಕ, ಬೋಧಿವೃಕ್ಷ, 16.9.2017)

■



ಯುಗದ ಕವಿಗೆ

ಬೇಂದ್ರೆ ಅವರು 12.11.1960ರಲ್ಲಿ ರಚಿಸಿದ 'ಯುಗದ ಕವಿಗೆ' ಕವನ ಕುವೆಂಪು ಅವರ 'ಗಂಗೋತ್ರಿ' ಅಭಿನಂದನಾ ಗ್ರಂಥದಲ್ಲಿ ಪ್ರಕಟವಾಗಿದೆ. ಈ ಕವನ 2003ರ 'ಔದುಂಬರ ಗಾಥೆ' ಸಂ. 2ರಲ್ಲಿ ಮುದ್ರಿತವಾಗಿದೆ. ಬೇಂದ್ರೆಯವರು ತನ್ನ ಸಮಕಾಲೀನ ಕವಿಗಳಾದ ಮಾಸ್ತಿ, ಬಿಎಂಶ್ರೀ, ಶಾಂತಕವಿ, ಮಧುರಚೆನ್ನ, ತಂಗಿ ಜಾನಕಮ್ಮ, ತಂಗಿ ಗೌರಮ್ಮ ಮುಂತಾದವರ ಬಗ್ಗೆ ಕವನಗಳನ್ನು ರಚಿಸಿದ್ದಾರೆ.

'29.12.1904ರಲ್ಲಿ ಜನಿಸಿದ ಕುವೆಂಪು ಅವರ ಅದ್ಭುತವಾದ ಕಾವ್ಯ ಪ್ರತಿಭೆಯನ್ನು ಕುರಿತು ಹೊರಹೊಮ್ಮಿದ ಕವನ. ಸಮಕಾಲೀನ ಕವಿಮನ್ನಣೆ ಯಾವಾಗಲೂ ಮೌಲಿಕ. ಕುವೆಂಪು ಕಾವ್ಯ ಯುವಕರ ಮನಸ್ಸನ್ನು ಶಿವ ಜೀವನಕ್ಕೆ ಶುಭ ಜೀವನಕ್ಕೆ ಒಯ್ಯುವಂತಾಗಲಿ ಎಂಬುದಾಗಿ ಪ್ರಾರ್ಥಿಸಿದ್ದಾರೆ.' ಎಂಬ ಭಾವ ಸಂದರ್ಭ 'ಯುಗದ ಕವಿ' ಕವನಕ್ಕಿದೆ.

ಕುವೆಂಪು ಅವರು ರಚಿಸಿದ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯ. 'ಕವಿಗೆ ಕವಿ ಮಣಿವನ್' ಎಂಬುದು ಕನ್ನಡ ಸಾಹಿತ್ಯ ಸಂಸ್ಕೃತಿ, ತಮ್ಮ ಕಾಲಮಾನದಲ್ಲಿ ವೈಚಾರಿಕ, ವೈಜ್ಞಾನಿಕ ಜಾಗೃತಿ ಮೂಡಿಸುವ ಸಾಹಿತ್ಯ ರಚಿಸಿ ಮನುಜ ಮತ, ವಿಶ್ವ ಪಥ ಎಂಬ ಚಿಂತನೆ ನೀಡಿದ ಕವಿ ಕುವೆಂಪು ಕನ್ನಡ ಸಾಹಿತ್ಯದಲ್ಲಿ ಯುಗ ನಿರ್ಮಾಪಕರು. ಅದನ್ನು ಅರಿತ ವರಕವಿ ಬೇಂದ್ರೆ 'ಯುಗದ ಕವಿಗೆ, ಜಗದ ಕವಿಗೆ'. 'ಶ್ರೀ ರಾಮಾಯಣ ದರ್ಶನ' ದಿಂದಲೇ ಕೈ ಮುಗಿದ' ಕವಿಗೆ ಮಣಿದಿದ್ದಾರೆ.

ಶ್ರೀ ರಾಮಕೃಷ್ಣ ಪರಮಹಂಸರ ಪರಮ ಶಿಷ್ಯರಾದ ಕುವೆಂಪು 'ಶ್ರೀರಾಮಕೃಷ್ಣ ವಚನ ವೇದ ನುಡಿ ನಮನ' ಮತ್ತು 'ಶ್ರೀ ರಾಮಕೃಷ್ಣ ಪರಮಹಂಸ–ಜೀವನ ಚರಿತ್ರೆ'ಯನ್ನು ರಚಿಸಿದ್ದಾರೆ. ಕುವೆಂಪು ಅವರ ರಾಮಕೃಷ್ಣ ವಚನೋದಿತ ಪ್ರತಿಭೆ ಸೃಷ್ಟಿಸಿದ ಕವನ ಸಮೂಹವನ್ನು ಓದಿ ಆನಂದಿಸದವರು ಯಾರು ? ಎಂದು ಬೇಂದ್ರೆ ಕೇಳಿದ್ದಾರೆ.

'ಕಾಡಿನ ಕೊಳಲಿದು, ಕಾಡ ಕವಿಯು ನಾ' ಎಂದು ತಿಳಿಸಿದ ಮಲೆಯ ಕವಿ ಕುವೆಂಪು ಅವರು ತಮ್ಮ ಎಲ್ಲ ಕೃತಿಗಳಲ್ಲಿ ಮಲೆನಾಡಿನ ವೈಭವವನ್ನು ಜನತೆಗೆ

ಉಣಿಸಿರುವರು. ಆ ವರ್ಣನಾ ವೈಭವದಲ್ಲಿ ನಲಿದು ಕುಣಿಯದವರು ಯಾರೂ ಇಲ್ಲ ಎಂದು ಅದರ ಧನಾತ್ಮಕ ಭಾವದರಿವನ್ನು ಕಾವ್ಯದಲ್ಲಿ ಬೇಂದ್ರೆ ನೀಡಿದ್ದಾರೆ.

'ಬಾರಿಸು ಕನ್ನಡ ಡಿಂಡಿಮವ
ಓ ಕರ್ನಾಟಕ ಹೃದಯ ಶಿವ'

ಎಂದು ಕರ್ನಾಟಕ ಹೃದಯ ಶಿವನನ್ನು ಕುವೆಂಪು ಪ್ರಾರ್ಥಿಸಿದ್ದಾರೆ. ಅದರಲ್ಲಿ 'ಸತ್ತಂತಿಹರನು ಬಡಿದೆಚ್ಚರಿಸು ; ಕಚ್ಚಾಡುವರನು ಕೂಡಿಸಿ ಒಲಿಸು.' ಎಂದು ಕೇಳಿಕೊಳ್ಳುತ್ತ 'ಕ್ಷಯಿಸೆ ಶಿವೇತರ ಕೃತಿ ಕೃತಿಯಲ್ಲಿ । ಮೂಡಲಿ ಮಂಗಳ ಮತಿಮತಿಯಲ್ಲಿ ; । ಕವಿ ಋಷಿ ಸಂತರ ಆದರ್ಶದಲಿ । ಸರ್ವೋದಯವಾಗಲಿ ಸರ್ವರಲಿ ।' ಎಂದು ಶಿವ, ಮಂಗಳ, ಸರ್ವೋದಯ ನಾಡಿನ ಜನತೆಯಲ್ಲಿ ಉಂಟಾಗಲು ಆಶಿಸಿದ್ದಾರೆ. ಅದನ್ನು ಅರಿತ ಬೇಂದ್ರೆ ಅವರು ಹೆಮ್ಮೆಯಿಂದ ಯುಗದ ಕವಿಯನ್ನು ಪ್ರಾರ್ಥಿಸಿದ್ದಾರೆ:

'ಕನ್ನಡಿಸಲಿ ಶಿವ ಜೀವನ
ಮುನ್ನಡಿಸಲಿ ಯುವ ಜನಮನ
ಇದೋ ಪ್ರಾರ್ಥನೆ ತಮಗೆ'

ಇದು ಕನ್ನಡ ಭಾಷೆ ಸಂಸ್ಕೃತಿಯ ಅತ್ಯುನ್ನತ ನೆಲೆಯ ಸಮಕಾಲೀನ ಕವಿಗಳ ಪರಸ್ಪರ ಗೌರವದ ಉತ್ತುಂಗತೆ.

* * *

ಕುವೆಂಪು ಅವರ ನಿವಾಸದ ಹೆಸರು 'ಉದಯರವಿ'. ಅಲ್ಲಿಂದ ನಾಡಿಗೆ ಹೊಮ್ಮಿದ ಜಾಗೃತ ಬೆಳಕು ಮೌಢ್ಯ, ಕಂದಾಚಾರ, ಸಾಮಾಜಿಕ ಕಟ್ಟುಪಾಡುಗಳ ಕತ್ತಲನ್ನು ಹೊಡೆದೋಡಿಸಿದೆ. ವೈಜ್ಞಾನಿಕ ಮನೋಧರ್ಮವನ್ನು ಮೂಡಿಸಿದೆ. ಆ ಕವಿಯ ನುಡಿ ಚದುರು/ಚಾತುರ್ಯ ಅರಿವನ್ನು ಯುವಜನರಲ್ಲಿ ಮೂಡಿಸುತ್ತದೆ ಎಂಬ ಭಾವದಲ್ಲಿ ಬೇಂದ್ರೆ ಅವರು ಹೀಗೆ ವರ್ಣಿಸಿದ್ದಾರೆ :

'ತಮವೆಲ್ಲಿದೆ ರವಿ ಇದಿರಿಗೆ
ಉತ್ತಮ ಕವಿ ನುಡಿ ಚದುರಿಗೆ'

ಕುವೆಂಪು ಸುಂದರ ಸುಲಕ್ಷಣ ತೇಜಸ್ವಿ. ಅವರ ವ್ಯಕ್ತಿತ್ವವನ್ನು ರೂಪಸಿರುವ ಅವರ ಶುದ್ಧ ಜೀವನ ಶೈಲಿ ನಾಡಿಗೆ ಆದರ್ಶ. ಅಂತಹ ಚಾರಿತ್ರ್ಯ ಅವರದು. ಸೃಷ್ಟಿಕರ್ತ ಭಗವಂತ ಚಿನ್ನದಲ್ಲಿ ಹರಳನ್ನು ಕೂಡಿಸುವ ಕೆಲಸ-ಕುಂದಣದ ರೀತಿಯಲ್ಲಿ ನಿಮ್ಮನ್ನು ಸೃಷ್ಟಿಸಿದ್ದಾನೆ ಎಂದು ಚಾರುತ್ವ, ಚಾರಿತ್ರ್ಯವನ್ನು ಪ್ರತಿಮಾತ್ಮಕವಾಗಿ ಬೇಂದ್ರೆ ಚಿತ್ರಿಸಿದ್ದಾರೆ:

'ಚಾರುತ್ವದ ಕುಂದಣದಲ್ಲಿ
ಚಾರಿತ್ರ್ಯದ ರತ್ನ'.

ಕುವೆಂಪು ಅವರು ಸದಾ ಜನರ ಬದುಕಿಗೆ ಉಪಯುಕ್ತವಾಗುವ ಎಚ್ಚರದ ಜಾಣತನದ ಆಲೋಚನೆ ಮಾಡುತ್ತ ಅಂತಹವರ ಸಹವಾಸದಲ್ಲಿ ಸದಾ ಇದ್ದು ಬಾಳಿದವರು. ಅಂತಹ ವ್ಯಕ್ತಿತ್ವದ ಕುವೆಂಪು ನಮ್ಮ ಸಮಕಾಲೀನ ಎಂಬುದೇ ನಮಗೆ ತೃಪ್ತಿ ಎಂದು ಬೇಂದ್ರೆ ಸುಖಿಸಿದ್ದಾರೆ.

'ಚಾತುರ್ಯದ ಮಂತಣದಲಿ
ಸತ್ಸಂಗದ ಯತ್ನ
ಇದೇ ತೃಪ್ತಿಯು ನಮಗೆ.'

(ಸಂಯುಕ್ತ ಕರ್ನಾಟಕ, ಸಾಪ್ತಾಹಿಕ ಸೌರಭ, 4.9.2016)

■



ಸಂಸ್ಕೃತಿ ಸಂಗಮದಿಂಗಡಲು

ನುಡಿದು ಬೇಸತ್ತಾಗ ! ದುಡಿದುಡಿದು ಸತ್ತಾಗ
ಜನಕ ಹಿಗ್ಗಿನ ಹಾಡು ನೀಡಾಂವಾ
ನಿನ್‌ಹಾಂಗ ಆಡಾಕ ! ನಿನ್ ಹಾಂಗ ಹಾಡಾಕ
ಪಡೆದು ಬಂದವ ಬೇಕೊ ಗುರುದೇವಾ ! (ಸಖೀಗೀತ)

ಎಂದು ರಾಷ್ಟ್ರಕವಿ ರವೀಂದ್ರನಾಥ ಠಾಕೂರ್ (ಜನನ 7 ಮೇ 1861) ಅವರನ್ನು ಬೇಂದ್ರೆಯವರು ಕಾವ್ಯದಲ್ಲಿ ಕಡೆದಿಟ್ಟಿದ್ದಾರೆ. ಕಾವ್ಯ ಸೂರ್ಯ (ವಿಹಂಗಮ)ನೇ ನೀನು ಸಂಸ್ಕೃತಿ ಸಂಗಮದ ಕ್ಷೀರಸಾಗರ (ಇಂಗಡಲು). ರಾಷ್ಟ್ರಗೀತೆ 'ಜನಗಣಮನ ಅಧಿನಾಯಕ' ರಚಿಸಿದ ಜನಮಾನಸದ ಅಧಿನಾಯಕ. ನಿನ್ನನ್ನು ಹೇಗೆ ಮರೆಯಲಿ ಎಂದು ಆತ್ಮೀಯವಾಗಿ ನೆನೆದಿದ್ದಾರೆ.

'ಸಂಸ್ಕೃತಿ ಸಂಗಮದಿಂಗಡಲಾಗಿರುವೆ ಕಾವ್ಯವಿಹಂಗಮನೇ !'
'ಜನಮನಗಣ ಅಧಿನಾಯಕನಾದವನ ಎಂತಾರೆ ನಾ ಮರೆವೆ ?'
(ಮುಗಿಲ ಮಲ್ಲಿಗೆ)

ಬೇಂದ್ರೆಯವರು ಶ್ರೀ ರವೀಂದ್ರರು ನೊಬೆಲ್ ಬಹುಮಾನ ಪಡೆದು ವಿಶ್ವವ್ಯಾಪಿಯಾದುದನ್ನು ; ಕವಿಯಾಗಿದ್ದು ಜಗದ ಮಾರ್ಗದರ್ಶಕರೂ ಆಗಿದ್ದುದನ್ನು 'ಜಗದ ಕಣ್ಣಾದಿನೀ' ಎಂದು ರೂಪಕಾತ್ಮಕವಾಗಿ ಬಣ್ಣಿಸಿದ್ದಾರೆ. ಕಾವ್ಯ ರಚಿಸಿ, ರವೀಂದ್ರ ಸಂಗೀತ ರೂಪಿಸಿ ಹಾಡಿ ತಣಿದೆ, ತೃಪ್ತಿಯನ್ನು ಪಡೆದೆ ಎಂದು 'ಹಣ್ಣಾದಿ' ಪದದಲ್ಲಿ ಪ್ರತಿಮಾತ್ಮಕವಾಗಿ ಚಿತ್ರಿಸಿದ್ದಾರೆ. ಆ ಪದ ಬಳಲಿದೆ ಎಂಬ ಅರ್ಥವನ್ನೂ ಹೊಮ್ಮಿಸುತ್ತದೆ.

ಮೂಡಲಕ ಮೂಡೀದಿ । ಪಡುವಲಕ ಓಡೀದಿ
ದಿಕ್ಕೆಲ್ಲ ಕೂಡೀದಿ ಗುರುದೇವಾ
ಹಾಡಿ ಹಣ್ಣಾದಿ ನೀ । ಜಗದ ಕಣ್ಣಾದಿ ನೀ
ದುಡಿದು ಸಣ್ಣಾದಿ ನೀ ಗುರುದೇವಾ !

* * *

ಬೇಂದ್ರೆಯವರಿಗೆ ಕವಿ ರವೀಂದ್ರರು ಕಾವ್ಯಗುರುವಾಗಿದ್ದರೆ ಯೋಗಿ ಅರವಿಂದರು ಯೋಗಗುರುಗಳಾಗಿದ್ದರು. ಅದನ್ನು ಅವರು ರೂಪಕಾತ್ಮಕವಾಗಿ ಹೀಗೆ ಹೇಳಿದ್ದಾರೆ :

'ಅರಿವೆಂಬ ರವಿಯು ಮೂಡಲು
ಗುರುವೆಂಬಾತ್ಮಾರವಿಂದವರಳಿತು ನನ್ನೊಳ್'

ರವೀಂದ್ರರ ಸಾಹಿತ್ಯದ ಪ್ರಭಾವಕ್ಕೆ ಒಳಗಾಗಿದ್ದ ಬೇಂದ್ರೆಯವರು ಅದನ್ನು ಸಾಹಿತ್ಯದ ವಿರಾಟ್ ಸ್ವರೂಪದಲ್ಲಿ ಹೀಗೆ ದಾಖಲಿಸಿದ್ದಾರೆ. 'ವ್ಯಕ್ತಿ – ಸಮಷ್ಟಿ ಪರಸ್ಪರ ಪೋಷಕ, ಪೂರಕ, ಪೂರ್ಣದಿಂದ ಪೂರ್ಣ ದತ್ತ ಪರಿವರ್ಧಿಸುವ ಸಂಬಂಧ ಎಂದು ಆಗದಿದ್ದರೆ, ಜೀವನವೇ ವಿಕೃತಿಯಾಗುತ್ತದೆ. ಈ ಎಚ್ಚರವನ್ನು ನನಗೆ ಮೊದಲು ಸ್ಪಷ್ಟವಾಗಿ ತಂದುಕೊಟ್ಟ ಸಾಹಿತಿ ರವೀಂದ್ರನಾಥ ಟಾಗೋರರವರು, ಟಾಗೋರರ ಶಿಶುಕಾವ್ಯ, ಪ್ರಣಯ ಗೀತೆಗಳು, ಸಣ್ಣ ಕತೆಗಳು, ಅವರ ನಾಟಕದೊಳಗಿನ ಮುದುಕರು, ಅವರ ಲೇಖನದೊಳಗಿನ ಸಂವಾದ ಸರಣಿ ಇವೆಲ್ಲವೂ ನನಗೆ ವಿವಿಧ ಬೋಧಾ ತಂದಿವೆ....

'ಅವರ ಆಂಗ್ಲಾನುವಾದಗಳನ್ನು ವಿದ್ಯಾರ್ಥಿಗಳಿಗಾಗಿ ಮಾಡುವುದು, ಅವರ ಉಕ್ತಿಗಳನ್ನು ಗುಣುಗುಣು ಹೇಳಿಕೊಳ್ಳುವದು ಕೆಲ ದಿನದ ಕ್ರೀಡೆಯಾಗಿತ್ತು ನನಗೆ....

'ಅವರ ಗೀತಗಳನ್ನು ಕುರಿತು ಪ್ರವಚನ ಮಾಡಿದೆ ಜನಸಮೂಹಕ್ಕೆ ಇದೆಲ್ಲವೂ ರವೀಂದ್ರ ಕಾವ್ಯ ಪ್ರಕೃತಿಯ ಪೂಜೆಗಿಂತ ಅವರ ಸಾಧಕ ಪುರುಷನ ಧ್ಯಾನ–ಸಮಾಧಿಗಾಗಿ. ಧಾರವಾಡ ಸ್ಟೇಶನ್ ಪ್ಲಾಟ್‌ಫಾರ್ಮ ಮೇಲೆ, ಅವರು ದೀನಬಂಧು ಆಂಡ್ರ್ಯೂಜರೊಡನೆ ಹತ್ತಿಪ್ಪತ್ತು ನಿಮಿಷ ಸತ್ಸಂಗ ಸಮಾಗಮ ಸುಖ ಕೊಟ್ಟರು.'

ಕವಿಮಾನ್ಯರ ಸಮಾಗಮವಾದ ವರ್ಷ 1922.

* * *

ಬೇಂದ್ರೆಯವರು 'ವಿಶ್ವಮಾನವರಾ' ಕವನದಲ್ಲಿ ರವೀಂದ್ರರನ್ನು ಭಾರತದ ಗುರು, ಸೌಂದರ್ಯದ ತರು ಎಂದು ಕರೆದು ; ಕಾವ್ಯ ಧೂಪದಿಂದ ಆರಾಧಿಸಿ–ಆ ಕಾವ್ಯ ಕಂಪು ಸಹೃದಯರಿಗೆ ತಲುಪಲಿ ಎಂದು ಆಶಿಸಿದ್ದಾರೆ. ಜೊತೆಗೆ 'ನಿನ್ನೆನಪು ನಿನ್ನೆತ್ತರಾ' ಎಂದು ಅವರ ಬಗೆಗಿನ ಉನ್ನತ ಧ್ಯಾನದಲ್ಲಿ ಮಿಂದಿದ್ದಾರೆ.

ಭಾರತ ಗುರುವೇ
ಸೌಂದರ್ಯ ತರುವೇ
ನಿನಗೊಪ್ಪಿಸಿದೆ ಧೂಪಾ.
ಮೂಸಿದ ಕಡೆಗೆ
ವಾಸನೆ ಇಡುಗೆ
ದೃಷ್ಟಿಯೆ ದೀಪವು, ಪ್ರಕಟ ಸ್ವರೂಪವು
ನಿನ್ನೆನಪು ನಿನ್ನೆತ್ತರಾ. (ಮುಗಿಲ ಮಲ್ಲಿಗೆ)

ರವೀಂದ್ರರು ಪ್ರಕೃತಿ ಆರಾಧಕರಾಗಿ, ಆದರ್ಶ ವ್ಯಕ್ತಿಯಾಗಿ ಪ್ರೀತಿಯನ್ನು ಹಂಚುತ್ತ ನಾಡಿಗರನ್ನು ಒಲಿಸಿಕೊಂಡವರು. ಅವರು ಉಪನಿಷತ್ ಋಷಿ, ವ್ಯಾಸ ವಾಲ್ಮೀಕಿಯರ ಕೊಡುಗೆ, ಕಾಳಿದಾಸನ ಜನರ ಬದುಕಿನ ವಿಲಾಸದ ಕಾವ್ಯದ ಮಾರ್ಗಕ್ಕೆ ಕಿವಿಯಾದವರು ಎಂದು ಭಾರತೀಯ ಕಾವ್ಯ ಪರಂಪರೆಯ ಹಿನ್ನೆಲೆಯಲ್ಲಿ ಬೇಂದ್ರೆ ನೆನೆಸಿದ್ದಾರೆ.

ಪ್ರಕೃತಿಯ ಪೂಜೆಯ ಪ್ರೀತಿಗೀತಿಗಳ
ನಿಶಿದಿನ, ಜನಮನ ಹಾಡಿಸುವಾ.
ಆದರ್ಶದಿ ಅನುರಾಗವ ಬಿಂಬಿಸಿ
ನಾಡಿನ ನಾಡಿಯನಾಡಿಸುವಾ.

* * *

ಋಷಿಕುಲಜಾತನೋ ಉಪನಿಷದಾತನೊ
ತನ್ನರಿವಿನ ಗುರು ತಿಳಿಯುವವಾ.
ವ್ಯಾಸನ ವಾಲ್ಮೀಕಿಯ ಬಳುವಳಿಯವ
ಕಾಲಿದಾಸ ಶ್ರುತಿ ಎಳೆಯುವವಾ.

(ಮುಗಿಲ ಮಲ್ಲಿಗೆ)

ರವೀಂದ್ರರ ನೊಬೆಲ್ ಬಹುಮಾನ ಪಡೆದ ಕೃತಿ 'ಗೀತಾಂಜಲಿ'ಯನ್ನು ಓದಿ, ಅವರ ಶ್ರೇಷ್ಠತೆಯನ್ನು ಅನುಭವಿಸಿ ಅನುಭಾವದ ಧಾಟಿಯಲ್ಲಿ ಬೇಂದ್ರೆಯವರು ಹೀಗೆ ಹಾಡಿದ್ದಾರೆ :

'ಗೀತದೊಳಗಿಹ ಬಲವು ಯಾತರೊಳಗೂ ಇಲ್ಲ !'
'ಗೀತವೇ ಜೀವ, ಸದ್ಗೀತವೆ ಜೀವಾಳ, ಗೀತವೇ ಬ್ರಹ್ಮವಹುದು'.

(ಉಯ್ಯಾಲೆ)

'1883ರಲ್ಲಿ ಅಣ್ಣಂದಿರಾದ ಸತ್ಯೇಂದ್ರನಾಥರ ನೆಪವಾಗಿ ಕರ್ನಾಟಕದ ಭಾಗವಾದ ಕಾರವಾರಕ್ಕೆ ಬಂದರು. 'ಪ್ರಕೃತಿ ಪ್ರತಿಶೋಧ' ಎಂಬ ಅವರ ನಾಟಕ ರಚನೆಗೆ ಅಲ್ಲಿ ಪ್ರೇರಣೆ ದೊರೆಯಿತು. ಕಾರವಾರದಿಂದ ತಮ್ಮ ನಾಡಿಗೆ ಮರಳಿ ಹೋದವರೇ ಅದೇ 1883ರ ಡಿಸೆಂಬರ್‌ನಲ್ಲಿ ಮದುವೆಯಾದರು. ಅವರ ನಾಟಕ ಮುಂದೆ 'Sanyasi' ಎಂಬ ಇಂಗ್ಲಿಷ್ ರೂಪ ತಾಳಿತು.' ಎಂಬ ಘಟನಾವಳಿಯ ಭಿತ್ತಿಯ ಮೇಲೆ ಬೇಂದ್ರೆಯವರು 'ಪಡುವಲ – ಕಡಲೆಡೆ ರವಿ ಮೂಡಿದನು' ಹೆಸರಿನ 'ರೂಪಕ ಚಿತ್ರ' ರಚಿಸಿದ್ದಾರೆ. ಅದೊಂದು ರವೀಂದ್ರರ ವ್ಯಕ್ತಿತ್ವ ದರ್ಶನದ ಬಾನುಲಿ ರೂಪಕ.

ಬೇಂದ್ರೆಯವರು ಮಾಡಿರುವ ರವೀಂದ್ರರ ಗೀತದ ಭಾವಾನುವಾದಗಳು : 'ಪಾಲ್ಗುನ', 'ಎಲೆನೂತನಾ', 'ಶರಣು', 'ಸೋಸೋ ಸೋಬಾನೆ ಬಾ'. ರವೀಂದ್ರರ 'ಕ್ರಸೆಂಟ್ ಮೂನ' ವಾಚನದಿಂದ ಸ್ಫುರಿಸಿದ ಕವಿತೆಗಳು : 'ಅವ್ವಾ ! ನಾನು ಎಲ್ಲಿಂದ

ಬಂದೆ ?', 'ಕಂದನ ಮಲಗಿಸಿ ನೀರಿಗೆ ಹೋದೆ', 'ಮಕ್ಕಳ ನಿದ್ದಿ ಮಾಡಿದಿ ಕಳವು', 'ಎಲ್ಲಿದ್ದಾಳೋ ನಿದ್ದಿಯ ಕಳ್ಳಿ', 'ಕನಸು ಜನಿಸುತ್ತದೆ'.

ಬೇಂದ್ರೆಯವರು ಮಾಡಿರುವ ರವೀಂದ್ರರ ಉಕ್ತಿಗಳ ಭಾವಾನುವಾದ : 'ನಕ್ಷತ್ರ'. ಅದರಲ್ಲಿ 27 ಉಕ್ತಿಗಳಿವೆ. ಅವು ಚಿಂತನ ಶೀಲವಾಗಿವೆ.

ಚಿರಂತನದ ಶ್ರುತಿ ಮೌನವು ಕಾಣೋ
ನಿಮಿಷದ ಗಲಿಬಿಲಿ ಏತಕ್ಕೆ ?

* * *

ಬಾಳಿನ ನಾಣ್ಯಕೆ ಸಾವಿನ ಮುದ್ರೆ

* * *

ಉದುರುವ ಹಣ್ಣೆಲೆ ಹೇಳಿದ ಪಾಡು
ಚಿಗುರುವ ಕೆಚ್ಚೆಲೆ ಕೇಳಿದವೋ ?

* * *


ಗದ್ದವನೆತ್ತಿ ಮುದ್ದಿಸುವ ಕಣ್ಣು
ಇರದಿರೆ ಕತ್ತನು ಎತ್ತದು ಹೆಣ್ಣು

* * *

ಗಂಧವ ನೀಡಿದ ಮಣ್ಣಿಗೆ ತಾನೇ
ಬಾಡಿದ ಹೂವಿನ ಪೂಜೆ ! (ಮುಗಿಲ ಮಲ್ಲಿಗೆ)

(ವಿಜಯ ಕರ್ನಾಟಕ, ಬೋಧಿವೃಕ್ಷ 7.5.2017)

■



ಶ್ರೀ ಅರವಿಂದರು

ಕಾಲೇಜು ವಿದ್ಯಾಭ್ಯಾಸದ ಅವಧಿಯಲ್ಲಿಯೇ ಬೇಂದ್ರೆಯವರು ಶ್ರೀ ಅರವಿಂದರ 'ಆರ್ಯ' ಪತ್ರಿಕೆ ಓದಿ ಅವರ ಪ್ರಭಾವಕ್ಕೆ ಒಳಗಾದರು. ಅದನ್ನು ಅವರು 'ನಾನು ಫರ್ಗ್ಯುಸನ್ ಕಾಲೇಜಿನಲ್ಲಿ ಬಿ.ಎ. ಕ್ಲಾಸಿನಲ್ಲಿದ್ದೆ. ನನ್ನ ಗೆಳೆಯರು ಶ್ರೀ ಕೇಸರಿ ಅವರು ಹಾಸ್ಟೆಲಿನಲ್ಲಿರುತ್ತಿದ್ದರು.... 1917 ಆಗಸ್ಟ್ ಸುಮಾರು ಇರಬೇಕು, ಅವರಲ್ಲಿ ನಾನು 'ಆರ್ಯ' ಕಂಡದ್ದು. ನೋಡಿ ಚಿತ್ತವು ಆಕರ್ಷಿತವಾಯ್ತು. ಗೀತೆಯ ಬಗ್ಗೆ ಆ ಸಂಚಿಕೆಗಳಲ್ಲಿ ಲೇಖನ ಬರುತ್ತಿದ್ದವು....ಕೀಟ್ಸನ ಕಾವ್ಯದ ಬಗ್ಗೆ ಶ್ರೀ ಅರವಿಂದರು ಬರೆಯುವಾಗ ಈ ವಾಕ್ಯ ಹಾಕುತ್ತಾರೆ. "He (Keats) saw her (poetry) in three of her four forms. Sensuous beauty, Imaginative beauty, Intellectual beauty and Ideal beauty" (Arya pp 627, 628)'. ಎಂದು ತಿಳಿಸಿದ್ದಾರೆ. (ಸಾಹಿತ್ಯದ ವಿರಾಟ್ ಸ್ವರೂಪ, ಪು 36 ರಿಂದ 38). ಅವರ ಇಡೀ ಕಾವ್ಯವು ಈ ಚತುರ್ಮುಖ ಸೌಂದರ್ಯ ಸಿದ್ಧಾಂತದಿಂದ ಕೂಡಿದೆ.

'ಕವೀಂದ್ರ ರವೀಂದ್ರರು ಶ್ರೀ ಅರವಿಂದರಿಗಿಂತ ವಯಸ್ಸಿನಲ್ಲಿ ಹಿರಿಯರು, ಅರವಿಂದ ಬಾಬು ಅವರ ತಾಯಿಯ ತಂದೆ ಯುವಕ ರವೀಂದ್ರರಿಗೆ ಆದರ್ಶ ಜೀವನ ಪ್ರೇರಕರಾಗಿದ್ದರು'. ಎಂದು ಬೇಂದ್ರೆ ತಿಳಿಸಿದ್ದಾರೆ. (ಸಾ.ವಿ.ಸ್ವ. ಪು. 107). ಅವರು ಕವಿ ರವೀಂದ್ರ ಮತ್ತು ಯೋಗಿ ಅರವಿಂದರನ್ನು ತನ್ನ ಗುರುಗಳೆಂದು ಆರಾಧಿಸುತ್ತಿದ್ದರು. ಅವರು ಅದನ್ನು ಕಾವ್ಯದಲ್ಲಿ ಹೀಗೆ ಅಭಿವ್ಯಕ್ತಿಸಿದ್ದಾರೆ :

'ಅರಿವೆಂಬ ರವಿಯು ಮೂಡಲು
ಗುರುವೆಂಬಾತ್ಮಾರವಿಂದವರಳಿತು ನನ್ನೊಳ್'

ಶ್ರೀ ಅರವಿಂದರ ತತ್ವದರ್ಶನದಲ್ಲಿ ಮಿಂದ ಬೇಂದ್ರೆಯವರು ಅಲ್ಲಿಯ ಅಧ್ಯಾತ್ಮದ ಅನುಭವವನ್ನು ತಮ್ಮ ಕಾವ್ಯದಲ್ಲಿ ಕಂಡರಿಸಿದ್ದಾರೆ. 'ಹೃದಯ ಸಮುದ್ರ' ಕವನ ಸಂಕಲನದ ಮುನ್ನುಡಿಯಲ್ಲಿ ಆ ಕವನಗಳನ್ನು ಕುರಿತು: ಹಲವು ಪಾಂಡಿಚೇರಿಗೆ ಹೋಗುವಾಗ, ಅಲ್ಲಿರುವಾಗ, ಅಲ್ಲಿಂದ ಮರಳುವಾಗ, ಅದರ ನೆನಪು ಆದಾದಾಗ ಬರೆದವುಗಳು. ಪ್ರಾರ್ಥನಾರೂಪವಾಗಿದೆ ಕೆಲವು ; ಕೆಲವು ಅನುಭವ ವರ್ಣನಾರೂಪ ; ಕೆಲವು ಅನುಭವ ಸಹಜನಿತವಾದವುಗಳು ; ಕೆಲವು ಕಾಣ್ಕೆ ; ಕೆಲವು ಕನಸು-ಕಣಸು; ಕೆಲವು

ಧ್ವನಿಸುವ ಅನುಭಾವವು ವಾಚ್ಯ-ಅನಿರ್ವಾಚ್ಯದ ನಡು-ಸೀಮೆಗೆ ಸೇರಿದುದು' ಎಂದು ತಿಳಿಸಿದ್ದಾರೆ. ಅವರು ಶ್ರೀ ಅರವಿಂದರನ್ನು ಹೀಗೆ ಪ್ರಾರ್ಥಿಸಿದ್ದಾರೆ :

'ಶ್ರೀ ಗುರುವೆ ಅರುವೆ ಶರಣಾಗಿ ಬರುವೆ. ಕರುಣೆಯನು ಕೋರಿ ಬರುವೆ.
ಹೃತ್ ಪ್ರಕೃತಿ ತಂದ ಕಿಡಿಹೂವುಗಳನು ಶ್ರೀ ಚರಣಕೆರೆಯುತಿರುವೆ.'

(ಶ್ರೀ ಗುರುವೆ !)

ಬೇಂದ್ರೆಯವರು ತಾವು ಯೋಗಿ ಅರವಿಂದರ ಚಿಂತನೆಯನ್ನು ತಿಳಿಯುವುದರ ಜೊತೆಗೆ ತಮ್ಮ ಸಂಪರ್ಕಕ್ಕೆ ಬಂದ ಕವಿ, ಸಾಹಿತಿ, ಸಹೃದಯ ಮಿತ್ರರಿಗೆ ಶ್ರೀ ಅರವಿಂದರ ಸಾಹಿತ್ಯವನ್ನು ನೀಡಿ ಅಧ್ಯಯನಶೀಲರಾಗುವಂತೆ ಮಾಡುತ್ತಿದ್ದರು. ಹಾಗೆ ಬೇಂದ್ರೆಯವರ ಕಾರಣದಿಂದ ಅರವಿಂದರ ಚಿಂತನೆಯತ್ತ ಹೊರಳಿದವರು ಮಧುರಚೆನ್ನ, ಸಿಂಪಿ ಲಿಂಗಣ್ಣ, ವಿ.ಕೃ. ಗೋಕಾಕ್, ಶಂಕರಗೌಡ ಮುಂತಾದವರು. ಗೆಳೆಯ ಶಂಕರಗೌಡರು ತಮ್ಮ ಜೊತೆಯಲ್ಲಿ ಬೇಂದ್ರೆಯವರನ್ನು 1943ರಲ್ಲಿ ಶ್ರೀ ಅರವಿಂದಾಶ್ರಮ ಪಾಂಡಿಚೇರಿಗೆ ಕರೆದುಕೊಂಡು ಹೋದರು. ಈಗಲೂ ಮಧುರಚೆನ್ನ, ಸಿಂಪಿಲಿಂಗಣ್ಣ ಮತ್ತು ವಿ.ಕೃ. ಗೋಕಾಕರ ಮಕ್ಕಳು, ಬೇಂದ್ರೆಯವರ ಮೊಮ್ಮಗಳು ಪುನರ್ವಸು ಬೇಂದ್ರೆ ಶ್ರೀ ಅರವಿಂದರ ಅನುಯಾಯಿಗಳಾಗಿ ಪಾಂಡಿಚೇರಿಗೆ ಹೋಗಿ ಬರುತ್ತಾರೆ. ಅವರೆಲ್ಲರೂ ಪಾಂಡಿಚೇರಿಯ 'ಶ್ರೀಮಾತಾ' ಅವರ ಅನನ್ಯ ಭಕ್ತರಾಗಿದ್ದಾರೆ. ಬೇಂದ್ರೆಯವರ ಮನೆಯ ಹೆಸರು 'ಶ್ರೀಮಾತ'. ಅವರ ಮಕ್ಕಳು ಪ್ರಾರಂಭಿಸಿದ ಪ್ರಕಟನಾಲಯ : 'ಶ್ರೀ ಮಾತಾ ಪ್ರಕಾಶನ.'

* * *


ಬೇಂದ್ರೆಯವರ ಪತ್ನಿ ಲಕ್ಷ್ಮೀಬಾಯಿಯವರೂ ಶ್ರೀ ಅರವಿಂದ ಮತ್ತು ಶ್ರೀಮಾತೆಯವರ ಭಕ್ತರಾಗಿದ್ದರು. ಅವರಿಗೆ ಬೇಂದ್ರೆಯವರು ಒಂದು ಮುತ್ತಿನ ಸರ ಮಾಡಿಸಿಕೊಟ್ಟಿದ್ದರು. 1944ರಲ್ಲಿ ಎರಡು ಮಕ್ಕಳನ್ನು ಒಂದೇ ತಿಂಗಳಲ್ಲಿ ಕಳೆದುಕೊಂಡು ದುಃಖಿತರಾದ ಲಕ್ಷ್ಮೀಬಾಯಿಯವರು ಆ ಮುತ್ತಿನ ಸರವನ್ನು ಪಾಂಡಿಚೇರಿಯ ಶ್ರೀಮಾತೆಯವರಿಗೆ ಅರ್ಪಿಸಿದರಂತೆ. (ವಿವರಗಳಿಗೆ ನೋಡಿ : ವಾಮನ ಬೇಂದ್ರೆ, ಬೇಂದ್ರೆ ಜೀವನ ಪರಿಚಯ, ಪು. 77)

* * *

'5 ಡಿಸೆಂಬರ್ 1950ರಂದು ಶ್ರೀ ಅರವಿಂದರು ದೇಹವಿಟ್ಟರು. ಅವರ ಸಮಾಧಿಯ ದರ್ಶನವನ್ನು ಮಾಡಿಕೊಂಡು ಆಶ್ರಮದಿಂದ ಮರಳುವಾಗ ಹೃದ್ರಂಗದಲ್ಲಿ ಅನುಪಮ ಪ್ರತಿಮೆಗಳ ಒಂದು ಜಾತ್ರೆಯೇ ನಡೆಯಿತು. ಅವುಗಳನ್ನು ಭಾವಗಮ್ಯವಾಗಿ ಮಾಡಿಕೊಳ್ಳಲು ಕಲ್ಪನಾ ಸೂತ್ರದಿಂದ ಪವಣಿಸಿಯೂ ಹೆಣೆದುಕೊಂಡದ್ದಾಗಿದೆ'. ಎಂಬ ಭಾವ ಸಂದರ್ಭವನ್ನು 'ಮಹಾಪ್ರಸ್ಥಾನ' ಕವನ ಹೊಂದಿದೆ. ಅದನ್ನು ಶ್ರೀ ಅರವಿಂದರ ಅನುಯಾಯಿಗಳು ಮನನ ಮಾಡಬೇಕು.

'ಅರವಿಂದವೆಂಬ ಹೆಸರಿನಲ್ಲೇ ಸೌಗಂಧ ತುಂಬಬಹದು. ಚಾರಿತ್ರ್ಯವನ್ನು ನೆನೆಸಿದರೆ ಸಾಕು ಬ್ರಹ್ಮಾಂಡ ಬಿಂಬಿಸುವದು. ಆ ಒಂದೆ ರಾತ್ರಿಯಲಿ ಬಯಲು ತುಂಬಿತೋ ಪಾರಿಜಾತ ಕೀರ್ತಿ. ಈ ವಿಶ್ವದೊಡನೆ ಒಂದಾಗಿ ನಿಂತಿತೋ ಆ ವಿರಾಟ ಮೂರ್ತಿ.'

■



ಜಯ ಜಯಾ ಗಾಂಧಿ ಮೋಹನಾ

'ಗಾಂಧಿಯವರ ಪಾದದ ಬಳಿ ನನಗೆ ತಾಟಸ್ಥ್ಯದ ಮೌನ, ರವೀಂದ್ರರ ಕೃತಿಗಳಿಗೆ ಶ್ರುತಿಮೌನ ; ಅರವಿಂದ ವಾಣಿ ನನಗೆ ಸೂತ್ರ ಸ್ವರ ! ಕನ್ನಡದ ಸರ್ವಧಾರಣಾ ಸಮರ್ಥ[1].... ಗಾಂಧೀ, ಟಾಗೂರ್, ಅರವಿಂದ–ಇವರು ದೊಡ್ಡ ಮನಸ್ಸಿನ ಮಹಾತ್ಮರು. ಗಾಂಧೀ ಬಯಲು, ರವೀಂದ್ರ ನಾಟಕ ರಂಗ, ಅರವಿಂದ ಸಮಾಧಿ ಇವು ಸಾಧನ ಸೋಪಾನದ ತಪ್ಪಲುಭೂಮಿ.[2]' ಎಂದು ಬೇಂದ್ರೆಯವರು ಸಾಹಿತ್ಯದ ವಿರಾಟ್ ಸ್ವರೂಪದಲ್ಲಿ ತಿಳಿಸಿದ್ದಾರೆ.

ರಾಷ್ಟ್ರಪ್ರೇಮ, ಸ್ವಾತಂತ್ರ್ಯ, ಸತ್ಯ, ಶಾಂತಿ, ಅಧ್ಯಾತ್ಮ ಚಿಂತನೆಯನ್ನು ನೀಡಿದ ಈ ಮೂರು ಜನ ಮಹಾಪುರುಷರನ್ನು ಬೇಂದ್ರೆಯವರು ಸದಾ ಧ್ಯಾನಿಸುತ್ತಿದ್ದರು. ಸ್ವಾತಂತ್ರ್ಯ, ಕಾವ್ಯ, ಅಧ್ಯಾತ್ಮಿಕ ಸಾಮರಸ್ಯವನ್ನು ಅವರು ಈ ಮೂವರಲ್ಲಿ ಕಂಡರು. ಅವರು ಮಹಾತ್ಮಗಾಂಧೀಯವರ ತತ್ತ್ವ ಚಿಂತನೆಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬಾಳಿದರು. ಅವರು ಬಿ.ಎ. ಪದವೀಧರರಾದಾಗ ಬ್ರಿಟೀಷರ ಕೈ ಕೆಳಗೆ ಕೆಲಸ ಮಾಡುವುದಿಲ್ಲ ಎಂದು ಗುಲಾಮಿತನವನ್ನು ಧಿಕ್ಕರಿಸಿದರು. ರಾಷ್ಟ್ರವನ್ನು ಬ್ರಿಟೀಷರಿಂದ ಬಿಡುಗಡೆಗೊಳಿಸಲು ಈ ನಾಡಿನ ಮಕ್ಕಳಲ್ಲಿ ಕನ್ನಡ ನಾಡುನುಡಿಯ ಪ್ರೀತಿ, ರಾಷ್ಟ್ರಾಭಿಮಾನ, ಶಿಸ್ತುಬದ್ಧ ಜೀವನಶೈಲಿ ಮೂಡಿಸುವ ಉದ್ದೇಶದಿಂದ ಶಿಕ್ಷಕರಾದರು.

ಆ ಘಟನೆಯನ್ನು ನೆನೆದು ಅವರ ಬಾಲ್ಯಸ್ನೇಹಿತ, ಕವಿ ಶ್ರೀಧರ ಖಾನೋಳಕರ ಅವರು ಹೀಗೆ ತಿಳಿಸಿದ್ದಾರೆ. 'ಆಗಿನ ಕಾಲದಲ್ಲಿ ಅಂದರೆ 1917–18ರಲ್ಲಿ ಸರಕಾರೀ ನೌಕರಿ ಹಿಡಿದಿದ್ದರೆ ಅವರಿಗೆ ಈಗ ಐನೂರರಷ್ಟು ಸಂಬಳವು ದೊರೆಯುವಷ್ಟು ಸೌಕರ್ಯವು ಇತ್ತು. ಅವರಿಗೆ ಒಂದೇ ಒಂದು ಧ್ಯೇಯ. ಕರ್ನಾಟಕದ ಸಂಸ್ಕೃತಿಯ ಉನ್ನತಿ. ಆ ಧ್ಯೇಯವನ್ನು ಸಾಧಿಸುವುದು ಇನ್ನೆಲ್ಲಿಯೂ ಅಲ್ಲ ಕರ್ನಾಟಕದಲ್ಲಿ. ಅಧ್ಯಾಪಕರಾಗಿ'.[3] ಹಾಗಾಗಿ ಬೇಂದ್ರೆಯವರು ಬಡತನದ ಬಾಳನ್ನು ಅಪ್ಪಿಕೊಂಡು

ಆದರ್ಶದ ಬೆಳಕಿನತ್ತ ಸಾಗಿದರು. ಸರಳ ಜೀವನ, ಸ್ವಾಭಿಮಾನ, ಸ್ವಾತಂತ್ರ್ಯದ ಕಿಚ್ಚಿನಲ್ಲಿ ಪುಟಗೊಂಡು ಕಾವ್ಯ ರಚಿಸಿದರು.

1918ರಲ್ಲಿ 'ಪ್ರಭಾತ' ಪತ್ರಿಕೆಯಲ್ಲಿ ಪ್ರಕಟವಾದ 'ಅಹಹ ಸ್ವಾತಂತ್ರ್ಯದೇವಿ' ಕವನವು ರಾಷ್ಟ್ರಪ್ರೇಮಿ, ಬಾಪುಭಕ್ತ, ಯುವ ಉತ್ಸಾಹಿ ಬೇಂದ್ರೆಯವರ ಪ್ರಾರಂಭದ ಕವನ. ಅದರಲ್ಲಿ ಅವರು ಸ್ವಾತಂತ್ರ್ಯವು ಬೆಳಕು ; ಅದು ಪ್ರೀತಿಯುಗವನ್ನು ಹೊತ್ತು ತರುತ್ತದೆ ಎಂಬ ಚಿಂತನೆಯನ್ನು ನೀಡಿದ್ದಾರೆ.

'ಸೆರೆಯೆಂಬ ಹಿರಿಹಾವ ಹಿಡಿದ ಹದ್ದೇ
ಬಾರೆ, ಬೆಳಕು ಕತ್ತಲೆಯ ಜಿದ್ದೇ
ಪರಮಪುರುಷನು ಜಗಕೆ ಕೊಟ್ಟ ಮುದ್ದೇ
ಬಾರೆ, ಪ್ರೀತಿಯುಗ ಬರುವ ಸದ್ದೇ' (ಗರಿ)

'ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅತಿ ಮಹತ್ವದ್ದೆನಿಸಿದ ಗಾಂಧಿ ಯುಗದ ರಾಷ್ಟ್ರೀಯ ಚಳವಳಿಯ ಕಾಲಕ್ಕೆ ಪ್ರಭಾತ ಫೇರಿಗಾಗಿ ಬರೆದ ಪದ್ಯ 'ಬಿಡುಗಡೆ'[4] ಎಂದು ಅವರ ವಿದ್ಯಾರ್ಥಿ ಪ್ರಹ್ಲಾದ ಬ. ನರೇಗಲ್ಲ ಅವರು ತಿಳಿಸಿದ್ದಾರೆ. ಸ್ವಾತಂತ್ರ್ಯ ಹೋರಾಟದ ಉತ್ಸಾಹಿ ಮುಂದಾಳುಗಳು ಹಾಗೂ ಸ್ವಾತಂತ್ರ್ಯಾಭಿಮಾನಿ ಯುವಕರು ಸ್ವಾತಂತ್ರ್ಯದ ಹಾಡುಗಳನ್ನು ಹಾಡುತ್ತ ಪ್ರಾತಃಕಾಲದಲ್ಲಿ ಸಾಮೂಹಿಕ ಮೆರವಣಿಗೆ ಹೋಗುತ್ತಿದ್ದರು. ಅಂತಹವರಿಗೆ ಸ್ಫೂರ್ತಿ ತುಂಬಲು ಬರೆದ ಕವನ 'ಬಿಡುಗಡೆ'. ಅದರಲ್ಲಿ 'ಅನ್ಯರನು ಆಳು ಮಾಡದೆ, ತನ್ನ ತಾನಾಳಿದರೆ । 'ಅದೇ ಬಿಡುಗಡೆ.' 'ಬಿಡುಗಡೆಯು ಬೆಲೆಗಲ್ಲದೆ ಬಾಗಿಣವಾಗಿ ದೊರಕದು'. 'ಸ್ವಾತಂತ್ರ್ಯ ಪಾರತಂತ್ರ್ಯದ ತೊಡಕು ತಾನು ಪರರು ಎಂಬ ಭೇದದಲ್ಲಿದೆ.' ಎಂಬ ಆಳುವ ಅಹಂಭಾವದ ಮನುಷ್ಯನ ತೊಡಕನ್ನು ಎಳೆ ಎಳೆಯಾಗಿ ಚಿತ್ರಿಸಿದ್ದಾರೆ.

ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯ ಕಾಲದ 1922–23ರಲ್ಲಿ ನಾಗಪುರದಲ್ಲಿ ಪ್ರಾರಂಭವಾದ ಕಾಂಗ್ರೆಸ್ ತ್ರಿವರ್ಣಧ್ವಜ ಸತ್ಯಾಗ್ರಹಕ್ಕೆ ಹೊರಟ ಸತ್ಯಾಗ್ರಹಿಗಳನ್ನುದ್ದೇಶಿಸಿ ಬರೆದ ಕವನ 'ನಾಡಗುಡಿ'. ಅದು ಸತ್ಯಾಗ್ರಹಿಗಳಲ್ಲಿ ರಾಷ್ಟ್ರದ ತ್ರಿವರ್ಣ ಪತಾಕೆಯ ಅರ್ಥವನ್ನು ತಿಳಿಸುತ್ತ, ಅದರ ಮಹತ್ತು ದಮನಿ ದಮನಿಗಳಲ್ಲಿ ಧುಮುಧುಮಿಸುವಂತೆ ರಚಿಸಿದ್ದಾಗಿದೆ. ಆ ದೇಶಭಕ್ತಿಯ ಪ್ರವಾಹದಲ್ಲಿ ತಾನು ಮುಳುಗಿ ಧನ್ಯನಾದೆ ಎಂದು ಕವಿ ಹರ್ಷಿಸಿದ್ದಾರೆ :

ಜಯನಾದ ನಾಲಿಗೆಯ ತುದಿಯಲ್ಲಿ ಮೊಳಗುತಿದೆ
ಭಯವಿಲ್ಲ ಎದೆಯ ಬದಿಯೊಳ್.
ಜಯವೆಂದು ಮುಳುಗಿದೆನು ದೇಶಭಕ್ತಿಯ ಪೂರ
ಬಂದಿರಲು ರಾಷ್ಟ್ರನದಿಯೊಳ್. (ಸಂಚಯ)

ಮಹಾತ್ಮ ಗಾಂಧೀಯವರ ಅಹಿಂಸಾ ವ್ರತದಿಂದ ಪ್ರೇರಣೆಗೊಂಡ ಯುವಕರು ರಾಷ್ಟ್ರದಾದ್ಯಂತ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು. 1922ರಲ್ಲಿ ಧಾರವಾಡದಲ್ಲಿ

ನಡೆದ ಅಹಿಂಸಾ ಸ್ವಾತಂತ್ರ್ಯ ಹೋರಾಟದ ಚಳುವಳಿಯಲ್ಲಿ ಗೋಲಿಬಾರ್ ಆಯಿತು. ಅದರಲ್ಲಿ ಹೋರಾಡಿದ ಅಹಿಂಸಾ ವ್ರತದವರನ್ನು ಕುರಿತು ಶಿಕ್ಷಕರಾಗಿದ್ದ ಬೇಂದ್ರೆಯವರು 1923ರಲ್ಲಿ 'ತರುಣ ತಪಸ್ವಿ' ಎಂಬ ನಾಟ್ಯಮಯ ಕವನ ರಚಿಸಿದರು.

ಯುವ ಸ್ವಾತಂತ್ರ್ಯ ಹೋರಾಟಗಾರನ ಮನಸ್ಸಿನ ತೀಕ್ಷ್ಣವಾದ ಭಾವ ತುಮುಲಗಳನ್ನು ನಿದ್ದೆಯಿಂದ ಎದ್ದ ತರುಣ ತಪಸ್ವಿಯೊಬ್ಬನ ಉದ್ಗಾರದಂತೆ ಅದರಲ್ಲಿ ವರ್ಣಿಸಿದರು.

ಕಾಯವೇ ನುಡಿಯ ಬೆಂಬತ್ತೆಲ್ಲಿ ಬಂದೆ ?
ಪ್ರಾಯವೇ ಏನು ಬಗೆ ಮರುಳಾಗಿ ತಂದೆ ?

* * *

ಇಗೊ–ನನ್ನ ಮನದ ಬೆಳಕಿಂಡಿಯೊಳಗಿಂದ
ಅಗೊ–ಕಂಡೆ–ಕಾಣುವದು ಬೆಳಕಿನಂದ

ಈ ಮೇಲಿನ ನುಡಿಯಲ್ಲಿ ಯುವ ಉತ್ಸಾಹಿಯ ಆಂತರ್ಯದ ಸ್ವಾತಂತ್ರ್ಯದ ಆಶಾಕಿರಣವನ್ನು ಕವಿ ಬಣ್ಣಿಸಿದ್ದಾರೆ. ಅವನ ಒಳಮನಸ್ಸಿನ ಸ್ವಾತಂತ್ರ್ಯ ದೊರಕುತ್ತದೆ ಎಂಬ ಭಾವವನ್ನು ಅವನಿಗೆ ಕನಸಿನಲ್ಲಿ ಯಾರೋ ನುಡಿದಂತೆ ಚಿತ್ರಿಸಿದ್ದಾರೆ.

ಕೇಳು ಏನೇ ಇರಲಿ ವಿಜಯಿ ನೀನಹುದು.
ತಾಳು ಸೂಲಿಯ, ಏಳು ! ವಿಜಯ ನಿನಗಹುದು.

ತರುಣ ತಪಸ್ವಿ ನಿದ್ದೆಯಿಂದೆದ್ದು ಸತೇಜನಾಗಿ ತನ್ನ ಒಳಗೆ ಇರುವ ಸ್ವಾತಂತ್ರ್ಯದ ಬೆಳಕನ್ನು ಅರಿತು, ಅದು ಹೊರಗೆ ಪ್ರಕಟಗೊಳ್ಳಲು ದೇವಿ ರೇಣುಕಾ ಎಲ್ಲಮ್ಮನ ಧ್ಯಾನದ ರೀತಿಯಲ್ಲಿ ಹೀಗೆ ಪ್ರಾರ್ಥಿಸುತ್ತಾನೆ :

ಉಧೋ ! ಉಧೋ ! ಒಳಗಿರುವ ಬೆಳಕೇ !
ಉಧೋ ! ಉಧೋ ! ಹೊರಗೆಹರಿ, ಏಕೆ ಒಳಕೆ ? (ಗರಿ)

ಸ್ವಾತಂತ್ರ್ಯ ಸಮರದಲ್ಲಿ ಬಾಪು ಮೋಹನದಾಸರ ಪ್ರತಿ ನುಡಿಯು ನಾಡಿನ ಎಲ್ಲ ಸ್ತರದ, ಎಲ್ಲ ಬಗೆಯ ಜನರಲ್ಲಿ ಹೋರಾಟದ ಸಂಚಲನವನ್ನುಂಟು ಮಾಡುತ್ತಿತ್ತು. ಅವರನ್ನು ರಾಷ್ಟ್ರಭಕ್ತಿಯ ಉನ್ನತ ಮನೋಸ್ಥೈರ್ಯದಲ್ಲಿ ದಿಗಂತಕ್ಕೆ ಕೊಂಡೊಯ್ಯುತ್ತಿತ್ತು ಎಂಬುದನ್ನು ಕವಿಯು 'ಸಖೀಗೀತ' ಕಾವ್ಯದಲ್ಲಿ ಹೀಗೆ ಪ್ರತಿಮಾತ್ಮಕವಾಗಿ ಬಣ್ಣಿಸಿದ್ದಾರೆ:

ಮೋಹನದಾಸನ ಉಸಿರಿಗೆ ಬೀಸಿದ
ಬಿರುಗಾಳಿಯಾಗ ಸುಟ್ಟುರೆ ತಂದವು
ಒಣ–ಎಲೆ ಹುಡಿ–ಮಣ್ಣು ಸೊಪ್ಪು–ಸವದಿಗಳೆಲ್ಲ
ಮೋಡಗಳಾಡುವ ಎಡೆ ಕಂಡವು.

ಭಾರತಮಾತೆಯ ದಾಸಮುಕ್ತಿಗೆ ಭಾರತೀಯರು ವೀರಶ್ರೀಗಳಾಗಬೇಕು. ಭೈರವನನ್ನು ಸ್ಮರಿಸಿ, ಕಾಲಿಯನ್ನು ಆರಾಧಿಸಿ ಪ್ರಲಯವನ್ನು ಆಹ್ವಾನಿಸಬೇಕು. ಬ್ರಿಟೀಷರ ಬಲಗಾಲ ಬುಡದಲ್ಲಿ ಸಿಕ್ಕಿಕೊಂಡಿರುವ ಸ್ವಾತಂತ್ರ್ಯವನ್ನು ಪಡೆಯಲು ನರಬಲಿ ಬೇಕು ಎಂದು ಬೇಂದ್ರೆಯವರು 1930ರಲ್ಲಿ 'ನರಬಲಿ' ಕವನ ರಚಿಸಿದರು. ಅದರಿಂದ ಬ್ರಿಟೀಷರ ಕಂಗೆಣ್ಣಿಗೆ ಗುರಿಯಾದರು. 1932ರಲ್ಲಿ ಬೆಳಗಾವಿಯ ಹಿಂಡಲಗಾ ಜೇಲಿನಲ್ಲಿ ಸೆರೆವಾಸ ಅನುಭವಿಸಿದರು.

ಅವರಿಗೆ ಯಾರೂ ಕೆಲಸ ಕೊಡಬಾರದೆಂದು ಬ್ರಿಟೀಷರು ಆದೇಶ ಹೊರಡಿಸಿದರು. ಆಗ ನಿರಾಶರಾಗದೆ ಬೇಂದ್ರೆ ಸರಳ ಬದುಕನ್ನು ತಮ್ಮ ಜೀವನಶೈಲಿಯನ್ನಾಗಿಸಿ ಕೊಂಡದ್ದರಿಂದ ವಿಭಿನ್ನವಾಗಿ ಯೋಚಿಸಿದರು. ತನಗೆ ಲಭ್ಯವಾಗಿರುವ ನೈಸರ್ಗಿಕ ಪ್ರತಿಭಾ ಶಕ್ತಿಯನ್ನು ಪ್ರಜ್ವಲಗೊಳಿಸಿಕೊಳ್ಳುವ ಬಗ್ಗೆ ಚಿಂತಿಸಿದರು. ತನ್ನಲ್ಲಿ ಒಂದಾಗಿರುವ ಸಹಜ ಸಾಮರ್ಥ್ಯವಾದ ವಿದ್ಯೆ, ಅಧ್ಯಯನದ ಕಡೆ ಗಮನ ಕೊಡಲು ನಿರ್ಧರಿಸಿದರು. ಎಂ.ಎ. ಅಧ್ಯಯನ ಮಾಡಲು 1933ರಲ್ಲಿ ತನ್ನ 37ನೇ ವಯಸ್ಸಿನಲ್ಲಿ ಪುಣೆಗೆ ಹೋದರು. ಮಧ್ಯ ವಯಸ್ಸಿನ, ವಿದ್ಯಾವಂತ ಸಂಸಾರಿಯ ಒಳನೋವು, ಭಾವತುಮುಲವನ್ನು 'ಸಖೀಗೀತ' ಕಾವ್ಯದಲ್ಲಿ ಹೀಗೆ ವರ್ಣಿಸಿದರು :

'ನರಬಲಿ' ಕವನವು ಬಲಿ ಮಾಡಿತೆನ್ನನು
ಹೆಳವನಿದ್ದಲ್ಲಿಗೆ ಹೊಳೆ ಬಂದಿತು
ಮನೆಯನು ಮುರಿದಿತು ಹಾರುವಿಹಂಗಮ !
ಜಂಗಮ ದೀಕ್ಷೆಯು ನಿನಗೆಂದಿತು.

* * *

'ಇಂದಿಗೆ 25 ವರ್ಷಗಳ ಹಿಂದೆ ಗುರುವರ್ಯ ಬೇಂದ್ರೆಯವರು ಧಾರವಾಡದಲ್ಲಿ ತಮ್ಮ ವಿದ್ಯಾರ್ಥಿಗಳಲ್ಲಿ ಅನೇಕ ಎಳೆಯರನ್ನು ಗೆಳೆಯರನ್ನಾಗಿ ಮಾಡಿಕೊಂಡು ಅವರಿಗೆ ವಿಶೇಷ ಪಾಠವೆಂದು ಬೇಕನ್, ಇಮರ್ಸನ್, ರವೀಂದ್ರ, ಗಾಂಧಿ, ಅರವಿಂದರೇ ಮೊದಲಾದವರ ಚಿಕ್ಕ ದೊಡ್ಡ ಪ್ರಬಂಧಗಳನ್ನು ವಿಶೇಷ ಪ್ರೀತಿಯಿಂದ ಓದಿ ಹೇಳುತ್ತಿರುವುದು ಇಂದಿಗೂ ನೆನಪಾಗಿ ಮತ್ತೆ ರೋಮಾಂಚನವೆನಿಸಿ ಇಮ್ಮಡಿ ಆನಂದವಾಗುತ್ತದೆ.'[5] ಎಂದು 1945ರಲ್ಲಿ ಬೇಂದ್ರೆಯವರ 'ವಿಚಾರ ಮಂಜರಿ'ಗೆ ಮುನ್ನುಡಿ ಬರೆಯುತ್ತ ಅವರ ಶಿಷ್ಯ ಪ್ರಹ್ಲಾದ ಬ. ನರೇಗಲ್ಲ ತಿಳಿಸಿದ್ದಾರೆ. ಬೇಂದ್ರೆಯವರು ಮಹಾತ್ಮಗಾಂಧಿಯವರ ತತ್ತ್ವ ಸಿದ್ಧಾಂತವನ್ನು ಅನುಸರಿಸಿ, ಅದನ್ನು ವಿದ್ಯಾರ್ಥಿಗಳಿಗೆ ಮನನ ಮಾಡಿಸುತ್ತಿದ್ದರು. ಅವರು ದಯೆ, ಕರುಣೆ, ಪ್ರೀತಿ, ಅಂತಃಕರಣದ ಕಾವ್ಯ ರೂಪಿಸಿ ಜನರನ್ನು ಸತ್ಯ, ಶಾಂತಿ, ಅಹಿಂಸೆಯ ಕಡೆಗೆ ಕೊಂಡೊಯ್ದರು.

'ಮಹಾತ್ಮರು ಅಹಿಂಸಾಯೋಗಿಗಳು. ಕಾಯಾ ವಾಚಾ ಮನದಿಂದಲೂ ಆಚರಿಸುವವರು. ಮಹಾತ್ಮರ ಗುರಿಯು ಮೋಕ್ಷ, ದೇವರು, ಸತ್ಯ, ಯೋಗ, ಅಹಿಂಸಾ, ಪ್ರೇಮ ; ಪ್ರತ್ಯಕ್ಷ ಕಾರ್ಯ ಭಾರತ ಸ್ವಾತಂತ್ರ್ಯ ; ಉದ್ದೇಶ – ಭೂಹಿತ, ಹೀನದೀನ

ಜನಸೇವೆ. ಇವಿಷ್ಟು ಮಾತುಗಳಲ್ಲಿ ಅವರ ಜೀವನದ ತಿರುಳೆಲ್ಲ ಬಂದು ಬಿಡುವದು... ಅಹಿಂಸೆಗೆ ಗೆಲುವಾದರೆಯೆ ಮಹಾತ್ಮರ ಮಹಾತ್ಮವೂ ಅಹಿಂಸೆಯ ಸಾಮರ್ಥ್ಯವೂ ಸಿದ್ಧವಾಗುವದು...ಬ್ರಿಟೀಷರ ಹಿಂಸಾಬಲಕ್ಕಿಂತ ನಮ್ಮ ಅಹಿಂಸಾ ಬಲವು ಹೆಚ್ಚಾದರೆ ನಾವು ಗೆಲ್ಲುವದರಲ್ಲಿ ಸಂಶಯವಿಲ್ಲ."[6] ಎಂಬುದು ಗಾಂಧಿಯವರ ಅನುಯಾಯಿಯಾದ ಬೇಂದ್ರೆಯವರ ಅಹಿಂಸಾತತ್ತ್ವದ ಅರಿವಾಗಿತ್ತು.

ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಕೆಲವೇ ತಿಂಗಳುಗಳಲ್ಲಿ ಗಾಂಧಿಯವರು ಕೊಲೆಗೀಡಾದರು. ಆಗ ಬೇಂದ್ರೆಯವರು ತುಂಬ ದುಃಖಿತರಾದರು. ಅವರು ನಿರೂಪಣೆಯ ಧಾಟಿಯಲ್ಲಿ 'ಹೀಗು ಉಂಟು ಈ ಜಗ ಕೇಳಿರೊಂದು ಸೋಜಿಗ' ಎಂದು ಕವನ ರಚಿಸಿದರು ಬಾಪುವಿಗೆ ಪ್ರತಿ ದಿನದ ಪ್ರಾರ್ಥನೆ ಒಂದು ಬಿನದ-ಆನಂದವಾಗಿತ್ತು. ಹಾಗೆ ಬಂದವರನ್ನು 'ಆಗದವರು ಕೊಂದರಂತೆ' ಎಂದು ದುಃಖಿಸಿದರು.

ಬೇಂದ್ರೆಯವರು ಶಾಂತಿದೂತ ಗಾಂಧಿಯನ್ನು ಮಹಾಧೀರ, ಅವನ ಪ್ರೇಮ ಶಿವನ ಪ್ರೇಮಕ್ಕೆ ಸಮಾನ, ಅವನು ಶಿವನ ಕಂದ ಎಂದು ವರ್ಣಿಸಿದ್ದಾರೆ. ಬಾಪುವು ಪ್ರಾಣ ಬಿಡುವಾಗ ಹೊಮ್ಮಿದ ರಾಮನಾಮವು ಅಬ್ದ-ಮೋಡ.

'ಅದರ ಧ್ವನಿಯು ಅಬ್ದವು
ಬಾನುಲಿಯೆ ಕಂಪಿಸಿ
ವಿಶ್ವವೆಲ್ಲ ಝೋಂಪಿಸಿ
ಏನನರ್ಥ ಏನನರ್ಥ
ಎಂದು ಕೂಗೆ ಕೂಗಿತು' (ಸೂರ್ಯಪಾನ)

ಕವಿಯು ಈ ಲೋಕಕ್ಕೆ ಸತ್ಯ, ಪ್ರೇಮದ ದೀಕ್ಷೆ ನೀಡಿದ ಸಾಕ್ರಟೀಸ್ ಮತ್ತು ಕ್ರೈಸ್ತರ ಕ್ರೂರ ಸಾವನ್ನು ನೆನೆದು 'ವಿಚಾರಣೆ ಆಟ ಆಡಿ । ಕೊಂದರಾಗ ಧೂರ್ತರು ಅದೂ ಬೇಡವಾಯ್ತೆ ಇಲ್ಲಿ ?' ಎಂದು ಪ್ರಶ್ನಿಸಿದ್ದಾರೆ. ಆ ಪ್ರಶ್ನೆಯಲ್ಲಿ ಭಾರತೀಯರೆಲ್ಲರ ನೋವು ಮಡುಗಟ್ಟಿ ದುಮ್ಮಿಕ್ಕಿದೆ. ಇಡೀ ವಿಶ್ವಕ್ಕೆ ಗಾಂಧಿ ನೀಡಿದ ತತ್ತ್ವ :

'ಬಾಳು ಜಗವೆ ಬಾಳೆಲೋ
ಪ್ರೇಮದಿಂದ ತಾಳೆಲೋ'

ಅದನ್ನು ಜಾರಿಗೆ ತರಲು ಸಾಧ್ಯವಾಗುವುದು ನಾವು ಊರ್ಧ್ವಮುಖಿ ಚಿಂತನೆಯಲ್ಲಿ ಉತ್ತಮ ವ್ಯಕ್ತಿಗಳಾದಾಗ ಮಾತ್ರ ಎಂದು ಹೀಗೆ ತಿಳಿಸಿದ್ದಾರೆ : 'ಬೇಕು ಜೀವದುತ್ತರ । ಜೀವನದೊಳು ಎತ್ತರ.'

ಬೇಂದ್ರೆಯವರು ರಚಿಸಿರುವ 'ಶ್ರದ್ಧಾಂಜಲಿ' ಕವನವು ಜನರನ್ನು ಗಾಂಧಿತತ್ತ್ವದಲ್ಲಿ ಒಂದಾಗಿ ಬಾಳುವ ದೀಕ್ಷೆ ನೀಡಿದಂತಿದೆ. 'ಹಿಂಸೆ ಕೊನೆಗಹಿಂಸೆಯನ್ನು ಕೊಂದಿತೋ?। ತನ್ನ ಕೊಲೆಯ ಕೊನೆಗಾಣಿಸಿ ಇವಗೆ ಶರಣು ಬಂದಿತೋ ?' ಎಂಬ ಕವನದ ಪ್ರಾರಂಭದ ಸಾಲುಗಳಲ್ಲಿ ಕೊಲೆ ಮಾಡಿದ ಹಿಂಸೆಯು ಅಹಿಂಸೆಗೆ ಶರಣಾಯಿತು

ಎಂದು ಕವಿ ತಿಳಿಸಿದ್ದಾರೆ. ಗಾಂಧಿಯ ದೇಹ ಅಳಿದರೂ ಅವರ ಅಹಿಂಸಾ ಚಿಂತನೆಗೆ ಸಾವಿಲ್ಲ. ಹಿಂಸೆ ಶರಣಾಗಿದೆ ಎಂಬ ಭಾವ ಅರ್ಥಪೂರ್ಣವಾಗಿದೆ. ಆತನ ಆಲೋಚನೆಗಳು ಜ್ಯೋತಿ. ಅದು ಸದಾ ಪ್ರಕಾಶಿಸಲು 'ಬತ್ತಿ ಸುಟ್ಟು ಹೋದರೇನು ಬೆಳಕು ನಂದಿತೆಂಬರೆ? ಹಾಕಿ ಬತ್ತಿ ದೀಪವೆತ್ತಿ ಇರುವ ಜ್ಯೋತಿ ಕಾಂಬರೆ !' ಎಂಬಂತೆ ನೀವು ಬತ್ತಿ ಆಗಿ ಎಂದು ಕರೆ ನೀಡಿದ್ದಾರೆ. 'ಎಣ್ಣೆ ತೀರಿತೆನ್ನಬೇಡಿ ಬೇರೆ ನೇಹ ತುಂಬರೆ-। ಬೇರೆ ನೇಹ ತುಂಬರೆ ?'-ನೀವು ನೇಹ/ಸ್ನೇಹದ ಎಣ್ಣೆಯಾಗಿ ಆ ಜ್ಯೋತಿಯನ್ನು ಬೆಳಗಿಸುತ್ತಿರಿ ಎಂದು ಉಪಮಾನಾತ್ಮಕವಾಗಿ ಹೇಳಿ ವಿಶಿಷ್ಟ ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

'ಅಮರ ಮರಣ' ಕವನದಲ್ಲಿ ಬೇಂದ್ರೆಯವರು ಗಾಂಧಿಯವರ ಶ್ರಾದ್ಧ ದಿನವನ್ನು ಪ್ರತಿ ವರ್ಷ ಬರುವ ಯುಗಾದಿಯೊಂದಿಗೆ ಹೋಲಿಕೆ ಮಾಡಿ 'ಆ ಯುಗಾದಿ ಬರುವಂತೆ ಮರಳಿ ಓ ಶ್ರಾದ್ಧ ದಿನವೆ ಬಂದೆ । ಮರೆತ ಮರಣವನು ನೆನೆದ ಮನದಿ ಚೈತನ್ಯವನ್ನು ತಂದೆ' ಎಂದು ಹೇಳಿದ್ದಾರೆ. 'ಬೇವಿನ ಕಹಿ ಬಾಳಿನಲ್ಲಿ । ಹೂವಿನ ನಸುಗಂಪು ಸೂಸಿ। ಜೀವಕಳೆಯ ತರುತಿದೆ' ಎಂಬ ಪ್ರಕೃತಿ ತತ್ತ್ವದಂತೆ ಈ ಜಗದ ದ್ವೇಷ, ಅಸೂಯೆ, ಹಿಂಸೆ ಎಂಬ ದುರ್ಗುಣ, ಅಧಿಕಾರ ದಾಹ, ಆಸ್ತಿ ಮೋಹ, ಅಹಂಕಾರದ ಕಹಿಯಲ್ಲಿ ಗಾಂಧಿಯ ಮಧುರ ನೆನಪು 'ಗಾಂಧಿಗಂಧ'. ಅದು ಪಸರಿಸುವುದರಿಂದ ಈ ನೆಲದಲ್ಲಿ ಶಾಂತಿ, ಪ್ರೀತಿ, ಸತ್ಯ ಉಳಿಯಲು ಸಾಧ್ಯ ಎಂಬುದನ್ನು 'ಉಗಾದಿ' ಪ್ರತಿಮೆಯಲ್ಲಿ ತಿಳಿಸಿದ್ದಾರೆ.

'ಹರಿಜನರ ಬಳಗ ಉಳಿದವರ ಒಳಗೆ ಬಳಸಿದೆಯೊ ನಾಡತಂದೆ
ಮಾನವತೆ ಒಂದು, ಭಾರತೀಯರೆಲ್ಲ ಒಂದಲ್ಲವೇಕೆ ಎಂದೆ.'

ಎಂಬ ಪ್ರಶ್ನೆಯಲ್ಲಿ ಈ ದೇಶದ ತುಳಿತಕ್ಕೊಳಗಾದವರ ನೋವು ಉಸಿರಾಡಿದೆ. ಕವಿಯು ಈ ಕವನದಲ್ಲಿ ಗಾಂಧಿಯ ದೇಹ ಅಳಿದಿದ್ದರೂ ಅವರ ಪ್ರಾಣಜಾತ ಸತ್ಯಕ್ಕೆ ಸಾವಿಲ್ಲ ; ಅವರ ಸತ್ಕೀರ್ತಿಯ ಬೆಳಕು ಸದಾ ಇರುವುದು. ಅದು ಆಕಾಶದಂತೆ ಸತ್ಯ ಎಂದು ಬಣ್ಣಿಸಿದ್ದಾರೆ.

ದೇಶ ಬ್ರಿಟೀಷರ ದಾಸ್ಯದಲ್ಲಿದ್ದು ದೇಶವಾಸಿಗಳ ಬದುಕು ಸಪ್ಪೆಯೆನಿಸಿತ್ತು. ಆಗ ಅವರನ್ನು ಓಡಿಸಲು ಗಾಂಧಿ ಉಪ್ಪಿನ ಸತ್ಯಾಗ್ರಹ ನಡೆಸಿದರು. ಅದನ್ನು ಬೇಂದ್ರೆ 'ಅಂಥ ಉಪ್ಪಿನಲೆ ಜೀವ ರುಚಿಗೊಳಿಸಿ ಸಪ್ಪೆತನವ ಕಳೆದ.' ಎಂದು ನೆನೆದಿದ್ದಾರೆ. ಬಾಪುವಿನ ಪ್ರತಿ ನಡೆಯು ಅಹಿಂಸಾವ್ರತದಿಂದ ನಾಡಿನಾದ್ಯಂತ ಸ್ವಾತಂತ್ರ್ಯದ ದುಂದುಭಿ ಮೊಳಗಿಸಿ ಜನರನ್ನು ಸತ್ಯಾಗ್ರಹಿಗಳನ್ನಾಗಿಸಿತು. ಶಾಂತಿಪ್ರಿಯರನ್ನಾಗಿಸಿತು. ಅದನ್ನು ಬೇಂದ್ರೆ 'ನಿನ್ನ ಕೃತಿಯ ಸ್ಮೃತಿ ಶಾಂತಿ ಸ್ಮೃತಿಯನು ಮೀಟುತಿಹುದು' ಎಂದು ಸ್ಮರಿಸಿದ್ದಾರೆ.

ಗಾಂಧಿ ಜಯಕಾರದ ಮಂಗಳಗೀತೆ 'ಜಯ ಜಯಾ ಗಾಂಧಿ ಮೋಹನಾ.' ಕವಿ ಹೃದಯದಲ್ಲಿ ಬಾಪುವಿನ ಬಗ್ಗೆ ಉಂಟಾದ ಗೌರವ, ಪ್ರೇಮ ಇಲ್ಲಿ ಕಾವ್ಯವಾಗಿ ಹರಿದಿದೆ. ರಾಷ್ಟ್ರಪಿತನಾದ ಬಾಪುವು ಮಹಾತ್ಮನಾಗಿ ಇಡೀ ವಿಶ್ವ ಅವರನ್ನು ಶಾಂತಿದೂತ ಎಂದು

ಆರಾಧಿಸುತ್ತಿದೆ. ಇಡೀ ವಿಶ್ವದ ದಮನಿತರ ಹೋರಾಟದ ಅಹಿಂಸಾ ಶಾಂತಿ ಮಂತ್ರಕ್ಕೆ ಅವರೇ ಪ್ರೇರಣೆಯಾಗಿದ್ದಾರೆ. ಅದಕ್ಕೆ ಅವರ ಸತ್ಯನಡೆ, ಪಾಪರಹಿತ ಬದುಕು, ಸತ್ಯಾಗ್ರಹದ ಅಹಿಂಸಾ ಹೋರಾಟ, ಶಾಂತಿಯೇ ಕಾರಣವಾಗಿದೆ. ಅವೆಲ್ಲ ಅವರಲ್ಲಿ ನಿರ್ಮಲ ನಗುವಾಗಿ ಪ್ರಕಾಶಿಸುತ್ತಿದೆ. ಅದೇ ಅವರ ಮನದಿಂದ ಹೊಮ್ಮಿದ ಜ್ಯೋತಿ ಎಂದು ಕವಿ ಹೀಗೆ ಬಣ್ಣಿಸಿದ್ದಾರೆ :

ನೆನಸೇವು ನಿಮ್ಮ ಆ ನಗೀ
ಒಳಗ ಇಲ್ಲ ಧಗಿ
ಬರೇ ಬೆಳಕು–ಬರೇ ಬೆಳಕು ! (ಸೂರ್ಯಪಾನ)

ವಿಶ್ವಬಂಧುವಾದ ಅವರನ್ನು ಈ ಲೋಕದ ಜನರು ಸದಾ ಬೆಳಕಿನ ಚುಕ್ಕಿಯಂತೆ ಕಾಣುತ್ತಾರೆ ಎಂದು ಬೇಂದ್ರೆಯವರು ಪ್ರತಿಮಾತ್ಮಕವಾಗಿ ಬಣ್ಣಿಸಿದ್ದಾರೆ. ಅದು ಆಕಾಶದ ನಕ್ಷತ್ರವು ರೆಕ್ಕೆ ಪಡೆದ ಹಾಗೆ ಜನಗಳ ಮುಂದೆ ಕುಣಿಯುತ್ತದೆ. ಜನರು ಶಾಂತಿ, ಅಹಿಂಸೆ, ಸತ್ಯದ ಆ ಸದ್ಗುಣಗಳ ಪ್ರಕಾಶದಲ್ಲಿ ನಲಿಯುತ್ತಾರೆ.

ನಿಂಗುಣ ಆಕಾಶದ ಚುಕ್ಕಿ
ಪಡೆಧಾಂಗ ರೆಕ್ಕಿ
ಕುಣೀತಾವ ಮುಂದ–ಕುಣೀತಾವ ಮುಂದ.

ಗಾಂಧಿಯನ್ನು ಕುರಿತು ಅಂಬಿಕಾತನಯದತ್ತರು ಕಾವ್ಯ ರಚಿಸಿದರೆ– ಆ ಬಂಧದಲ್ಲಿ ಸಮುದ್ರದ ಅಂದವಿರುತ್ತದೆ. ಕಡಲಿನಷ್ಟು ಅನಂತ, ವಿಶಾಲ ಗಾಢ ಚಿಂತನೆ ಅಲ್ಲಿರುತ್ತದೆ. ಅದೊಂದು ಭಾವ ಭವನಾ.

ಅಂಬಿಕಾತನಯನ ಬಂಧ
ಸಮುದ್ರದ ಅಂದ.
ಭಾವ ಭವನಾ – ಭಾವ ಭವನಾ.

ಆತ್ಮಶೋಧ ಮಾಡಿಕೊಳ್ಳಿ ಎಂದು ಭಾರತದ ನಾಯಕಮಣಿಗಳಿಗೆ, ಜನತೆಗೆ ಬೇಂದ್ರೆ ತಿಳಿ ಹೇಳಿರುವ ಕವನ 'ಜಯಂತಿ'. ಗಾಂಧಿಯ ತೂಕ, ತಾಳ್ಮೆ, ಎಚ್ಚರ ಇರುವ ನಾಯಕರು ಇಂದು ಒಬ್ಬರೂ ಇಲ್ಲ. ಗುತ್ತಿಗೆ ಹಿಡಿದಂತೆ ವ್ಯವಸ್ಥೆಯನ್ನು ತಮ್ಮ ಮೂಗಿನ ನೇರಕ್ಕೆ ಎಳೆದಾಡುತ್ತಿದ್ದಾರೆ ಎಂದು ಕವಿ ನೊಂದಿದ್ದಾರೆ :

ನಿನ್ನ ತೂಕ ನಿನ್ನ ತಾಳ್ಮೆ
ನಿನ್ನೆಚ್ಚರ ಯಾರಿಗೆ ?
ಗುತ್ತಿಗೆಯಿಂದ ಎಳೆಯುತಿಹರು
ಹೊಸ ಹೊಸ ಹೊಸ ದಾರಿಗೆ (ಉತ್ತರಾಯಣ)

'ಪೂತಾತ್ಮ–ಹೂತಾತ್ಮ, ಹುತಾತ್ಮ–ಮಹಾತ್ಮ' ಕವನವನ್ನು ಬೇಂದ್ರೆಯವರು ಗಾಂಧಿ ಶತಮಾನೋತ್ಸವದಲ್ಲಿ ರಚಿಸಿದ್ದಾರೆ. ಅದೇ ಸಂದರ್ಭದಲ್ಲಿ ಬರೆದ ಇನ್ನೊಂದು ಕವನ

'ನೂರು ವರ್ಷಾತು', ಪೂತಾತ್ಮಯೆಂದರೆ ಪವಿತ್ರವಾದ ಮತ್ತು ಶುದ್ಧವಾದ ಆತ್ಮವುಳ್ಳವನು. ಅದು ಭಗವಂತನ ಲಕ್ಷಣ. ಅಂತಹ ವ್ಯಕ್ತಿ ಮಹಾತ್ಮಗಾಂಧಿ ಎಂದು ಬೇಂದ್ರೆ ಹೇಳಿದ್ದಾರೆ. ಅದರಲ್ಲಿ ಕವಿಯು ಗಾಂಧಿಯನ್ನು ಪರಮ ಪವಿತ್ರನೆಂದು ಕರೆಯುತ್ತ ಹೂವಿನ ತನುವಿನವನು ಎಂದು ಹೇಳಿದ್ದಾರೆ. ಹೂ ಮೃದು, ಕೋಮಲ, ಆಕರ್ಷಕ, ಕಂಪಿನ ಸೆಳೆತ–ಅದೇ ಗಾಂಧಿ ಎಂಬುದು ಕವಿಯ ಭಾವ.

"ಬೆಂಕಿ ಬೇರೆ ! ಬೆಳಕು ಬೇರೆ ! ಬಣ್ಣ ಬೇರೆ !"

ಎಂದು ಬಿಡಿಸಿ ಬಿಡಿಸಿ, ತಿಳಿ ತಿಳಿಸಿ ಹೇಳಿದ ಮಹಾತ್ಮಯೆಂದು ಸ್ಪಷ್ಟಪಡಿಸಿದ್ದಾರೆ.

ಸತ್ಯ ಕಡಿಮೆಯಾಗಿ ಆಗ್ರಹ ಹೆಚ್ಚಿದಾಗ ಹಿಂಸೆ ಉಗ್ರರೂಪ ತಾಳುತ್ತದೆ ಎಚ್ಚರ ಎಂದು ಕವಿ ಜನರಿಗೆ ಹೇಳಿದ್ದಾರೆ.

ಸತ್ಯಾಗ್ರಹದಲ್ಲಿ ಸತ್ಯ ಕಡಿಮೆಯಾಗಿ
ಆಗ್ರಹ ಹೆಚ್ಚಾಗುತ್ತಲೆ,
ಅಹಿಂಸೆಯ ಹಚ್ಚಿದ ಬಣ್ಣ ಉದರಿ
ಹಿಂಸೆಯ ಉಗ್ರರೂಪ ತಾಳುತ್ತದೆ. (ಇದು ನಭೋವಾಣಿ)

'ನೂರು ವರ್ಷತು' ಕವನದಲ್ಲಿ ಕವಿಯು ಮಹಾತ್ಮಗಾಂಧಿ ತಂದ ಅಸ್ಪೃಶ್ಯತಾ ನಿವಾರಣೆಯ ಸಾಮಾಜಿಕ ಬದಲಾವಣೆ ಇನ್ನೂ ಕಾರ್ಯಗತವಾಗದ್ದರ ಬಗ್ಗೆ ನೊಂದು ಹೀಗೆ ಹೇಳಿದ್ದಾರೆ :

ಅಸ್ಪೃಶ್ಯರ ಉದ್ದಾರಕ್ಕಿಂತ, ಅಸ್ಪೃಶ್ಯತೆಯ ಉಪಸಂಹಾರ ಬೇಕು ಹೊಸಾ ಸೃಷ್ಟಿಗೆ!
ಮನಸು ಹೊಲಸೋ, ಮನುಷ್ಯಾ ಹೊಲಸು.

ಸ್ವಾತಂತ್ರ್ಯ ಪಡೆಯುವುದಕ್ಕಾಗಿ ಬಾಳಿದ ಬಾಪುವಿನಿಂದ ನಾವು ಈ ಸ್ವತಂತ್ರ ದೇಶದಲ್ಲಿ ಬದುಕಿರುವೆವು ಎಂದು ಬೇಂದ್ರೆ ತಿಳಿಸಿದ್ದಾರೆ.

ನಾವು ಏನ ಮರತರೂ
ನೀನು ಬಾಳಿದೀ ಅಂತ ನಾವು ಬದುಕಿದ್ದೀವಿ
ಇದನ್ನ ಮರಿಯೋ ಹಾಂಗಿಲ್ಲಾ. (ಇದು ನಭೋವಾಣಿ)

'ಗಾಂಧಿಸತ್ಯ' ಕವನದಲ್ಲಿ ಕವಿಯು ರೂಪಕಾತ್ಮಕವಾಗಿ ಗಾಂಧಿಯನ್ನು ಅನಂತ ಶಕ್ತನಿಗೆ ಹೋಲಿಸಿದ್ದಾರೆ. ಅದರ ಅರಿವಿಗೆ ಒಳದನಿಯ ಶ್ರುತಿ ಹಿಡಿದು, ಕಿವಿ ತೆರೆದು ಕೇಳಿ ಎಂದಿದ್ದಾರೆ :

'ಎತ್ತಲೂ ತುಂಬಿದವ, ಸುತ್ತಲೂ ಹರುಹಿದವ
ನನ್ನಲ್ಲು ನಿನ್ನಲ್ಲು ಒಳಗು ಇರನೇ ?
ಒಳದನಿಯು ಶ್ರುತಿ ಹಿಡಿದು ಉಸಿರಾಟ ಕುಸಿರಿಸಿರೆ
ತೆರೆದೆದೆಗೆ ತೆರೆಗಿವಿಗೆ ತಾನು ಬರನೇ ?

ನಮ್ಮ ಭಾರತೀಯರ ಬದುಕಿನಲ್ಲಿ 'ಗಾಂಧಿಸತ್ಯ' ಬೆಳೆಯಲು ಸಾಧ್ಯ ಎಂದು ಕವಿ ಆಶಿಸಿದ್ದಾರೆ.

ಕತ್ತಲೆಯ ಬಯಲಲ್ಲಿ ಬೆತ್ತಲೆಯ ಬೆಳಕೆ ಇದೆ
ಬದುಕಿನಲೆ ಬೆಳೆಯಲಿದೆ ಗಾಂಧಿ ಸತ್ಯ. (ಇದು ನಭೋವಾಣಿ)

* * *

'ದರಿದ್ರ ನಾರಾಯಣ' ಕವನವು ಈ ಸಮಾಜದಲ್ಲಿ ದೀನದಲಿತರಾಗಿ ಉಳಿಯಲು ಸೃಷ್ಟಿಯಾಗಿರುವ ವ್ಯವಸ್ಥೆಯ ಮೂಲಕಾರಣವನ್ನು ಶೋಧಿಸುವ ಮನೋವೈಜ್ಞಾನಿಕ, ವೈಚಾರಿಕ, ರಾಜಕೀಯ, ಕ್ರಾಂತಿಯ ಕಿಚ್ಚಿನದಾಗಿದೆ. 'ಹಸಿದವ ಬಲ್ಲ ಹಸಿವೆಯ ಶೂಲಿ' ಎಂದು ಹಸಿವಿನ ತೀವ್ರ ತಿವಿತದಲ್ಲಿ ಬಳಲಿದ ಬೇಂದ್ರೆಯವರು-ದರಿದ್ರರ ಸೇವೆ ಎಂದು ಹೃದಯ ದರಿದ್ರರಾದ ಸಿರಿವಂತರ, ಆಳುವವರ, ಬಂಡವಾಳಶಾಹಿಗಳ ಪೊಳ್ಳುತನವನ್ನು ಈ ಕವನದಲ್ಲಿ ಛೇಡಿಸಿದ್ದಾರೆ. ದಾರಿದ್ರವನ್ನು ನಷ್ಟಗೊಳಿಸಲು ವಿಚಾರ ಮಾಡಿ 'ದುಡ್ಡು ದುಡಿವವರ ಕುಣಿಸುತ್ತಲಿದೆ ಇದು ಸತ್ಯ। ಬಡತನದ ತತ್ತ್ವ ಅಪ್ಪಟೆಯ ಸುಳ್ಳು' ಎಂದು ಹೇಳಿದ್ದಾರೆ. ಇದು ನಿಜವೂ ಹೌದು.

ಸ್ವಾತಂತ್ರ್ಯಾನಂತರ ನಮ್ಮನ್ನು ಆಳುವವರು, ಬಡವರನ್ನು ತಮ್ಮ ಮತದ ದಾಳವಾಗಿಸಿಕೊಂಡು 'ಬಡವರ ಕಟ್ಟುವ ಕೆಲಸವು ನಡೆದಿದೆ, ಎನಿಸುತ ಬಡವರ ಸೇವೆ,' ಎಂದು ಮಾರ್ಮಿಕವಾಗಿ ಹೇಳಿದ್ದಾರೆ. ಈ ದೇಶದಲ್ಲಿ ಬಡವರನ್ನು ಸೋಮಾರಿಗಳಾಗಿಸಲು, ಕೆಲಸ ಕಲಿತು ಕುಶಲಕರ್ಮಿಗಳಾಗದಂತಾಗಲು-ಉಚಿತವಾಗಿ ಅಕ್ಕಿ, ಅನ್ನ ನೀಡಿ ಜನರನ್ನು ದುಡಿವ ಮನದಿಂದ ದೂರವಾಗಿಸುತ್ತಿದ್ದಾರೆ. ಅದಕ್ಕೆ ಬೇಂದ್ರೆ ಅಂದೇ 'ಬಡತನದ ಸಸಿಗೆ ನೀರೆರೆಯಬೇಡಲೊ ಗೆಳೆಯ ! ಬಡತನಕೆ ಉಪಕಾರಿ ಸಾಕು ಜಂಭ.' ಎಂದು ಹೇಳಿ ಇದಕ್ಕೆಲ್ಲ ಆಳುವವರ ಗರ್ವೋದಯದ ಅಸ್ತಿಭಾರವೇ ಕಾರಣ ಎಂದು ತಿಳಿಸಿದ್ದಾರೆ.

'ಜನರಿಗೆ ತಿನ್ನಲು ಮೀನು ಕೊಡಬೇಡ. ಮೀನು ಹಿಡಿಯುವುದನ್ನು ಕಲಿಸು' ಎಂದು ಆರ್ಥಿಕಾನುಭವದ ನುಡಿಯಿದೆ. ನಾವು ಬಡತನದ ದೀನದಲಿತ, ಕೂಲಿಕಾರ್ಮಿಕರಿಗೆ ಉತ್ಪಾದನೆಯ ದುಡಿಮೆ ಕಲಿಸದೆ ಅವರನ್ನು ಸರ್ಕಾರಿ ಅನುದಾನದ ಯಾಚಕರಾಗಿಸುತ್ತಿರುವುದು ನಗೆಗೇಡಿ, ಹೊಣೆಗೇಡಿ, ದೇಶದ್ರೋಹಿ ಆರ್ಥಿಕ ನೀತಿಯಾಗಿದೆ. ಅದರಿಂದ ಇಂದು ನಾವು ನಮ್ಮ ದೇಶದಲ್ಲಿ ಬೀದಿಯಲ್ಲಿ ಹೆರಿಗೆ, ಸ್ಮಶಾನಕ್ಕೆ ಹೆಣ ಹೊರಲು ದುಪ್ಪಟಿ, ಸತ್ತ ಹೆಣ ಸಾಗಿಸಲು ಸಹಾಯಕರಾಗದ ನಿರ್ದಯ ನಾಗರೀಕರ ನಡುವೆ ಇದ್ದೇವೆ. ಇದನ್ನು ಅಂದೇ ಊಹಿಸಿದ್ದ ಬೇಂದ್ರೆ ಗಾಂಧಿ ಜಯಂತಿಯಂದು ಆ ನೋವನ್ನು ನೆನೆದಿದ್ದಾರೆ. ಉಳ್ಳವರ ಲೋಭತನವೇ ಬಡತನಕ್ಕೆ ಕಾರಣ ಎಂದಿದ್ದಾರೆ. ಇದೊಂದು ಇಂದಿಗೂ ಪ್ರಸ್ತುತವಾಗಿರುವ ಕವನ.

ಕಳ್ಳರಿಗೆ ಸೆರೆಮನೆಯು, ಸೂಳೆಗೋ ಅರಮನೆಯು,
ಬೈರಾಗಿ ದಂಪತಿಗೆ ಧರ್ಮಶಾಲೆ,

ಬಡವರಿಗೆ ಬಯಲೆ ಗತಿ ಜನನ-ಮರಣಕ್ಕೆಲ್ಲ
ಉಳ್ಳವರ ಲೋಭ ಬಡತನದ ಮೂಲೆ. (ಸೂರ್ಯಪಾನ)

ಗಾಂಧಿ ಜಯಂತಿಯಂದು ಬೇಂದ್ರೆಯವರು ವ್ಯಂಗ್ಯಾತ್ಮಕವಾಗಿ ಕಾವ್ಯ ರಚಿಸಿ ಆಳುವವರನ್ನು ಸತ್ಯಮಾರ್ಗಿಗಳನ್ನಾಗಿಸಲು ಪ್ರಯತ್ನಿಸಿದ್ದಾರೆ :

ಗಾಂಧಿ ಜಯಂತಿ ದಿನ ಸತ್ಯವನ್ನಾಡೋಣ
ಸುಳ್ಳಿಗೋ ಇಡಿ ವರುಷ ತೆರವೆ ಇಹುದು.

ಬೇಂದ್ರೆಯವರು ತೀರಿಹೋದದ್ದು 26 ಅಕ್ಟೋಬರ್ 1981. ಆ ವರ್ಷದ ಮೇನಲ್ಲಿ ಗಾಂಧಿತತ್ತ್ವಕ್ಕೆ ತಿಲಾಂಜಲಿ ನೀಡಿದ ಆಳುವವರನ್ನು ಕುರಿತು ಅವರು ಬರೆದ ಕವನ 'ಬಾಪೂಜಿ ಪೂಜಿ'.

ಬಾಪೂಜಿ ಬಾಪೂಜಿ
ಮಾಡ್ತೇವಿ ಅವನ ಪೂಜಿ
ನಡತೆಯಲ್ಲಿ ಮಾತ್ರ
ಬರೀ ಪೂಜಿ, ಬರೀ ಶೂನ್ಯ. (ಕಾವ್ಯ ವೈಖರಿ)

ಅವರು ಅದೇ ವರ್ಷ ಜೂನ್ ತಿಂಗಳಲ್ಲಿ – ಗಾಂಧೀವಾದಿಗಳು ಗಾಂಧೀತತ್ತ್ವವನ್ನು ಅನುಸರಿಸುತ್ತಿಲ್ಲ, ಈ ದೇಶದಲ್ಲಿ ಬಡವರ ಉದ್ಧಾರ ಆಗಿಲ್ಲ ಎಂಬ ವ್ಯಥೆಯಿಂದ ಬರೆದ ಕವನ 'ಗಾಂಧೀವಾದಿ'. ಗಾಂಧಿಯು ಸ್ವತಂತ್ರ ಭಾರತದಲ್ಲಿ ಅಂತ್ಯೋದಯವಾಗುತ್ತದೆ ಎಂದು ಕನಸು ಕಂಡಿದ್ದರು. ಅದು ಆಗಲಿಲ್ಲ. ಗಾಂಧೀವಾದ ಹೇಳಿಕೊಂಡು ಸಿರಿವಂತರಾಗುವ ನವ ರಾಜಕಾರಣಿಗಳ ಹಿಂಡು ಬೆಳೆದಿದೆ. ಅವರು 'ಟೊಪ್ಪಿಗಿ ಹಾಕ್ತಾರ' ಅಂದರೆ ಮೋಸ ಮಾಡುತ್ತಾರೆ ಎಂದು ವ್ಯಥೆ ಪಟ್ಟು ವ್ಯಂಗ್ಯಾತ್ಮಕ ಕಾವ್ಯ ರಚಿಸಿದ್ದಾರೆ.

Experiments with truth
ಗಾಂಧೀ ಮಾಡಬಹುದು.
ಗಾಂಧೀ ಟೊಪಗಿ ಹಾಕಾವ್ರು
ಟೊಪ್ಪಿಗಿ ಹಾಕ್ತಾರ
Harmless ಅಂತ ಗುಳಿಗೀ
ಮಾರಾಟ ಮಾಡ್ತಾರ ! (ಕಾವ್ಯ ವೈಖರಿ)

(ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಗಾಂಧಿ ಅಧ್ಯಯನ ಕೇಂದ್ರ, ಬೆಂಗಳೂರು ಅವರು ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು ಯಲಹಂಕದಲ್ಲಿ 4.9.2017ರಂದು ಏರ್ಪಡಿಸಿದ ವಿಶೇಷ ದತ್ತಿ ಉಪನ್ಯಾಸ. ವಿಷಯ : ದ.ರಾ. ಬೇಂದ್ರೆ ದೃಷ್ಟಿಯಲ್ಲಿ ಗಾಂಧೀಜಿ.)

ಅಡಿ ಟಿಪ್ಪಣಿಗಳು

1. ದ.ರಾ. ಬೇಂದ್ರೆ, ಸಾಹಿತ್ಯದ ವಿರಾಟ್ ಸ್ವರೂಪ, ಸಮಾಜ ಪುಸ್ತಕಾಲಯ, ಧಾರವಾಡ, 1974, ಪು. 124.
2. ಅದೇ, ಪು. 121.
3. ಶ್ರೀಧರ ಖಾನೋಳಕರ, ಗೆಳೆಯ ಬೇಂದ್ರೆ, ಚುಳಕಿ ಗೋವಿಂದರಾಯರು (ಸಂ.), ಕವಿವರ ಬೇಂದ್ರೆ, ಲಲಿತ ಸಾಹಿತ್ಯ ಮಾಲೆ, ಧಾರವಾಡ, 1946, ಪು. 15.
4. ಪ್ರಹ್ಲಾದ ಬ. ನರೇಗಲ್ಲ, ಬೇಂದ್ರೆ ಕಾವ್ಯದಲ್ಲಿಯ ರಾಷ್ಟ್ರಪ್ರಜ್ಞೆ, ಬುದ್ಧಣ್ಣ ಹಿಂಗಮಿರೆ (ಸಂ.), ಇಳಿದು ಬಾ ತಾಯಿ, ಸಾಹಿತ್ಯ ಮಂಟಪ ಹುಬ್ಬಳ್ಳಿ ಹಾಗೂ ಸಮಾಜ ಪುಸ್ತಕಾಲಯ ಧಾರವಾಡ ಇವರ ಸಹ ಪ್ರಕಟಣೆ, 1977, ಪು. 343.
5. ಪ್ರಹ್ಲಾದ ಬ. ನರೇಗಲ್ಲ, ಮುನ್ನುಡಿ, ವಿಚಾರ ಮಂಜರಿ, ದ.ರಾ. ಬೇಂದ್ರೆ, ಗೀತಾ ಬುಕ್ ಹೌಸ್, ಮೈಸೂರು, 1969, ಪು. 9.
6. ದ.ರಾ. ಬೇಂದ್ರೆ, ವಿಚಾರ ಮಂಜರಿ, ಅದೇ ಪು. 48, 49, 52.

■



'ಚಾಂಗದೇವ ಪಾಸಷ್ಟಿ'

ಚಾಂಗದೇವ ಪಾಸಷ್ಟಿಯದು ವಿಚಿತ್ರ ಘಟನೆ. ಸಂತ ಚಾಂಗದೇವರು ಸಂತ ಜ್ಞಾನದೇವರಿಗಿಂತ ಹಿರಿಯರು. ಅವರು ಜ್ಞಾನದೇವನಿಗೆ ಪತ್ರ ಬರೆಯಬೇಕಾದರೆ ತುಂಬಾ ಚಿಂತಿಸಿದರು. ಜ್ಞಾನದೇವ ನನಗಿಂತ ಜ್ಞಾನದಲ್ಲಿ ಹಿರಿಯ ಆದರೆ ವಯಸ್ಸಿನಲ್ಲಿ ಕಿರಿಯ. ಚಿರಂಜೀವಿ ಎಂದು ಆಶೀರ್ವದಿಸಲಾಗದು. ಅವನು ಜ್ಞಾನವೃದ್ಧನಾದರೂ ತಾನು ಹಿರಿಯನಾದುದರಿಂದ ನಮಸ್ಕಾರ ಎಂದು ಬರೆಯಲಾಗದು. ಹೀಗೆ ಭಾವದ ಇತಿಮಿತಿಯ ತೂಗುಯ್ಯಾಲೆಯಲ್ಲಿ ತೊನೆದಾಡುತ್ತ ಕೊನೆಗೆ ಖಾಲಿ ಕಾಗದವನ್ನು ಕಳುಹಿಸಿದರು.

ಬರೆದುದನ್ನು ಓದಿ ತಿಳಿಯುವುದು ಸಾಧ್ಯ. ಬರೆಯದೆ ಇರುವುದನ್ನು ಓದುವುದು ಹೇಗೆ ? ಅದು ಸಂನ್ಯಾಸಿಯಂತೆ. ಅವನು ಬರಿದು. ಆದರೆ ಅವನಲ್ಲಿ ಅಪಾರ ಜ್ಞಾನವಿದೆ ! ನಿವೃತ್ತಿ ದೇವನು – ಚಾಂಗದೇವ ಶುದ್ಧ ನಿರ್ಮಲ, ಉಪದೇಶಕ್ಕೆ ಯೋಗ್ಯ ಎಂದು ಓದಿಕೊಂಡನು. ಜ್ಞಾನದೇವನಿಗೆ ಉತ್ತರ ಬರೆಯಲು ಹೇಳಿದನು.

ಚಾಂಗದೇವನ ಹೃದಯದ ಅಪೇಕ್ಷೆಗೆ ಜ್ಞಾನದೇವ ನೀಡಿದ ಉತ್ತರ 65 ಓವಿಗಳಲ್ಲಿದೆ. ಆ ಸಂಪೂರ್ಣ ಕೃತಿಯನ್ನು ಬೇಂದ್ರೆಯವರು ಭಾವಾನುವಾದ ಮಾಡಿದ್ದಾರೆ. ಪಾಸಷ್ಟಿ ಎಂದರೆ ಅರವತ್ತೈದು. ಅದು ಓವಿ ರಚನೆಯಲ್ಲಿದೆ. ಮರಾಠಿಯಲ್ಲಿ ಗೇಯಛಂದ ಹೊಂದಿದ ಒಂದು ಪದ್ಯಜಾತಿ ಓವಿ. ಓವಿ ಅಭಂಗಗಳ ಮುಖಾಂತರ ಮಹಾರಾಷ್ಟ್ರದ ಸಂತರು ಜ್ಞಾನ ಭಕ್ತಿಗಳನ್ನು ಪ್ರಸಾರ ಮಾಡಿದರು.

ಈ ಪಾಸಷ್ಟಿ ಒಬ್ಬ ಜ್ಞಾನಿ ಮತ್ತೊಬ್ಬ ಜ್ಞಾನಿಯ ಎದುರು ನಿವೇದಿಸಿಕೊಳ್ಳುತ್ತಿರುವ ತನ್ನದೇ ಅಂತರಂಗದ ತಿಳಿವಳಿಕೆಯಾಗಿದೆ. ಅಲ್ಲಮನ ವಚನಗಳಲ್ಲಿ 'ಜ್ಞಾನಿ ಜ್ಞಾನಿಯೊಡನೆ ನುಡಿವನಲ್ಲದೆ ಅಜ್ಞಾನಿಯೊಡನೆ ನುಡಿವನೇ ?' ಎಂಬ ಮಾತಿದೆ. ಶ್ರೀರಮಣರೂ ಸಹ 'ಜ್ಞಾನಿಯ ದೃಷ್ಟಿಗೆ ಎಲ್ಲೆಡೆ ಜ್ಞಾನವೊಂದೇ ಪ್ರತೀತವಾಗುತ್ತದೆ' ಎಂದಿದ್ದಾರೆ.

ಈ ಪದ್ಯ 'ಶ್ರೀ ವಟೇಶ ತಾನಡಗಿ ಮೂಡುವನು' ಎಂದು ಪ್ರಾರಂಭವಾಗುತ್ತದೆ. ಚಾಂಗದೇವ ವಟೇಶ್ವರ ಎಂಬ ಗ್ರಾಮದವನು. ವಟೇಶನೆಂಬುದು ಆ ಗ್ರಾಮದ ದೇವತೆಯ ಹೆಸರು. ಆಲದ ಮರದ ಕೆಳಗೆ ಕುಳಿತಿರುವ ಶಿವನನ್ನು ವಟೇಶ ಅಥವಾ ದಕ್ಷಿಣಾಮೂರ್ತಿ ಎಂದು ಕರೆಯುತ್ತಾರೆ.

ಗುರು ಚಾಂಗದೇವನಿಗೆ ಓಗೊಟ್ಟು ಜ್ಞಾನದೇವನ ಓವಿರಚನೆಯ ಆಂತರ್ಯದ ಅಲೌಕಿಕ ಸಂವಾದವನ್ನು ಬೇಂದ್ರೆಯವರು 'ಓವಿಗೋವುಗೊಟ್ಟೆ' ಎಂದು ತಿಳಿಸಿದ್ದಾರೆ. ಅದು ಒಳಭಾವದ ಅರಿವಿನ ಸಂವಹನ.

ಸಿದ್ಧರ ಕೃಪೆಯೆಂದರೆ ಫಲ ದೊರೆತ ಅನುಭವ. ಆ ಪರಿಣಾಮಕ್ಕೆ ತಾನು ಒಳಗಾಗಿರುವಾಗ, ಆ ಆನಂದಾನುಭವದಲ್ಲಿಯೇ ತಲ್ಲೀನನಾಗಿ ಜ್ಞಾನದೇವ ಹೇಳಿದ್ದಾನೆ: 'ಸಿದ್ಧ ಭೇಟಿ ಮುರಿದೀತು ಎಂದು ಇದ್ದಲ್ಲೆ ಇದ್ದುಬಿಟ್ಟೆ.' (ಸಂಚಯ)

ಚಾಂಗದೇವನ ಸಿದ್ಧಾನುಭವದಲ್ಲಿ ಒಂದಾದ ಜ್ಞಾನದೇವನು ಆತನನ್ನು ಸದಾ ಕಾಣುತ್ತಿರುತ್ತಾನೆ. ತಾನು ಅವನಿಂದ ಪ್ರತ್ಯೇಕವಾಗದೆ ಸದಾ ಕಾಲ ಅವನಲ್ಲಿ ಬೆರೆತು ಹೋಗಿರುತ್ತಾನೆ. ಹಾಗಾಗಿ ಹೇಳುತ್ತಾನೆ : 'ನಿನ್ನ ನಾನು ಕಾಣುವದೆ ಎಂದು ನೆನೆದಾಗ ಕಂಡೆ ನನ್ನ'

ತಾದಾತ್ಮ್ಯಭಾವದ ಅಭಿನ್ನತೆಯ ಸವಿಯಲ್ಲಿರುವಾಗ ಜ್ಞಾನದೇವನು ಗುರುಚಾಂಗ ದೇವನನ್ನು ಮುಖತಃ ದರ್ಶನ ಮಾಡಲು ಹಠ ಮಾಡುವುದಿಲ್ಲ. ತನ್ನ ಅನುಭವವನ್ನು ಕಳೆದುಕೊಳ್ಳಲು ಇಚ್ಚಿಸುವುದಿಲ್ಲ. 'ದರ್ಶನಕ್ಕೆ ಹಠ ಮಾಡಿ ನಾನು ಕಳಕೊಳ್ಳಬೇಕೆ ನಿನ್ನ?'

* * *

'ಇದು ನೋಡಿದಂತೆ, ಅದು ಕಂಡ ಹಾಗೆ,
ತೋರುವುದು ಕಾಣ್ಕೆ ಮಾತ್ರ
ದೃಷ್ಟಾರ ಮತ್ತೆ ದೃಶ್ಯತ್ವ ವಿಷಯ,
ಕೇವಲದ ಏಕಸೂತ್ರ.' (10)

ಅದ್ವೈತ ವೇದಾಂತದಲ್ಲಿ ಜ್ಞಾನಿಯಾದವನಿಗೆ ತನ್ನೆದುರಿನ ವ್ಯಕ್ತಿ (ದೃಶ್ಯ) ತನಗಿಂತ (ದೃಕ್/ದೃಷ್ಟಾರನಿಗಿಂತ) ಪ್ರತ್ಯೇಕವಾಗಿ ಕಾಣಿಸುವುದಿಲ್ಲ ಎಂಬ ಮಾತಿದೆ. ಬೇಂದ್ರೆ ಈ ನುಡಿಯಲ್ಲಿ ನಾನು ಮತ್ತು ನೀನು ಎಂಬ ಪ್ರತ್ಯಯಗಳ ಬದಲಾಗಿ 'ಇದು' ಮತ್ತು 'ಅದು' ಎಂದು ಪ್ರಯೋಗಿಸಿದ್ದಾರೆ. ಪ್ರಥಮ ಮತ್ತು ದ್ವಿತೀಯ ಪುರಷಗಳೆರಡನ್ನೂ ಸಮಾನವಾಗಿ ತೃತೀಯ ಪುರುಷದಲ್ಲಿ ಸಂಬೋಧಿಸಿದ್ದಾರೆ. ವ್ಯಾಕರಣದಲ್ಲಿನ ಈ ಪಲ್ಲಟವೂ ಮೇಲಿನ ಅದ್ವೈತದ ವಿವೇಕಕ್ಕೆ, ಎಲ್ಲವನ್ನೂ ತನ್ನಿಂದ ಹೊರಗಿರಿಸಿ ನೋಡಬೇಕೆಂಬ ವಿವೇಕಕ್ಕೆ ಪೂರಕವಾಗಿಯೇ ಇದೆ.

‘ಪ್ರತಿಬಿಂಬದಿಂದೆ ಬಿಂಬವೆಂದೆ
ನಾನಾದೆ ಕಣ್ಗೆ ಗೊಂಬೆ.
ದೃಶ್ಯತ್ವದೊಡನೆ ದೃಷ್ಟಾರತನವು
ನನ್ನನ್ನೆ ನಾನೆ ಕಾಂಬೆ.’ (17)

ಅದ್ವೈತ ವೇದಾಂತದಲ್ಲಿ ‘ಬಿಂಬ ಪ್ರತಿಬಿಂಬವಾದ’ ಎಂಬ ಜಿಜ್ಞಾಸೆ ಇದೆ. ಬಿಂಬದಿಂದ ಪ್ರತಿಬಿಂಬ ಮೂಡುವುದು ಸಹಜ. ಆದರೆ ಆತ್ಮದ ವಿಷಯದಲ್ಲಿ ಪ್ರತಿಬಿಂಬ (ಅಂದರೆ ಎದುರಿಗೆ ಒಬ್ಬ ವ್ಯಕ್ತಿ) ಇದ್ದಾಗ ಮಾತ್ರ ಬಿಂಬವೂ ಉಂಟು (ನಾನೆಂಬ ವ್ಯಕ್ತಿಯೂ ಉಂಟು) ಎಂಬ ಅರಿವು ಉಂಟಾಗುತ್ತದೆ ಎಂದು ವೇದವ್ಯಾಸರ ‘ಬ್ರಹ್ಮಸೂತ್ರ’ ವಿವರಿಸುತ್ತದೆ. ಇದನ್ನೇ ಬೇಂದ್ರೆ ಮೇಲಿನ ನುಡಿಯಲ್ಲಿ ಜ್ಞಾನದೇವನ ಸ್ವಾನುಭವದ ಛಾಯೆಯೊಂದಿಗೆ ವಿವರಿಸಿದ್ದಾರೆ.

* * *

ಸಂವಾದ ಹೇಗಿರಬೇಕೆಂಬುದನ್ನು ಬೇಂದ್ರೆಯವರು ಉಪಮಾನಾತ್ಮಕವಾಗಿ ಹೀಗೆ ಚಿತ್ರಿಸಿದ್ದಾರೆ: ‘ಕನ್ನಡಿಗೆ ಹಿಡಿದ ಕನ್ನಡಿಯ ಹಾಂಗೆ । ಸಂವಾದ ನಮಗೆ ನಿಮಗೆ !’

ಸಂವಾದದಲ್ಲಿ ಭಾಗಿಯಾದವರು ಪಾರದರ್ಶಕವಾಗಿರಬೇಕು. ಇನ್ನೊಬ್ಬರ ವಿಚಾರದ ಮಾತಿನ ಸ್ಪಷ್ಟತೆಯನ್ನು ಅವರ ಭಾವಾಭಿವ್ಯಕ್ತಿಯಲ್ಲಿ ಕಾಣಬೇಕು. ಅದಕ್ಕೆ ಸೂಕ್ತ ರೀತಿಯಲ್ಲಿ ಸ್ಪಂದಿಸಬೇಕು. ಅದು ಜೀವ ಸಂವಾದ ! ಅಧ್ಯಾತ್ಮದ ಅರಿವು ಒಂದಾದ ಬೆಳಕು !!

ಜ್ಞಾನದೇವನು ಚಾಂಗಯ್ಯನಿಗೆ – ನಾನು ನಿನ್ನಲ್ಲಿ ಒಂದಾದಾಗ ಬೇರೆಯಾಗಿ ಉಳಿಯಲಾರೆ. ಅದು ಉಪ್ಪು ನೀರಿನಲ್ಲಿ ಒಂದಾದಂತೆ ಎಂದು ರೂಪಕಾತ್ಮಕವಾಗಿ ಬಣ್ಣಿಸಿದ್ದಾನೆ.

‘ನೀರಾಳ ಮುಳುಗಿ ಕಾಣುವೆನು ಎಂದು
ಸೇರಿತ್ತು ಲವಣಗಣವು
ಸಂಗಡಿಸಿದಾಗ ವಿಂಗಡಿಕೆಯುಂಟೆ ?
ಉಳಿದೀತೆ ಉಪ್ಪಿನಣುವು ?’ (46)

ಆ ಅಧ್ಯಾತ್ಮ ಜೀವಿಗಳ ಆತ್ಮಗಳು ಒಂದಾದ ಆನಂದವನ್ನು ಬೇಂದ್ರೆ ಸರಳ ಪದಗಳಲ್ಲಿ ಹೀಗೆ ಧ್ಯಾನಶೀಲವಾಗಿ ನೀಡಿದ್ದಾರೆ :

‘ನಾ ನಿನ್ನ ಕಂಡೆ ನೀ ನನ್ನ ಕಂಡೆ
ಕಂಡದ್ದು ಯಾರ ಯಾವ ?
ನೀ ನನ್ನನುಂಡೆ, ನಾ ನಿನ್ನನುಂಡೆ,
ಉಳಿದದ್ದೆ ಆತ್ಮಭಾವ.’ (50)

ಆ ಬರಿ ಕಾಗದವನ್ನು ಜ್ಞಾನದೇವನು ಕನ್ನಡಿ ಎಂದು ಕರೆದಿದ್ದಾನೆ. ಅಲ್ಲಿ ತನ್ನನ್ನು ಕಂಡೆ, ತನ್ನ ರೂಪಿನ ಜೊತೆಗೆ ಆತ್ಮಶೋಧಕ್ಕೆ ಒಳಗಾದೆ. ದೋಷದಿಂದ ಮುಕ್ತನಾದೆ. ಅದು ಕನ್ನಡಿ – ಬಾನು. ಅಲ್ಲಿ ಪ್ರಕಾಶಿಸುವುದು ಭಾನು – ರವಿತೇಜ, ಜ್ಞಾನ, ಆನಂದ.

'ಯಾರೆ ಕನ್ನಡಿಯ ಕಂಡರೇನು ? ಕಾ–
ಣುವುದು ತನ್ನ ತಾನು.
ಇದನ್ನೋದಿ ಮೋದಿಸದರಾರು ? ಬಾನ್
ತುಂಬ ಒಂದೆ ಭಾನು.'

(ವಿಜಯ ಕರ್ನಾಟಕ, ಬೋಧಿವೃಕ್ಷ 17.6.2017)

■



ತಲೆಗೆ ಬೆಲೆಯೆಷ್ಟು ಕೇಳುವ ನಾಯಕ

ವರಕವಿ ದ.ರಾ. ಬೇಂದ್ರೆ ಅವರು 1918ರಲ್ಲಿ ಬಿ.ಎ. ಪಾಸು ಮಾಡಿದಾಗ ತಹಶೀಲ್ದಾರ್ ಕೆಲಸ ಸಿಗುತ್ತಿತ್ತು. ಆದರೆ ಅವರು ಬ್ರಿಟಿಷರ ಅಡಿಯಲ್ಲಿ ಕೆಲಸ ಮಾಡುವುದಿಲ್ಲ ಎಂದು ತೀರ್ಮಾನಿಸಿದರು. ಈ ನಾಡಿನ ವಿದ್ಯಾರ್ಥಿಗಳಲ್ಲಿ ವಿದ್ಯೆ, ವಿವೇಚನೆ, ಸಾಹಿತ್ಯ ಪ್ರೀತಿ, ಸಂಸ್ಕೃತಿ, ಹೋರಾಟ ಮನೋಭಾವವನ್ನುಂಟು ಮಾಡಲು ಶಾಲಾ ಶಿಕ್ಷಕರಾದರು. ದೇಶವು ಬ್ರಿಟಿಷರ ಆಳ್ವಿಕೆಯಿಂದ ಬಿಡುಗಡೆ ಹೊಂದಬೇಕು ಎಂದು ಹಂಬಲಿಸಿ ವಿದ್ಯಾರ್ಥಿಗಳನ್ನು, ಯುವಜನರನ್ನು ತಮ್ಮ ಕಾವ್ಯದಿಂದ ಜಾಗೃತಗೊಳಿಸಿದರು. ಆದರ್ಶ ವ್ಯಕ್ತಿಯಾಗಿ, ಬಡತನದಲ್ಲಿ ಸರಳ ಜೀವನ ನಡೆಸಿದರು.

1932ರಲ್ಲಿ 'ಗರಿ' ಕವನ ಸಂಕಲನದಲ್ಲಿ ಪ್ರಕಟವಾದ 'ನರಬಲಿ' ಕವನ ಬರೆದ ಕಾರಣಕ್ಕೆ ಬ್ರಿಟಿಷರು ಬೇಂದ್ರೆ ಅವರನ್ನು ಬಂಧಿಸಿ ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿಟ್ಟಿದ್ದರು. 1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ದೊರಕಿದಾಗ ಆ ಆನಂದದಲ್ಲಿ ಬೇಂದ್ರೆಯವರೂ ಒಂದಾದರು. 'ನಮ್ಮ ದೇಶದ ಜನ ನಮ್ಮವರದೇ ಆದ ಆಡಳಿತದಲ್ಲಿ ಉತ್ತಮ ಜೀವನ ನಡೆಸಲು ಸಾಧ್ಯ' ಎಂದು ಆಶಿಸಿದ್ದರು. ಆದರೆ ಸ್ವಾತಂತ್ರ್ಯಾನಂತರದಲ್ಲಿ ದೇಶವನ್ನು ಆಳುವವರಲ್ಲಿ ಜನಪರವಾದ, ದೇಶಭಕ್ತಿಯ, ನಿಸ್ವಾರ್ಥ ಜೀವನ ಶೈಲಿ ಇಲ್ಲವಾಗಿ, ಕುಟುಂಬ ಹಾಗೂ ಸ್ವಜನ ಪ್ರೀತಿ ವಿಜೃಂಭಿಸಿದ್ದನ್ನು ಕಂಡು ನೊಂದರು.

ಸ್ವಾತಂತ್ರ್ಯ, ಸರ್ವೋದಯ, ಸಮಾನತೆ, ಜಾತ್ಯತೀತತೆ ಎಂಬ ಪ್ರಜಾಪ್ರಭುತ್ವದ ಧ್ಯೇಯಗಳನ್ನು ಹೇಳುತ್ತ, ಆಳಲು ಬಂದ ನಮ್ಮವರೇ ಬಂಡವಾಳಶಾಹಿಗಳಾಗಿ ಮಾರ್ಪಾಡು ಹೊಂದಿದರು. ಅವರು ಒಂದು ಬಗೆಯಲ್ಲಿ ಜಾಣ ಶೋಷಕರಾದರು. ಅದನ್ನು ಕಂಡು ಕವಿಯು ತುಂಬಾ ನೊಂದರು. ಅದನ್ನು ಕಾವ್ಯದ ಮುಖೇನ ಜನರಿಗೆ ತಿಳಿಸುತ್ತ, ಪ್ರಜಾಪ್ರಭುತ್ವದ ಜಾಗೃತಿಯ ಕಹಳೆಯೂದಿದರು.

ಬೇಂದ್ರೆಯವರು ರಚಿಸಿದ ಕವನಗಳು ಪ್ರಜಾಪ್ರಭುತ್ವದ, ಸಂವಿಧಾನದ ಚೌಕಟ್ಟಿನಲ್ಲಿ ಪ್ರಜೆಗಳ ಹೊಣೆ ಹಾಗೂ ಜವಾಬ್ದಾರಿಗಳನ್ನು ಪ್ರತಿಮಾತ್ಮಕವಾಗಿ ತಿಳಿಸಿವೆ. ಅವು

ಓದುಗನ ಬುದ್ಧಿಗೆ ಬೆಳಕಾಗಿವೆ. ಅವು ಚಿಂತನೆಯ ಕಾವಿನಲ್ಲಿ ಭಾವ ಜಾಗೃತಿಯನ್ನುಂಟು ಮಾಡುತ್ತಿವೆ. ಅವು ದೇಶದ ಒಳಿತಿನ ಅರಿವಿನಿಂದ ಚುನಾವಣೆಯನ್ನು ಸದುಪಯೋಗಪಡಿಸಿಕೊಳ್ಳಲು ಮತದಾರರು ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡಬೇಕಾದ ತಿಳಿವನ್ನು ನೀಡಿವೆ. ಜನಮುಖಿಯಾದ ಕವಿಯ ಶ್ರದ್ಧೆ ಇಲ್ಲಿ ಗುಡಿಕಟ್ಟಿದೆ. ನಮ್ಮ ದೇಶದಲ್ಲಿ ಜನಾಕರ್ಷಕ ಯೋಜನೆಗಳು– ಮೂಗಿಗೆ ಹಚ್ಚಿದ ತುಪ್ಪದಂತೆ ಭರವಸೆಯ ವಾಸನೆ ಹಬ್ಬಿಸಿ ಜನರನ್ನು ವಂಚಿಸುತ್ತಿರುವುದನ್ನು ಕವಿ ಹೀಗೆ ವಿಡಂಬಿಸಿದ್ದಾರೆ :

'ತಾಳಿದವ ಬಾಳ್ಯಾನು ಬದುಕಿದವ ಉಂಡಾನು
ಸರ್ವೋದಯದ ಕೊನೆಯ ಪ್ರಸ್ಥದೂಟ'

(ಜೀವ–ಲಹರಿ)

ಪ್ರಜಾಪ್ರಭುತ್ವದಲ್ಲಿ 'ಸರ್ವೋದಯ' ಎಂಬ ತತ್ವವನ್ನು ಬಾಯಿಯಲ್ಲಿ ಹೇಳುತ್ತ 'ಗರ್ವೋದಯ'ದ ಅಸ್ತಿಭಾರದಲ್ಲಿ ಆಳ್ವಿಕೆ ಮಾಡುತ್ತ ಬಡವರನ್ನು ಕೈಗೊಂಬೆಯಾಗಿಸಿ ಆಡಿಸುವ ರಾಜಕೀಯ ನೇತಾರರ ಕಾಣದ ಕೈಯ ಸೂತ್ರಧಾರತ್ವನ್ನು ಉಪಮಾನಾತ್ಮಕವಾಗಿ ಕವಿ ಹೀಗೆ ಭೇಡಿಸಿದ್ದಾರೆ :

'ಸರ್ವೋದಯವು ಹೌದು, ಪರ್ವೋದಯವು ಹೌದು,
ಗರ್ವೋದಯವು ಮಾತ್ರ ಅಸ್ತಿಭಾರ.
ಕೆಲಸವಿಲ್ಲದ ಬಡವ ಕೈಗೊಂಬೆಆಗುವನು
ಕಿಳ್ಳಿಕೇತನ ಹಿಂದೆ ಸೂತ್ರಧಾರ'.

(ಸೂರ್ಯಪಾನ)

ಬೇಂದ್ರೆಯವರ ಕಲ್ಪನೆಯ ರಾಮರಾಜ್ಯ, ಧರ್ಮ ರಾಜ್ಯಗಳು ಆಗಿ ಹೋಗಿವೆ. ನಮ್ಮ ಬಳಿ ಇರುವ ರಾಜ್ಯ ಪಾತಾಳದಲ್ಲಿದೆ. ಅದು ನಮಗೆ ಸಿಗುವಂತಹದಲ್ಲ. ಪ್ರಜಾರಾಜ್ಯವು ಪ್ರಜೆಗಳ ಕೈಗೆ ಎಟುಕದೆ, ಮರೆಯಲ್ಲಿದೆ ಎಂಬುದನ್ನು ಪ್ರತಿಮಾತ್ಮಕವಾಗಿ 'ಪಾತಾಳದಲ್ಲಿದೆ' ಪದದಲ್ಲಿ ಅಭಿವ್ಯಕ್ತಿಸಿದ್ದಾರೆ. ರಾಜ್ಯ ಅಳುವವರ ಅಟ್ಟಹಾಸ, ಮಿತಿ ಮೀರಿದ ವರ್ತನೆ, ಕಣ್ಣು ಹಣೆಯಲ್ಲಿದ್ದಂತೆ ತಾವು ವಿಶಿಷ್ಟರೆಂದು ವರ್ತಿಸುವ ಬಗೆಯನ್ನು 'ರುದ್ರತಾಂಡವ' ಎಂದು ಕರೆದಿದ್ದಾರೆ. ಅವರ ಅನುಯಾಯಿ ಹಿಂಬಾಲಕ ವಂದಿಮಾಗಧರನ್ನು ಪ್ರೇತಗಳು, ಭೂತಗಳು ಎಂದು ಚಿತ್ರಿಸಿದ್ದಾರೆ. ಅಂತಹವರ ಕುಣಿತದ ಮೇಳದಲ್ಲಿ ಲಯಬದ್ಧ ಶಾಂತ ಏಳಿಗೆಯ ಬದುಕು ಈ ನೆಲದಲ್ಲಿ ಸಾಧ್ಯವಿಲ್ಲ ಎಂಬುದನ್ನು 'ತಾಳವೆಲ್ಲಿ' ಎಂಬ ಪದದಲ್ಲಿ ಧ್ವನಿಸಿದ್ದಾರೆ.

'ರಾಮರಾಜ್ಯವು ಆಯ್ತು, ಧರ್ಮರಾಜ್ಯವು ಹೋಯ್ತು,
ಬಳಿರಾಜ್ಯವಿಹುದು ಪಾತಾಳದಲ್ಲಿ.
ರುದ್ರತಾಂಡವದಲ್ಲಿ ಪ್ರೇತಗಳೆ ಕುಣಿಯುವವು
ಭೂತಗಳ ಮೇಳದಲಿ ತಾಳವೆಲ್ಲಿ?'

(ಸೂರ್ಯಪಾನ)

* * *

ಇದುವರೆಗೆ ಆಳಲು ಬಂದವರೆಲ್ಲ ದೇಶದಲ್ಲಿ ಬಡತನವನ್ನು ಓಡಿಸುತ್ತೇವೆ. ಗುಡಿಸಲು ಮುಕ್ತವಾಗಿಸುತ್ತೇವೆ ಎಂದು ಆಶ್ವಾಸನೆ ನೀಡುತ್ತಿದ್ದಾರೆ. ಆದರೆ ಸ್ವತಂತ್ರ ಭಾರತದಲ್ಲಿ ಸಿರಿವಂತರ ಮತ್ತು ಬಡವರ ನಡುವಿನ ಕಂದರ ದಿನೇ ದಿನೇ ಹೆಚ್ಚುತ್ತಿದೆ. ದೆಹಲಿ, ಮುಂಬೈ, ಕೋಲ್ಕತ್ತ ನಗರಗಳಲ್ಲಿ ನೆಲೆರಹಿತ, ಬಡತನ ಮಾನದಂಡಕ್ಕಿಂತ ಕೆಳಗಿನ ನಿರ್ಗತಿಕರು ಲಕ್ಷಾಂತರ ಮಂದಿ ಇದ್ದಾರೆ. ಅವರಿಗೆ ನೆಲವೇ ಚಾಪೆ. ಆಗಸವೇ ಹೊದಿಕೆಯಾಗಿದೆ. ಬೇಂದ್ರೆಯವರು 'ಬಿಕ್ಕಿ ಬೇಡವ್ರ ಮಕ್ಕಳ ಕಂಟ್ರೋಲ ಅಗಲಿ' ಎಂದು ಕವನ ಬರೆದು ಸರ್ಕಾರಕ್ಕೆ ಕಂಟ್ರೋಲ್ ಮಾಡಲು ತಿಳಿಸಿದ್ದಾರೆ. ಆದರೆ ಆಳುವ ನಿರ್ಲಜ್ಜ ಜನ ಕುಟುಂಬ ಯೋಜನೆಯನ್ನು ಕುರಿತು ಒಂದು ರಾಷ್ಟ್ರೀಯ ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರುತ್ತಿಲ್ಲ. ಈ ಸಮಸ್ಯೆಯ ಬೆಂಕಿಗೆ ತುಪ್ಪ ಸುರಿದಂತೆ ಅವರವರ ಧರ್ಮೀಯರ ಜನಸಂಖ್ಯೆ ಹೆಚ್ಚಳದ ರಾಷ್ಟ್ರವಿರೋಧಿ ಕರೆಯನ್ನು ಈಗಲೂ ಕೆಲವರು ನೀಡುತ್ತಿದ್ದಾರೆ. ಅದಕ್ಕಾಗಿ ಬೇಂದ್ರೆ,

'ಬಡತನದ ಸಸಿಗೆ ನೀರೆರೆಯಬೇಡಲೊ ಗೆಳೆಯ !
ಬಡತನಕೆ ಉಪಕಾರಿ ಸಾಕು ಜಂಭ.
ನಿನ್ನ ಸೇವೆಯ ಪುಣ್ಯದಿಂದ ಹಬ್ಬಿಹುದಣ್ಣ
ಬಡತನದ ಹುಲುಸು ಬೆಳೆ ಜಗದ ತುಂಬ,

(ಅರಳು ಮರಳು)

ಎಂದು ನೇರವಾಗಿ ಅವರ ಡೋಂಗಿ ಸೇವೆಯ ಪುಣ್ಯದ ಕುತಂತ್ರ ತಿಳಿಸಿದ್ದಾರೆ. ಅವರು ಭಾರತದ ಎಲ್ಲ ಪ್ರಜೆಗಳನ್ನು, ಅದರಲ್ಲಿ ಪ್ರಮುಖವಾಗಿ ದೀನ ದಲಿತರನ್ನು ಹೀಗೆ ಎಚ್ಚರಿಸಿದ್ದಾರೆ:

'ಹತ್ತು ಹಡಿಯೋದಕ್ಕಿಂತ ಒಂದು ಮುತ್ತು ಹಡಿಯೋದು ಲೇಸು.
ತಿಪ್ಪೀ ಕೆದರಿ ಕೂಳತಿಂದ್ರ, ಬಂತ್ಯಾವ ಕೋಳೀ ಬಾಳು ?'

(ತಾ ಲೆಕ್ಕಣಿಕೆ ತಾ ದೌತಿ)

ನಗರದ ಜನ ಇಲಿ ಬಿಲಗಳಲ್ಲಿ ಹೊಕ್ಕಿರುವಂತೆ ಇದ್ದಾರೆ. ಜನಸಾಂದ್ರತೆ ಅತಿಯಾಗಿ ಮಕ್ಕಳು ಓಡಾಡಲು ನೆಲವಿಲ್ಲದಂತಾಗಿದೆ. ಆದರೆ ಇಲಿಗಳಂತೆ ಮರಿಗಳನ್ನು ಮಾಡುವ ಹೀನ ನಡೆಗೆ ನಾವೇಕೆ ನಾಚುತ್ತಿಲ್ಲ? ನಾವೇಕೆ ಮನುಜರಾಗಿ ಬಾಳುವುದರ ಬಗ್ಗೆ ಯೋಚಿಸುತ್ತಿಲ್ಲ ? ಜ್ಯಾಮಿತೀಯ ಅನುಪಾತ (Geometrical progression) ದಲ್ಲಿ ಜನಸಂಖ್ಯೆ ಬೆಳೆದರೆ ಇಲ್ಲಿ ಉಳಿಯುವುದು ಹೇಗೆ ?

* * *

ಚುನಾವಣೆಯಲ್ಲಿ ಗೆದ್ದೇ ತೀರಬೇಕೆಂದು ದ್ವೇಷ, ಅಸೂಯೆ, ಕ್ರೌರ್ಯ, ಹಿಂಸೆಗಳಿಗೆ ಕಾರಣವಾಗುವ ಹುರಿಯಾಳುಗಳಲ್ಲಿ ಅಧಿಕಾರದಾಹ ತನ್ನ ಅಸಹ್ಯ ಮುಖವನ್ನು

ಕರಾಳವಾಗಿ ಪ್ರದರ್ಶಿಸುತ್ತಿರುತ್ತದೆ. ಮತದಾರರಿಗೆ ಬೆಲೆ ಕಟ್ಟಿ ಖರೀದಿಸುವ ವಿಕಟ ವರ್ತನೆ ಗೋಪ್ಯವಾಗಿ ನಡೆಯುತ್ತಿರುತ್ತದೆ. ಅದನ್ನು ಬೇಂದ್ರೆಯವರು ಕಾವ್ಯ ಮುಖೇನ ಹೀಗೆ ತಿಳಿಸಿದ್ದಾರೆ :

'ನಾವು ಪೂಜಿಸುತಿಹುದು ಹೊಟ್ಟೆಕಿಚ್ಚು,
ಬೇರೆ ಎನ್ನುವುದೇಕೆ 'ಬೆಂಕಿ ಹಚ್ಚು ?'
ಕೊಲ್ಲುವೆವು ಸಾಯುವೆವು ಇದೆ ಕಾಯಕ !
ತಲೆಗೆ ಬೆಲೆಯೆಷ್ಟು ಕೇಳುವ ನಾಯಕ !'

(ನಾಕು ತಂತಿ)

ಚುನಾವಣಾ ಸಂದರ್ಭದಲ್ಲಿ ಪಕ್ಷ ಪಕ್ಷಗಳಲ್ಲಿ, ಪಕ್ಷಗಳ ಅಂತರ್ಯದಲ್ಲಿ, ಕುಟುಂಬದ ಒಳಗಡೆ, ಸಾಮಾಜಿಕ ಜೀವನದ ಹೊರಗಡೆ ನಾವು ಭಾರತೀಯರು ಪ್ರಜಾಪ್ರಭುತ್ವದ ತತ್ವ ಅರಿತು ಶಾಂತಿ, ಸಹನೆ, ಪ್ರೀತಿಯಿಂದ ದ್ವೇಷರಹಿತವಾಗಿ ವರ್ತಿಸುತ್ತಿಲ್ಲ. ಒಣ ಪ್ರತಿಷ್ಠೆಯಲ್ಲಿ ಅನಗತ್ಯವಾಗಿ ಎದೆ ಉಬ್ಬಿಸಿಕೊಂಡು ಬೀಗುತ್ತಿರುತ್ತೇವೆ. ಅದರಿಂದ 'ಒಳಗಿನ ಮಜಕೂರ' ಅಂತರಂಗದ ವಿಷಯ; ಅಂತರಾತ್ಮದ ಸಾರ, ಸಂದೇಶ ಸೋರಿ ಹೋಗುತ್ತದೆ. ಮನುಷ್ಯರು ಬದುಕಿನ ಸವಿ ಸವಿಯುತ್ತಿಲ್ಲ ಎಂದು ಕವಿ ಲಾವಣಿ ಛಂದಸ್ಸಿನಲ್ಲಿ ಹೀಗೆ ತಿಳಿಸಿದ್ದಾರೆ :

'ಒಬ್ಬರನ ಕಂಡರ ಒಬ್ಬರ ಮನಸು
ಅಬ್ಬರ ತುಬ್ಬರ ಅಗತೈತಿ
ಇಬ್ಬರ ಕೂಡಿ ಬದುಕಿನ ಹಬ್ಬ ಮಾಡಿಲ್ಲ ಭರಪೂರಾ
ಸಭ್ಯರಾಂಗ ಕಾಣತೇವಿ
ಮಬ್ಬಿನಾಗ ಬಾಳತೇವಿ
ಉಬ್ಬಿನ್ಯಾಗ ಸೋರಿ ಹೋತು ಒಳಗಿನ ಮಜಕೂರಾ'

(ಜೀವ ಲಹರಿ)

* * *

ಸ್ವತಂತ್ರ, ಸಾರ್ವಭೌಮ ರಾಷ್ಟ್ರ ಭಾರತದ ಹಿರಿಮೆಯ ಸಂಕೇತ ಅಶೋಕ ಚಕ್ರ. ಅದರ ಅಡಿಯಲ್ಲಿ ಭಾರತದ ಜನರು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ಪಡೆಯಬೇಕು. ಸುಖ, ಸಮೃದ್ಧಿಯಿಂದ, ಬಾಳಬೇಕು ಎಂಬುದು ಅಂಬೇಡ್ಕರ್ ರಚಿಸಿದ ಸಂವಿಧಾನದ ಆಶಯ. ಆದರೆ ಆ ಆಶಯ ಈಡೇರಿಲ್ಲ. ಅಶೋಕವನದಲ್ಲಿ ಸೆರೆಯಲ್ಲಿಟ್ಟಿದ್ದ ಸೀತೆ ಸಶೋಕದಿಂದಿದ್ದಳು. ಆದರೆ ಬ್ರಿಟಿಷರ ಸೆರೆಯಿಂದ ಮುಕ್ತರಾದ ಪ್ರಜೆಗಳು ಅಶೋಕ ಚಕ್ರಹೊತ್ತ ಧ್ವಜದ ಅಡಿಯಲ್ಲಿ ಸಶೋಕರಾಗಿರುವುದು ಎಷ್ಟು ಸರಿ ಎಂದು ಬೇಂದ್ರೆಯವರು ವ್ಯಂಗ್ಯಾತ್ಮಕವಾಗಿ ಚಿತ್ರಿಸಿದ್ದಾರೆ.

'ಅಶೋಕ ವೃಕ್ಷದ ನೆರಳಿನಲಿ
ಸಶೋಕ ಸೀತೆಯ ಕಂಡಿದ್ದೆ.

ಅಶೋಕ ಚಕ್ರದ ಧ್ವಜದಡಿಗೆ
ಸಶೋಕ ಜನತೆಯು ಕಾಣುತಿದೆ'

(ಮುಕ್ತಕಂಠ)

ಇಂದಿನ ಚುನಾವಣೆಯ ಕಾವಿನಲ್ಲಿ ನಾಗರಿಕ ಸೌಜನ್ಯದ ಮಾತುಕತೆ, ಸಂಸ್ಕೃತಿಯ ಪ್ರತೀಕವಾದ ರೀತಿ ನೀತಿ, ಮಾನವೀಯ ಮೌಲ್ಯ ಬಿಂಬಿತ ವರ್ತನೆಗಳು ಕೆಲವು ಅಭ್ಯರ್ಥಿಗಳಲ್ಲಿ ಕಾಣುತ್ತಿಲ್ಲ. ಅದು ಪ್ರಜಾಪ್ರಭುತ್ವದ ದುರಂತ. ಪ್ರಜಾರಾಜ್ಯ ವ್ಯವಸ್ಥೆಯಲ್ಲಿ ಅಂತಹವರನ್ನು ಕಂಡು ಕವಿ ಹೀಗೆ ಅಣಕವಾಡಿದ್ದಾರೆ :

'ಹಗಲದರೋಡೆದವರಿಗೆ
ಮೂಹೂರ್ತಗೀರ್ತ ಬೇಕಾಗಿಲ್ಲಾ
ಕಳ್ಳಸಂತೀನs ನಮಗ ಸಾಕಾಗಿಲ್ಲಾ
ಪ್ರಜಾರಾಜ್ಯ ಘೋಕಾಗಿಲ್ಲಾ, ಝೋಕಾಗಿಲ್ಲಾ.
ಹೋಟಿನ ಕಿಚ್ಚು ಘಟ್ಟ್ಯಾಗ್ಯದs
ಲಂಚದ ಅನ್ನ ಹೊಟ್ಟ್ಯಾಗದs.

(ತಾ ಲೆಕ್ಕಣಿಕೆ ತಾ ದೌತಿ)

ಈ ಎಲ್ಲದರ ಹಿನ್ನೆಲೆಯಲ್ಲಿ ಮತದಾರರು ಜಾಗೃತರಾಗಿ, ಚಿಂತನಶೀಲ ನಡೆಯಿಂದ ಉತ್ತಮ ವ್ಯಕ್ತಿಗಳನ್ನು ಆಯ್ಕೆ ಮಾಡಿ ಪ್ರಜಾಪ್ರಭುತ್ವವನ್ನು ಉಳಿಸಬೇಕಾಗಿದೆ. ತಮ್ಮ ಒಳಿತಿನ ಆಡಳಿತ ತಮ್ಮ ಮತದಾನದಲ್ಲಿದೆ ಎಂಬ ಅರಿವು ಈ ನಾಡಿನಲ್ಲಿ ಪ್ರಜಾರಾಜ್ಯವನ್ನು ಉಳಿಸುತ್ತದೆ ಬೆಳೆಸುತ್ತದೆ.

(ಪ್ರಜಾವಾಣಿ 30.4.2018)

■



ಬಿಕ್ಕಿ ಬೇಡವ್ರ ಮಕ್ಕಳ ಕಂಟ್ರೋಲ ಆಗಲಿ

ಇಂದು ಭಾರತದ ಜನಸಂಖ್ಯೆ 125 ಕೋಟಿ ಆಗಿದೆ. ಜಗತ್ತಿನ ಶೇಖಡ 17.4 ರಷ್ಟು ಜನ ಭಾರತದಲ್ಲಿ ಇದ್ದೇವೆ. ನಮ್ಮ ದೇಶದಲ್ಲಿ ಪ್ರತಿ ಎರಡು ಸೆಕೆಂಡಿಗೆ ಒಂದು ಮಗುವಿನ ಜನನವಾಗುತ್ತಿದೆ. ಒಂದು ಚದರ ಕಿ.ಮಿಗೆ 380 ಜನಸಾಂದ್ರತೆ ಹೊಂದಿದೆ. ನಮ್ಮ ದೇಶದ ಹಲವಾರು ಸಮಸ್ಯೆಗಳಿಗೆ ಜನಸಂಖ್ಯೆ ಬಹುಮುಖ್ಯ ಕಾರಣವಾಗಿದೆ. ನಮ್ಮ ದೇಶವು ಕೈಗಾರಿಕೆ, ವಿಜ್ಞಾನ, ಉಪಗ್ರಹ ಉಡಾವಣೆ ಮುಂತಾದ ಹಲವಾರು ರಂಗಗಳಲ್ಲಿ ಪ್ರಗತಿಯನ್ನು ಸಾಧಿಸಿದ್ದರೂ ಅದಕ್ಕೆ ತಡೆಯೊಡ್ಡುವ ರೀತಿ ಜನಸಂಖ್ಯೆ ಸ್ಫೋಟವಾಗುತ್ತಿದೆ.

ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಸಂವಿಧಾನದ ಹಲವು ಸವಲತ್ತುಗಳ ಅಡಿಯಲ್ಲಿ ಪ್ರತಿ ಜಾತಿ ಜನಾಂಗದವರು ತಮ್ಮ ತಮ್ಮ ಗುಂಪುಗಳ ಸಂಖ್ಯೆಯನ್ನು ಹೆಚ್ಚಿಸಿ ಕೊಳ್ಳಲು ಪೈಪೋಟಿಗೆ ಇಳಿದಂತಿರುವುದು ದೇಶಕ್ಕೆ ಮಾರಕವಾಗಿದೆ. ಇದು ಇಡೀ ದೇಶದ ಸಮಸ್ಯೆ. ದೇಶದ ಪ್ರತಿ ವ್ಯಕ್ತಿ ಸುಖ ನೆಮ್ಮದಿಯಿಂದಿದ್ದರೆ ಮಾತ್ರ ನಾನು ನೆಮ್ಮದಿಯಿಂದಿರುವೆ ಎಂಬ ಅರಿವನ್ನು ಹೊಂದಿದ ವ್ಯಕ್ತಿಯನ್ನು ಮಾತ್ರ ದೇಶಭಕ್ತ ಎಂದು ಕರೆಯಬಹುದು. ಆ ಹಿನ್ನೆಲೆಯಲ್ಲಿ ಪ್ರತಿ ಪ್ರಜೆಯೂ ಯೋಚಿಸಿ ಒಂದು ಕುಟುಂಬಕ್ಕೆ ಒಂದೇ ಮಗು ಎಂಬ ಸೂತ್ರ ಅನುಸರಿಸಿದರೆ ದೇಶ ಸುಭಿಕ್ಷವಾಗುತ್ತದೆ. ದೇಶದ ಜನಸಂಖ್ಯಾ ಸಮಸ್ಯೆಗೆ ನಿಜವಾದ ಉತ್ತರ ಶಿಕ್ಷಣ. ವಿದ್ಯಾವಂತರು ಮಕ್ಕಳ ನಿಯಂತ್ರಣವನ್ನು ತಾವೇ ಮಾಡಿಕೊಳ್ಳುತ್ತಾರೆ. Education is the best contraceptive ಆದ ಕಾರಣ ಸರ್ಕಾರ ಶಿಕ್ಷಣಕ್ಕೆ ಹೆಚ್ಚು ಗಮನಕೊಡಬೇಕು.

ಈ ಸಮಾಜದ ಶ್ರೀಮಂತ ವರ್ಗ ಮತ್ತು ಮಧ್ಯಮ ವರ್ಗಕ್ಕೆ ತಿಳಿಸಿಹೇಳಬಹುದು. ಅವರು ಕುಟುಂಬ ಯೋಜನೆ ಪಾಲಿಸುತ್ತಾರೆ. ಅವರು ಹಿಡಿತಕ್ಕೆ ಸಿಗುತ್ತಾರೆ. ಆದರೆ ಭಿಕ್ಷೆ ಬೇಡುವವರು ಯಾರ ಹಿಡಿತದಲ್ಲಿಯೂ ಇಲ್ಲ. ಭಿಕ್ಷುಕರ ಸಂತತಿಯು ಬೆಳೆಯುತ್ತಿದೆ. ಇದೊಂದು ದೊಡ್ಡ ಸಾಮಾಜಿಕ ಆರ್ಥಿಕ, ನೈತಿಕ ಸಮಸ್ಯೆ. ಇದು ನಮ್ಮ ದೇಶದಲ್ಲಿ

ಯಾರ ಕೈಗೂಸಿಗದೆ ದಿನೇ ದಿನೇ ಬೆಳೆಯುತ್ತಾ ಸಾಗಿದೆ. ಹೀಗೆ ಭಿಕ್ಷೆ ಬೇಡುವವರನ್ನು ಕುಟುಂಬ ಯೋಜನೆಗೆ ಅಳವಡಿಸುವುದು ಹೇಗೆ ಎಂದಾಗ ಕವಿ ದ.ರಾ. ಬೇಂದ್ರೆಯವರಿಗೆ ಬ್ರಿಟೀಷರ ಕಂಟ್ರೋಲ್ ಪದ ಸಮರ್ಥ ಎನಿಸಿದೆ. Control ತನ್ನದೇ ಆದ ಪ್ರಭುತ್ವ ಮತ್ತು ಶಕ್ತಿಯನ್ನು ಹೊಂದಿದೆ. Control ನಿಘಂಟಿನ ಅರ್ಥ The power or authority to direct, order or manage ಎಂದಿದೆ. ಆದಕಾರಣ ಬೇಂದ್ರೆಯವರು ಈ ಸಮಸ್ಯೆಯನ್ನು ಬಗೆಹರಿಸಲು ಬರಿ ಹೇಳುವುದು ಕೇಳುವುದು ಸಾಧ್ಯವಿಲ್ಲ. ಇಲ್ಲಿ ಸರ್ಕಾರ ನೇರವಾಗಿ ಪ್ರವೇಶಿಸಿ ಕಂಟ್ರೋಲ್ ಮಾಡಬೇಕು ಎಂದಿದ್ದಾರೆ. ಈ ದೇಶದ ಉಳಿವಿಗೆ ಇದರತ್ತ ಸರ್ಕಾರವು ಗಮನ ಹರಿಸಲಿ ಎಂದು 'ಬಿಕ್ಕಿ ಬೇಡವ್ರ ಮಕ್ಕಳ ಕಂಟ್ರೋಲ ಆಗಲಿ' ಕವನ ರಚಿಸಿದ್ದಾರೆ.

ಹೆಗಲಲ್ಲೊಂದು ಬಗಲಲ್ಲೊಂದು
ಹಿಂದೆರಡು ಮುಂದೆರಡು
ಎಲ್ಲಿ ಹೊರಟೆ ಶೆಟವೀ ? ನೀ ಬೀದೀ ಭಿಕಾರೀ !
ಇಲ್ಲ ಚಾಕರಿ; ಇಲ್ಲಾ ನೋಕರಿ
ಅದು ಬೇಕರಿ, ಇದೂ ಬೇಕ್ರಿ
ಬೇಕರಿ ಬ್ರೆಡ್ಡು, ಭಕ್ಕರಿ ಚೂರು; ಬೇಡ್ತಾಳ ಡೋಕಾರಿ (ಪರಾಕಿ)


ಭಿಕ್ಷುಕಿ ತುಂಬಾ ನಿಸ್ಸಹಾಯಕಳು. ಹೆಣ್ಣಾದ ತಪ್ಪಿಗೆ ಮಕ್ಕಳನ್ನು ಹಡೆದು ಅವುಗಳ ಹೊಟ್ಟೆ ತುಂಬಿಸಲು ಕೊಟ್ಟಿದ್ದೆಲ್ಲ ಬೇಕರಿ, ಬೇಕ್ರಿ ಎಂದು ಬೇಡಿ ತೆಗೆದುಕೊಳ್ಳುತ್ತಾಳೆ. ಬೇಂದ್ರೆ ನೋವಿನಲ್ಲೂ ಕಿರುಹಾಸ್ಯ ತುಂಬಿರುತ್ತಾರೆ ಎಂಬುದಕ್ಕೆ ಈ ನುಡಿಯ ಕೊನೆಯ ಸಾಲು ಸಾಕ್ಷಿಯಾಗಿದೆ. ಅವಳಿಗೆ ಮತ್ತು ಅವಳ ಮಕ್ಕಳಿಗೆ ಬೇಕರಿಯ ಬ್ರೆಡ್ಡು ಬೇಕರಿಯ ರುಚಿ ನೋಡುವ ಆಸೆ. ಆದ ಕಾರಣ ಬೇಕರಿ ಮುಂದೆ ಅವಳು 'ಡೋಕಾರಿ' ಯಾಗುತ್ತಾಳೆ. ಅಂದರೆ ನೋವಾಗದಿದ್ದರೂ ಅಳುವ ವ್ಯಕ್ತಿಯಾಗಿ ಅಳುತ್ತಾಳೆ ಕೊರಗುತ್ತಾಳೆ.

'ಹೆಡಿಗೀ ತುಂಬ ಮರೀ ಹಡದಿ
ತಿರುಗಲ ತಿಪ್ಪೀ ಹಾದಿಹಿಡದಿ'

ಎಂದು ಮಕ್ಕಳಿಗಾಗಿ ಬದುಕುವ ಹೆಣ್ಣನ್ನು ಚಿತ್ರಿಸುವ ಬೇಂದ್ರೆಯವರು 'ಕೂಳಬೇಡೋ ಬದುಕು ಹಾಳು' ಎಂದು ಬದುಕಿನ ಮೂಲಕ್ಕೆ ಹೋಗಿ ನುಡಿದಿದ್ದಾರೆ. ಅವರು ಭಿಕ್ಷೆ ಬೇಡುವುದನ್ನು ಬಿಡಲು ಗಂಡಿಗೆ ಹೇಳುವುದಕ್ಕಿಂತ ಹೆಣ್ಣಿಗೆ ಹೀಗೆ ಕೇಳಿಕೊಂಡಿದ್ದಾರೆ : 'ಒಳ್ಳೆ ಹರಕೀ ಹೊತ್ತೀ ಮಗಳ ಬಿಡು ಈ ಕಾಯ್ಕ'

(ಆಕಾಶವಾಣಿ, ಚಿಂತನ)

■



ವಾಮನ ಬೇಂದ್ರೆ ಅವರ ಸಾಂಗತ್ಯ

ವರಕವಿ ದ.ರಾ ಬೇಂದ್ರೆಯವರ ಕಾವ್ಯದ ಮೋಡಿಗೆ ಒಳಗಾದ ನನಗೆ ಸಾಧನ ಕೇರಿ ಕಾಶಿಯಷ್ಟೇ ಪವಿತ್ರ ಆ ಪುಣ್ಯಭೂಮಿಗೆ ಹೋಗಿ ಕವಿಯ ಮನೆಯನ್ನು ನೋಡಬೇಕು, ಕವಿಯನ್ನು ಕಾಣಬೇಕು ಎಂಬ ಕುತೂಹಲ ನನಗೆ ಅವರ 'ಗಂಗಾವತರಣ' ಕವನವನ್ನು ಪ್ರೌಢಶಾಲೆಯಲ್ಲಿ ಓದುವಾಗಿನಿಂದ ಉಂಟಾಗಿತ್ತು. 1987ರಲ್ಲಿ ಕವಿಯ ಸಾಧನಾ ನೆಲೆಯನ್ನು ನೋಡಬೇಕೆಂದು ಉತ್ಸಾಹದಲ್ಲಿ ಧಾರವಾಡಕ್ಕೆ ಹೋದೆ. ಪ್ರಶಾಂತ ವಾತಾವರಣದ ಆ ಶಾಂತಗೃಹದ ಬಾಗಿಲು ತಟ್ಟಿದೆ. ಓರ್ವ ಹಿರಿಯರು ಬಾಗಿಲು ತೆಗೆದರು. 'ಬನ್ನಿ' ಎಂದರು. ನಾನು ಅವರ ಆಹ್ವಾನಕ್ಕೆ ಕರಗಿ ಹೋದೆ, ಹಾಗೆ ಕರೆದವರು ಕವಿಪುತ್ರ ವಾಮನ ಬೇಂದ್ರೆ. ಅವರು ಆತ್ಮೀಯವಾಗಿ ನನ್ನ ಹೆಸರು ಊರಿನ ಬಗ್ಗೆ ವಿಚಾರಿಸಿದರು.

ನನ್ನ ಬೇಂದ್ರೆ ಕಾವ್ಯಾಸಕ್ತಿ ತಿಳಿಸುತ್ತ 'ಸರ್, ನಾನು ಶಾಲಾ ಕಾಲೇಜುಗಳಲ್ಲಿ ದ.ರಾ. ಬೇಂದ್ರೆ ಕವನಗಾಯನ ಸ್ಪರ್ಧೆ ಏರ್ಪಡಿಸಿ ಬೇಂದ್ರೆ ಕೃತಿಗಳನ್ನು ಬಹುಮಾನವಾಗಿ ನೀಡುವ ಆಸಕ್ತಿ ಹೊಂದಿದ್ದೇನೆ' ಎಂದೆ. ಅವರು 'ಇಂದಿನಿಂದ ನೀವು ನಮ್ಮ ಅಂಬಿಕಾತನಯದತ್ತ ವೇದಿಕೆಯ ಹನ್ನೊಂದನೇ ಸದಸ್ಯರು. ಎರಡು ಕೈಸೇರಿ ಹನ್ನೊಂದು. ಸ್ನೇಹ ಬಾಂಧವ್ಯದ ಸಂಕೇತ' ಎಂದರು. ಮನೆಯ ಹಿಂದಿರುವ ಬೇಂದ್ರೆ ಚಿತಾಭಸ್ಮ ಇರಿಸಿರುವ ಗುಡಿಗೆ ಕರೆದುಕೊಂಡು ಹೋದರು. ಕೈ ಮುಗಿಯುತ್ತ 'ನನ್ನ ಹರಣ ನಿನಗೆ ಶರಣ, ಸಕಲ ಕಾರ್ಯ ಕಾರಣ' ಪ್ರಾರ್ಥನೆ ಮಾಡಿ 'ಅಂಬಿಕಾತನಯದತ್ತ'ರ ಅಶೀರ್ವಾದ ಬೇಡಿದೆ. ವಾಮನ ಬೇಂದ್ರೆಯವರು 'ಸಕ್ಕರಿ' ನೀಡಿ ಶುಭವಾಗಲಿ ಎಂದರು. ಬೇಂದ್ರೆ ನನ್ನನ್ನು 'ಬಾರೋ ಸಾಧನ ಕೇರಿಗೆ' ಎಂದು ಕರೆದು ತಮ್ಮವನನ್ನಾಗಿಸಿಕೊಂಡರು. ನನ್ನ ಆಲೋಚನೆಗೆ ತಕ್ಕಂತೆ 1988ರಲ್ಲಿ ಗೋಕಾಕದಲ್ಲಿ ಡಾ. ನಿಂಗಣ್ಣ ಸಣ್ಣಕ್ಕಿ ಶಿಕ್ಷಕರಾಗಿದ್ದ ಪ್ರೌಢಶಾಲೆಯಲ್ಲಿ ದ.ರಾ. ಬೇಂದ್ರೆ ಗೀತಗಾಯನ ಸ್ಪರ್ಧೆಯ ಮೊದಲ ಕಾರ್ಯಕ್ರಮ ನಡೆಯಿತು. ಡಾ.ವಾಮನ ಬೇಂದ್ರೆಯವರು ಮುಖ್ಯ ಅತಿಥಿಯಾಗಿ ಬಂದು ಕಾರ್ಯಕ್ರಮ ನಡೆಸಿಕೊಟ್ಟರು. ಅದು ಅಂದಿನಿಂದ ನಿರಂತರವಾಗಿ ನಡೆಯುತ್ತ ರಾಜ್ಯದಾದ್ಯಾಂತ 560ಕ್ಕಿಂತ ಹೆಚ್ಚು ಕಾರ್ಯಕ್ರಮಗಳಾಗಿವೆ.

10.2.1990ರಂದು ಬೆಳಗಾವಿ ಕೋಟೆಯ ಕಮಲ ಬಸದಿ ಮುಂಭಾಗದ ಹುಲ್ಲುಹಾಸಿನ ಮೇಲೆ ಬೆಳಗಾವಿ ನಗರದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ 'ದ.ರಾ. ಬೇಂದ್ರೆ ಗೀತ ಗಾಯನ ಸ್ಪರ್ಧೆ' ಹಮ್ಮಿಕೊಂಡೆನು. ಸಹಕಾರ ನೀಡಿದವರು ಶ್ರೀ ಸುಭಾಷ ಚಾಗಲೆ. ಆ ಕಾರ್ಯಕ್ರಮ ಅಧ್ಯಕ್ಷತೆಯನ್ನು ಡಾ. ವಾಮನ ಬೇಂದ್ರೆ ವಹಿಸಿದ್ದರು. ಅವರ ಜೊತೆ ಕಾರ್ಯಕ್ರಮಕ್ಕೆ ಅವರ ಪತ್ನಿ ಶ್ರೀಮತಿ ವಿಶಾಖ ಬೇಂದ್ರೆ, ಮಗಳು ಕು॥ ವೈಖರಿ ಬೇಂದ್ರೆ, ಶ್ರೀ ಪಂಚನದೀಕರ (ದ.ರಾ. ಬೇಂದ್ರೆ ಬೀಗರು) ಬಂದಿದ್ದರು. ಶ್ರೀ ಚಂದ್ರಕಾಂತ ಕುಸನೂರ ಮುಖ್ಯ ಅತಿಥಿಗಳಾಗಿದ್ದರು.

ನನಗೆ ಬೆಳಗಾವಿಯಿಂದ ಕೋಲಾರಕ್ಕೆ ವರ್ಗವಾಗಿ, ಅನಂತರ ಕೆ.ಜಿ.ಎಫ್‌ನ ಕಛೇರಿಗೆ ವರ್ಗವಾಯಿತು. ಕೆ.ಜಿ.ಎಫ್‌ನಲ್ಲಿ ಶ್ರೀನಂಗಲಿ ಶಿವಾನಂದಂ ಪ್ರೊ. ಬಿ.ಎಂ. ಆಂಜನೇಯರೆಡ್ಡಿ ಅವರ ಸಹಾಯದಿಂದ ಸರ್ಕಾರಿ ಪ್ರೌಢಶಾಲೆ ದೊಡ್ಡ ಪೊನ್ನಾಂಡಹಳ್ಳಿಯಲ್ಲಿ 29-8-1992 ರಂದು ಬೇಂದ್ರೆ ಕವನ ಗಾಯನ ಸ್ಪರ್ಧೆಯನ್ನು ಏರ್ಪಡಿಸಿದೆನು. ಆ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಬರಬೇಕೆಂದು ಗುರು ವಾಮನ ಬೇಂದ್ರೆಯವರನ್ನು ಕೇಳಿಕೊಂಡೆನು.

ವಾಮನ ಬೇಂದ್ರೆಯವರು ಬಂದು ಆ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ಅವರು ಆ ಊರನ್ನು ಸುತ್ತಾಡಿಬಂದು ಆ ಊರಿನಲ್ಲಿ ಮರಾಠಿಗರಿದ್ದು ವಿಠ್ಠಲನ ದೇವಾಲಯವಿದೆ ಎಂದು ಹೇಳಿದರು. ಪೊನ್ನ ಅಂದರೆ ಹೊನ್ನು. ಅಂಡ ಎಂದರೆ ಮರಾಠಿಯಲ್ಲಿ ಮೊಟ್ಟೆ. ದೊಡ್ಡ ಕನ್ನಡ ಪದ. ಇದು ಕನ್ನಡ ಮರಾಠಿ ಬಾಂಧವ್ಯದ ನೆಲೆ. ಹಾಗಾಗಿ ನೀವು ಇಲ್ಲಿ ಬೇಂದ್ರೆ ಚಿಂತನೆ ನಡೆಸಿರುವಿರಿ ಎಂದು ಹೇಳಿ ಸಂತೋಷಪಟ್ಟರು. ಅವರು ನಿಧಾನವಾಗಿ ಜನರೊಡನೆ ಬೆರೆತು ಒಂದಾಗಿ ಅಲ್ಲಿನ ಜನರ ನಡೆನುಡಿ, ಜೀವನ ರೀತಿ ತಿಳಿದುಕೊಳ್ಳುವ ಬಗೆ ಕಂಡು ನನಗೆ ಅವರ ಬಗ್ಗೆ ಕುತೂಹಲ ಉಂಟಾಯಿತು.

ಬೇಂದ್ರೆ ಕಾರ್ಯಕ್ರಮದ ಹಿಂದಿನ ದಿನ ನಾನು ನನ್ನ ಪತ್ನಿಯು ವಾಮನ ಬೇಂದ್ರೆ ಯವರನ್ನು ಕೆ.ಜಿ.ಎಫ್‌ನ ಆಳ ಚಿನ್ನದ ಗಣಿಗಳನ್ನು ನೋಡಲು ಕರೆದುಕೊಂಡು ಹೋಗಿದ್ದೆವು. ಲಿಫ್ಟಿನಲ್ಲಿ ಸಾವಿರಾರು ಅಡಿ ಆಳಕ್ಕೆ ಇಳಿದ ಅವರು ಕಾರ್ಮಿಕರ ಧೈರ್ಯ, ಕಾರ್ಯಕುಶಲತೆ ನೋಡಿ ಆಶ್ಚರ್ಯಪಟ್ಟರು.

ಕಾರ್ಯಕ್ರರ್ಮದ ಮುಂದಿನ ದಿನ ಅವರು ಬೆಂಗಳೂರಿನಲ್ಲಿರುವ ಶ್ರೀ ರಂ.ಶ್ರೀ ಮುಗಳಿ ಅವರನ್ನು ಕಂಡು ನಂತರ 'ಕನ್ನಡದ ಆಸ್ತಿ ಮಾಸ್ತಿ'ಯವರ ಮನೆಗೆ ಹೋಗಬೇಕೆಂಬ ಅಭಿಲಾಷೆ ವ್ಯಕ್ತಪಡಿಸಿದರು. ನಾನು ಅವರ ಜೊತೆಗೂಡಿಹೋದೆನು. ರಂ.ಶ್ರೀ.ಮುಗಳಿಯವರು ಕನ್ನಡ ಸಾಹಿತ್ಯ ಚರಿತ್ರೆ ಬರೆದು, ಕವಿಗಳಾಗಿ ಸೌಜನ್ಯ ಶೀಲರಾದ ಹಿರಿಯ ವಿದ್ವಾಂಸರು. ಬೇಂದ್ರೆಯವರ ಗೆಳೆಯರ ಬಳಗದವರು. ಅವರಿದ್ದದ್ದು ರಾಜಾಜಿನಗರದಲ್ಲಿ. ವಾಮನ ಬೇಂದ್ರೆಯನ್ನು ಕಂಡು ಹಿಂದಿನದನ್ನು ನೆನೆದು ಕೊಂಡು ಉತ್ಸಾಹದಿಂದ ಮಾತಾಡಿದರು. ವಾಮನ ಬೇಂದ್ರೆಯವರು ನನ್ನ ಬೇಂದ್ರೆ ಕಾವ್ಯಾಸಕ್ತಿ

ತಿಳಿಸಿ ಪರಿಚಯಿಸಿದರು. ಅವರ ಜೊತೆ ಮಾತಾಡಿ ಆಶೀರ್ವಾದ ಪಡೆದುದು ನನ್ನ ಭಾಗ್ಯ.

ಅಲ್ಲಿಂದ ಬಸವನಗುಡಿಯಲ್ಲಿರುವ ಮಾಸ್ತಿಯವರ ಮನೆಗೆ ಹೊರಟೆವು. ಮಾಸ್ತಿ ಮನೆ ತಲುಪುವಾಗ್ಗೆ ರಾತ್ರಿ ಏಳುಗಂಟೆಯಾಗಿತ್ತು. ಗೇಟ್ ಬಳಿನಿಂತ ವಾಮನ ಬೇಂದ್ರೆಯವರು ಗೇಟ್ ಚಿಲಕ ಬಡಿದು ಆಡಿಸುತ್ತ ಶಬ್ದ ಮಾಡಿದರು. ಮನೆಯಿಂದ ಹಿರಿಯ ಹೆಣ್ಣು ಜೀವ 'ಯಾರು'? ಎಂದು ಪ್ರಶ್ನೆ ಮಾಡಿತು. ಇವರು 'ನಾನು ಬಾಳ' ಎಂದರು.

ಮಾಸ್ತಿಯವರ ಮಗಳು ತಾಯಿ ಇಂದಿರ ಸ್ವಲ್ಪ ಆತುರವಾಗಿ ಉತ್ಸಾಹದಲ್ಲಿ ಹೆಜ್ಜೆಹಾಕುತ್ತ ಬಂದು 'ಏನೊ ಬಾಳಾ, ಮೊದಲೆಲ್ಲ ಸ್ಕೂಲಿಗೆ ರಜಾ ಬಂದಾಗ ಇಲ್ಲೇ ಇರ್ತಿದ್ದಿ, ಈಗ ಬರೋದೆಯಿಲ್ಲ'. ಎಂದು ಆತ್ಮೀಯವಾಗಿ ಮಾತಾಡಿಸಿ ಕೈಹಿಡಿದು ಎಳೆದುಕೊಂಡು ಹೋದರು. ಅವರ ಪತಿ ಶೇಷಾದ್ರಿಯವರು ಕತ್ತೆತ್ತಿ ನೋಡಿ 'ವಾಮನ ಬೇಂದ್ರೇನಾ. ಬನ್ನಿ, ಬನ್ನಿ' ಎಂದು ಸ್ವಾಗತಿಸಿದರು.

ಅಕ್ಕ ತಮ್ಮನ ಸಲಿಗೆಯ ಮಾತುಕತೆ, ಹಿಂದಿನ ನೆನಪಿನ ಸುಖ, ಹುಮ್ಮಸ್ಸಿನ ನಗೆ ಕಾಣುತ್ತ ನಾನು ಮೂಕನಾದೆ.

ವಾಮನ ಬೇಂದ್ರೆಯವರು ನನ್ನನ್ನು ಅವರಿಗೆ ಪರಿಚಯಿಸಿದರು. ಆ ಪೂಜ್ಯದಂಪತಿಗಳು 'ಬೇಂದ್ರೆಕಾವ್ಯದ ಕೆಲಸ ಚೆನ್ನಾಗಿ ಮಾಡಿ. ಅದು ಆಗ ಬೇಕಾದ್ದು' ಎಂದು ಆಶೀರ್ವದಿಸಿದರು.

ಮಾಸ್ತಿಯವರ ಮನೆಯಿಂದ ಹಿಂದಿರುಗಿ ಬರುವಾಗ ವಾಮನ ಬೇಂದ್ರೆ ಯವರು ತಮ್ಮ ತಂದೆ ದ.ರಾ. ಬೇಂದ್ರೆಯವರಿಗೆ ಮಾಸ್ತಿಯವರು ಅಣ್ಣನಂತಿದ್ದರು ಎಂದು ಹೇಳಿದರು.

ತಮ್ಮ ತಂದೆಗೆ ಸ್ಥಿರ ನೌಕರಿಯಿಲ್ಲದಿರುವಾಗ (1936ರಿಂದ 1944) ಮಾಸ್ತಿಯವರು 'ಜೀವನ' ಪತ್ರಿಕೆಗೆ ಸಂಪಾದಕನನ್ನಾಗಿ ನೇಮಿಸಿಕೊಂಡು ಆಸರೆಯಾದ ವಿಷಯ ತಿಳಿಸಿದರು.

ಶಾಂತರಾತ್ರಿಯಲ್ಲಿ, ಮಿನುಗುವ ನಕ್ಷತ್ರಗಳೇ ಸಾಕ್ಷಿಯೆಂಬಂತೆ ಮಧುರ ಜೀವಿಗಳ ಅಮೂಲ್ಯ ಸಂಬಂಧಗಳ ತಿಳಿವಿಗೆ ಒಳಗಾದ ನಾನು ವಾಮನ ಬೇಂದ್ರೆಯವರ ಪ್ರತಿನುಡಿಗೆ ಮೈಯೆಲ್ಲ ಕಿವಿಯಾಗಿನಿಂತಿದ್ದೆ. ಹಲವು ವರ್ಷಗಳ ನಂತರ ಮಾಸ್ತಿಯವರ ಮನೆಗೆ ಹೋಗಿಬಂದ ಸಮಾಧಾನದಲ್ಲಿ ಅವರು ತುಂಬಾ ಖಾಸಗಿಯಾದ ಒಂದು ವಿಷಯ ನನಗೆ ತಿಳಿಸಿದರು. ಅದು ಮಾನವೀಯ ಸಂಬಂಧದ ಕನ್ನಡ ಸಾಹಿತ್ಯ ಸಂಸ್ಕೃತಿಯ ಮೇರು ವ್ಯಕ್ತಿಗಳ ಅತಿ ಮೌಲಿಕ ಸಂಗತಿಯಾಗಿರುವುದರಿಂದ, ವಾಮನ ಬೇಂದ್ರೆಯವರ ಕ್ಷಮೆ ಕೇಳಿ ಅದನ್ನು ಈಗ ಹೇಳುತ್ತಿರುವೆನು.

ಮಾಸ್ತಿಯವರು ದ.ರಾ. ಬೇಂದ್ರೆಯವರಿಗೆ ಅವರ ಕುಟುಂಬ ನಿರ್ವಹಣೆಗೆ ಪ್ರತಿ ತಿಂಗಳು ಹಣ ಕಳುಹಿಸುತ್ತಿದ್ದರು. ಬೇಂದ್ರೆಯವರಿಗೆ 1944ರಲ್ಲಿ ಸೊಲ್ಲಾಪುರದ ಡಿ.ಎ.ವಿ.

ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕ ಹುದ್ದೆ ದೊರಕಿತು. ಸ್ಥಿರನೌಕರಿ ದೊರಕಿ ಹಲವು ವರ್ಷಗಳಾದ ಮೇಲೆ ಒಮ್ಮೆ ಬೇಂದ್ರೆಯವರು ಬೆಂಗಳೂರಿಗೆ ಬಂದು ಅಣ್ಣ ಮಾಸ್ತಿಯವರನ್ನು ಕಂಡರು. ಮಾತುಕತೆ ಆದಮೇಲೆ ಒಂದು ಹಣದ ಗಂಟನ್ನು ಮಾಸ್ತಿಯವರಿಗೆ ನೀಡಿ ಹೇಳಿದರು.

'ಇದು ನೀವು ನನಗೆ ಕಷ್ಟದ ದಿನಗಳಲ್ಲಿ ಪ್ರತಿ ತಿಂಗಳು ನೀಡಿದ ಹಣ. ಸ್ವೀಕರಿಸಿ.'

'ಅದು ನಿನಗೆ ಕೊಟ್ಟಿದ್ದು, ಅದು ನಿನಗೆ ಸೇರಿದ್ದು, ನೀನು ತೆಗೆದುಕೊಂಡು ಹೋಗು'.

ಆಗ ಹಣ ಹಿಂದಕ್ಕೆ ತೆಗೆದುಕೊಂಡು ಹೋಗಲು ಒಪ್ಪದ ತಮ್ಮ, ಸ್ವೀಕರಿಸದ ಅಣ್ಣನ ನಡುವೆ ಮೌನದಲ್ಲಿ ಸ್ವಲ್ಪ ಹೊತ್ತು ಸರಿದು ಹೋಯಿತು. ಕೊನೆಗೆ ಮೌನ ಮುರಿದ ಅಣ್ಣ ಮಾಸ್ತಿ,

'ಆಯಿತು, ಆ ಹಣ ಇಟ್ಟು ಹೋಗು' ಎಂದರು. ತಮ್ಮ ಬೇಂದ್ರೆಗೆ ಮನಸ್ಸು ಹಗುರವಾಯಿತು.

ವರ್ಷಗಳು ಸರಿದುಹೋದವು. ದ.ರಾ. ಬೇಂದ್ರೆಯವರ ಮಗಳು 'ಮಂಗಳಾ'ಳ ಮದುವೆಯ ಕರೆಯೋಲೆ ಮಾಸ್ತಿಯವರಿಗೆ ತಲುಪಿತು.

ಮಾಸ್ತಿ ತಮ್ಮ ಬೇಂದ್ರೆಯ ಮಗಳ ಮದುವೆಗೆ ಸಂಭ್ರಮದಿಂದ ಹೋಗಿ ಸಡಗರದಿಂದ ಓಡಾಡಿದರು. ವಧು 'ಮಂಗಳಾ'ಳಿಗೆ ಬೇಂದ್ರೆ ಕೊಟ್ಟಿದ್ದ ಆ ಇಡೀ ಹಣದ ಗಂಟನ್ನು ಹಾಗೇ ತಂದು ಉಡುಗೊರೆಯಾಗಿ ನೀಡಿದರು !

* * *

ನನಗೆ ಕೆ.ಜಿ.ಎಫ್. ನಿಂದ ಮೈಸೂರಿಗೆ ವರ್ಗವಾಯಿತು. ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಿ ಗುರು ಡಾ.ಕೆ. ಅನಂತರಾಮು ಅವರ ಮಾರ್ಗದರ್ಶನದಲ್ಲಿ ಹಲವಾರು ಬೇಂದ್ರೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡೆನು. 22-8-1994 ರಂದು ಮೈಸೂರು ತಾ. ಜಯಪುರದಲ್ಲಿ ಶ್ರೀ ರಾಘವೇಂದ್ರ ವಿದ್ಯಾಪೀಠ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಎಸ್. ಸುಧೀಂದ್ರ ಅವರು 'ವರಕವಿ ದ.ರಾ. ಬೇಂದ್ರೆ ವೇದಿಕೆ' ಪ್ರಾರಂಭಿಸಿದರು. ಅದರ ಉದ್ಘಾಟನೆಗೆ ವಾಮನ ಬೇಂದ್ರೆಯವರು ಮತ್ತು ಪ್ರೊ. ಕೆ.ಎಸ್. ಶರ್ಮ ಬಂದಿದ್ದರು. ಕವಿಪುತ್ರ ವಾಮನಬೇಂದ್ರೆಯವರನ್ನು ಕಂಡು ಆ ಶಾಲೆಯ ಶಿಕ್ಷಕರು ಮಕ್ಕಳು ಊರಿನ ಜನ ತುಂಬಾ ಸಂತೋಷಪಟ್ಟರು.

12-8-1995 ರಂದು ನಾನು ಸಿ.ಎಫ್.ಟಿ.ಆರ್.ಐ ನ ಕನ್ನಡ ಸಹೃದಯ ಬಳಗದ ಕಾರ್ಯದರ್ಶಿ ರಂಗಧಾಮಯ್ಯನವರ ಜೊತೆಗೂಡಿ ಬೇಂದ್ರೆ ಶತಮಾನೋತ್ಸವ ಪ್ರಯುಕ್ತ 'ಶ್ರಾವಣ ವೈಭವ' ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೆನು. ಆ ಕಾರ್ಯಕ್ರಮಕ್ಕೆ ಕವಿಪುತ್ರರಾದ

ಶ್ರೀ ಪಾಂಡುರಂಗ ಬೇಂದ್ರೆ, ಡಾ. ವಾಮನಬೇಂದ್ರೆ, ಶ್ರೀಮತಿ ವಿಶಾಖಾ ವಾಮನ ಬೇಂದ್ರೆ, ಪ್ರೊ. ಕೆ.ಎಸ್. ಶರ್ಮ ಬಂದಿದ್ದರು. ಅಂದು ಬೇಂದ್ರೆಯವರ ವಿವಿಧ ಶ್ರಾವಣಗೀತೆಗಳನ್ನು ಬೆಳಿಗ್ಗೆ 10.30 ರಿಂದ ಸಂಜೆ 4.30ರತನಕ 6 ರಿಂದ 60 ವಯಸ್ಸಿನವರೆಗಿನ 110 ಜನ ಮಕ್ಕಳು, ಹಿರಿಯರು, ದಂಪತಿಗಳು ಹಾಡಿದರು. ಅವರೆಲ್ಲರಿಗೂ ಬೇಂದ್ರೆ ವಿರಚಿತ ಕವನ ಸಂಕಲನಗಳನ್ನು ಬಹುಮಾನವಾಗಿ ನೀಡಲಾಯಿತು. ಸಂಜೆ ಬಹುಮಾನ ವಿತರಣೆ. ಕಂಸಾಳೆಯಲ್ಲಿ ಬೇಂದ್ರೆ ಕಾವ್ಯ ಪ್ರಯೋಗ ನಡೆಯಿತು. ಇಡೀ ಬೇಂದ್ರೆ ಕುಟುಂಬ ನಮ್ಮ ಮನೆಗೆ ಬಂದಿದ್ದು ನನ್ನ ಕುಟುಂಬಕ್ಕೊಂದು ಹಬ್ಬದ ವಾತಾವರಣವನ್ನುಂಟುಮಾಡಿತು.

* * *

ಶಾಲಾ ಕಾಲೇಜಿನ ವಿದ್ಯಾರ್ಥಿಗಳಿಗೆ ಬೇಂದ್ರೆ ಕಾವ್ಯ ತಲುಪಿಸಿ ಅವರಿಗೆ ಬೇಂದ್ರೆ ಕಾವ್ಯಾಸಕ್ತಿ ಮೂಡಿಸುವ ಕೆಲಸದ ಜೊತೆಗೆ ಬೇಂದ್ರೆ ಸಾಹಿತ್ಯವನ್ನು ಚೆನ್ನಾಗಿ ತಿಳಿಯಬೇಕೆಂಬ ಮನಸ್ಸಾಯಿತು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ 'ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ– ಒಂದು ಅಧ್ಯಯನ' ವಿಷಯವನ್ನು ಪಿ.ಎಚ್.ಡಿ.ಗಾಗಿ ರಿಜಿಸ್ಟರ್ ಮಾಡಿಸಿದೆ. ಬೇಂದ್ರೆ ಕಾವ್ಯ ಭಾಷೆ, ರೂಪಕ, ಪ್ರತಿಮೆಗಳು ಧಾರವಾಡ ನೆಲದ್ದು. ಧಾರವಾಡದ ಜನರ ಆಡುನುಡಿ, ಸಾಂಸ್ಕೃತಿಕ ಸಂಪತ್ತು, ಬಾಳಿನ ಆನಂದಲಹರಿ, ಆ ನೆಲದ ಪ್ರಕೃತಿಯ ಸೊಬಗು, ಪರಿಸರದ ಬೆಡಗು. ಅದನ್ನು ತಿಳಿದಾಗ ಬೇಂದ್ರೆ ಕಾವ್ಯವನ್ನು ಸ್ಪಷ್ಟವಾಗಿ ಅರಿಯಲು ಸಾಧ್ಯ ಎನಿಸಿತು. ಧಾರವಾಡಕ್ಕೆ 1998 ರಲ್ಲಿ ವರ್ಗಾವಣೆ ಮಾಡಿಸಿಕೊಂಡೆ.

ಕವಿ ಪುತ್ರರಾದ ಪಾಂಡುರಂಗ ಬೇಂದ್ರೆ ಮತ್ತು ವಾಮನ ಬೇಂದ್ರೆ ಅವರು ಮನೆ ಹುಡುಕಿ ಕೊಟ್ಟರು. ಕಲ್ಯಾಣನಗರದ ಮನೆ ಹೊಸದಾಗಿ ಕಟ್ಟಿದ್ದು ಇನ್ನೂ ಸ್ವಲ್ಪ ಕೆಲಸ ಬಾಕಿಯಿತ್ತು. ನಮ್ಮ ಮನೆಯ ಸಾಮಾನುಗಳನ್ನು ಆ ಮನೆಯ ಒಂದು ಮೂಲೆಯಲ್ಲಿಟ್ಟೆವು. ನಾನು ನನ್ನ ಹೆಂಡತಿ ಮೂರು ಮಕ್ಕಳು ಬೇಂದ್ರೆಯವರ ಮನೆಯಲ್ಲಿ ನಾಲ್ಕು ದಿನ ಉಳಿದೆವು ! ದೂರದ ಬಂಧುವನ್ನು ನೋಡಿಕೊಂಡಂತೆ ಕವಿಪುತ್ರರು, ತಾಯಿ ಪದ್ಮಾ ಪಾಂಡುರಂಗ ಬೇಂದ್ರೆ, ಸಹೋದರಿ ಪುನರ್ವಸು, ವೈಖರಿ ಅವರು ನಮ್ಮನ್ನು ನೋಡಿಕೊಂಡರು.

ಬೇಂದ್ರೆ ಕುಟುಂಬದ ವಾತ್ಸಲ್ಯ ಮತ್ತು ಸಾಧನಕೇರಿ, ಮನೆಯ ಎದುರಿನ ಸಾಧನಕರೆ (ಧಾರವಾಡದಲ್ಲಿ ಕೆರೆಯನ್ನು 'ಕೇರಿ' ಎನ್ನುವರು) ಯ ಪ್ರಕೃತಿ ವೈಭವ ಸವಿದು ನಾನು ನನ್ನ ಕುಟುಂಬ ಪುನೀತರಾದೆವು.

ಪಾಂಡುರಂಗ ಬೇಂದ್ರೆಯವರ ಬೆಳಗಿನ ಪೂಜೆ ಪ್ರಾರ್ಥನೆಯಲ್ಲಿ ಒಂದಾದ ನನ್ನ ಮಕ್ಕಳು ಇಂದೂ ಅದೇ ರೀತಿ ಪೂಜೆ ಧ್ಯಾನ ಮಾಡುವ ಸಂಸ್ಕಾರಕ್ಕೆ ಒಳಗಾಗಿದ್ದಾರೆ. ತಾಯಿ ಪದ್ಮಾ ಅವರಿಂದ ನನ್ನ ಹೆಂಡತಿ ಜೋಳದ ರೊಟ್ಟಿ ತಟ್ಟುವುದು, ಮಟಕಿಕಾಳು ಸಾರು, ಎಣ್ಣಗಾಯಿಪಲ್ಯ ಮಾಡುವುದನ್ನು ಕಲಿತಳು.

ವರಕವಿ ಬೇಂದ್ರೆಯವರು ಗಾಂಧಿ ಚಿಂತನೆಯ ಜೀವಾಳವಾಗಿ ಬದುಕಿದವರು. ವಿಶ್ವದೆಲ್ಲ ಜನರ ಭ್ರಾತೃತ್ವವನ್ನು ಆಶಿಸಿ ವಿಶ್ವಚಿಂತನೆಯ ಕಾವ್ಯ ನೀಡಿದರು. 'ಶಾಂತೀರಸವೇ ಪ್ರೀತಿಯಿಂದ ಮೈದೋರಿತಣ್ಣಾ ! ಇದು ಬರಿ ಬೆಳಗಲ್ಲೊ ಅಣ್ಣಾ' ಎಂದು ಸಾರಿ ಆ ನೇಸರನ ಬೆಳಕಿನಂತೆ ಎಲ್ಲರನ್ನೂ ಅಪ್ಪಿಕೊಂಡು ಆನಂದಿಸಿದವರು. ಅವರ ಕುಟುಂಬವೂ ಅದೇ ರೀತಿ ಜಾತ್ಯತೀತ ಭಾವದ ಸರಳ ಸಜ್ಜನ ಸೆಲೆ. ಆ ಸವಿ ನೀರು, ಬೆಳಕು, ಗಾಳಿಯಲ್ಲಿ ನಾನು ನನ್ನ ಕುಟುಂಬ ಸುಖಿಯಾಗಿದ್ದೇವೆ.

ಬೇಂದ್ರೆಯವರ ಮನೆಯಲ್ಲಿ ಇಲಿಗಳು ಇದ್ದರೂ ಪುಸ್ತಕಗಳನ್ನು ಕಡಿಯುತ್ತಿರಲಿಲ್ಲ ಎಂಬುದನ್ನು ಕಂಡಾಗ ನನಗೂ ನನ್ನ ಮಕ್ಕಳಿಗೂ ಒಂದು ಅಚ್ಚರಿಯಾಯಿತು !

'ಹಬಸಿ ಜನರು ದಾಳಿಮಾಡಿದಾಗ ಬೇಂದ್ರೆ ಮನೆತನದ ಪೂರ್ವಜರು ನಾಸಿಕ (ತ್ರ್ಯಂಬಕೇಶ್ವರ) ಕ್ಕೆ ಬಂದರು. ಅಲ್ಲಿ ಗಣಪತಿಯ ಉಪಾಸನೆಯನ್ನು ಪ್ರಾರಂಭಿಸಿದಾಗ 'ನೀವು ಕರ್ನಾಟಕಕ್ಕೆ ಹೋಗಿರಿ, ಅಲ್ಲಿ ನಿಮ್ಮ ಮನೆತನದ ಉನ್ನತಿಯಾದೀತು' ಎಂಬ ಸ್ವಪ್ನ ದೃಷ್ಟಾಂತ ವಾಯಿತು. ಆ ದೃಷ್ಟಾಂತದ ಪ್ರಕಾರ ಬೇಂದ್ರೆ ಮನೆತನವು ಸಾಂಗಲಿಯ ಸಮೀಪದ ತಾಸಗಾಂವಕ್ಕೆ ಬಂದಿತು. ಶಿರಹಟ್ಟಿಯ ಲಾಗೂ ಮನೆತನದವರ ಪುರೋಹಿತರಾಗಿ ರಾಮಭಟ್ಟ ಬಚ್ಚಂಭಟ್ಟ ಬೇಂದ್ರೆ (ಎಂಟನೆಯ ತಲೆಮಾರು) ಶಿರಹಟ್ಟಿಗೆ ಬಂದರು'. [ವಾಮನ ಬೇಂದ್ರೆ, ಶ್ರೀ ಬೇಂದ್ರೆಯವರ ಜೀವನ ಪರಿಚಯ, ಸಮಾಜ ಪುಸ್ತಕಾಲಯ, ಧಾರವಾಡ, 1983, ಪು-3] ಎಂದು ವಾಮನ ಬೇಂದ್ರೆಯವರು ಶ್ರೀ ಬೇಂದ್ರೆಯವರ ಜೀವನ ಪರಿಚಯದಲ್ಲಿ ತಿಳಿಸಿದ್ದಾರೆ. ತಮ್ಮ ಹಿರಿಯರಂತೆ ದ.ರಾ. ಬೇಂದ್ರೆಯವರು ವಿನಾಯಕನ ಉಪಾಸಕರಾಗಿದ್ದರು.

ಜಯದೇವಾ, ಜಯದೇವಾ, ಶ್ರೀ ಗಣಪತಿರಾಯ
ಭಯಕಾರಕ, ಭಯಹಾರಕ, ಓಂಕಾರ ಕಾಯಾ ॥'

(ಉತ್ತರಾಯಣ : ಗಣಪತಿರಾಯ)

ಎಂಬುದು 'ಅಂಬಿಕಾತನಯದತ್ತ'ರ ಪ್ರಖ್ಯಾತವಾದ ಗಣಪತಿಯ ಪ್ರಾರ್ಥನೆ. ಅವರು 'ಓಂ ಔಮ್ ಗಣಪ', 'ಗಣಪತಿಸ್ತುತಿ' 'ನಿತ್ಯಶುಭಾ ನಿತ್ಯ ಮಂಗಳಾ' ಮುಂತಾದ 14 ಗಣಪತಿಯನ್ನು ಕುರಿತ ಕವನಗಳನ್ನು ರಚಿಸಿದ್ದಾರೆ. ಹೀಗಾಗಿ ಅವರ ಮನೆಯಲ್ಲಿ ಗಣಪನ ವಾಹನ ಮೂಷಿಕಗಳು ಪುಸ್ತಕಗಳನ್ನು ಕಡಿಯದೆ ಇರಬಹುದೇನೋ !

ವಾಮನ ಬೇಂದ್ರೆಯವರು ನನ್ನ ಮೂರು ಜನ ಮಕ್ಕಳಿಗೆ ಕೆ.ಇ.ಬೋರ್ಡ್ ಸ್ಕೂಲ್‌ನಲ್ಲಿ ಪ್ರವೇಶದೊರಕಿಸಿಕೊಟ್ಟರು. ನಾನು ಕಚೇರಿ ಕೆಲಸದ ಒತ್ತಡದಲ್ಲಿ ಮಕ್ಕಳನ್ನು ಶಾಲೆಗೆ ಸೇರಿಸಲು ಹೋಗದೆ ಇರುವಾಗ, ಕುಟುಂಬದ ಹಿರಿಯರಂತೆ ನನ್ನ ಮಕ್ಕಳನ್ನು ಕರೆದುಕೊಂಡು ಹೋಗಿ ತರಗತಿಗೆ ಪ್ರಥಮ ದಿನದ ಪ್ರವೇಶ ಮಾಡಿಸಿ ಬಂದರು. ನನ್ನ ಮಗ ಶ್ರೀಗಂಗ, ಇಬ್ಬರು ಹೆಣ್ಣು ಮಕ್ಕಳು ತೃಪ್ತಿ, ಶಾಂತಲಾರಿಗೆ ಅವರೆಂದರೆ ಅಪಾರವಾದ ಪ್ರೀತಿ, ಗೌರವ. ಅವರ ಪ್ರೋತ್ಸಾಹ, ಸಲಹೆ ಸೂಚನೆಗಳಿಂದ ನನ್ನ ಮಗ 1999 ರಲ್ಲಿ ಧಾರವಾಡದಲ್ಲಿ ನಡೆದ ರಾಜ್ಯಮಟ್ಟದ ಟೈಕಾಂಡೊ ಸ್ಪರ್ಧೆಯಲ್ಲಿ ಚಿನ್ನದ ಪದಕ

ಪಡೆದನು. ಮಗಳು ಶಾಂತಲಾ ಎಸ್.ಎಸ್.ಎಲ್.ಸಿಯಲ್ಲಿ ಗಣಿತದಲ್ಲಿ 100 ಕ್ಕೆ 100 ಅಂಕ ಪಡೆದಳು. ಹಿರಿಯ ಮಗಳು ತೃಪ್ತಿ ಕೆ.ಇ.ಜೋರ್ಡ್ ಪಿ.ಯು.ಕಾಲೇಜಿನಲ್ಲಿ ಪಿ.ಯು. 2ನೇ ವರ್ಷದಲ್ಲಿ ಕಾಲೇಜಿಗೆ ಪ್ರಥಮ ರ್‍ಯಾಂಕ್ ಬಂದಳು. ಅವರ ಸಲಹೆ ಮಾರ್ಗದರ್ಶನದಂತೆ ನಡೆದು ನನ್ನ ಕುಟುಂಬ ಇಂದು ಸುಖ ಸಂತೋಷದಲ್ಲಿದೆ.

ವಾಮನ ಬೇಂದ್ರೆಯವರು ನನ್ನ 'ಬೇಂದ್ರೆ ಯವರ ಸಾಹಿತ್ಯದಲ್ಲಿ ಸ್ತ್ರಿ ಒಂದು ಅಧ್ಯಯನ' ಎಂಬ ವಿಷಯದ ಪಿ.ಎಚ್.ಡಿ. ಅಧ್ಯಯನಕ್ಕೆ ಬೇಕಾದ ಎಲ್ಲ ಮಾರ್ಗದರ್ಶನವನ್ನು ನೀಡಿದರು. 16,000 ಪುಸ್ತಕಗಳ ಬೇಂದ್ರೆಯವರ ಬೃಹತ್ ಲೈಬ್ರರಿಯ ಪುಸ್ತಕಗಳನ್ನು ಅಧ್ಯಯನಮಾಡಲು ಅವಕಾಶ ಕೊಟ್ಟು, ಮನೆಗೆ ತೆಗೆದುಕೊಂಡು ಹೋಗಿ ಹಿಂತಿರುಗಿಸಲು ಅನುಮತಿ ನೀಡಿದರು. ನನಗೆ ಅರ್ಥವಾಗದ ಬೇಂದ್ರೆ ಕಾವ್ಯಗಳ ಸೂಕ್ಷ್ಮಾರ್ಥಗಳನ್ನು ತಿಳಿಹೇಳಿದರು. ಬೇಂದ್ರೆಯವರ ಜೀವನದ ಹಲವು ಸಂದರ್ಭಗಳನ್ನು ತಿಳಿಸುತ್ತ ಅದು ಕಾವ್ಯದಲ್ಲಿ ಪಲ್ಲವಿಸಿರುವ ಬಗೆಯನ್ನು ವಿವರಿಸಿ ನನ್ನ ಬರವಣಿಗೆಗೆ ಒಂದು ಖಚಿತತೆ ಬರುವಂತೆ ಮಾಡಿದರು. ನನಗೆ ಅರ್ಥವಾಗದ 'ಸಾಬಾಣ', 'ಸಣ್ಣ' ಮುಂತಾದ ಧಾರವಾಡದ ದೇಸಿಪದಗಳ ಅರ್ಥ 'ಸಾಬೂನು', 'ಶ್ರಾವಣ' ಎಂದು ಹೇಳಿಕೊಟ್ಟು ನಾನು ಬೇಂದ್ರೆ ಕಾವ್ಯವನ್ನು ಸರಿಯಾಗಿ ಗ್ರಹಿಸುವಂತೆ ಮಾಡಿದರು. ವರಕವಿ ಬೇಂದ್ರೆಯವರ ಜೀವನ ಮತ್ತು ಕಾವ್ಯವನ್ನು ನಾನು ಸರಿಯಾಗಿ ಸಮಗ್ರವಾಗಿ ತಿಳಿಯಲು ಮಾರ್ಗದರ್ಶನ ಮಾಡಿದ ಗುರುಗಳು ಅವರು.

* * *

1999 ರಲ್ಲಿ ನಾವು ಕಲ್ಯಾಣ ನಗರದಲ್ಲಿ ಮೊದಲು ಇದ್ದಮನೆ ಖಾಲಿ ಮಾಡಿ ಭವಾನಿ ಅಪಾರ್ಟಮೆಂಟ್‌ನಲ್ಲಿ ಬಾಡಿಗೆಗೆ ಇದ್ದೆವು. (ಆ ಮನೆಯನ್ನು ಕೂಡಿಸಿದವರೂ ವಾಮನ ಬೇಂದ್ರೆಯವರೆ.) ಒಮ್ಮೆ ಮನೆಗೆ ಬಂದ ವಾಮನ ಬೇಂದ್ರೆಯವರು ಸ್ವಲ್ಪ ಆತುರದಲ್ಲಿದ್ದರು. ಅದನ್ನು ಕಂಡ ನಾನು ಕೇಳಿದೆ, 'ಏಕೆ ಸಾರ್ ಅವಸರ, ಗಡಿಬಿಡಿಯಿರುವಂತಿದೆ'

'ಏನೂ ಇಲ್ಲ, ಪಕ್ಕದ ಬನಶಂಕರಿ ಅಪಾರ್ಟಮೆಂಟ್‌ಗೆ ಹೋಗಿಬರಬೇಕು.'

'ಅಲ್ಲಿಗೆ ಏಕೆ?'

'ಆ ಅಪಾರ್ಟಮೆಂಟ್‌ನಲ್ಲಿ ನಾರಾಯಣ ಸಂಗಮ ಅವರ ಮಗಳಿದ್ದಾರೆ. ಒಂದು ಮಾಸಪತ್ರಿಕೆ (ತುಷಾರ ಇರಬೇಕು)ಯಲ್ಲಿ ರವೀಂದ್ರನಾಥ್ ಠಾಕೂರ್‌ರವರ ಕವನ ಪ್ರಕಟವಾಗಿದೆ. ಅವರು ರೂ 150/– ಕಳುಹಿಸಿದ್ದಾರೆ. ಬೇಂದ್ರೆ ಮತ್ತು ನಾರಾಯಣ ಸಂಗಮ ಸೇರಿ ಠಾಕೂರರ ಕವನಗಳ ಅನುವಾದ ಮಾಡಿದ್ದಾರೆ. ಸಂಗಮರ ಪಾಲು ರೂ. 75/– ಅದು ಅವರ ಮಗಳಿಗೆ ಕೂಡಬೇಕು'.

ಎಂದು ಹೇಳಿ ದಡದಡ ಹೊರಟುಹೋದರು.

ವಾಮನ ಬೇಂದ್ರೆಯವರು ತಮ್ಮ ವಿಳಾಸಕ್ಕೆ ಪತ್ರಿಕೆಯವರು ಕಳುಹಿಸಿದ ಹಣವನ್ನು

– ರವೀಂದ್ರರ ಕಾವ್ಯದ ಅನುವಾದದಲ್ಲಿ ಬೇಂದ್ರೆಯವರೊಡನೆ ಪಾಲ್ಗೊಂಡಿದ್ದ ನಾರಾಯಣ ಸಂಗಮರನ್ನು ನೆನೆದು ಅವರಪಾಲು ಅವರ ಮಗಳಿಗೆ ಸಲ್ಲಿಸಿದರು. 'ಗೆಳೆಯರ ಬಳಗ'ದ ಸತ್ಯ ಮತ್ತು ಪಾರದರ್ಶಕ ನಡೆಯ ಮುಂದುವರಿದ ಕೊಂಡಿಯಾಗಿ ನನ್ನ ಗುರು ನನಗೆ ಕಂಡರು !

* * *

ಧಾರವಾಡದ ತಾಯಿ ದುರ್ಗೆಯ ಆರಾಧಕರಾದ ಬೇಂದ್ರೆಯವರು ಸದಾ ಆ ತಾಯಿಯ ಧ್ಯಾನದಲ್ಲಿರುತ್ತಿದ್ದರು. ಅವರು ಧಾರವಾಡ ಬಿಟ್ಟು ಬೇರೆ ಊರಿಗೆ ಹೋಗುವಾಗ 'ನಾವು ಬರ್ತೇವಿನ್ನ ನೆನಪಿರಲಿ ತಾಯಿ । ನಂ ನಮಸ್ಕಾರ ನಿಮಗಃ ಕಾಯ್ದಿರಿ ಕೂಸಿನ್ಹಾಂಗ ನಮಗ' ಎಂದು ಲಾವಣಿ ಧಾಟಿಯಲ್ಲಿ ಹಾಡಿದ್ದಾರೆ. ಧಾರವಾಡವನ್ನು ಕಾಪಾಡುವ ತಾಯಿ ದುರ್ಗೆ ತನ್ನನ್ನು ಕಾಪಾಡುವಳು ಎಂಬ ಅಚಲ ನಂಬಿಕೆಯಲ್ಲಿ ಹೀಗೆ ಶರಣು ಹೋಗಿದ್ದಾರೆ.

'ಧಾರವಾಡದ ತಾಯೇ । ನನಗಾ । ಧಾರ ನಿನ್ನದಲ್ಲದಿಲ್ಲ
ಭಾರ ನಿನ್ನ ಮೇಲೆ ಇರಲು । ಯಾರಿಗಾರು ಎಂಬರೇನೆ ?'

ಬೇಂದ್ರೆಯವರು ಧಾರವಾಡದ ಹೊರಗೆ ಇದ್ದು ದುರ್ಗಾಮಾತೆಯ ಧ್ಯಾನದಲ್ಲಿದ್ದಾಗ 'ನನ್ನ ತಾಯಿ ಸಿಂಹವಾಹಿನಿ. ಆಕೆಯ ವಾಹನ ಅಲ್ಲಿ ಇಲ್ಲವಲ್ಲ' ಎಂದುಕೊಂಡರಂತೆ. ಹಿಂದಿರುಗಿ ಬಂದು ದೇವಿದರ್ಶನ ಮಾಡುವಾಗ ಅವರಿಗೆ ಅಚ್ಚರಿ ಕಾದಿತ್ತು ! ದುರ್ಗಾಗುಡಿಯ ಬಾಗಿಲ ಎರಡೂಕಡೆ ಸಿಂಹಗಳು ವಿರಾಜಮಾನವಾಗಿದ್ದವು ! ರೇಗೆ ಸಾಹುಕಾರರಿಗೆ ಪ್ರೇರಣೆಯಾಗಿ ಅವರು ಅದನ್ನು ಮಾಡಿಸಿಬಿಟ್ಟಿದ್ದರು !

(ಇದನ್ನು ವಾಮನ ಬೇಂದ್ರೆ ಮತ್ತು ರೇಗೆ ಕುಟುಂಬದ ನನ್ನ ಸ್ನೇಹಿತರು ಹೇಳಿದರು.)

ನನ್ನ ಹೆಂಡತಿ ದುರ್ಗಾ ದೇವಿಯ ಭಕ್ತಳು. ಧಾರವಾಡದಲ್ಲಿ ಇದ್ದಾಗ ವಿಳೆದೆಲೆ ಅಲಂಕಾರ ಮಾಡಿಸಿ ಭಕ್ತಿಯಲ್ಲಿ ಮೀಯುತ್ತಿದ್ದಳು.

* * *

ನನಗೆ ಜೂನ್ 2000 ದಲ್ಲಿ ಬೀದರಕ್ಕೆ ವರ್ಗವಾಯಿತು. ನನಗೆ ಬೇಂದ್ರೆಯವರು ಗೃಹಬಂಧನದಲ್ಲಿದ್ದ 'ಮುಗದ' ಗ್ರಾಮದಲ್ಲಿ ಬೇಂದ್ರೆ ಕಾರ್ಯಕ್ರಮ ನಡೆಸಲು ತುಂಬಾ ಆಸಕ್ತಿಯಿತ್ತು. ಆ ಗ್ರಾಮದಲ್ಲಿ ಕೆಲಸ ಮಾಡುವ ಓರ್ವ ವ್ಯಕ್ತಿಯ ಮುಖಾಂತರ ಪ್ರಯತ್ನಿಸಿದ್ದೆ. ಅದು ಫಲಕಾರಿಯಾಗಿರಲಿಲ್ಲ. ಬೀದರದಲ್ಲಿ ಕೆಲಸಕ್ಕೆ ಹಾಜರಾಗಿ ಅನಂತರ ರಜಹಾಕಿ ಧಾರವಾಡಕ್ಕೆ ಬಂದ ನಾನು ನನ್ನ ಹೆಂಡತಿ ಜೊತೆಗೂಡಿ ನಮ್ಮ ಮಾರುತಿ ಕಾರ್‌ನಲ್ಲಿ ಮುಗದಕ್ಕೆ ಹೋದೆ. ಅದು ಒಂದು ಸುಂದರ ಪ್ರಕೃತಿಯ ತಾಣ. ತುಂಬಿದ ಕರೆ ಏರಿಯ ಮೇಲೆ ಸಾಗಿ ಹೋದರೆ ಕೆರೆಯ ಇನ್ನೊಂದು ಬದಿಗೆ ಇರುವ ಹನುಮಂತಪ್ಪ

ಮಾವಳೇರ ಪ್ರೌಢಶಾಲೆ. ಆ ಹಸಿರುತುಂಬಿದ ನಿಸರ್ಗ ರಮಣೀಯ ಸ್ಥಳದಲ್ಲಿ ಓಡಾಡುವುದೇ ಒಂದು ಖುಷಿ. ಆ ಶಾಲೆಯ ಮುಖ್ಯೋಪಾಧ್ಯಾಯರನ್ನು ಕಂಡು 'ಬೇಂದ್ರೆ ಕವನ ಗಾಯನ ಸ್ಪರ್ಧೆ ಏರ್ಪಡಿಸಿ, ಈ ಶಾಲೆಯ ಮಕ್ಕಳಿಗೆ ಇಲ್ಲಿ ಬೇಂದ್ರೆ ದಿಗ್‌ಬಂಧನವಾಸ ಅನುಭವಿಸಿದ್ದರು ಎಂದು ಗೊತ್ತಾಗಲಿ' ಎಂದು ಕೇಳಿಕೊಂಡೆ. ಅವರು ಒಪ್ಪಿದರು. ಅವರಿಗೆ 'ವಿನಯ' ಕವನ ಸಂಕಲನ ಕೊಟ್ಟು ಅದರಲ್ಲಿರುವ ಕವನವನ್ನು ಕಂಠಪಾಟ ಮಾಡಿಸಲು ಹೇಳಿ ಹಿಂತಿರುಗಿದೆ.

ಆ ವಿಷಯವನ್ನು ಗುರು ವಾಮನ ಬೇಂದ್ರೆ ಅವರಿಗೆ ತಿಳಿಸಿ ಮುಗದದ ಬೇಂದ್ರೆ ಕವನ ಗಾಯನ ಸ್ಪರ್ಧೆ ಮತ್ತು ಬೇಂದ್ರೆ ನೆನಪು ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಬರಲು ಕೇಳಿಕೊಂಡೆ. ಅವರು ಒಪ್ಪಿದರು.

ತಾ. 19–8–2000 ದಂದು ವಾಮನ ಬೇಂದ್ರೆಯವರು, ನಾನು, ನನ್ನ ತಾಯಿ, ಹೆಂಡತಿ ಮಕ್ಕಳು ಕಾರಿನಲ್ಲಿ ಮುಗದ ಗ್ರಾಮಕ್ಕೆ ಹೋದೆವು. ಅಗ ವಾಮನಬೇಂದ್ರೆ ಯವರು ವರಕವಿ ದ.ರಾ. ಬೇಂದ್ರೆಯವರು ಮುಗದದಲ್ಲಿ ಕಳೆದ ಕಷ್ಟದ ದಿನಗಳನ್ನು ತಿಳಿಸುತ್ತ ಒಂದು ಕುತೂಹಲ ಭರಿತ ಆಶ್ಚರ್ಯದ ಘಟನೆಯನ್ನು ಹೇಳಿದರು.

'ನರಬಲಿ' ಕವನ ಬರೆದು ಬ್ರಿಟೀಷರ ಕಂಗಣ್ಣಿಗೆ ಗುರಿಯಾಗಿ ಬೆಳಗಾವಿಯ ಹಿಂಡಲಗಾ ಜೇಲಿನಲ್ಲಿದ್ದು, ಅನಂತರ ಗೃಹಬಂಧನಕ್ಕೊಳಗಾಗಿ ಮುಗದದಲ್ಲಿ ಇದ್ದರು. ಮುಗದದಲ್ಲಿ ಬೇಂದ್ರೆಯವರು ವಾಸವಾಗಿದ್ದ ಮನೆಯಲ್ಲಿ ಹಾವುಗಳಿದ್ದವಂತೆ! ಜಂತೆಗೆ ಸುತ್ತಿಕೊಂಡು ನೇತಾಡುತ್ತಿದ್ದವಂತೆ ! ಅವರನ್ನು ನೋಡಲು ಬಂದ ಒಬ್ಬರು 'ನೀವು ಇರುವ ಮನೆಯನ್ನು ಹಾವುಗಳು ಆಕ್ರಮಿಸಿವೆ' ಎಂದರಂತೆ. ಅದಕ್ಕೆ ಬೇಂದ್ರೆಯವರು 'ನೀವು ಹೇಳುವುದು ತಪ್ಪು. ಹಾವುಗಳ ನೆಲೆಯನ್ನು ನಾವು ಆಕ್ರಮಿಸಿರುವೆವು. ನಾವು ಅವುಗಳಿರುವ ಜಾಗದಲ್ಲೆಲ್ಲ ಮನೆ ಕಟ್ಟಿದರೆ ಅವು ಎಲ್ಲಿ ವಾಸಿಸಬೇಕು ? ಇಲ್ಲಿ ಇರಲಿ ಬಿಡಿ'. ಎಂದರಂತೆ !

ಹಾಗೆ ಸರ್ಪಗಳೊಂದಿಗೆ ದಿನಕಳೆದ ಬೇಂದ್ರೆ ಯವರು ಮಕ್ಕಳೊಡನೆ ನಕ್ಕುನಲಿದು ಆಡುವಾಗ

'ಹಾವಿನ ಮರಿಯಾಗಿ ಅಲ್ಲಿ
ನಾವೂನೂ ಹೆಡೆಯಾಡಿಸೋಣು
ಹೂವೆ ಹೂವು ಹಸಿರೆ ಹಸಿರು' (ನಾದಲೀಲೆ)

ಎಂದು ಆನಂದಲಹರಿಯಲ್ಲಿ ಪ್ರಕೃತಿಯೊಂದಿಗೆ ಒಂದಾಗಿ ಬೆರೆತು ಹೋಗಲು ಸಾಧ್ಯವಾಗಿದೆ ಎನಿಸುತ್ತದೆ.


ಮುಗದ ಕೆರೆಯ ದಂಡೆಯ ಮೇಲಿರುವ ದುರ್ಗಾದೇವಿ ಪೂಜೆಮಾಡಿಸಲು ನಾವೆಲ್ಲ ದೇವಾಲಯದತ್ತ ನಡೆದೆವು. ದೇವಾಲಯವನ್ನು ಪ್ರವೇಶಿಸುತ್ತಿರುವಂತೆ ಬೇಂದ್ರೆಯವರು ಅಲ್ಲಿ ಕುಳಿತು ರಚಿಸಿದ ಪ್ರಪಂಚದ ಶ್ರೇಷ್ಠ ಕವನ "ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸ" ನನ್ನ ಬಾಯಿಂದ ಜಪದಂತೆ ಹೊರಬಂದಿತು. ಆ ವಾತಾವರಣ

‘ಲಹರಿ ಲಹರಿ ಕಂಪಬಳ್ಳಿ’ ಯಾಗಿ ತಬ್ಬಿತು. ಅಲ್ಲಿಯೇ ಬೇಂದ್ರೆಯವರು ‘ನಾದಲೀಲೆ’, ‘ಸಚ್ಚಿದಾನಂದ’ ಮುಂತಾದ ಅಮೂಲ್ಯ ಏಳು ಕವನಗಳನ್ನು ರಚಿಸಿರುವುದು ನೆನಪಾಯಿತು.

ದುರ್ಗಾದೇವಿ ಪೂಜೆ ಮಾಡಿಸಿಕೊಂಡು ನಾವು ಅಲ್ಲಿಂದ ಬೇಂದ್ರೆ ಕಾರ್ಯಕ್ರಮದಲ್ಲಿ ಭಾಗಿಯಾಗಲು ಶಾಲೆಯತ್ತ ನಡೆದೆವು.

(ಸಿಹಿಗಾಳಿ, ಮಾಸಪತ್ರಿಕೆ, ಮೇ 2014)

■



ತಂದೆಯೇ ಸದ್ಗುರುವೆಂದು ಆರಾಧಿಸುತ್ತಿದ್ದ ಪಾಂಡುರಂಗ ಬೇಂದ್ರೆ

'ಕಂದ, ನಮ್ಮ ಮನೆಯ ನಂದದೊಂದು ದೀಪವಾಗಿ ನೀ
ಬೆಳಗು, ಬಾಳು, ಬದುಕನಾಳು ಬಳ್ಳಿವಳ್ಳಿ ಹಬ್ಬಲಿ'

ಎಂದು ದ.ರಾ. ಬೇಂದ್ರೆಯವರು ತಮ್ಮ ಮಗ ಪಾಂಡುರಂಗ ಹುಟ್ಟಿದಾಗ (17–12–1928) 'ನನ್ನಕಂದ' ಕವನ ರಚಿಸಿದರು. ಅದರಂತೆ ಮಗು ಪಾಂಡುರಂಗ ಬಲು ಸುಂದರ. ಹಾಗಾಗಿ 'ಏಸು ಸಲ ನೋಡಿದರು ಆಸುಸಲ ಹೊಸ ಹೊಸದು' ಎಂದು ತ್ರಿಪದಿಯಲ್ಲಿ 'ಕೂಸು ಬಿನ್ನಾಣ' ಕವನ ರಚಿಸಿದ್ದಾರೆ. ಅವರು 'ಚೆಲುವ' ಕವನದಲ್ಲಿ ಆ ಕೂಸು ನೋಡುವವರಿಗೆ ಕಾಮಣ್ಣನಂತೆ ಎಂದು ಹರ್ಷಿಸಿದ್ದಾರೆ.

'ನೋಡವ್ವಾ ನನ್ನ ಗೆಣತಿ
ಮೊಲೆಗೂಸು ಇರುವಾಗಿನ
ಕಾಮಣ್ಣನೊಲು ಕಾಣುವಾ
ತನ್ನಷ್ಟಕ್ಕಽ
ತಾನಽ ನೋಡಿ ನಲಿವಾ !'

ಪಾಂಡುರಂಗ ಬೇಂದ್ರೆಯವರನ್ನು ಪಂಡಿತ, ಪಂಡಣ್ಣ ಎಂದು; ವಾಮನ ಬೇಂದ್ರೆಯವರನ್ನು ಬಾಳಣ್ಣ ಎಂದು ತಂದೆತಾಯಿ ಬಂಧುಬಳಗ ಕರೆಯುತ್ತಿದ್ದರು. ಕವಿಯ ಒಬ್ಬಳೇ ಮಗಳು ಮಂಗಳ ಔರಂಗಾಬಾದಿನಲ್ಲಿದ್ದಾರೆ. ಈ ಮೂರು ಜನ ಪ್ರೀತಿ ವಿಶ್ವಾಸವನ್ನೆ ಹಂಚಿಕೊಂಡು ಸರಳ, ಸೌಮ್ಯ, ಶಾಂತ ಬದುಕಿನಿಂದ ಒಂದಾಗಿ ಬಾಳಿದರು. ಕವಿಯ ಶಾಂತ ಚಿತ್ತದ ತಪ ಫಲಬಿಟ್ಟಂತೆ ಅವರಿದ್ದರು. ತಮ್ಮ ತಂದೆಯವರ ಈ ಕವನವನ್ನು ಜೀವನ ಮಂತ್ರವಾಗಿಸಿಕೊಂಡಿದ್ದರು.

ಹುಸಿ ನಗುತ ಬಂದೇವ ನಸುನಗುತ ಬಾಳೋಣ
ತುಸು ನಗುತ ತೆರಳೋಣ
ಬಡ ನೂರು ವರುಷಾನ ಹರುಷಾದಿ ಕಳೆಯೋಣ
ಯಾಕಾರೆ ಕೆರಳೋಣ.

ಪಾಂಡುರಂಗ ಅವರು ಹೆಚ್ಚು ಓದಿರಲಿಲ್ಲ. ಅವರು ಸಮಾಜ ಕಲ್ಯಾಣ ಇಲಾಖೆಯಲ್ಲಿ ತಾತ್ಪೂರ್ತಿಕವಾಗಿ 7 ವರ್ಷ ಕೆಲಸ ಮಾಡಿದರು. ಆಗ ನಿರಾಧಾರ, ಏಕಾಕಿಯಾದ ವಧು ವರರನ್ನು ಹುಡುಕಿ ಮದುವೆ ಮಾಡಿಸಿದ್ದರು. ಪರೋಪಕಾರ ಗುಣದ ಅವರು ಆಸ್ಪತ್ರೆಯಲ್ಲಿದ್ದವರ ಶುಶ್ರೂಷೆ ಮಾಡಿ, ಅಸಹಾಯಕ ಜನಗಳ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿ ಕೈಲಾದ ಸಹಾಯ ಮಾಡುತ್ತಿದ್ದರು. ಅವರು ನಿಸ್ಪೃಹರಾಗಿದ್ದರು.

ಅವರ ಪತ್ನಿ ಪದ್ಮ ಔರಂಗಾಬಾದಿನವರು. ವಧು ಪರೀಕ್ಷೆಯಲ್ಲಿ 'ನಾನು ಒಂದು ಭಾವಗೀತೆ ಹಾಡಿದೆ. ಆಗಲಿರುವ ಯಜಮಾನರೂ ಒಂದು ಭಾವಗೀತೆ ಹಾಡಿದರು. ಇದೇ ನಮ್ಮ ವಧು-ವರ ಪರೀಕ್ಷೆಯ ಅನನ್ಯ ರೀತಿ. ಇಬ್ಬರ ಭಾವ ಕೂಡಿದವು. ಮಹಾಕವಿ ಒಪ್ಪಿದರು' ಎಂದು ಅವರು ಆ ಮಧುರ ಕ್ಷಣವನ್ನು ನೆನೆಯುತ್ತಾರೆ.

ಪಾಂಡುರಂಗ ಅವರು ಪುಣೆಯ ಕಡ್ಕಿಯಲ್ಲಿರುವ ಸ್ವಾಸ್ತಿಕ್ ರಬ್ಬರ್ ಫ್ಯಾಕ್ಟರಿಯಲ್ಲಿ ಕ್ಲರ್ಕ್ ಆಗಿ 20 ವರ್ಷ ಕೆಲಸ ಮಾಡಿದರು. ಪುಣೆಯಲ್ಲಿರುವಷ್ಟು ದಿನ ಬಾಡಿಗೆ ಮನೆಯಲ್ಲಿದ್ದರು. ನಿವೃತ್ತರಾದ ಮೇಲೆ 1985 ರಿಂದ ಧಾರವಾಡದಲ್ಲಿ ನೆಲಸಿದರು. ಅವರ ಮಗ ಪ್ರಭಾಕರ ಬೇಂದ್ರೆ ಬಿ.ಇ. ಪಾಸುಮಾಡಿ ಪೂನಾದಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದಾರೆ. ಅವರ ಹಿರಿಯ ಮಗಳು ಪ್ರತಿಮಾ ಮಿಲಿಟ್ರಿ ಆಫಿಸ್‌ನಲ್ಲಿ ಅಕೌಂಟೆಂಟ್ ಆಗಿದ್ದಾರೆ. ಕಿರಿಯ ಮಗಳು ಪುನರ್ವಸು ಧಾರವಾಡದಲ್ಲಿ ಇದ್ದಾರೆ.

ಪಾಂಡುರಂಗ ಅವರು ಮಾತೃಭಕ್ತರೂ, ಪಿತೃ ಆರಾಧಕರೂ ಆಗಿದ್ದರು. 1942 ರಲ್ಲಿ ತಾಯಿಯವರ ಕೈ ಸುಟ್ಟಾಗ 'ಆರು ತಿಂಗಳ ವರೆಗೆ ತಾಯಿ ಲಕ್ಷ್ಮೀ ಬಾಯಿಯವರಿಗೆ ಪಾಂಡುರಂಗ ಸೀರೆ ಉಡಿಸುತ್ತಿದ್ದ. 1944 ರಿಂದ 1953ರ ವರೆಗೆ ಪಾಂಡುರಂಗ ತಾಯಿ ಮಾಡಬೇಕಾದ ಎಲ್ಲ ಕೆಲಸ – ಅಡಿಗೆ ಮಾಡುವುದು, ಪಾತ್ರೆ ತಿಕ್ಕುವುದು, ತಂಗಿ ಮಂಗಲೆಯ ಹೆರಳು ಹಾಕುವುದು ಮಾಡುತ್ತಿದ್ದ' ಎಂದು ವಾಮನ ಬೇಂದ್ರೆ ಬರೆದಿದ್ದಾರೆ (ಪಾಂಡುರಂಗ ಬೇಂದ್ರೆ ನುಡಿನಮನ, ಪು–15)

ಅವರಿಗೆ ಸಂಗೀತದಲ್ಲಿ ತುಂಬಾ ಆಸಕ್ತಿಯಿತ್ತು. ಅವರು ಏಕತಾರಿಯೊಂದಿಗೆ ಬೇಂದ್ರೆ ಕವನಗಳನ್ನು ತನ್ಮಯವಾಗಿ ಹಾಡುತ್ತಿದ್ದರು. 'ವಂದೇ ಅಮ್ಮಾಜಿ', 'ತುಂಬಿ ಬಂದಿತ್ತು', 'ಇಳಿದು ಬಾ ತಾಯಿ', 'ನಾಳಿನ ಕನಸು', 'ಔದುಂಬರಾಯಣಾ ದತ್ತಾ ಕಂಡ', 'ಅಖಂಡಸತ್ಯ', ಮುಂತಾದ ಕವನಗಳಿಗೆ ತಾವೇ ಸ್ವರ ಸಂಯೋಜನೆ ಮಾಡಿ ಮನತುಂಬಿ, ಹೃದಯ ತುಂಬಿ ಭಾವತನ್ಮಯರಾಗಿ ಹಾಡುತ್ತಿದ್ದರು. ಅಂಬಿಕಾತನಯದತ್ತ ವೇದಿಕೆ ಧಾರವಾಡವು 1990ರಲ್ಲಿ ಅವರು ಹಾಡಿದ ಕ್ಯಾಸೆಟ್ ಹೊರ ತಂದಿದೆ.

ಅವರು ಅಂಬಿಕಾತನಯದತ್ತರನ್ನು ಸದ್ಗುರು ಎಂದು ಆರಾಧಿಸುತ್ತಿದ್ದರು. ಅವರ ತಂಗಿ ಮಂಗಳ 'ಆ ಸದ್ಗುರು ಗೌರವ ಭಾವನೆ ನೋಡಿದಾಗೆಲ್ಲ ನಾನು ರೋಮಾಂಚಿತಳಾಗಿದ್ದೇನೆ' ಎಂದು ಹೇಳಿದ್ದಾರೆ. ಅವರು ಕವಿ ನಿವಾಸ 'ಶ್ರೀ ಮಾತಾ' ದ ಹಿಂಭಾಗದಲ್ಲಿರುವ ದ.ರಾ. ಬೇಂದ್ರೆ ಚಿತಾಭಸ್ಮ ವಿಟ್ಟಿರುವ ಭಾವ ದೇವಾಲಯದಲ್ಲಿ ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಬೇಂದ್ರೆ ಭಾವಗೀತೆಗಳನ್ನು ಹಾಡಿ ಸುಖಿಸುತ್ತಿದ್ದರು.

ಪಾಂಡುರಂಗ ಮತ್ತು ವಾಮನ ಅವರು ರಾಮ-ಲಕ್ಷ್ಮಣರಂಥ ಅಪರೂಪದ ಸಹೋದರರಾಗಿದ್ದರು. ಇಬ್ಬರೂ ಒಮ್ಮತದಿಂದ ತಮ್ಮ ಮನೆಯ ಒಂದು ಪಾರ್ಶ್ವದ ಏಳು ಗುಂಟೆ ಜಮೀನನ್ನು ಬೇಂದ್ರೆ ರಾಷ್ಟ್ರೀಯ ಸ್ಮಾರಕ ಕಟ್ಟಲು ಸರ್ಕಾರಕ್ಕೆ ಹಣ ಅಪೇಕ್ಷಿಸದೆ ಬರೆದು ಕೊಟ್ಟರು. ಆ ಕಟ್ಟಡದ ಕಾಮಗಾರಿಯಾಗಲು ಓಡಾಡಿದರು. 'ಬೇಂದ್ರೆ ಭವನ' ಇಂದು ಧಾರವಾಡದಲ್ಲಿ ಸಾಂಸ್ಕೃತಿಕ ಕೇಂದ್ರವಾಗಿದೆ.

ಪಾಂಡುರಂಗ ಅವರು ಅಂಬಿಕಾತನಯದತ್ತ ವೇದಿಕೆಯ 'ಶ್ರೀ ಮಾತಾ ಪ್ರಕಾಶನ'ದ ಪ್ರಕಾಶಕರಾಗಿ ಬೇಂದ್ರೆಯವರ ಪುಸ್ತಕಗಳನ್ನು ಪ್ರಕಟಿಸಿದರು. ಅವುಗಳನ್ನು ಹೊತ್ತು ಊರೂರು ಸುತ್ತಿ ಮಾರಾಟ ಮಾಡಿದರು. ಆ ಕಾರಣವಾಗಿ ಬೆಂಗಳೂರು, ಗುಲ್ಬರ್ಗ, ಗೋವಾ, ಪುಣೆ ಮುಂತಾದ ಕಡೆ ಓಡಾಡುವಾಗ ಮೈಸೂರಿಗೆ ಬಂದಿದ್ದರು. ಆಗ ಅವರು ನಮ್ಮ ಮನೆಯಲ್ಲಿದ್ದು ಆತ್ಮೀಯವಾಗಿ ನಡೆದುಕೊಂಡರು. ನನ್ನ ಮಕ್ಕಳೊಡನೆ ಮುಗ್ಧ ಭಾವದಲ್ಲಿ ಬೇಂದ್ರೆ ಗೀತೆ ಹಾಡಿ-ಹಾಡಿಸಿ ನಲಿದದ್ದು ಒಂದು ಸುಮಧುರ ನೆನಪು. ಬೇಂದ್ರೆ ಪರಿಸರದಲ್ಲಿದ್ದು ಅವರ ಕಾವ್ಯ ಅಧ್ಯಯನ ಮಾಡಲು ಧಾರವಾಡಕ್ಕೆ ವರ್ಗಾವಣೆ ಮಾಡಿಸಿಕೊಂಡೆ. ಆಗ ಅವರು ನನ್ನ ಮತ್ತು ನನ್ನ ಕುಟುಂಬವನ್ನು ತಮ್ಮ ಬಂಧುವೆಂಬಂತೆ ಕಂಡು ಆಶ್ರಯ ನೀಡಿದರು. ಅಂತಹ ಬಾಂಧವ್ಯ ಅಪರೂಪ.

ಅವರು ಮುದ್ದಾಗಿ ಕನ್ನಡ ಬರೆಯುತ್ತಿದ್ದರು. ಮತ್ತು ಕನ್ನಡ ಸಂಖ್ಯೆಗಳನ್ನು ವ್ಯವಹಾರದಲ್ಲಿ ಬಳಸುತ್ತಿದ್ದರು. ಮಾತು ಕಡಿಮೆ ಆಡುತ್ತ ಸದಾ ಕ್ರಿಯಾಶೀಲವಾಗಿ ಇತರರಿಗೆ ತನ್ನಿಂದ ಏನು ಒಳಿತನ್ನು ಮಾಡಬಹುದೆಂದು ಯೋಚಿಸುತ್ತಿದ್ದರು. ಆ ಅನನ್ಯ ವ್ಯಕ್ತಿತ್ವದ ಅವರು 18-11-2003 ರಂದು 75ನೇ ವಯಸ್ಸಿನಲ್ಲಿ ತನ್ನ ಸದ್ಗುರುವಿನಲ್ಲಿ ಒಂದಾದರು.

(ಸಂಯುಕ್ತ ಕರ್ನಾಟಕ, ಸಾಪ್ತಾಹಿಕ ಸೌರಭ, 28.1.2018)

■



ಮಂಗಲೆಯೊಂದಿಗೆ ಹಿಗ್ಗಾಯ್ತು ತಂದೆಗೆ

ಬೇಂದ್ರೆಯವರಿಗೆ ಮಗಳೆಂದರೆ 'ಎದೆಯ ಮುಗುಳು'. ಅರೆಬಿರಿದ ಹೂವು. ಅರಳುತ್ತ ಕಂಪು ಬೀರಿ ಆಹ್ಲಾದ ಗೊಳಿಸುವ ಅಮರ ಚೇತನ. ಅವಳ ಆಟದಲ್ಲಿ ಮನೆ ತುಂಬಿ, ತುಟಿಯಲ್ಲಿ ಜಿನುಗುವ ನಗೆಯ ರಸ 'ಸೊನೆ'ಯಾಗಿ ಅಂಗಳದಲ್ಲಿ ಚಿಮ್ಮುತ್ತಿದೆ ಎಂದು 'ಮಂಗಳಾ' ಕವನದಲ್ಲಿ ಬಣ್ಣಿಸಿದ್ದಾರೆ. 'ತುಟಿಯಲೇನು ಜೊಲ್ಲು ಜೇನು । ನಿನ್ನ ಬೆಲ್ಲ ಸಕ್ಕರೆ'. ಅವರಿಗೆ ಒಟ್ಟು ಸಂತಾನ ಒಂಭತ್ತು. ಅದರಲ್ಲಿ ಉಳಿದವರು ಪಾಂಡುರಂಗ, ವಾಮನ ಇಬ್ಬರು ಗಂಡು ಮಕ್ಕಳು ಮತ್ತು ಮಂಗಳಾ ಒಬ್ಬ ಮಗಳು. (ಪಾಂಡುರಂಗ ಬೇಂದ್ರೆಯವರು ತಮ್ಮ 75ನೇ ವಯಸ್ಸಿನಲ್ಲಿ 2003ರಲ್ಲಿ ತೀರಿಹೋದರು. ವಾಮನ ಬೇಂದ್ರೆಯವರು ತಮ್ಮ 81ನೇ ವಯಸ್ಸಿನಲ್ಲಿ 2016ರಲ್ಲಿ ತೀರಿಹೋದರು.)

ಬೇಂದ್ರೆಯವರಿಗೆ ಮಕ್ಕಳು ಎಂದರೆ ಕಷ್ಟಕೋಟಲೆಯ ಬದುಕಿನ ಕೊಳದಲ್ಲಿ ಅರಳಿದ ತಾವರೆಗಳು. ಅವುಗಳಿದ್ದರೆ ನಲಿವು.

'ಮರವು ನಾವು, ನೀವು ಹೂವು
ನಮಗೆ ನಲಿವು ನೀವಿರೆ
ಇರಲಿ ನೀರು ಕಪ್ಪೆ ಕೆಸರು
ಸಾಕು ಇರಲು ತಾವರೆ.'

ಬೇಂದ್ರೆಯವರು ತನ್ನ ಮುದ್ದಿನ ಮಗಳು ಮಂಗಳಾಳಿಗೆ ಬಾಲ್ಯದಲ್ಲಿ ಕವನರೂಪದಲ್ಲಿ ಹೇಳಿದ್ದು 'ಕನಸಿನ ಕಥೆ'. ಅದು ಕವಿಯ ಸ್ವಗತ ಸಂವಾದದ ನೀಳ್ಗವನ. ಕಥೆ ಹಾಗೂ ಮಗಳ ಮನೋಹರ ನಗೆಯನ್ನು ಒಂದಾಗಿಸಿ 'ಬಹಳ ಚೊಕ್ಕದು, ನಿನ್ನ ನಗೆಯಂತೆ ಇದ್ದು'. ಎಂದು ಸವಿದಿದ್ದಾರೆ. ಅವರು ಹೋಗಿದ್ದು ಯಕ್ಷಲೋಕಕ್ಕೆ ಅಲ್ಲಿಯ ಸೊಗಸನ್ನು 'ಕುಣಿ ಕುಣಿದೆ ಅಲ್ಲಿ ಜನ ಕೆಲಸ ಮಾಡುವರು । ಮಾತನಾಡುತ್ತಿರಲು ಹಾಗೆ ಹಾಡುವರು' ಎಂದು ಹೇಳುತ್ತಾರೆ.

ಆಗ 'ನೀನೇನ ಮಾಡಿದೆ, ಅದನು ನೋಡಿ । ಅಣ್ಣ, ಕುಣಿದೆಯ ಅವರ ಕೂಡಿ। ನಿನ್ನ ಕವಿತೆಯ ಹೇಳಿ ಅದರ ಜೋಡಿ ?' ಎಂಬ ಮಗಳ ಪ್ರಶ್ನೆಗೆ 'ಆ ನೋಟದಲಿ ಬೇರೆ ಪರಿವೆ ಇರಲಿಲ್ಲ' ಎಂದು ಹೇಳುತ್ತ, ಅಲ್ಲಿ 'ಈಟು ಈಟು ಕಣ್ಣಪಾಪೆಯ ನೆರಳಿನಂತೆ ಥಾಟು' ಇದ್ದ ಮೈಹಸಿರು ಕೆಂಚೂಚು ಕರಿಯ ಕೊರಳಿನ ಗಿಳಿ ಹಿಂಡಿನ ಚಿತ್ರ ಬಣ್ಣಿಸುತ್ತಾರೆ.

ಅವುಗಳನ್ನು ಹಿಡಿಯಹೋಗಿ ನಾ ಹುಡುಗನಾದೆ ಎಂದು ಬಾಲ್ಯಕ್ಕೆ ಜಾರುತ್ತಾರೆ. ತನ್ನ ಸ್ನೇಹಿತರ ಪತ್ರಕ್ಕೆ ರೆಕ್ಕೆ ಮೂಡಿಸಿ ಹಗುರಾಗಿಸಿ 'ರಸ ಸರಸವಾಡುವೊಲು ಜೀವಗೂಡಿತ್ತು' ಎಂದು ಕನಸಿನಲ್ಲಿ ಬಾಲ್ಯದ ಬೆರಗು ಚಿತ್ರಿಸುತ್ತಾರೆ. ಹಕ್ಕಿ ಹಿಡಿಯಲು ಹೋಗಿ ಅದನ್ನು ಬಲೆಗೆ ನುಗ್ಗಿಸಿ ಅದು ಸಿಕ್ಕಿಕೊಂಡಂತಾದಾಗ – ಕವಿ ಕಥೆಯನ್ನು ಇನ್ನೊಂದು ಕಲ್ಪನಾಲೋಕಕ್ಕೆ ಹೋಯ್ದು – ಒಳಗೊಳಗೆ ನೋಯುತ್ತಾರೆ.

ಮತ್ತೆ ಆ ಹಕ್ಕಿಯನ್ನು ಮಟಮಾಯವಾಗಿ ಕೂಸಾಗಿಸುತ್ತಾರೆ. ಆ ಕೂಸನ್ನು ಮಗಳ ತೊಡೆಯಲ್ಲಿ ಕಾಣುತ್ತಾರೆ ! ಮಗಳ ತಾಯ್ತನದಲ್ಲಿ ಮೀಯುತ್ತ 'ನಿನ್ನ ತೊಡೆಯಲ್ಲಿತ್ತು ನೀನೆ ತಾಯಾಗಿ' ಎಂದು ಸಮಾಧಾನಗೊಳ್ಳುತ್ತಾರೆ.

ಆ ಮುದ್ದು ಮಗಳು 'ನನ್ನ ಕೂಸಾಗಿತ್ತೆ ತಾಯಿ, ಅಣ್ಣ ಎಷ್ಟು ನೋಂದಿತ್ತೊ ಪಾಪ ನನ್ನ ಚಿನ್ನ' ಎನ್ನುತ್ತ ತಾಯಾಗಿ ಆಡುವ ಮಗಳ ಚಿತ್ರ ನೇಯುತ್ತಾರೆ. ಹೆಣ್ಣುಮಕ್ಕಳ ಸಹಜ ಆಟ ರಂಗೇರುತ್ತದೆ. ಮಗಳನ್ನು ಛೇಡಿಸಲು ಕವಿಯು 'ನಿನಗಿಂತಲೂ ನಿನ್ನ ಕೂಸೆ ಮುದ್ದು । ಎನುವಂತೆ ನಿಂತಿತ್ತು ನಿನ್ನನೊದ್ದು' ಎಂದು ಹೇಳಿ, ಮರುಕ್ಷಣದಲ್ಲಿ 'ಮಂಗಲೆ ಬಂದು ಎದ್ದು ನನ್ನ ಬೆನ್ನಿಗೆ ಕೂಡುವಳೇನೊ ಗುದ್ದು' ಎಂಬ ಮಕ್ಕಳಾಟದ ಕೋಪ ನೆನೆಸಿಕೊಳ್ಳುತ್ತಾರೆ.

ಆದರೆ ಆ ಮಗಳು 'ಕೆನ್ನೆಗೆ ಕೊಟ್ಟಳೊಂದು ಮುದ್ದು'. ಎಂದು ನಲಿಯುತ್ತಾರೆ. ಈ ನುಡಿ ತಾಯ್ತನದ ಪ್ರತಿರೂಪವಾದ ಮುದ್ದು ಹೆಣ್ಣು ಮಕ್ಕಳ ವಾತ್ಸಲ್ಯ ಮೌನವಾಗಿ ಹರಿದಾಡಿದಂತಿದೆ.

ಅನಂತರ ಬೇಂದ್ರೆಯವರು 'ಆ ಕೂಸು ಕರೆದಿತ್ತು ನನ್ನ ತಾಯಿಯನ್ನು', ಎಂದು ಹೇಳುವಲ್ಲಿ – ತನ್ನ ತಾಯಿ ಅಂಬವ್ವನೇ ಮಗಳು ಮಂಗಳಾ ಆಗಿ ಹುಟ್ಟಿರುವ ಭಾವವಿದೆ. ಈ ಮಧುರ ಜನ್ಮ ಜನ್ಮಾನುಬಂಧದ ನಿರಂತರ ಒರತೆ ಮನುಕುಲದಲ್ಲಿದೆ. ಹಾಗಾಗಿ ಪ್ರೀತಿಯ ಮಗಳು ಮಂಗಳಾ ಹೇಳುವಂತೆ 'ಕಥೆಯ ಮೈಗಿಂತ ಮಿಗಿಲದರ ಬಣ್ಣ'.

* * * *

ಬೇಂದ್ರೆಯವರು 'ಸಂಜೀಯ ಜಾವಿಗೆ' ಕವನದಲ್ಲಿ ಬಾವಿ ನೀರು ಸೇದಿ ಹೊತ್ತು ತರುವ ಹತ್ತು ಹನ್ನೊಂದು ವರ್ಷದ ಮಗಳನ್ನು ಚಿತ್ರಿಸಿದ್ದಾರೆ. ಅದು ಜಾನಪದ ಅಂಶ

ಛಂದಸ್ಸಿನಲ್ಲಿದ್ದು, ಪ್ರತಿ ಸಾಲಿನಲ್ಲಿ ನಾಲ್ಕು ವಿಷ್ಣು ಗಣಗಳಿವೆ. ಅದು ಚೆಲುವಾದ ಮಗಳ ನಡೆನುಡಿಯಲ್ಲಿ ಮುಳುಗಿಹೋದ ತಂದೆಯ ಸುಂದರ ಭಾವಾಭಿವ್ಯಕ್ತಿಯಾಗಿದೆ. ಅವಳುಟ್ಟ ಕಿರಗಿಯು ಮಧುರ ಮಕ್ಕಳ ಕಳೆದು ಹೋದ ಸುಂದರ ಸಂಸ್ಕೃತಿ, ಸಾಮಾಜಿಕ ಲಾವಣ್ಯವನ್ನು ತಿಳಿಸುತ್ತದೆ.

ಕಿರಗಿ – ಚಿಕ್ಕ ಹೆಣ್ಣುಮಕ್ಕಳು ಉಡುವ ಸೀರೆ. ಆಗ ಮಕ್ಕಳಿಗೆಂದೇ ಚಿಕ್ಕ ಚಿಕ್ಕ ಸೀರೆಗಳನ್ನು ನೇಯುತ್ತಿದ್ದರು. 'ಕಿರಗಿಯ ನೀರಿಗೆ' ಯ 'ನೀರಿಗೆ' ಎಂಬುದು 'ನಿರಿಗೆ'. ಸೀರೆ ಉಡುವಾಗ ಪಾದಗಳ ಬಳಿಗೆ ಇಳಿಯುವಂತೆ ಸೀರೆಯನ್ನು ಓರಣವಾಗಿ ಜೋಡಿಸಿದ ಮಡಿಕೆ. ಅಂತಹ ಕಿರಗಿ ಉಟ್ಟ ಮಗಳ ಹೆಜ್ಜೆ ಗೆಜ್ಜೆಯ ಭಾವ ಬಂಧವನ್ನು ಬೇಂದ್ರೆ ಹೀಗೆ ಬಣ್ಣಿಸಿದ್ದಾರೆ.

ಕಿರಗಿಯ ನೀರಿಗೆ । ಒದೆಯುತ ದಾರಿಗೆ ॥
ಗೆಜ್ಜೀಯು ಗೆಜ್ಜೀಗೆ । ತಾಕ್ಯಾವ ಹೆಜ್ಜಿಗೆ ॥
ಏನಾರ ನಡಿಗೆ । ಯಾವೂರ ಹುಡಿಗೆ ॥
ಸಂಜೀಯ ಜಾವಿಗೆ । ಹೊರಟಾಳ ಬಾವಿಗೆ ॥

ಸಹಜವಾಗಿ ಅವರ ಮಗಳು ಮಿತ ಭಾಷಿಣಿ. ಅವಳದು 'ಮಾತೀಗು ಆಚೆಗೆ । ಮೀರಿದ್ದ ನಾಚಿಗೆ'. ಆ ನಾಚಿಕೆ 'ಮುಸುಕ್ಯಾವ ಹೂವಿಗೆ !' ಮುಸ್ಸಂಜೆಯ ವಾತಾವರಣದಲ್ಲಿ 'ಮುಗಿಲ ಮಾರಿಗೆ ರಾಗರತಿಯ ನಂಜು ಏರಿದ್ದಾಗ' ಇಡೀ ಪ್ರಕೃತಿಯೇ ನಾಚಿ ನೀರಾಗಿರುತ್ತದೆ ! ಅದರ ಎಲ್ಲ ಪ್ರತೀಕದಂತೆ ಮಧುರ, ನವಿರಾದ, ಕೆಂಪೂಗೆವ ರಂಗುರಂಗಿನ ಹೂವಿಗೆ ಮಗಳ ನಾಚಿಕೆ ಮುಸುಕಿದೆ !

ಹೊಳೆ, ಬಾವಿಯಿಂದ ನೀರು ತರುವಾಗ ಹೆಣ್ಣುಮಕ್ಕಳು ಅತ್ತಿತ್ತ ದೃಷ್ಟಿ ಹರಿಸದೆ ಮೂಗಿನ ನೇರಕ್ಕೆ ನಡೆಯುತ್ತಾರೆ. ಅದು ಹೆಣ್ಣು ತನ್ನ ಕೆಲಸದಲ್ಲಿ ಏಕಾಗ್ರತೆ, ಪಾವಿತ್ರತೆಯನ್ನು ಕಾಣುವ ಈ ನೆಲದ ಸಂಸ್ಕೃತಿ. ಅಂತಹ ನಡೆ ತನ್ನ ಮಗಳದು ಎಂದು ಬೇಂದ್ರೆ ಹೇಳಿ ಸುಖ ಪಟ್ಟಿದ್ದಾರೆ.

ಮೂಗೀನ ನೇರಿಗೆ । ಹೊರಳೀದೆ ಊರಿಗೆ ॥
ತಲಿಮ್ಯಾಲೆ ಬಿಂದಿಗೆ । ಕಾಲಾಗ ಅಂದಿಗೆ ॥
ತುಂತುಮುಕು ತುಂಬಿದೆ । ಬಿಂದೀಗೆ ಅಂತಿದೆ ॥
ಝುಣ್ ಝುಣ ಅಂದಿಗೆ । ಅಂದಾವ ಹೊಂದಿಗೆ ॥
ಸಂಜೀಯ ಜಾವಿಗೆ । ಹೋಗಿದ್ದೆ ಬಾವಿಗೆ ॥

ತನ್ನ ಮಗಳು ಯಾವುದೇ ಕೆಲಸವನ್ನು ಅಚ್ಚುಕಟ್ಟಾಗಿ ಚುರುಕಿನಿಂದ ಮಾಡುತ್ತಿದ್ದಳು. ಅವಳಿಗೆ ಕೆಲಸ ಒಂದು ಆಟದಂತಿತ್ತು. ಅವಳು ಈ ಹಸನಾದ ಧರತಿಯ ಉತ್ತಮ ಗರತಿ ಎಂಬುದನ್ನು ಮನತುಂಬಿ ಹೀಗೆ ಹೇಳಿದ್ದಾರೆ.

ಕೆಲಸಾನ ಆಟಿಗೆ । ಮಾಡೂವ ಸೂಟಿಗೆ ॥
ಹಸನಾದ ಧರತಿಗೆ । ಮೆಚ್ಚಿದೆ ಗರತಿಗೆ ॥

'ಮಗಳು' ಎಂಬ ಪದ ಬೇಂದ್ರೆಯವರಿಗೆ 'ಹಿಗ್ಗು'. ಅದು 'ಹಿಗ್ಗಬೀರಿ ಹಿಗ್ಗಲಿತ್ತು ತನ್ನ ತಾನೆ ಪ್ರೀತಾ' ಎಂಬ ಒಲ್ಮೆ. 'ಸಂತತಿಯೆ ಜೀವನ' ಎಂಬ ಈ ನೆಲದ ವರ್ಣನಾತೀತ ಆನಂತ, ವಿಕಾಸಶೀಲ ಹರವು. ಮಗಳ ಪ್ರೀತಿ, ಸಂತೋಷ, ಬಣ್ಣ ಬೆಡಗನ್ನು ಬೇಂದ್ರೆಯವರು 'ರಾಗ' ಎಂದು ಕರೆದಿದ್ದಾರೆ. ಅವಳು ನೀರು ತರುವಾಗಿನ ಕುಣಿಸ್ಯಾಟ, ತೂಗಾಟ, ಸೌಂದರ್ಯ, ಬೆಡಗು, ಬಿನ್ನಾಣ, ಸುಶೀಲತ್ವದ ಗೀತ.

ಮಂಗಲೆಯೊಂದಿಗೆ । ಹಿಗ್ಗಾಯ್ತು ತಂದೆಗೆ ॥
ಕುಣಿಸ್ಯಾಡಿ ಕೂಸಿಗೆ । ಅರಳಿಸಿ ಆಸೆಗೆ ॥

ರಾಗದ ಸಾಟಿಗೆ । ತೂಗ್ಯಾಡೊ ಧಾಟಿಗೆ ॥
ಒಲಿದಾಡೊ ರೀತಿಗೆ । ಹಾಡ್ಯಾನ ಗೀತಿಗೆ ॥

* * *

ಬೇಂದ್ರೆಯವರು 'ಸರ್ವಮಂಗಲೆ' ಕವನವನ್ನು ಬರೆದುದು ತಾ. 10.7.1981. ಅವರು ತೀರಿ ಹೋದುದು ತಾ. 26–10–1981. ಈ ಕಾರಣದಿಂದ ಅವರು ಖಾಯಿಲೆ ಬಿದ್ದಾಗ ತನ್ನ ಮಗಳು ಮಂಗಲಳನ್ನು ನೆನೆದು ಆಕೆಯನ್ನು ನೋಡಬೇಕೆಂಬ ಮನಸ್ಸಿನಿಂದ ಬರೆದ ಕವನ ಇದಾಗಿದೆ.

ಎಲ್ಲಿದ್ದ ಅವನೀತ ದುರ್ವಿನೀತನು ಎಲ್ಲಿ ?
ಕಾವೇರಿ ಇನ್ನುನೂ ಲೋಪಾಮುದ್ರೆಗೆ ಬುಲ್ಲಿ.

ಇಲ್ಲಿಹನು ಮಕರಂದ ಆ ಮಿಲಿಂದನು ಇಲ್ಲಿ.
ಆ ನಳವು ಬಂದಿತ್ತು ದಮಯಂತಿ ಕೈ ಛಲ್ಲಿ.

ಅಸ್ಮಿತೆಯ ವಿಸ್ಮಿತತೆ ಆ ಪ್ರಭಾಕರನಲ್ಲಿ
ಸರ್ವಮಂಗಳೆ ಹಸಿರು ಹನ್ನೆರಡು ತಿಂಗಳ ಬಳ್ಳಿ.

(ಕಾವ್ಯವೈಖರಿ : ಸರ್ವಮಂಗಲೆ)

ಬೇಂದ್ರೆಯವರು ಮಗಳನ್ನು ಔರಂಗಾಬಾದಿಗೆ ನೀಡಿದ್ದಾರೆ. ಅದು ವಿದರ್ಭದಲ್ಲಿದೆ. ಆಕೆಯ ಪತಿ ಪ್ರಭಾಕರ. ಅವರನ್ನು ನೆನೆದು ಬರೆದ ಕವನ ಇದಾಗಿದೆ. ಬೇಂದ್ರೆಯವರು ಕಾವೇರಿ ನಾಡಿನವರು. ಆದರೆ ಮಗಳನ್ನು ವಿವಾಹವಾಗಿ ನೀಡಿರುವುದು ವಿದರ್ಭಕ್ಕೆ. ಲೋಪಾಮುದ್ರೆ ವಿದರ್ಭರಾಜನ ಮಗಳು ಹಾಗೂ ಅಗಸ್ತ್ಯ ಮುನಿಯ ಹೆಂಡತಿ. ಈ ಎಲ್ಲ ವಾಸ್ತವ ಮತ್ತು ಪುರಾಣಗಳ ಹಿನ್ನೆಲೆಯಿಂದ ಈ ಕವನವನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

ಕವಿಯು ತನ್ನ ಮಗಳು ಮಂಗಲಳನ್ನು 'ಸರ್ವಮಂಗಲೆ' ಎಂದು ಕರೆದಿರುವ ಕವನದ ಶೀರ್ಷಿಕೆಯಲ್ಲಿಯೇ ಅವಳಿಗೆ ಒಳ್ಳೆಯದಾಗಲಿ, ಆಕೆ ಸದಾ ಮಂಗಲೆಯಾಗಿ ಮುತ್ತೈದೆಯಾಗಿರಲಿ ಎಂಬ ಶುಭ ಆಶೀರ್ವಾದವಿದೆ. ಅವರಿಗೆ ಖಾಯಿಲೆ ಹೆಚ್ಚಾಗಿ ತಾನು ಉಳಿಯುವೆನೋ ಇಲ್ಲವೋ ಎಂಬ ಮನಸ್ಸಿನ ತಳಮಳ ಜಾಸ್ತಿಯಾದಾಗ ಮಗಳನ್ನು ನೆನೆದಿದ್ದಾರೆ. ಆಕೆಯನ್ನು ಕರ್ನಾಟಕದಲ್ಲಿಯೇ ಎಲ್ಲಾದರೂ ವಿವಾಹಮಾಡಿ ಕೊಟ್ಟಿದ್ದರೆ ಚೆನ್ನಾಗಿತ್ತು. ದೂರದ ಊರಿಗೆ ಕೊಟ್ಟು ತನ್ನ ಕೊನೆ ಗಳಿಗೆಯಲ್ಲಿ ಅವಳನ್ನು ನೋಡಲಾಗಲಿಲ್ಲ ಎಂಬ ವ್ಯಥೆ ಕಾಡಿದೆ. ಯಾವ ದುಷ್ಟಶಕ್ತಿಗಳ ಕಾರಣವಾಗಿ ತಾನು ತನ್ನ ಮಗಳನ್ನು ಕಾವೇರಿಯ ನಾಡಿನಿಂದ ಲೋಪಾಮುದ್ರೆಯ ದೂರದ ಊರಿಗೆ (ಬುಲ್ಲಿ = to become extensive) ಸಂಬಂಧ ವಿಸ್ತರಿಸಿ ನೀಡಿದೆನಲ್ಲ ಎಂಬ ನೋವು ಮೊದಲ ನುಡಿಯಲ್ಲಿದೆ.

ದಮಯಂತಿಯಂತಹ ತನ್ನ ಮಗಳಿಗೆ ನಳನಂತಹ ಸಂಬಂಧ ಕೂಡಿ ಬಂತು. ವಿವಾಹ ಮಾಡಿದೆ. ಈಗ ಆಕೆಗೆ ಮಕರಂದ, ಮಿಲಿಂದ ಎಂಬ ಎರಡು ಗಂಡು ಮಕ್ಕಳು ಸ್ಮಿತಾ ಎಂಬ ಹೆಣ್ಣುಮಗಳಿದ್ದಾಳೆ. ಅವಳ ಜೀವನಕ್ಕೆ ಅರ್ಥ ಬಂದಿರುವುದರಿಂದ ತನ್ನ ಮೊಮ್ಮಕ್ಕಳು ಇಲ್ಲೇ ಇದ್ದಾರೆ ಎಂದು ಭಾವಿಸಬೇಕೆಂಬ ಸಮಾಧಾನ ಎರಡನೆಯ ನುಡಿಯಲ್ಲಿದೆ.

ತನ್ನ ಅಳಿಯ ಪ್ರಭಾಕರನಲ್ಲಿ ಆಶ್ಚರ್ಯಗೊಳಿಸುವ ರೀತಿಯ ತಿಳುವಳಿಕೆ ಇದೆ. ಅವನು ಅರ್ಥಪೂರ್ಣವಾಗಿ ಬದುಕುತ್ತಿದ್ದಾನೆ. ಹಾಗಾಗಿ ತನ್ನ ಕರುಳು ಬಳ್ಳಿ ಮಗಳು ಸದಾ ಸಂತಸದಿಂದಿದ್ದಾಳೆ. ಅದು 'ಹಸಿರು ಹನ್ನೆರಡು ತಿಂಗಳ ಬಳ್ಳಿ' ಎಂಬ ತೃಪ್ತಿಯ ಶಾಂತ ಚಿತ್ತ ಮೂರನೆಯ ನುಡಿಯಲ್ಲಿ ಹೊಮ್ಮಿದೆ. ಇದೊಂದು ಬೇಂದ್ರೆಯವರ ತೀವ್ರ ಭಾವಲಹರಿಯ ತುಂಟತನ ಬೆರೆತ ಆತ್ಮೀಯ ಕವನ

* * *

ಬೇಂದ್ರೆಯವರ ಪುಣೆ ವಾಸ್ತವ್ಯದ (1914–18) ಶತಕ ಪೂರ್ತಿ ಸ್ಮರಣಾರ್ಥ ಮರಾಠಿ ಕನ್ನಡ ಸ್ನೇಹ ವರ್ಧನ ಕೇಂದ್ರ ಪುಣೆ ಅವರು 26.10.2015ರಂದು 'ದ.ರಾ.ಬೇಂದ್ರೆ ಪುಣ್ಯಸ್ಮರಣೆ' ಕಾರ್ಯಕ್ರಮ ಹಮ್ಮಿಕೊಂಡಿದ್ದರು ಅಲ್ಲಿ ಬೇಂದ್ರೆ ಕಾವ್ಯ ಕುರಿತು ವಿಶೇಷ ಉಪನ್ಯಾಸ ನೀಡಲು ಆಹ್ವಾನಿಸಿದ್ದರು. ಆ ಕಾರ್ಯಕ್ರಮದ ನಂತರ ಕವಿಪುತ್ರಿ ಮಂಗಳಾ ಅವರನ್ನು ನೋಡಲು ನಾನು ನನ್ನ ಪತ್ನಿಯ ಜೊತೆ ಔರಂಗಾಬಾದ್‌ಗೆ ಹೋದೆನು.

ಮಂಗಳಾ ಅವರು ತಮ್ಮ ಎರಡನೆಯ ಮಗ ಮಕರಂದ ಕುಲಕರ್ಣಿ ಜೊತೆ ಔರಂಗಾಬಾದ್‌ನ ಷಾಹನೂರ್‌ವಾಡಿಯ ಶಾಕುಂತಲ ನಗರದಲ್ಲಿ ಲೌಕಿಕ್ ಅಪಾರ್ಟಮೆಂಟ್‌ನಲ್ಲಿ ವಾಸಿಸುತ್ತಿದ್ದಾರೆ. ಅವರು ತಮ್ಮ ತಾಯಿ ಲಕ್ಷ್ಮೀಬಾಯಿ ಯವರಂತೆ 'ಮೌನ ಮುದ್ರೆ' ಯನ್ನು ತೊಟ್ಟವರು. ಮಿತಭಾಷಿಯಾದ ಅವರನ್ನು ಕಂಡು ಮಾತಾಡಿದ್ದು ಧಾರವಾಡದ ಸುಶೀಲ ಮೌನ ದರ್ಶನದಂತಿತ್ತು.

‘ನಮಗೆ ಬೇಂದ್ರೆ ಕನ್ನಡದ ಶ್ರೇಷ್ಠಕವಿ. ತಮಗೆ ಅವರ ಬಗ್ಗೆ ಏನು ಅನಿಸುತ್ತೆ?’

‘ಅವರು ನನಗೆ ಅಪ್ಪ ಅಷ್ಟೆ.’

‘ಬೇಂದ್ರೆಯವರದು ತುಂಬಾಕಷ್ಟದ ಜೀವನವಾಗಿತ್ತು. ನಿಮಗೆ ಕಷ್ಟದ ಅನುಭವ’?

‘ನನಗೇನೂ ಕಷ್ಟ ಇರಲಿಲ್ಲ. ಏನು ಕಷ್ಟ ಮಾಡಿದ್ದರೂ ಅದು ಹಿಂದಿನದಾಗಿತ್ತು. ನಾನು ಬೆಳೆಯುವಾಗ್ಗೆ ಅನುಕೂಲ ಇತ್ತು.’

‘ನೀವು ವಿವಾಹ ವಾದ ವರ್ಷ’

‘1964’

‘ಮಾಸ್ತಿಯವರು ಬೇಂದ್ರೆಯವರಿಗೆ ಕಷ್ಟಕಾಲದಲ್ಲಿ ಹಣ ನೀಡಿದ್ದರಂತೆ. ಅದನ್ನು ಬೇಂದ್ರೆ ಹಿಂದಿರುಗಿಸಿದ್ದರಂತೆ’

‘ಹ್ಞೂ’

‘ನಿಮ್ಮ ಮದುವೆಯಲ್ಲಿ ಮಾಸ್ತಿಯವರು ಬೇಂದ್ರೆ ನೀಡಿದ್ದ ಹಣದ ಗಂಟನ್ನು ಹಾಗೇ ತಂದು ನಿಮಗೆ ಉಡುಗೊರೆ ಕೊಟ್ಟರಂತೆ’

‘ಹೌದು, ಮಾಸ್ತಿಕಾಕಾ ತುಂಬಾ ದೊಡ್ಡವರು.’

‘ನಿಮಗೆ ಇಷ್ಟು ದೂರಕ್ಕೆ ಮದುವೆಮಾಡಿ ಕೊಟ್ಟದ್ದಕ್ಕೆ ಬೇಸರ ಆಯ್ತ?’

‘ಹಾಗೇನೂ ಇಲ್ಲ.’

‘ಬೇಂದ್ರೆಯವರು ಇಲ್ಲಿಗೆ ಆಗಾಗ್ಗೆ ಬರ್ತಿದ್ರ?’

‘ಇಲ್ಲ, ಒಂದೆರಡು ಸಲ ಬಂದಿದ್ದರು. ನಾವೇ ಧಾರವಾಡಕ್ಕೆ ಹೋಗುತ್ತಿದ್ದೆವು.’

‘ತಮ್ಮ ಯಜಮಾನರು ಏನು ಕೆಲಸ ಮಾಡುತ್ತಿದ್ದರು?’

‘ಅವರು ಆಯುರ್ವೇದ ಪಂಡಿತರು. ಅಜಂತಾದಲ್ಲಿ ಪ್ರಾಕ್ಟಿಸ್ ಮಾಡುತ್ತಿದ್ದರು. ಅಲ್ಲೇ ಇದ್ದೆವು.’

‘ಅದರಿಂದ ಜೀವನ...’

‘ನಾನು ಮರಾಠಿ ಮಾಧ್ಯಮದಲ್ಲಿ ಮೆಟ್ರಿಕ್‌ವರೆಗೆ ಓದಿದ್ದೆ. ಸರ್ಕಾರಿ ಪ್ರೈಮರಿ ಶಾಲೆಯಲ್ಲಿ ಶಿಕ್ಷಕಿಯಾಗಿದ್ದೆ.’

‘ಔರಂಗಾಬಾದ್‌ಗೆ ಬಂದಿದ್ದು?’

‘ಮಕ್ಕಳು ಮೆಟ್ರಿಕ್ ಅಭ್ಯಾಸ ಮಾಡುವಾಗ್ಗೆ ಇಲ್ಲಿಗೆ ಬಂದೆವು.’

‘ಸ್ವಂತ ಮನೆ?’

‘ಇಲ್ಲ. ಬಾಡಿಗೆ ಮನೆಯಲ್ಲಿದ್ದೆವು. ಮಕ್ಕಳು ನೌಕರಿ ಹಿಡಿದ ಮೇಲೆ ಈಗ ಸ್ವಂತ ಮನೆಯಲ್ಲಿದ್ದೇವೆ.’

ಅಷ್ಟರಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆದ ಅವರ ಸೊಸೆ ಶ್ರೀಮತಿ ಅಂಜಲಿ ಉಪಹಾರವಾಗಿ ನನಗೆ ಮತ್ತು ನನ್ನ ಪತ್ನಿಗೆ ಉಪ್ಪಿಟ್ಟು ನೀಡಿದರು. ಅದನ್ನು ಸೇವಿಸುತ್ತ ಮತ್ತೆ ಪ್ರಶ್ನೆಮಾಡಿದೆ.

‘ನಿಮ್ಮ ಮನೆಯವರು?’

‘ಅವರು ತೀರಿಹೋಗಿ ಹತ್ತು ವರ್ಷವಾಯ್ತು’

‘ಇಲ್ಲಿ ಕನ್ನಡಿಗರು ಇದ್ದಾರ?’

‘ಇದ್ದಾರೆ. ಕರ್ನಾಟಕ ಸಂಘ ಇದೆ. ಅದರಲ್ಲಿ ಬೆಂಗಳೂರು ಮಂದಿ ಬಹಳ ಇದ್ದಾರೆ.’


‘ನಿಮ್ಮ ಜೊತೆ ಫೋಟೊ ತೆಗೆದುಕೊಳ್ಳಬೇಕು’

‘ಬನ್ನಿ ಹೊರಗೆ ಬಿಸಿಲಲ್ಲಿ ನಿಲ್ಲೋಣ’

ಬೆಳಗಿನ ಎಳೆಬಿಸಿಲಲ್ಲಿ ಅವರ ಜೊತೆನಿಂತೆವು. ಫೋಟೊ ತೆಗೆಸಿಕೊಂಡೆವು. ನಾನು ನನ್ನ ಪತ್ನಿ ಕವಿಪುತ್ರಿಯನ್ನು ಕಂಡು ಮಾತಾಡಿದ ಧನ್ಯಭಾವದಲ್ಲಿ ಮಿಂದೆವು.

(ಸಂಯುಕ್ತ ಕರ್ನಾಟಕ, ಸಾಹಿತ್ಯಸೌರಭ, 31.1.2015)

■



ಜಯದೇವಾ, ಜಯದೇವಾ, ಶ್ರೀ ಗಣಪತಿರಾಯಾ

ಬೇಂದ್ರೆಯವರು ಮಹಾರಾಷ್ಟ್ರದ ರತ್ನಾಗಿರಿ ಜಿಲ್ಲೆ ದಾಪೋಲಿ ತಾಲ್ಲುಕಿನ ಕೇಳಸಿ ಗ್ರಾಮದವರು. ಅಲ್ಲಿಂದ ಕರ್ನಾಟಕಕ್ಕೆ ಬಂದು ನೆಲಸಿದ್ದನ್ನು ಅವರು ಸಾಹಿತ್ಯದ ವಿರಾಟ್ ಸ್ವರೂಪ (ಪು.40)ದಲ್ಲಿ ಹೀಗೆ ದಾಖಲಿಸಿದ್ದಾರೆ – 'ಕರ್ನಾಟಕಕ್ಕೆ ಹೋಗಿರಿ, ಅಲ್ಲಿ ನಿಮ್ಮ ಮನೆತನದ ಉದಯವಿದೆ' ಎಂದು ಶ್ರೀ ಗಣಪತಿಯ ಆದೇಶವಾಗಿದ್ದರಿಂದ, ಬೇಂದ್ರೆ ಮನೆತನದವರು ಕೇಳಸಿಯಿಂದ ಸಾಂಗಲಿ ಹತ್ತಿರದ ಪಟವರ್ಧನರ ತಾಸಗಾಂವಿಗೆ ಬಂದರು. ಆಗ ಅದು ಕರ್ನಾಟಕ ಪ್ರಾಂತ ಎಂದೇ ಎನಿಸಿಕೊಳ್ಳುತ್ತಿತ್ತು. ಅಲ್ಲಿ ಗಣೇಶ ಪಂಚಾಯತನ ದೇವಾಲಯವಿದೆ... ಆ ಊರಿನ 'ಲಾಗು'ಗಳು ದೇಶದ ಮೇಲೆ ಬಂದು, ಧಾರವಾಡ ಜಿಲ್ಲಾ ಗದಗ ಹತ್ತಿರ ಶಿರಹಟ್ಟಿಯಲ್ಲಿ ಇನಾಮದಾರರಾಗಿ ಪ್ರತಿಷ್ಠಿತರಾದರು. ಅವರೊಡನೆ ನಾವು ಕರ್ನಾಟಕಕ್ಕೆ ಬಂದೆವು.. ಶಿರಹಟ್ಟಿಯಲ್ಲಿ ನಮ್ಮ ಮುತ್ತಜ್ಜನ ಸಮಾಧಿಯಿದೆ.'

ಬೇಂದ್ರೆ ಮನೆತನದವರು ಶ್ರೀ ಗಣಪತಿಯ ಆರಾಧಕರು. ಬೇಂದ್ರೆಯವರು ಆ ದೇವರ ಭಕ್ತರು. ಭಕ್ತಿಯ ಪ್ರತಿಫಲವೆಂದರೆ ಅವರಿಗೆ ಲಭ್ಯವಾದ ಬುದ್ಧಿಯೋಗ; ಅಂತರಂಗದ ಜಾಗೃತಿ. ಆ ಜ್ಞಾನಮಾರ್ಗದಿಂದ ಸೃಷ್ಟಿಯಾದ ಕಾವ್ಯ ಭಗವದನುಗ್ರಹದಂತೆ ಲೋಕಪೋಷಕವೂ ಆಗಿದೆ. ಅವರು ಭಕ್ತಿ, ಉಪಾಸನೆ, ಶರಣಾಗತಿಯಿಂದ ಶ್ರೀವಿನಾಯಕನ ಅನುಗ್ರಹಕ್ಕೆ ಒಳಗಾದರು. 'ಸದಾಶಿವನ ಪ್ರಮಥರ ನಾಯಕ' ನನ್ನು 14 ಕವನಗಳಲ್ಲಿ ಧ್ಯಾನಿಸಿದರು. ಅವರು 'ವಿನಾಯಕ' ಕವನದಲ್ಲಿ ಹೀಗೆ ಪ್ರಾರ್ಥಿಸಿದ್ದಾರೆ.

ಸುಮುಖಾ! ಏಕದಂತಾ ! ಕಪಿಲಾ ! ಗಜಕರ್ಣಾ!
ಲಂಬೋದರಾ ! ಗಣಾಧ್ಯಕ್ಷಾ ! ಭಾಲಚಂದ್ರಾ ! ಗಜಾನನ !
ಶಕ್ತಿ ದೇಹ ಮೃತ್ತಿಕಾ ರೂಪಾ
ಶಿವ ದತ್ತ ಗಜಶೀರ್ಷಾ ಭೂಪಾ. **(ಶತಮಾನ)**

ಮರಾಠಿಯಲ್ಲಿ ಗಣಪತಿಯನ್ನು ಕುರಿತು ಆರತಿ ಪದ್ಯಗಳಿವೆ. ಮರಾಠಿಯ ಆರತಿ ಛಂದಸ್ಸಿನಲ್ಲಿ ಅವರು 'ಗಣಪತಿರಾಯ' ರಚಿಸಿದ್ದಾರೆ.

ಜಯದೇವಾ, ಜಯದೇವಾ, ಶ್ರೀ ಗಣಪತಿರಾಯಾ
ಭಯಕಾರಕ, ಭಯಹಾರಕ, ಓಂಕಾರ ಕಾಯಾ ॥ ಪ ॥

'ಸಮಸ್ತ ಕಾರ್ಯಗಳ ಆರಂಭದಲ್ಲಿ ಈ ನವೀನ ಅವತಾರದ ಸ್ಮರಣೆ ನಡೆಯುವುದು ಸ್ವಾಭಾವಿಕ. ಜ್ಞಾನೇಶ್ವರರು ಇಂಥ ಕಲ್ಪನೆಯನ್ನೇ ಜ್ಞಾನೇಶ್ವರಿಯಲ್ಲಿ ಕೊಟ್ಟಿದ್ದಾರೆ. ಓಂ ಕಾರವನ್ನು ಅ,ಉ,ಮ್ ಎಂದು ಮೂರು ವಿಭಾಗ ಮಾಡಿ 'ಅ' ಕಾರದ ಸ್ಥಳದಲ್ಲಿ ಪದ್ಮಾಸನ, 'ಉ'ಕಾರದ ಸ್ಥಳದಲ್ಲಿ ದೊಡ್ಡ ಹೊಟ್ಟೆ, 'ಮ್' ಕಾರದ ಸ್ಥಳದಲ್ಲಿ ವಕ್ರತುಂಡ, ಹೀಗಿದೆ ಅವರ ರಸಮಯ ಕಲ್ಪನೆ.

ಅಕಾರ ಚರಣಯುಗಲ । ಉ ಕಾರ ಉದರ ವಿಶಾಲ
ಮಕಾವ ಮಹಾಮಂಡಲ । ಮಸ್ತಕಾಕಾರೇ ॥ (ಜ್ಞಾ 1, 19)

ಎಂದು ವಿನೋಬಾ ಅವರು ತಿಳಿಸಿದ್ದಾರೆ. (ಉಪನಿಷತ್ತುಗಳು ಅಧ್ಯಯನ, ಪು. 3)

ಈ ಮೇಲಿನ ಆರತಿಯಲ್ಲಿ 'ಕ್ಷಣಕ್ಷಣವೂ ನಾ ಸಿದ್ಧನು ನಿನ್ನೊಂದಿಗೆ ಬೆರೆಯೇ' ಎಂದು ಹೇಳಿ, ನಾದೋಪಾಸಕರಾದ ಅವರು 'ನಾದದ ಮೂಲಸ್ವರೂಪವೆ ನಾ ನಿನ್ನಯ ಭೃತ್ಯ' ಎಂದು ಮಣಿದಿದ್ದಾರೆ.

'ಓ ಬಲವೆ, ಚೆಲುವೆ, ಮೈವೆತ್ತ ಒಲವೆ, ನೀನೆಲ್ಲವನುಗೆಲುವೆ' ಎಂದು ಸುಂದರ, ಪ್ರೀತಿಯ, ಬಲಿಷ್ಠಕಾಯದ ಜಯಶಾಲಿ ವಿನಾಯಕನನ್ನು ಸ್ತುತಿಸಿದ್ದಾರೆ. ಅವರಿಗೆ ಗಣಪಯೆಂದರೆ;

'ಹ್ರೀಂಕಾರದುಗಮ, ಶ್ರೀಕಾರ ಶಿಖರ, ಓಂಕಾರ ಶಂಕನಾದಾ
ಅಲ್ಲಿಲ್ಲ ವಾದ ತತ್‌ಸ್ವಗತವಾದ ನಿಃಶಬ್ದರಸಾಸ್ವಾದಾ
ಅದು ಇಲ್ಲೆ, ಅಲ್ಲೆ, ಜಗದೆಲ್ಲೆಯಲ್ಲೆ ಮೋದಕದ ಶುದ್ಧಬೋಧಾ'
(ಮುಗಿಲ ಮಲ್ಲಿಗೆ)

ಕಾಮನಿಗೆ ಪ್ರೀತಿ–ರತಿ; ಶಂಕರನಿಗೆ ಸತೀ–ಪಾರ್ವತಿ ಇದ್ದಹಾಗೆ ಗಣಪತಿಗೆ ಋದ್ಧಿ–ಅಭಿವೃದ್ಧಿಯ ಸಂಕೇತ; ಸಿದ್ಧಿ–ಫಲದ ಸಂಕೇತವಾದ ಪತ್ನಿಯರಿದ್ದಾರೆ.

ಈ ವಿಶ್ವಸ್ವರೂಪನಾದಾ ಗಣಪತಿಗೆ
ಹಾಗೆ ಋದ್ಧಿ–ಸಿದ್ಧಿ ಸಂಗತೀ ॥ ಪ ॥
(ತಾ ಲೆಕ್ಕಣಿಕೆ ತಾದೌತಿ)

ಗಣೇಶ ಚತುರ್ಥಿ ಒಂದು ದಿನದ್ದಾದರೂ, ಗಣೇಶನು ಬಂದ ಸಂಭ್ರಮ ತಿಂಗಳು ಪೂರ್ತಿ ಇರುತ್ತದೆ. ಅವನು ಇರುವಷ್ಟು ದಿನ ಆ ಗಲ್ಲಿ, ಪ್ರದೇಶದ ಜನಗಳಿಗೆ ನಿತ್ಯ

ಶುಭ, ನಿತ್ಯ ಮಂಗಳ, ಅವನ ಇರುವಿಕೆಯೆ ಉತ್ಸಾಹ, ಉಲ್ಲಾಸ ನಾದ ಸಂಭ್ರಮ, ಅದನ್ನು ಬೇಂದ್ರೆ ಹೀಗೆ ಕಾವ್ಯವಾಗಿ ನೀಡಿದ್ದಾರೆ.

ಈ ಗಣಪತಿ ತಿಂಗಳಾ । ತಿಂಗಳಾ ಸ್ತುತ್ಯ
ನಿತ್ಯ ಶುಭಾ ನೀ ತೋರು ನಿತ್ಯ ಮಂಗಳಾ ॥ ಪಲ್ಲವಿ ॥
ಹಿಂತಿಲಾ, ನಡುಮನೆ, ಮುಂದಿನಂಗಳಾ ॥ ಅನುಪಲ್ಲವಿ॥

(ತಾ ಲೆಕ್ಕಣಿಕೆ ತಾದೌತಿ)

ಗಣಪತಿಯನ್ನು ಸಾರ್ವಜನಿಕವಾಗಿ ಕೂಡಿಸಿ ಸಂಭ್ರಮಿಸುವ ರೀತಿ ಇಂದು ಸ್ವಲ್ಪ ಅಡ್ಡದಾರಿ ಹಿಡಿದಿದೆ. ವಿನಾಯಕನ ಭಕ್ತಿ, ದ್ಯಾನ, ಸದ್ಭಾವನೆ ದೂರವಾಗಿ ವ್ಯವಹಾರದ ಸ್ಥಳಗಳಾಗುತ್ತಿವೆ. ಅದನ್ನು ಕಂಡು ಬೇಸರಗೊಂಡ ಕವಿಯು ಆ ಹೀನ ಮನಸ್ಥಿತಿಯನ್ನು ಹೀಗೆ ಛೇಡಿಸಿದ್ದಾರೆ.

ಕುಡದವರೂ ಬಂದಾರ, ಕುಡೀದವರೂ ಬಂದಾರ
ನೋಡವ್ರಾಽ ಇಲ್ಲಾ ಅಂತ ತಿಳಕೊಂತ ॥
ಎಚ್ಚರಿದ್ದ ಜನಾಕೂಡಾ ಹುಚ್ಚರ್ಹಾಂಗ ನಡೀತಾರ
ಇಂವಾ ಬಂದಾ, ಅವರನ್ನೂ ತುಳಕೊಂತ ॥

(ತಾ ಲೆಕ್ಕಣಿಕೆ ತಾದೌತಿ)

ಈ ಲೋಕದಲ್ಲಿ ಶೋಷಣೆ, ಆಹಾಕಾರ, ಅಶಾಂತಿಗೆ ಕಾರಣ ಹಣದಾಹಿ ಆಸ್ತಿದಾಹಿ, ದುರಾಸೆಯ ವಂಚಕರು. ಅವರ ಬುದ್ಧಿ ಶುದ್ಧವಾದರೆ ಜನ ಶಾಂತಿ ನೆಮ್ಮದಿಯಿಂದ ಬದುಕುವರು. ಅವರ ಬುದ್ಧಿ ಶುದ್ಧವಾಗಿಸಲು ಬೇಂದ್ರೆಯವರು 'ಪ್ರಮೋದ ಗಣಪತಿ'ಯನ್ನು ಹೀಗೆ ಪ್ರಾರ್ಥಿಸಿದ್ದಾರೆ':

ಮೂಷಕರ, ಮೋಹಕರ, ಮೋಸಕರ
ಬುದ್ಧಿ ಶುದ್ಧಿಯಾಗಲಿ ಎಂದು
ಸಿದ್ಧಿ ವಿನಾಯಕನಿಗೆ ಆಹ್ವಾನ ಸಾರುವ,
ಹಾರುವಾ ನಾನು ! **(ಶತಮಾನ)**

(ವಿಜಯ ಕರ್ನಾಟಕ, ಭೋಧಿವೃಕ್ಷ, 19–8–2017)

■



ಮಹಾಲಕ್ಷ್ಮಿ

ಮಹಾಲಕ್ಷ್ಮಿ ಐಶ್ವರ್ಯ ಮತ್ತು ಸೌಂದರ್ಯಗಳ ಅಧಿದೇವತೆ. ಆದಿಶಕ್ತಿಯ ಮಗ ವಿಷ್ಣುವಿನ ಅರ್ಧಾಂಗಿ. ಅವರ ಮಗ ಮನ್ಮಥ. ಲಕ್ಷ್ಮಿಯನ್ನು ಶ್ರೀ ಎಂದು ಕರೆಯುತ್ತಾರೆ. ಲಕ್ಷ್ಮಿಯ ಕೃಪೆಗೆ ಒಳಗಾದ ಅದೃಷ್ಟಶಾಲಿಗೆ ಲಕ್ಷ್ಮೀಕಟಾಕ್ಷ ವಾಯಿತು ಎಂದು ಹೇಳುವರು.

ಅಂಬಿಕಾತನಯದತ್ತರು ಮಾತೃ ಆರಾಧಕರು. ಅವರು ಲೋಕದ ಮಾತೃಶಕ್ತಿಯನ್ನು ಧ್ಯಾನಿಸಿ ಬರೆದ ಕವನ **'ಶಕ್ತಿ'**. ಆ ಶಕ್ತಿ ಅವರಿಗೆ ಪ್ರಕಟಗೊಂಡಿರುವುದು ಚೆನ್ನೆ ಸರಸ್ವತಿ, ನನ್ನಿದುರ್ಗೆ, ರನ್ನೆಲಕ್ಷ್ಮಿಯಾಗಿ. ಅವರಿಗೆ ಶ್ರೇಷ್ಠಳಾದ (ರನ್ನೆ) ಲಕ್ಷ್ಮಿಯು ಮುಡಿದಹೂ ಚಿಕ್ಕೆ; ನಕ್ಷತ್ರ, ಅವಳ ಸುಂದರ ಹಣೆ – ಚಂದ್ರ . ಅವಳ ಕಣ್ಣು ಜೊನ್ನ ; ಬೆಳುದಿಂಗಳು. ಅವಳ ನಗೆ ಹಗಲು.

ನಿನ್ನ ಮುಡಿ ಹೂ–ಚಿಕ್ಕೆ ; ಹಣೆ–ಚಂದ್ರ ; ಕಣ್–ಜೊನ್ನ
ನಿನ್ನ ನಗೆಯನೆ ತನ್ನ ಹಗಲು ಮಾಡಿ
ನಿನ್ನ ಪದಕಮಲಗಳೆ ತನ್ನ ಅರಮನೆಯಾಗೆ
ರನ್ನೆ ಲಕ್ಷಿಯು ಅಲ್ಲಿ ಪವಡಿಸುವಳಾಡಿ (ಗರಿ)

* * *

ಅಂಬಿಕಾತನಯದತ್ತರು ಪ್ರಕೃತಿಯ ಚೆಲುವು, ಒಲವು, ಐಸಿರಿ, ಜೀವಪೋಷಕ ತನವನ್ನು ಮಹಾಲಕ್ಷ್ಮಿ ಎಂದು ಆರಾಧಿಸಿದ್ದಾರೆ. ಮಹಾಲಕ್ಷ್ಮಿಯೇ ಎಲ್ಲ ಚೆಲುವು ನಲಿವಿನ ನೆಲೆ. ಹಾಗಾಗಿ, ನಿಸರ್ಗದ ಏನನ್ನು ಮುಟ್ಟಿ ತಟ್ಟಿದರೂ 'ನಿನ್ನ ತುಟಿಮುದ್ದಿನ ಅನುಭಾವನಾ' ಎಂದು ಆ ತಾಯಿಯು ಪ್ರಕೃತಿಯಾಗಿ ಇಷ್ಟಾರ್ಥವನ್ನು ಪೂರೈಸುವ ಅನುಭಾವದಲ್ಲಿ ಮಿಂದಿದ್ದಾರೆ. ಆ ಆನಂದಲಹರಿಯನ್ನು 'ಜೀವಾತ್ಮಗೆ ಅದು ಜೀವನಾ' ಎಂದು ತಿಳಿಸಿದ್ದಾರೆ.

ಮಹಾಲಕ್ಷ್ಮಿಯನ್ನು ಜಗದ ಸೃಷ್ಟಿಯ ಬೆಡಗಿನಲ್ಲಿ ಕಾಣುತ್ತ – ಅಲ್ಲಿಯ ಎಲ್ಲ ಜೀವ ಚೈತನ್ಯದ ಕಣ್ಣಿನಲ್ಲಿ, ದನಿಯಲ್ಲಿ, ಹರಿವ ತೊರೆಯಲ್ಲಿ, ಸುಳಿವ ಗಾಳಿಯಲ್ಲಿ ಆ ಮಹಾತಾಯಿಯ ಅನುಭಾವಕ್ಕೆ ಒಳಗಾದ ತನ್ನ ಆನಂದವನ್ನು ಕವಿ ಹೀಗೆ ಬಣ್ಣಿಸಿದ್ದಾರೆ.

'ಯಾವ ಕಣ್ಣಿನಲ್ಲು ನಿನ್ನ ನೋಟವೇ ಮೀಟುವುದೆನ್ನಾತ್ಮನಾ
ಯಾವ ದನಿಯು ಜಿನುಗಿದರು ಕೇಳುವೆನು ನಿನ್ನಾ ಮಂತ್ರಸ್ವನಾ'

(ಮಹಾಲಕ್ಷ್ಮಿ: ಮುಗಿಲ – ಮಲ್ಲಿಗೆ)

ಅಂಬಿಕಾತನಯದತ್ತರು–ಸಹಜವಾಗಿ ವಿಕಾಸಗೊಂಡು ಸತ್ಯದ ಉಸಿರಾದ ಭೌತಿಕವಸ್ತು ವೈವಿಧ್ಯದಲ್ಲಿ ಮಹಾಲಕ್ಷ್ಮಿಯನ್ನು ಕಾಣುತ್ತಾರೆ. ಚಿತ್ತದಿಂದ ಅದರ ಗುಣಲಕ್ಷಣಗಳನ್ನು ಅರಿತು, ಅವುಗಳನ್ನು ತಾನು ಸದ್ಬಳಕೆ ಮಾಡಿಕೊಂಡು ಪ್ರಗತಿ ಪಥದತ್ತ ಸಾಗಲು ಸಾಧ್ಯ ಎಂದು ಅರಿತಿದ್ದಾರೆ. ಆ ಅರಿವಿನಲ್ಲಿ 'ನಿನ್ನ ತನುವಿನಪ್ಪುಗೆಯೊಳಿಹುದು ಪ್ರತಿ ಭೌತಿಕದಾ ಸ್ಪಂದನ' ಎಂದು ಧ್ಯಾನಿಸಿದ್ದಾರೆ.

ಈ ಜೀವನವೆಂಬ ಜಲಪಯಣದಲ್ಲಿ ತನ್ನನ್ನು ದಡ ಮುಟ್ಟಿಸುವುದಕ್ಕೆ ನಾವಿಕ ಚೈತನ್ಯವೇ ಮಹಾತಾಯಿ ಲಕ್ಷ್ಮಿ. ಅವಳನ್ನು ನಂಬಿ ಆಶಾಗೋಪುರದಲ್ಲಿದ್ದು, ಆ ಆಸೆ ಪೂರೈಕೆಯ ಭರವಸೆ ಆ ತಾಯಿಯೇ ಆಗಿದ್ದು ಅವಳನ್ನು 'ಆಶೆಯತಃಪುರದೊಳಿಹೆ ನೀನೆ ತುಂಬಿತುಂಬಿ' ಎಂದು ನಂಬಿ ಧ್ಯಾನಿಸಿದ್ದಾರೆ. ಪ್ರತಿಯೊಬ್ಬರ ಆಸೆಯ ಅಂತಃಪುರದಲ್ಲಿದ್ದು ಫಲ ನೀಡುವ ತಾಯಿ ಮಹಾಲಕ್ಷ್ಮಿ. ಇದೊಂದು ಅನಂತಶಕ್ತ ಪ್ರಕೃತಿಯಲ್ಲಿ ಮಹಾಲಕ್ಷ್ಮಿಯನ್ನು ಕಂಡು ಅವೆರಡೂ ಒಂದೇ ಎಂದು ಧ್ಯಾನಿಸಿದ ವೈಜ್ಞಾನಿಕ ನೆಲೆಯ ಚಿಂತನಾ ಕವನ.

'ಎಂದಿನಿಂದಲೂ ಮಾನವರ ಅಭೀಪ್ಸೆಯ ಸ್ವರೂಪವು ಒಂದೇ ಆಗಿದೆ. ಯಾವ ಕಾಲದಲ್ಲೂ, ಯಾವ ದೇಶದಲ್ಲೂ ಅದರ ಕೆಚ್ಚು ಅದೇ ಉಳಿದಿದೆ. ಅದೆಂದರೆ ದೇವ ದೇವನ ಸಾಕ್ಷಾತ್ಕಾರ; ಅಂತಹ ಸಾಕ್ಷಾತ್ಕಾರಕ್ಕೆ ಅವಶ್ಯಕವಾದ ವಿಜ್ಞಾನ ಪ್ರಕಾಶ; ಅದರಿಂದ ಅನುಭವಿಸಬಹುದಾದ ಮುಕ್ತ ಸ್ಥಿತಿ; ಹಾಗೂ ಇವೆಲ್ಲಕ್ಕೂ ಮೂಲಭೂತವಾದ ಅಮೃತತ್ವ' (ಸಾಹಿತ್ಯದ ವಿರಾಟ್ ಸ್ವರೂಪ. ಪು–750) ಎಂಬುದು ಬೇಂದ್ರೆಯವರ ಅರಿವು. ಅವರು ಮಹಾಲಕ್ಷ್ಮಿಯ ವಿಗ್ರಹ, ಅದರ ಸ್ವರೂಪ ವರ್ಣನೆಯನ್ನು ಮಾಡದೆ ಆ ಮಹಾತಾಯಿಯ ಗುಣಲಕ್ಷಣಗಳನ್ನು ತನ್ನ ರಸಭಾವದಲ್ಲಿ ಒಂದಾಗಿಸಿ ಪ್ರತಿಮಾತ್ಮಕವಾಗಿ ಬಣ್ಣಿಸಿದ್ದಾರೆ. ಆ ಮಾತೆಯ ಆರಾಧನೆಯಿಂದ ತನ್ನ ವ್ಯಕ್ತಿತ್ವ ವಿಕಸನಗೊಳ್ಳಬೇಕು; ತಾನು ಶುದ್ಧನಾಗಬೇಕು; ಅದೇ ಅಮೃತತ್ವ, ಅದೇ ಆ ತಾಯಿ ಕರುಣಿಸಬೇಕಾದ ಐಶ್ವರ್ಯ ಎಂದು ಪ್ರಾರ್ಥಿಸಿದ್ದಾರೆ.

ಲಕ್ಷ್ಮಿಯು ಕಮಲಗಳ ನೆಲೆಯಾದ ಸರೋವರದಲ್ಲಿ ಸದಾ ಸಂಚರಿಸುವವ ಳಾದುದರಿಂದ 'ಕಮಲವನ ಸಂಚಾರಿಣಿ' ಎಂದು ಕರೆದಿದ್ದಾರೆ. ಅವಳು ಕಮಲವನ್ನೇ ಪೀಠವಾಗಿ ಉಳ್ಳವಳು–ಕಮಲಾಸನೆ. ಅಂತಹ ತಾಯಿಯನ್ನು ಸದಾ ಧ್ಯಾನಮಾಡುವ

ಕಮಲಹೂವಿನಂತೆ ಅರಳುವ ತನ್ನ ಹೃದಯದಲ್ಲಿ ಅರುಣಚರಣ–ಕೆಂಬಣ್ಣದ ಪಾದಗಳವಳು ಬಂದು ನೆಲಸಲಿ; ತನ್ನನ್ನು ಪಾವನವಾಗಿಸಲಿ ಎಂದು ಕವಿ ಪ್ರಾರ್ಥಿಸಿದ್ದಾರೆ.

'ಕಮಲವನ ಸಂಚಾರಿಣಿಯೆ ಮಹಾಲಕ್ಷ್ಮಿ ಬೇಕೇ ಆಸನ
ಅರುಣಚರಣೇ ಮಾಡು ನನ್ನೀ ಹೃದಯವನೆ ಸಿಂಹಾಸನ.'

ಅವರಿಗೆ ತಾಯಿ ಮಹಾಲಕ್ಷ್ಮಿಯು ಅಖಿಲ ಜಗದಾನಂದವನ್ನುಂಟು ಮಾಡುವ ಯೋಗಿನಿಯಾಗಿದ್ದಾಳೆ. ಆ ಮಾತೆ ವಿರಸ ಭಾವದ ವ್ಯಕ್ತಿಗಳಿಂದ ದೂರವಾಗಿ ಸರ್ವಸಮರ್ಪಣದ ಬಯಕೆ ರಹಿತವಾದ ಭಕ್ತರಲ್ಲಿ ವಾಸಿಸುತ್ತಾಳೆ. ಅಂತಹ ಮನಸ್ಸು ತನ್ನದಾಗಲಿ ಎಂದು ಕವನ ರಚಿಸಿದ್ದಾರೆ.

'ವಿಶ್ವ ಸುಂದರಿ ನಿಖಿಲ ಜಗದಾನಂದಕರಿ ಹೇ ಯೋಗಿನೀ !
ವಿರಸ ಹೃದಯತ್ಯಾಗಿ ನೀರಸ ಭಕ್ತಿ ಬಂಧನ ಭೋಗಿನೀ !'

ಅಂಬಿಕಾತನಯದತ್ತರು ಆ ಸಿರಿದೇವತೆಯನ್ನು ತನ್ನ ಮೇಲೆ ಕೃಪೆದೋರಿ ಪಾಪದೂರನನ್ನಾಗಿ ಮಾಡು ಎಂದು ಪ್ರಾರ್ಥಿಸಿದ್ದಾರೆ. ತಾನು ಉತ್ತಮ ವ್ಯಕ್ತಿಯಾಗಿ, ವಿವೇಕಶಾಲಿಯಾಗಿ ಬಾಳಲು; ಆನಂದಮಯನಾಗಿರಲು–ನಿನ್ನ ಮಧುರ ಚದುರಿನ ಮಾಯೆಯಿಂದ ಪ್ರೇಮದ ಸಾಗರನನ್ನಾಗಿಸು ಎಂದು ಬೇಡಿಕೊಂಡಿದ್ದಾರೆ.

'ಪಾಪದೂರೆ ಮಾಡು ನನ್ನನ್ನು ನಿನ್ನನುಗ್ರಹದಾಗರಾ
ಮಧುರ ಕೌಶಲ ಮಾಯೆಯಲಿ ಮಾಡೆನ್ನ ಪ್ರೇಮದ ಸಾಗರಾ'

(ಚೈತ್ಯಾಲಯ : ಮಹಾಲಕ್ಷ್ಮಿ)

(ವಿಜಯ ಕರ್ನಾಟಕ, ಬೋಧಿವೃಕ್ಷ, 2.9.2017)

■



ಜ್ಞಾನದೇವತೆಯ ನಾದ ವಿನೋದ

ಸೃಷ್ಟಿಕರ್ತನಾದ ಬ್ರಹ್ಮನ ಮಡದಿಯಾದ ಸರಸ್ವತಿಯು ವಿದ್ಯೆಗೆ, ಮಾತಿಗೆ, ನಾದ ಗಮಕಗಳಿಗೆ ಅಧಿದೇವತೆಯಾಗಿರುವಳು. ಸರಸ್ವತಿ ಎಂಬುದು ನದಿಯ ಹೆಸರೂ ಹೌದು. ಇದು ಪ್ರಯಾಗದಲ್ಲಿ ಗಂಗಾನದಿಯೊಡನೆ ಗುಪ್ತನದಿಯಾಗಿ ಸೇರುತ್ತದೆ. ಕರ್ದಮನೆಂಬ ಋಷಿ ಸರಸ್ವತಿ ನದಿಯ ದಡದಲ್ಲಿ ತಪಶ್ಚರ್ಯೆ ಮಾಡಿ ಬ್ರಹ್ಮನ ಸೃಷ್ಟಿಗೆ ನೆರವಾದನೆಂದು ಪುರಾಣಗಳು ಹೇಳುತ್ತವೆ. ಹೀಗೆ ಸರಸ್ವತಿ (ನದಿಯಾಗಿಯೂ ದೇವತೆಯಾಗಿಯೂ) ಬ್ರಹ್ಮನೊಂದಿಗೆ ಮತ್ತು ಸೃಷ್ಟಿಯೊಂದಿಗೆ ವಿಶೇಷ ಸಂಬಂಧ ಹೊಂದಿದ್ದಾಳೆ.

ಬೇಂದ್ರೆಯವರು ಮಹಾಕವಿ ಲಕ್ಷ್ಮೀಶನ ಪ್ರೇರಣೆಯಿಂದ ವಾರ್ಧಕ ಷಟ್ಪದಿಯಲ್ಲಿ ರಚಿಸಿದ ಪ್ರಾರಂಭದ ಕವನ 'ಸರಸ್ವತಿ'. ಅದು 'ಪ್ರಭಾತ' ಪತ್ರಿಕೆಯ ಮೊದಲಸಂಚಿಕೆ ಆಗಸ್ಟ್ 1918 ರಲ್ಲಿ ಪ್ರಕಟಗೊಂಡಿತ್ತು. ಅವರು ತಾನು ಬಾಲ್ಯದಲ್ಲಿ ಆಡಿದ ಆಟ ಬೊಗರಿಯ ಪ್ರತಿಮೆಯಲ್ಲಿ ನಾದ ದೇವತೆಯನ್ನು ಅರಳಿಸಿದ್ದಾರೆ;

ನಿನ್ನ ನಾದದ ಬೊಗರಿ ಕಿವಿಯೊಳಾಡಿಸಿ ನಿದ್ದೆ
ಕಣ್ಣುಗೊಂಬೆಗಳಲ್ಲಿ ತೀಡಿ ತೇಜದ ಬೀಜ
ನನ್ನ ಮುಂದಾದ ಮೇಲೆ ಅಂದ ಸಾವಿರದಲದ ಕಮಲೆ
ನೀನರಳಲಿಲ್ಲೇ ॥ **(ಶತಮಾನ)**

ಶಾರದೆಯನ್ನು ಬೇಂದ್ರೆ 'ನೀರಿನಾಕೆ' ಎಂದು ಕರೆದು ತಮವನ್ನು – ಅಜ್ಞಾನವನ್ನು ನಿವಾರಿಸುವ ಜ್ಞಾನದೇವತೆ ಎಂದು ಸ್ತುತಿಸಿದ್ದಾರೆ. ಆಕೆ ಅಂಚೆ (ಹಂಸ)ಯನ್ನು ಏರಿ ಗಾಳಿಯಲ್ಲಿ ಸುಳಿದು, ಬೆಳಕಿನಲ್ಲಿ ಬೆಳೆದವಳು ಎಂದು ಪ್ರಕೃತಿಯಲ್ಲಿ ರೂಪುಗೊಂಡಂತೆ ಬಣ್ಣಿಸಿದ್ದಾರೆ.

ಅಂಚೆ ಏರಿ ನೀರಿನಾಕೆ

ಗಾಳಿಯಲ್ಲಿ ಸುಳಿದಳೋ
ಬೆಳಕಿನಲ್ಲಿ ಬೆಳೆದಳು
ಗಾಳಿ ನೀರನಾಡಿಸಿರಲು
ವೀಣೆಯಂತೆ ಬಾರಿಸಿ
ತೆರೆಗಳಾಗಿ ಬೆಳಕು ಬಂತು
ಕವಿವ ತಮ ನಿವಾರಿಸಿ ॥ (ಗಂಗಾವತರಣ)

ಶಾರದೆಯು ತನ್ನ ವಿದ್ಯಾದಾಹಿ, ಜ್ಞಾನ ಪಿಪಾಸು ಭಕ್ತ ಸಮೂಹಕ್ಕೆ ನೀಡುವ ಸಂದೇಶ ಅರ್ಥಪೂರ್ಣವಾಗಿದೆ; 'ಏನು ಸವಿಯೊ ಅದನೆ ಕುಡಿ । ನಿನ್ನ ರುಚಿಯ ಹದವ ಹಿಡಿ.'

'ಶಾರದೆಯೇ !' ಕವನವನ್ನು ಬೇಂದ್ರೆಯವರು ಆರತಿ ಪದ್ಯದ ಧಾಟಿಯಲ್ಲಿ ರಚಿಸಿದ್ದಾರೆ. ಅದರಲ್ಲಿ ಮೌನದ ಬಸಿರಲ್ಲಿ ಎದ್ದ ನಾದದೇವಿಯನ್ನು ಅನನ್ಯವಾಗಿ ಹೀಗೆ ಧ್ಯಾನಿಸಿದ್ದಾರೆ.

ಜಯದೇವಿ ಜಯದೇವಿ ಜಯ ಶ್ರೀ ಶಾರದೆಯೇ
ನಾಲಗೆ ರಂಗವ ಮಾಡಿದೆ, ಮನೆ ಮಾಡಿದೆ ಎದೆಯೇ ॥

ಮೌನದ ಬಸಿರೊಳಗೆದ್ದಿಹ ನಾದದ ಬಲೆಯಲ್ಲಿ
ಬ್ರಹ್ಮಾಂಡಗಳು ಜೋ ಜೋ ಆಡುವ ನೆಲೆಯಲ್ಲಿ
ವೇದದ ಮಂತ್ರವ ವಾದವ ಮಾಡುವ ತಲೆಯಲ್ಲಿ
ನೀರೋ ನೀರೆಯೊ ಎನುವೊಲು ಇಹೆ ರಸಶಿಲೆಯಲ್ಲಿ ॥ (ಉತ್ತರಾಯಣ)

'ನೀನಾದಿನೀ-ದೇವತಾ ಸರಸ್ವತಿ' ಸ್ತೋತ್ರಕ್ಕೆ ಪ್ರೇರಣೆಯು 'ಋಗ್ವೇದ-ಸರಸ್ವತಿ ಸೂಕ್ತ 7.95-96ರ ಚಿಂತನ' ಎಂಬ ಭಾವ ಸಂದರ್ಭವಿದೆ. ಈ ಸ್ತೋತ್ರವು ಋಗ್ವೇದದ ಸಾಮಗಾನದಲ್ಲಿ ಹೊಮ್ಮುವ ಸಂಗೀತದ ನಾದ ಮತ್ತು ಲಯದಲ್ಲಿ ಭಾವ ಹರಿದಾಡುವಂತಿದೆ. ಪ್ರತಿ ಪದದ ಅರ್ಥವಲಯವು ಸರಸ್ವತಿ ನದಿಯ ಗುಣದಂತೆ ಓದುಗನ ಅರಿವಿನ ಅಳವಿಗೆ ತಕ್ಕಂತೆ ವಿಸ್ತಾರಗೊಳ್ಳುತ್ತದೆ.

ಆನಾದೇ ದಣಿದಗೆ । ಈನಾದೇ ತಣಿದಗೇ
ಊನಾದೇ । ಆನೂನಾದೇ । ಹಣ್ಣಾದ ಹುಣ್ಣಿಮೀ

ದಣಿದವನಿಗೆ ಆಸರೆಯಾದೆ (ಆನ್=ಆಸರೆ), ತಣಿದವನಿಗೆ (ಸಂತೃಪ್ತನಾದವನಿಗೆ) ಇನ್ನೂ ಹೆಚ್ಚು (ಸಂತೃಪ್ತಿ) ನೀಡಿದೆ. (ಈಯುವಿಕೆ = ನೀಡುವಿಕೆ, ಊನ= ತೊಂದರೆ, ಅನೂನ=ತೊಂದರೆಯನಿವಾರಣೆ.) ತೊಂದರೆ ನೀಡುವವಳೂ ನೀನೆ ಮತ್ತು ತೊಂದರೆಯನ್ನು ಪರಿಹರಿಸುವವಳೂ ನೀನೆ. (ಈ ಸಾಲುಗಳು ವಿಷ್ಣು ಸಹಸ್ರನಾಮದ 'ಭಯಕೃತ್ ಭಯನಾಶನಃ- ಭಯಕರ್ತನೂ ನೀನೆ, ಭಯನಾಶಕನೂ ನೀನೇ ಎಂಬ ಸಾಲುಗಳನ್ನು ನೆನಪಿಸುತ್ತವೆ.) ಆ ತಾಯಿ ಪೂರ್ಣಫಲ ಹಾಗೂ ಪವಿತ್ರಳು. ಬೆಳ್ಳನೆ

ಬೆಳಕು ಜ್ಞಾನದ ನಿಧಿ ಎಂಬುದನ್ನು ಬೇಂದ್ರೆಯವರು ಪ್ರತಿಮಾತ್ಮಕವಾಗಿ 'ಹಣ್ಣಾದಾ । ಹುಣ್ಣಿಮೀ' ಎಂದು ಬಣ್ಣಿಸಿದ್ದಾರೆ.

ಈ ಸ್ತೋತ್ರದ 4ನೇ ಭಾಗದಲ್ಲಿ ಋಗ್ವೇದದ – ಸರಸ್ವತಿ ರಹಸ್ಯ ಉಪನಿಷತ್ತಿನ ಸಾಲುಗಳ ಅನುರಣನವಿದೆ. ಆ ಉಪನಿಷತ್ತಿನ ಸಾಲುಗಳು ಹೀಗಿವೆ;

ಪ್ರಣೋ ದೇವಿ ಸರಸ್ವತೀ, ವಾಜೇಭೀರ್ವಾಜಿನೀವತೀ । ಧೀನಾಮು ವಿತ್ರ್ಯವತು।
ಆ ನೋ ದೀವೋ ಬೃಹತಃ ಪರ್ವತದಾ ಸರಸ್ವತೀ ಯಜನಾಗಂತು ಯಜ್ಞಮ್।
ವಾಗ್ದೇವ್ಯೈ ನಮಃ ॥

ಸರಸ್ವತಿ ದೇವಿ ಸರ್ವರಕ್ಷಕಳು, ಸಾಮರ್ಥ್ಯ ಸಂಪನ್ನೆಯೂ ಆಗಿರುವವಳು ಮತ್ತು ಲೋಕಕ್ಕೆ ಅನ್ನ ನೀರು ಪೂರೈಸುವವಳು. ದಾನ ಮಾಡುವವರಿಗೆ ಉತ್ತಮವಾಗಿ ವರದಾನ ಮಾಡು. ಬೃಹತ್ತಾದ ಪರ್ವತಗಳಿಂದ ಇಳಿದು ದಿವ್ಯವಾದ ನಮ್ಮ ನೆಲದತ್ತ ಹರಿದು ಬಾ. ಯಜ್ಞಕರ್ಮದಲ್ಲಿ ವಿಪುಲ ಧನಧಾನ್ಯಕೊಡು.

ಬೇಂದ್ರೆಯವರ 'ನೀನಾದಿನೀ–ದೇವತಾ ಸರಸ್ವತಿ' ಸ್ತೋತ್ರದಲ್ಲಿ ಭಾವ ಗ್ರಹಿಸಬಹುದಾದ ಅರ್ಥದಲ್ಲಿ ಪದಗಳು ಹೊಮ್ಮಿ ಬುದ್ಧಿ ಗ್ರಹಿಸಬಹುದಾದ ನೆಲೆಗೆ ನಾದದ ನಾಡಿ ಹಿಡಿದು ಸಾಗಿವೆ.

ಸಾಹಿತ್ಯದ ಸ್ಫೂರ್ತಿದೇವತೆ ವಾಗ್ದೇವಿ. ಆಕೆಯು ಕೃಪೆ ತೋರಿದಾಗ ಮಾತ್ರ ಕಾವ್ಯರಚನೆ ಸಾಧ್ಯ ಎಂಬ ಭಾವದಲ್ಲಿ ಬೇಂದ್ರೆಯವರು 'ರಾಣಿ ವಾಸದ ವಾಣಿಗೆ' ಕವನದಲ್ಲಿ ಹೀಗೆ ಪ್ರಾರ್ಥಿಸಿದ್ದಾರೆ:

ಸರಸೋತಿ ಅಂತ ನಿನ್ನ
ಅರಸೊತ್ತಿಗೆ ಒಪ್ಪಿಕೊಂಡೆ
ಬರಸೋ ಹೊತ್ತಿಗೆ, ಬರಸು ಇನ್ನ
ಪುರುಸೊತ್ತಿಲ್ಲಾ. (ಪರಾಕಿ)

(ವಿಜಯ ಕರ್ನಾಟಕ, ಬೋಧಿವೃಕ್ಷ, 23.9.2017)

■



ನೃಸಿಂಹ ಸ್ತೋತ್ರ

ಬೇಂದ್ರೆಯವರು 'ನರಸಿಂಹಾವತಾರ' ಕವನದಲ್ಲಿ 'ನರಸಿಂಹ ಭೂಪಾ । ತ್ರಿಲೋಕೈಕ ದೀಪಾ' ಎಂದು ಹಾಡಿದ್ದಾರೆ. ಅದರಲ್ಲಿ ಹಿರಣ್ಯಕಶ್ಯಪ, ವಿರೋಚನ, ಬಲಿ, ಬಾಣಾ ಮುಂತಾದ ಅಸುರ ವಂಶಾವಳಿಯನ್ನು ಸಂಹಾರ ಮಾಡಿದ್ದನ್ನು ತಿಳಿಸಿ; ವಿಷ್ಣುಭಕ್ತ ಪ್ರಹ್ಲಾದನನ್ನು ರಕ್ಷಿಸಿ ಜನರ ಕಲ್ಯಾಣಕಾರಿ ಶಂಕರನಾಗಿ ಉಳಿದ ನರಸಿಂಹನನ್ನು ಹೀಗೆ ನೆನೆದಿದ್ದಾರೆ;

'ಪ್ರಹ್ಲಾದ ಭಕ್ತಿ ತಿಳಿದಾ
ವಿರೋಚನಾ, ಬಲೀ, ಬಾಣಾ,
ಶಂಕರನಾಗಿ ಉಳಿದಾ'. **(ತಾಲೆಕ್ಕಣಿಕೆ ತಾದೌತಿ)**

ಕರಾವಲಂಬನ ಸ್ತೋತ್ರ

ಲಕ್ಷ್ಮೀನೃಸಿಂಹ ಕರಾವಲಂಬನ ಸ್ತೋತ್ರದಲ್ಲಿ ಆದಿಶಂಕರರು ತನ್ನನ್ನು ಸಂಸಾರದಿಂದ ಪಾರು ಮಾಡಬೇಕೆಂದು ನರಸಿಂಹ ದೇವರನ್ನು ಸ್ತುತಿಸಿದ್ದಾರೆ. ಹಾಗೆ ಸ್ತುತಿಸಲು ಕಾರಣ: ಮಂಡನ ಮಿಶ್ರನನ್ನು ವಾದದಲ್ಲಿ ಗೆದ್ದ ಶಂಕರರಿಗೆ ಅವರ ಪತ್ನಿ ಉಭಯಭಾರತಿಯನ್ನು ಗೆಲ್ಲಲಾಗಲಿಲ್ಲ. ಏಕೆಂದರೆ ಅವಳು ಕಾಮಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಿದ್ದಳು. ಅವಳ ಪ್ರಶ್ನೆಗಳಿಗೆ ಅನುಭವವೇದ್ಯವಾದ ಉತ್ತರ ನೀಡಲೆಂದು ಶಂಕರರು ಮೃತ ದೊರೆಯೊಬ್ಬನ ಶರೀರದೊಳಗೆ ಪರಕಾಯ ಪ್ರವೇಶ ಮಾಡಿ ಎಲ್ಲ ಸಾಂಸಾರಿಕ ಸುಖದ ಅನುಭವವನ್ನು ಹಾದು ಹೋಗುತ್ತಾರೆ. ಹೀಗೆ ಲೌಕಿಕ ಸುಖದ ಅನುಭವ ಪಡೆದ ಮೇಲೆ ರಚಿಸಲಾದ ಸ್ತೋತ್ರ ಅದು. ತನ್ನನ್ನು ಸಂಸಾರದಿಂದ ಪಾರು ಮಾಡಬೇಕೆಂದು ಅವರು ನರಸಿಂಹ ದೇವರನ್ನು ಪ್ರಾರ್ಥಿಸಿದ್ದಾರೆ.

ಸಂಸಾರಭೀಕರ ಕರೀಂದ್ರ ಕರಾಭಿಘಾತ
ನಿಷ್ಪಿಷ್ಟಮರ್ಮವ ಪುಷಃ ಸಕಲಾರ್ತಿ ನಾಶ ।

ಪ್ರಾಣ ಪ್ರಯಾಣ ಭವಭೀತಿ ಸಮಾಕುಲಸ್ಯ
ಲಕ್ಷ್ಮೀನೃಸಿಂಹ ಮಮದೇಹಿ ಕರಾವಲಂಬಮ್ ॥ 7 ॥

ನೃಸಿಂಹ ಸ್ತೋತ್ರ

ಈ ಸ್ತೋತ್ರವು 'ಸಂಕಷ್ಟದ ದರ್ಶನದಿಂದ ಅದರ ಪರಿಹಾರಕ್ಕೆ ಮಾಡಿದ ಪ್ರಾರ್ಥನೆ' ಎಂಬ ಭಾವ ಸಂದರ್ಭ ಹೊಂದಿದೆ. ಬೇಂದ್ರೆಯವರು ಈ ಅಷ್ಟಕದಲ್ಲಿ ನರಸಿಂಹನು ಈ ದೇಹವೆಂಬ ಕಂಬದಲ್ಲಿ ಅಡಗಿದ್ದಾನೆ. ಅದನ್ನು ನಂಬಿರುವ ಎದೆಹೂವನ್ನೇ ಆಸರೆ ಮಾಡಿಕೊಂಡಿದ್ದಾನೆ ಎಂದು ಆ ದೇವರನ್ನು ಆರಾಧಿಸಿದ್ದಾರೆ. ಕರುಣೆದೋರಿ ವೈರಿಯಿಂದ ಕಾಪಾಡಲು ಪ್ರಾರ್ಥಿಸಿದ್ದಾರೆ.

'ಡಿಂಭದ ಈ ಕಂಭದೊಳಗೆ ತಾವು ಅಡಗಿ ಇರುವಿರಿ
ನಂಬಿರುವೀ ಎದೆಹೂವನೆ ಆಸನ ಮಾಡಿರುವಿರಿ
ವೈರಿಯಿಂದ ಕಾಯಬೇಕು ಕರುಣೆಸುತ್ತ ಸದ್ಗುರೋ
ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿ ಮಾಮ್ ॥

(ಸೂರ್ಯಪಾನ)

ಮಹಾವಿಷ್ಣುವಿನ ನಾಲ್ಕನೆಯ ಅವತಾರವಾದ ಲಕ್ಷ್ಮೀನರಸಿಂಹ ಸ್ವಾಮಿಯು ತನ್ನ ದೋಷವನ್ನು ನಾಶಗೈದು ಭಕ್ತಿಯನ್ನು ಪೋಷಿಸಲಿ. ಅವನು ಭಕ್ತ ಹೃದಯದಲ್ಲಿ ಸದಯನಾಗಿ ನಿಂತಿರುವ ದೇವರು – ಎಂದು ಭಗವಂತನಲ್ಲಿ ಒಂದಾದ ಭಾವದಲ್ಲಿ ಕವಿಯು ತನ್ಮಯರಾಗಿ ಪ್ರಾರ್ಥಿಸಿದ್ದಾರೆ. ನೃಸಿಂಹ ಸ್ವಾಮಿಯ ಅರಿವಿನಿಂದ ತನ್ನಲ್ಲಿರುವ 'ಅರಿವಿನ ಅರವಿಂದ ಹೊರಳಿ ಅರಳಿ ಬಂದಿತು' ಎಂದು ತಿಳಿಸಿದ್ದಾರೆ. ತಾನು ಆ ಹರಿಯ ಕೃಪೆಯಿಂದ ಹಿಗ್ಗಿ, ವಿಕಾಸಗೊಂಡು ಕಂಪು ಬೀರಿ ಆನಂದದಿಂದಿರುವುದನ್ನು 'ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿ ಮಾಮ್' ಎಂದು ಪ್ರಾರ್ಥಿಸಿದ್ದಾರೆ.

ನಾನು ತಮ್ಮ ಧ್ಯಾನವನ್ನು ಮರೆತರೂ ತಾವು ಕೈ ಬಿಡದೆ ಪೋಷಿಸಬೇಕು. ತಾವು ಈ ಎಳೆಯನಾದ (ಹಸು) ವನ ಕೈಬಿಟ್ಟರೆ, ನನಗೆ ಬೇರೆ ಗತಿ ಎಲ್ಲಿದೆ ಎಂದು ಪ್ರಶ್ನಿಸಿದ್ದಾರೆ; 'ತಾವೆ ಕೈಯ ಬಿಟ್ಟ ಮೇಲೆ ದೆಸೆಯಾವುದು ಹಸುವಿಗೆ ?'

* * *

'ನಾನು ಒಡಲು ತಾವು ತ್ರಾಣ, ನಾನು ಉಸಿರು ಆಗಿರೆ
ತಾವು ಪ್ರಾಣವಾಗಿ ಕಾದು, ನಾನು ಚಿತ್ತವೆಂದೆನೆ
ತಾವು ಧ್ಯಾನವಾಗಿ ನಿಂತು ಹತ್ತಿರೆಳೆದುಕೊಳ್ಳಿರೇ'

ಈ ನುಡಿಯಲ್ಲಿ ಬೇಂದ್ರೆ ಪ್ರಕೃತಿ – ಪುರುಷ ಎಂಬೆರಡು ತತ್ವಗಳ ನಡುವಿನ ಭೇದವನ್ನು ತಿಳಿಸುತ್ತಿದ್ದಾರೆ. ಒಡಲು–ತ್ರಾಣ, ಉಸಿರು–ಪ್ರಾಣ ಹಾಗೂ ಚಿತ್ತ–ಧ್ಯಾನಗಳು ಕ್ರಮವಾಗಿ ಪ್ರಕೃತಿ ಪುರುಷ ತತ್ವಗಳಾಗಿವೆ.

ಸೃಷ್ಟಿಯಲ್ಲಿ ಎಲ್ಲವೂ ಪರಮಾಣುವಿನ ವಿವಿಧ ರೂಪಗಳೇ ಆಗಿವೆ ಎಂದು ವಿಜ್ಞಾನಿಗಳು ತೀರ್ಮಾನಿಸಿಕೊಂಡಿರುವಂತೆ ಎಲ್ಲವೂ ಪ್ರಾಣಶಕ್ತಿಯ ವಿವಿಧ ರೂಪಗಳಾಗಿವೆ ಎಂದು ಯೋಗಿಗಳು ಕಂಡುಕೊಂಡಿದ್ದಾರೆ. ಪ್ರಾಣವೆಂಬುದು ಪ್ರಕೃತಿ ತತ್ವವಲ್ಲ; ಈ ಸಮಸ್ತ ಸೃಷ್ಟಿಯ ಮೂಲ ಶಕ್ತಿಗೆ ಯೋಗ ಶಾಸ್ತ್ರಗಳು ಪ್ರಾಣವೆಂಬ ಹೆಸರು ನೀಡಿವೆ. 'ಪ್ರಾ' ಎಂಬ ಪೂರ್ವಪ್ರತ್ಯಯಕ್ಕೆ ಮೂಲ ಚೈತನ್ಯ ಎಂಬ ಅರ್ಥವೂ ಉಂಟು. ಶರೀರ ಸ್ವ ಇಚ್ಛೆಯಿಂದ ಉಸಿರಾಡುತ್ತಿಲ್ಲ. ಪ್ರತಿಕ್ಷಣವೂ ಪ್ರಾಣಶಕ್ತಿಯೇ ಶರೀರದೊಳಗೆ ಪ್ರವೇಶಿಸುತ್ತ ಹೊರ ಬರುತ್ತ ಶರೀರವನ್ನು ಉಸಿರಾಟಕ್ಕೆ ನಿಯೋಜಿಸುತ್ತದೆ. ಹಾಗೆಯೇ ಶರೀರದ ಇನ್ನಿತರ ಕ್ರಿಯೆಗಳನ್ನೂ ಪ್ರಾಣಶಕ್ತಿಯೇ ವಿವಿಧ ರೂಪಗಳ ಮೂಲಕ (ಅಪಾನ, ವ್ಯಾನ, ಉದಾನ, ಸಮಾನ ಇತ್ಯಾದಿ) ಸತತವಾಗಿ ನಿಯಂತ್ರಿಸುತ್ತಿದೆ ಎಂದು ಪತಂಜಲಿ ನುಡಿದಿದ್ದಾನೆ. ಪ್ರಾಣಶಕ್ತಿಯ ಈ ಲೀಲೆಯನ್ನೇ ಇಲ್ಲಿ ಬೇಂದ್ರೆ ಕಾವ್ಯಾತ್ಮಕವಾಗಿ ವಿವರಿಸಿದ್ದಾರೆ. ಈ ಪ್ರಾಣ ಶಕ್ತಿಯೇ ಭಗವಂತ ಎಂಬ ಭಾವ ಭಾರತೀಯ ಪರಂಪರೆಯಲ್ಲಿದೆ.


'ನಾನು ಕಾಲುಮಣೆಯು ತಮ್ಮ ಮಹಾಪಾದ ಪೀಠಕೆ
ತಮ್ಮಡಿಗಳು ಮುಟ್ಟಿದೊಡನೆ ಅರಳಿ ಕಮಲವಾದೆನು'

ಎಂದು ಬೇಂದ್ರೆಯವರು ರೂಪಕಾತ್ಮಕವಾಗಿ ಬಣ್ಣಿಸಿದ್ದಾರೆ. ಅದು ಈ ಜನ್ಮದ ಸಾರ್ಥಕತೆ; ವಿಕಸಿಸಿ ಕಂಪುಬೀರುವ ಆಹ್ಲಾದ. ಅಲ್ಲಿ ನೃಸಿಂಹ ಸ್ವಾಮಿಯು ಲಕ್ಷ್ಮಿಯೊಡನೆ ವಾಸಿಸಲಿ ಎಂದು ಪ್ರಾರ್ಥಿಸಿದ್ದಾರೆ.

ಈ ಬದುಕಿನ ಮಿತಿ ಅರಿತ ಕವಿಯು 'ಅಣುರೇಣುವು ತಮ್ಮದಿಹುದು, 'ನಾನು' ಎಂಬುದಾಟವು' ಎಂದು ಹೇಳಿದ್ದಾರೆ. ತನ್ನನ್ನು ರಕ್ಷಿಸುವ ರೇವು (ಬಂದರು) ತಾವು ಎಂದು ರಕ್ಷಣೆ ಬಯಸಿ ವಂದಿಸಿ ಧ್ಯಾನಿಸಿದ್ದಾರೆ.

(ವಿಜಯ ಕರ್ನಾಟಕ, ಬೋಧಿವೃಕ್ಷ, 3–6–2017)

■



ಜಪಿಸುತಿರೋ ಶಪಿಸದಿರು

ಬೇಂದ್ರೆಯವರು ಸದ್ಭಾವವೇ ಓಂಕಾರ ಮಂತ್ರವಾಗಿ ತನ್ನಲ್ಲಿ ಒಂದಾಗಿರುವುದನ್ನು ತಿಳಿಸಿದ್ದಾರೆ: 'ಸದ್ಭಾವವೊಂದು ಎದೆಮಿಡಿತದಂತೆ ಓಂಕಾರ ಧ್ವನಿಸುತಿಹುದು.' (ಚೈತ್ಯಾಲಯ). ಜಗದ ಎಲ್ಲ ಸಂತ ಮಹನೀಯರು ಧ್ಯಾನ ನೀಡುವ ಶಾಂತಿ, ಸಮಾಧಾನದ ಬಗ್ಗೆ ಜನರಿಗೆ ತಿಳಿಸಿ ಹೇಳುತ್ತಲೇ ಇದ್ದಾರೆ. ಆ ಧ್ಯಾನದ ಮಂತ್ರವು ಅವರವರ ಧಾರ್ಮಿಕ ನಂಬಿಕೆಯ ಶಕ್ತಿಶಾಲಿ ಪವಿತ್ರ ಪದಗಳಾದ ಓಂ, ರಾಮ, ಶಿವ, ಅಲ್ಲಾಹ್, ಜೀಸಸ್, ಆಗಿರಬಹುದು.

ಧ್ಯಾನ ಘನಮನವನ್ನುಂಟುಮಾಡಿ ಕ್ಷಣ ಕ್ಷಣವನ್ನು ಸಂತಸವಾಗಿಸುತ್ತದೆ. ಅದು ನಮಗೆ ಪ್ರಿಯವೂ ಆಪ್ತವೂ ಆದ ಮಂತ್ರವಾಗಿರುವುದರಿಂದ ಅದರಲ್ಲಿ ಲೀನವಾದಾಗ ಅದು ನಮ್ಮ ಚಿಂತೆಯನ್ನು ದೂರೀಕರಿಸಿ ನೆಮ್ಮದಿಯ ಸಮೀಪಕ್ಕೆ ಒಯ್ಯುತ್ತದೆ. ಆ ಮಂತ್ರದಿಂದ ಏಕಾಗ್ರತೆಯುಂಟಾಗಿ ಆಂತರಿಕ ಶುದ್ಧೀಕರಣ ಸಾಧ್ಯವಾಗುತ್ತದೆ. ದುರ್ಬಲ ಮನಸ್ಸನ್ನು ಜಾಡಿಸಿ ಒಗೆಯುತ್ತ ದೃಢಚಿತ್ತದ ಶಾಂತ ಸ್ಥಿತಿಗೆ ಕೊಂಡೊಯ್ಯುತ್ತದೆ.

ಕಣ್ಣುಮುಚ್ಚಿ ಧ್ಯಾನಲೀನವಾದಾಗ ನಮ್ಮ ಸಮಸ್ಯೆಯ ಹೊರ ಜಗತ್ತಿನ ಕತ್ತಲೆಗಳಿಗೆ ಆಂತರಿಕ ಸಮಸ್ಯಾ ಪರಿಹಾರಕ ಬೆಳಕು ಹೊಳೆಯುತ್ತದೆ. ಅದು ನಮ್ಮ ಆಂತರ್ಯದ ತಮಸ್ಸನ್ನು ಇಲ್ಲವಾಗಿಸುವ ಧ್ಯಾನದ ದೀಪ್ತಿ. ಶ್ರೀಮಾತೆಯವರು ಧ್ಯಾನದ ಬಗ್ಗೆ ಹೀಗೆ ತಿಳಿಸಿದ್ದಾರೆ:

'ಧ್ಯಾನಕ್ಕೆ ಕುಳಿತಾಗ ನಿಷ್ಕಪಟರೂ, ಸರಳರೂ ಆಗಿರಬೇಕು. ನಿಮ್ಮ ಬಾಹ್ಯ ಮನಸ್ಸು ಮಧ್ಯೆ ಪ್ರವೇಶಿಸಬಾರದು. ಏನನ್ನೂ ನಿರೀಕ್ಷಿಸದೆ, ಯಾವುದರ ಮೇಲೂ ಒತ್ತುಕೊಡದೆ ಇರಬೇಕು. ಒಮ್ಮೆ ಈ ಸ್ಥಿತಿ ಉಂಟಾದಾಗ ಉಳಿದದ್ದೆಲ್ಲ ನಿಮ್ಮ ಆಳದಲ್ಲಿರುವ ಅಭೀಪ್ಸೆಯ ಮೇಲೆ ಅವಲಂಬಿಸಿರುತ್ತದೆ ಮತ್ತು ನೀವು ದೈವತ್ವಕ್ಕೆ ಕರೆ ಕೊಟ್ಟರೆ ನಿಮಗೆ ಉತ್ತರ ದೊರಕುವುದು (14/58)

ಬೇಂದ್ರೆಯವರು ಧ್ಯಾನ ಮಾರ್ಗಿಯನ್ನು ಹೀಗೆ ಪ್ರಶ್ನಿಸಿದ್ದಾರೆ;

'ಧ್ಯಾನ ಪಕ್ವತೆ ಪಡೆದು ಮೌನ ಬೀಜವು ಸಿಡಿದು
'ಓಂ' ವೇದ ಪಡೆದಿರುವೆಯಾ?'   (ಸೂರ್ಯಪಾನ)

* * *

ಧ್ಯಾನ ಮನುಷ್ಯನ ಅಹಂ ಅನ್ನು ಇಲ್ಲವಾಗಿಸುತ್ತದೆ. ಆಗ ಅವನು ತನ್ನ ಮಿತಿ ಅರಿತು ನಗುತ್ತ ಹಗುರಗೊಳ್ಳುತ್ತಾನೆ. ತನ್ನ ಸಣ್ಣ ಪುಟ್ಟ ಸಾಧಾನೆಯ ಯಶಸ್ಸೆಂಬ ಅಹಂಕಾರ ಎಷ್ಟು ಕ್ಷುಲ್ಲಕ ಎಂದು ಆತ್ಮಶೋಧಕ್ಕೆ ತೊಡಗಿ ತೃಪ್ತ ಭಾವದತ್ತ ಸಾಗುತ್ತಾನೆ. ಸೋಲುಗಳ ಕಾರಣ ಕಾಣುತ್ತ ನಕ್ಕು ಆ ನೀರ್ಗುಳ್ಳೆಯಿಂದ ಬಿಡುಗಡೆಗೊಳ್ಳುತ್ತಾನೆ.


ತನ್ನ ಆಸೆ ಆಮಿಷದ ಚಿಂತೆಯಿಂದ ಕೊರಗುವಿಕೆ ಎಷ್ಟು ಅರ್ಥಹೀನ ಎಂದು ತಿಳಿದು, ವಿಶಾಲ ನೆಲೆಯ ಬದುಕಿನತ್ತ ಮುಖ ಮಾಡುತ್ತಾನೆ. ಧ್ಯಾನ ನೀಡುವ ಪ್ರೀತಿ, ದಯೆ, ಶಾಂತಿಯಲ್ಲಿ ಲೀನವಾಗುತ್ತ ಮನುಜನಾಗಿ ಹುಟ್ಟಿದುದರ ಸಾರ್ಥಕಭಾವದಲ್ಲಿ ಸಂತಸಗೊಳ್ಳುತ್ತಾನೆ. ಜಪದಲ್ಲಿ ತಾನಿದ್ದು ಇತರರ ಬಗ್ಗೆ ಕೋಪಗೊಳ್ಳದೆ, ಶಪಿಸದೆ ಮೌನದ ಧ್ಯಾನದಲ್ಲಿದ್ದಾಗ ಬಿತ್ತ ಬೀಜ ಮೊಳೆಯುವಂತೆ ; ಧ್ಯಾನದಲ್ಲಿ 'ಸಿಂಪಿ ತೆರೆದು ಬಹುದು ಮುತ್ತು' ವಿನಂತೆ ಮುತ್ತಾಗುತ್ತಾನೆ – ಎಂದು ಬೇಂದ್ರೆ ಧ್ಯಾನವನ್ನು ಕಾವ್ಯವಾಗಿಸಿದ್ದಾರೆ.

ಜಪಿಸುತಿರೋ ಶಪಿಸದಿರು
ಕುಪಿಸದಿರೋ ತಪಿಸುತಿರು
ಉಸಿರು ಮಸೆದ ಉರಿಯು ಆಗ
ಬೇಗೆ ಹತ್ತಿದಂತೆ ಬೇಗ

ತಲೆ ಮೊಳೆವುದು ಬಿದ್ದ ಬಿತ್ತು;
ಸಿಂಪಿ ತೆರೆದು ಬಹುದು ಮುತ್ತು.
ಅಲ್ಲಿವರೆಗು ಮೌನಗುರು.
ಅದರ ಶಿಷ್ಯ ನೀನಾಗಿರು.   (ಹೃದಯ ಸಮುದ್ರ)

(ವಿಜಯ ಕರ್ನಾಟಕ, ಬೋಧಿ ವೃಕ್ಷ, 29.4.2017)

■



ನಾಕುತಂತಿ

ಬೇಂದ್ರೆ ಅವರ ಕಾವ್ಯವು ರಸ, ರಮಣೀಯತೆ, ಪ್ರೇಮ, ಆನಂದ ಎಂಬ ನಾಲ್ಕು ಬಗೆಯ ಅರಿವಿನಿಂದ ಕೂಡಿದೆ. ಅವರ ಕಾವ್ಯವು ಒಂದು ಉತ್‌ಯೋಗ, ಆದುದರಿಂದ ಅವರು ಅದನ್ನು 'ಕಾವ್ಯೋದ್ಯೋಗ' ಎಂದು ಕರೆದು – ಯೋಗ ಸಾಧನೆಯನ್ನು ಕಾವ್ಯದಲ್ಲಿ ಕಂಡು ಕಾವ್ಯಯೋಗಿಯಾದರು. ಭಾವ, ಛಂದ, ಧ್ವನಿ ಮತ್ತು ಸಹೃದಯ ಸಂಸ್ಕಾರದಿಂದ ಕಾವ್ಯ ಸಾಧನೆಯನ್ನು ಮಾಡಿದರು. ಬೇಂದ್ರೆಯವರ ಕಾವ್ಯವನ್ನು ಭವ, ಭಾವ, ಅನುಭವ, ಅನುಭಾವದ ಪಥ ಹಿಡಿದು ಅಧ್ಯಯನ ಮಾಡಬೇಕು. ಅವರದು ಭವದ ಅನುಭವದೊಡನೆ ಅಚಿಂತ್ಯದ ಅನುಭಾವದೆಡೆಗೆ ಸಾಗಿದ ಕಾವ್ಯ. ಅದು ದೇಶ, ಕಾಲ, ನಿಮಿತ್ತವನ್ನು ಮೀರಿದ ಅನಂತಶಕ್ತನ ಅರಿವಿನತ್ತ ಸಾಗಿದ ಚಿಂತನೆ. ಅದು ಜಾತಿ, ಮತ, ಪಂಥ, ಧರ್ಮದ ಎಲ್ಲೆ ಮೀರಿದ ವಿಶಿಷ್ಟ ಮಾನವ ನೆಲೆಯ ಆಲೋಚನೆ.

ಭವದ ಬೆನ್ನಲಿ ಅನುಭವ ಬಂತು, ಅನುಭಾವ
ಭಾವದ ತಳಿಯಲ್ಲಿ ಮೈದೋರಿತು
ಸಹಾನುಭೂತಿಗೆ ಸ್ವಾನುಭೂತಿಯ ಕೂಡಿ
ಉದ್ಭವ ವಿಭೂತಿಯು ಒಡಮೂಡಿತು.

(ಮತ್ತೆ ಶ್ರಾವಣ ಬಂತು: ಬಾಲ್ಯಕಾಂಡ)

ಭವವು ಬೇಕು, ಅನುಭವವು ಬೇಕು, ಅನುಭಾವ ಬೇಕು ಒಳಗೆ, ಸ್ವರ್ಯಭುತ್ವದಾ ಜ್ಞಾನ ಬೇಕು, ಆ ಧೀ ಸಮಾಧಿ ಬೆಳಗೆ. (ಚೈತ್ಯಾಲಯ : ವಚನಗಳು)

ಟಾಲ್‌ಸ್ಟಾಯ್ ಅವರು without mysticism there can be no poetry, without poetry mysticism is superstition ಎಂದು ಹೇಳಿದ್ದಾರೆ. ಅಧ್ಯಾತ್ಮದ ಗೂಢವನ್ನು ಹೊಂದಿದ ಕಾವ್ಯ ಸಹೃದಯನನ್ನು ಚಿಂತನಶೀಲನನ್ನಾಗಿಸಿ ಅವನು ಅಂತರಾತ್ಮದ ಶೋಧಕ್ಕೆ ಒಳಗಾಗುವಂತೆ ಮಾಡುತ್ತದೆ. ಅಂತಹ ಜಿಜ್ಞಾಸು ಸಾಧನಾಮಾರ್ಗದಲ್ಲಿ ಸಾಗಲು ಬೇಕಾದ 'ಓಂ' ಕಾರದ ಚಿಂತನೆಯನ್ನು ಬೇಂದ್ರೆಯವರು ಕನ್ನಡದಲ್ಲಿ 'ನಾಕುತಂತಿ'ಯಾಗಿ ನೀಡಿದ್ದಾರೆ.

ಆವು ಈವಿನ

ನಾವು ನೀವಿಗೆ
ಆನು ತಾನದ
ತನನನಾಽ

ನಾಕುತಂತಿಯ 'ಆವು' ಈ ಕವನದ ಕೀಲಿಕೈ. ಅದು ಅರ್ಥವಾಗದಿದ್ದರೆ ಕವನ ಅರ್ಥವಾಗುವುದಿಲ್ಲ. 'ಆವು'ಯೆಂದರೆ ಹಸು. ಗ್ರಾಮೀಣರಲ್ಲಿ 'ಕರಾವು' ಎಂಬ ಪದ ಬಳಕೆಯಲ್ಲಿದೆ. ತೆಲುಗಿನಲ್ಲಿ ಹಸುವಿಗೆ ಈಗಲು 'ಆವು' ಎಂದು ಕರೆಯುತ್ತಾರೆ. ಈ ಜಗತ್ತು ಎಂಬ ಕಾಮಧೇನು ಈದದ್ದರಿಂದ ನಾವು ನೀವು ಆಗಿದ್ದೇವೆ. ಅದನ್ನು ನಡೆಸುವ 'ಆನು' ಎಂಬ ಆಧಾರ ಅಗೋಚರ ಶಕ್ತಿ ಚೈತನ್ಯವಾದ ಪರಮಾತ್ಮ ಇದ್ದಾನೆ ಎಂಬ ಅರಿವು ಉಂಟಾದಾಗ ಈ ಬದುಕು 'ತನನನಾಽ' ಸಂಗೀತದಂತೆ ಮಧುರವಾಗಿ ಸುಖಮಯವಾಗಿರುತ್ತದೆ.

ಕವಿಯು ಈ ಕವನದ ಎರಡನೇ ಭಾಗದಲ್ಲಿ

'ಗೋವಿನ ಕೊಡುಗೆಯ
ಹಡಗದ ಹುಡುಗಿ
ಬೆಡಗಿಲೆ ಬಂದಳು ನಡುನಡುಗಿ

ಎಂದು ಪ್ರತಿಮಾತ್ಮಕವಾಗಿ ಹೇಳಿದ್ದಾರೆ. ಇದನ್ನು ವಿಮರ್ಶಿಸುತ್ತ ಕೀರ್ತಿನಾಥ ಕುರ್ತಕೋಟಿಯವರು–'ಮುಟ್ಟದ ಮಾಟದ ಹುಟ್ಟದ ಹುಟ್ಟಿಗೆ' ದೂರದ ನಾಡಿನಿಂದ ಹಡಗದಿಂದ ಬಂದ ಹುಡುಗಿ, ಬತ್ತಲೆಯಿಂದಲೆ ತನ್ನ ಸೌಂದರ್ಯವನ್ನು ಮುಚ್ಚಿಕೊಂಡವಳು' –ಎಂದು ತಿಳಿಸಿದ್ದಾರೆ. (ಬೇಂದ್ರೆಯವರ ಕಾವ್ಯದಲ್ಲಿ ಶ್ರುತಿ ಮತ್ತು ಕೃತಿ : ಪು–4) ಆದರೆ ನನ್ನ ಅಧ್ಯಯನದ ಪ್ರಕಾರ 'ಹಡಗದ ಹುಡುಗಿ' ಸುಭದ್ರವಾದ ಕಟ್ಟು ಮಸ್ತಾದ ಮೈಕಟ್ಟಿನ ಎತ್ತರದ ನಿಲುವಿನ ಹೆಣ್ಣು. ಜನಪದರ ನುಡಿಗಟ್ಟಿನಲ್ಲಿ ಈ ಪದದ ಬಳಕೆ ಹೀಗಿದೆ. 'ಗಂಡ ಕೊಡವಿ ಹೋದ ರೆಂಬೆ ಅಂಗವ್ನೆ. ಹೆಂಡ್ತಿ ಹಡಗು ಇದ್ದಂಗವ್ಳೆ'. ನಾನು ಆ ಹೆಣ್ಣನ್ನು ಜ್ಞಾನಕನ್ಯೆ ಎಂದು ಕರೆದಿದ್ದೇನೆ. ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಹಾದ್ರಿಹಳ್ಳಿಯ ನನ್ನ ಸ್ನೇಹಿತ ಷಣ್ಮುಖ ಹಡಗದ. ಎತ್ತರದ ನಿಲುವಿನ ಕಟ್ಟುಮಸ್ತಾದ ವ್ಯಕ್ತಿ. ಆತನ ಮನೆತನದ ಹೆಸರು 'ಹಡಗದ'.

ಆತ್ಮಜ್ಞಾನದ ಶೋಧದಲ್ಲಿ ಒಂದಾದ ಯೋಗಿ ಷಟ್‌ಚಕ್ರಗಳ ಉನ್ಮೀಲನೆಗೆ ಒಳಗಾದ ಪ್ರತಿಮೆಗಳು ಈ ಭಾಗದಲ್ಲಿವೆ. ಮೂಲಾಧಾರ, ಅಧಿಷ್ಠಾನ, ಮಣಿಪುರ, ಅನಾಹತ, ವಿಶುದ್ಧಿ, ಆಜ್ಞಾಚಕ್ರದ ಮೂಲಕ ಸಹಸ್ರಾರದಲ್ಲಿ ಬೆಳಕು ಕಂಡ ಯೋಗಿಯ ಅನುಭವ ಇಲ್ಲಿ ಕಾವ್ಯವಾಗಿ ಹರಿದಿದೆ.

ನಾಡಿಯ ನಡಿಗೆಯ
ನಲುವಿನ ನಾಲಿಗೆ
ನೆನೆದಿರೆ ಸೋಲುವ
ಸೊಲ್ಲಿನಲಿ,

ಮುಟ್ಟದ ಮಾಟದ
ಹುಟ್ಟದ ಹುಟ್ಟಿಗೆ
ಜೇನಿನ ಥಳಿಮಳಿ
ಸನಿಹ ಹನಿ ;

ಬೆಚ್ಚಿದ ವೆಚ್ಚವು
ಬಸುರಿನ ಮೊಳಕೆ
ಬಚ್ಚಿದ್ದಾವುದೊ
ನಾ ತಿಳಿಯೆ.

'ನಾಡಿನ ನಡಿಗೆಯ' ಎಂಬುವುದು ಉನ್ಮುಖಗೊಂಡ ಕುಂಡಲಿನೀ ಶಕ್ತಿ ಇಡಾ ಪಿಂಗಳ ನಾಡಿಗಳ ಮೂಲಕ ಸುಷುಮ್ನಾ ನಾಡಿಯನ್ನು ಸೇರಿ ಊರ್ಧ್ವಮುಖವಾಗುವುದರ ಸೂಚನೆ. ಅದು 'ನಲುವಿನ ನಾಲಿಗೆ' ಯಾಗಿದೆ. ಅಂದರೆ ಇಲ್ಲಿ ನಾಲಿಗೆ ಕುಂಡಲಿನೀ (ಸರ್ಪ) ಶಕ್ತಿಯನ್ನು ಪ್ರತಿಮಿಸುತ್ತದೆ. 'ನೆನೆದರೆ ಸೋಲುವ' ಎಂಬುದು–ಸಹಸ್ರಾರ ಸೇರಿದಾಗ ದ್ರವಿಸುವ ಅಮೃತ ಪಾನದಿಂದ ತೊಯ್ದಿರಲು – ಅರ್ಥಾತ್ ಜೀವಾತ್ಮ ಮತ್ತು ಪರಮಾತ್ಮ ಒಂದಾದಾಗ ಮೌನ ಆವರಿಸುವ ಭಾವವನ್ನೂ ಪ್ರತಿಮಿಸುತ್ತದೆ. ಅದು ನಾಮಸ್ಮರಣೆಯ ಮಾತು (ಸೊಲ್ಲು) ಸೋಲುವುದರ (ನಿಲ್ಲುವುದರ) ಸೂಚನೆಯಾಗಿದೆ.

ಪರಬ್ರಹ್ಮನಿಗೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಅಂದರೆ ಹುಟ್ಟೂ ಇಲ್ಲ, ಸಾವೂ ಇಲ್ಲ. ಅದನ್ನು ಬೇಂದ್ರೆಯವರು ಪ್ರತಿಮಾಪೂರ್ವಕವಾಗಿ 'ಮುಟ್ಟದ ಮಾಟದ, ಹುಟ್ಟದ ಹುಟ್ಟಿಗೆ' ಎಂದಿದ್ದಾರೆ. ಅದು ಜೇನು ಹುಟ್ಟಿನಂತಹ ಸೃಷ್ಟಿ ಅಂತಹದರ ಫಲವೆಂದರೆ 'ಜೇನಿನ ಥಳಿ ಮಳಿ'. ಸಿಹಿ ತಳಿಯ ಮಳೆ ಅರ್ಥಾತ್ ಅಮೃತವರ್ಷ. ಅದು ಹತ್ತಿರದಲ್ಲೇ 'ಸನಿಹ ಹನಿ' ಯಾಗಿ ಅಮೃತಧಾರೆಯ ಬಿಂದುಗಳನ್ನು ತೊಟ್ಟಿಕ್ಕುವ ಆನಂದ ವೃಷ್ಟಿ. ಅಂಥ ಬ್ರಹ್ಮ ಸೃಷ್ಟಿಯಲ್ಲಿ ಬೆಸುಗೆಗೊಂಡ ಜೀವಾತ್ಮಗಳು (ಬೆಚ್ಚಿದ ವೆಚ್ಚವು) ಮುಕ್ತಿಯ ಅಥವಾ ಸಾಕ್ಷಾತ್ಕಾರಕ್ಕಾಗಿ ಅಂಕುರಗೊಂಡಿವೆ. (ಬಸುರಿನ ಮೊಳಕೆ). ಅಂತಹ ಸಾಕ್ಷಾತ್ಕಾರದ ದಿವ್ಯ ಕ್ಷಣದಲ್ಲಿ ಬಚ್ಚಿಟ್ಟಿದ್ದೇನು, ಮುಚ್ಚಿಟ್ಟಿದ್ದೇನು ಎಂಬ ಯಾವ ಪರಿವೆಯೂ ಜೀವಾತ್ಮನಿಗೆ ಇರುವುದಿಲ್ಲ. ಅಂದರೆ ಅವನು ಆನಂದ ತುಂದಿಲನಾಗಿರುತ್ತಾನೆ, ಸಚ್ಚಿದಾನಂದ ಸ್ವರೂಪಿಯಾಗಿರುತ್ತಾನೆ. ಎಂಬ ಭಾವ ಮೇಲಿನ ನುಡಿಗಳಲ್ಲಿದೆ.

ಈ ಕವನದ ಮೂರನೇ ಭಾಗ ಸವಾಲು ಜವಾಬಿನ ರೀತಿಯಲ್ಲಿದೆ. ಅಲ್ಲಿ ಸ್ವಾಮಿ (ಸಾವೀ)ಯ ಮಗಳಾದ ಜ್ಞಾನಕನ್ಯೆ, ಭಾವಿ (ಮುಂದೆ ಆಗಲಿರುವ) ಮಗಳಾದ ಮೋಕ್ಷ ಕನ್ಯೆಯರ ದಿಗಿಲು ಹುಟ್ಟಿಸುವ ಎಚ್ಚರಿಕೆಯ ಮಾತಿಗೆ ಜೀವಿ (ಕವಿ) ಕೊಟ್ಟ ಉತ್ತರವಿದೆ.

'ಚಿತ್ತೀ ಮಳಿ, ತತ್ತಿ ಹಾಕತಿತ್ತು
ಸ್ವಾತಿ ಮುತ್ತಿನೊಳಗ
ಸತ್ತಿಽಯೊ ಮಗನಽ
ಅಂತ ಕೂಗಿದರು

ಸಾವೀ ಮಗಳು, ಭಾವೀ ಮಗಳು ಕೂಡಿ'

ಸಾಧಾರಣ ಮನುಷ್ಯನಾಗಿದ್ದ ವ್ಯಕ್ತಿ ಯೋಗಿಯಾದದ್ದು – ಸ್ವಾತಿ ಮಳೆಯ ಹನಿ ಚಿಪ್ಪಿನಲ್ಲಿ ಬಿದ್ದು ಮುತ್ತು ಆದಂತೆ, ಅದನ್ನು ಮತ್ತೆ ನೀರಿಗೆ ಹಾಕಿದರೆ ನೀರು ಆಗುವುದಿಲ್ಲ. ಹಾಗೆ ಷಟ್‌ಚಕ್ರದ ಉನ್ಮೀಲನೆಗೆ ಒಳಗಾದ ಯೋಗಿ ಸತ್, ಚಿತ್, ಆನಂದದ 'ಸತ್' ಆಗಿ ಹೋದ ಎಂಬುದನ್ನು ಸಾವೀ ಮಗಳು ಭಾವೀ ಮಗಳು ಕೂಡಿ ಹೇಳುತ್ತಿದ್ದಾರೆ.

ಅರಿಸ್ಟಾಟಲ್‌ನಿಂದ ಡಾ. ಎಸ್. ರಾಧಾಕೃಷ್ಣನ್‌ವರೆಗೆ ಈ ನೆಲದ ಆಧ್ಯಾತ್ಮಿಕ ಚಿಂತಕರು ಆಲೋಚಿಸಿದ ಈ ಲೋಕದಲ್ಲಿ ಮನುಷ್ಯ ಜನ್ಮದ ಅರ್ಥ ಮತ್ತು ಸಾರ್ಥಕತೆಯನ್ನು ಬೇಂದ್ರೆ 'ನಾಕುತಂತಿ' ಯಾಗಿ ಕನ್ನಡದಲ್ಲಿ 'ಓಂ' ಕಾರದಂತೆ ಮಿಡಿದಿದ್ದಾರೆ.

ಈ 'ನೀನು' ಎಂಬ ಶರೀರದಲ್ಲಿರುವ' ನಾನು' ಎಂಬ 'ಅಹಂಕಾರ' ಸಂಕುಚಿತ ಸ್ವಾರ್ಥವನ್ನು ಹೊಂದಿದೆ. ಅದನ್ನು ನುಡಿಸುತ್ತಾ ಅದರ ಮಿತಿಯನ್ನು ಅರಿತು ಅದನ್ನು ತಹಬದಿಗೆ ತಂದುಕೊಂಡಾಗ ಮನುಷ್ಯನ ಆಲೋಚನೆ ವಿಶಾಲವಾಗಿ ಕುಟುಂಬ, ದೇಶ, ಕಾಲದ ಮಿತಿಯನ್ನು ಮೀರಿ ವಿಶ್ವವ್ಯಾಪಿಯಾಗಿ ವಿಶ್ವಸಂಗ್ರಹಾತ್ಮಕವಾಗುತ್ತದೆ. ಇಂದ್ರಿಯ ಸೇವಕನಾಗಿದ್ದ 'ನೀನು' ಎಂಬ ಶರೀರ ಹೊಂದಿದ ವ್ಯಕ್ತಿ ಬುದ್ಧಿಯ ಉಪಾಸಕನಾಗಿ 'ತಾನು' ಎಂಬ 'ಆತ್ಮ'ದ ಆಧಾರದಿಂದ 'ಅನು' ಎಂಬ ಪರಮಾತ್ಮನ ಶೋಧಕ್ಕೆ ತೊಡಗುತ್ತಾನೆ. ಆಗ ಅದು ಲೋಕ ಸಂಗ್ರಹಾತ್ಮಕವಾಗಿ 'ಆನು'ವಿನ ನಿಜರೂಪದ ಅನುಭವವಾಗಿ ಆ ಅನುಭಾವದ ನೆಲೆಯಲ್ಲಿ ಶಾಂತಿಯನ್ನು ಕಾಣುತ್ತಾ ಆನಂದಮಯವಾಗುತ್ತಾನೆ. ಆ ಆನಂದವೇ 'ಆನು'. ವ್ಯಕ್ತಿ ಸತ್ಯಶೋಧಕನಾಗಿ, ನಿರ್ಭಯದ ಆಯುಧವಿಡಿದು ಹೊರಟು ಸಮಷ್ಟಿಯ ಶಾಂತಿ ಸುಖವನ್ನು ವ್ಯಷ್ಟಿಯ ನೆಲೆಯಿಂದ ಸಾಧಿಸುತ್ತಾನೆ.


ಈ ರೀತಿ ಮರ್ತ್ಯಜೀವಿ ಎಂಬ ವೀಣೆಗೆ ನಾಕೇ ನಾಕು ತಂತಿ. ಅದನ್ನು 'ಎಂದರೆ ನುಡಿದರು ; 'ನಿಲ್ಲಿಸಿದರು' ಅಂದರೆ ನುಡಿಸುವುದನ್ನು ಬಿಟ್ಟರು ಆ ನಾಕುತಂತಿ 'ಓಂ ದಂತಿ'ಯನ್ನು ನೆನಪಿಸುವ 'ಓಂ'ಕಾರವಾಗಿದೆ. ಪ್ರಣವನಾದವಾಗಿದೆ.

ಅದು ಕನ್ನಡದ ನಾಕುತಂತಿ, ವಿಶ್ವದ ನೆಲೆಗೆ ಕೊಂಡೊಯ್ಯುವ ಶಾಂತಿ ಸಾಧಕ ಮಂತ್ರ. ಅದು ಅಂಬಿಕಾತನಯದತ್ತನ ತಪಸ್ಸಿನ ಫಲ.

'ನಾನು', 'ನೀನು'
'ಆನು' 'ತಾನು'
ನಾಕೆ ನಾಕು ತಂತಿ
ಸೊಲ್ಲಿಸಿದರು
ನಿಲ್ಲಿಸಿದರು
ॐ ಓಂ ದಂತಿ !

(ವಿಜಯ ಕರ್ನಾಟಕ, ಬೋಧಿವೃಕ್ಷ, 15.4.2017)

■



'ನಾನು' – ಆತ್ಮಚಿಂತನ

'1. ದೇಹಕೊಟ್ಟ ತಾಯಿ; 2. ಮಾತು ಕಲಿಸಿದ ತಾಯಿ; 3. ಸಂಸ್ಕಾರ ಸಂಪನ್ನ ಮಾಡಿದ ತಾಯಿ; 4. ಭೂಮಂಡಲದ ಮಾನವತೆಯಲ್ಲಿ ನೆಲೆಸಿದ ತಾಯಿ; 5. ವಿಶ್ವೋದರದಲ್ಲಿ ಧರಿಸಿದ ತಾಯಿ. ಈ ಐದು ಐದೆಯರು ದತ್ತನ ತಾಯಂದಿರು. ಇದು ಪಂಚಕೋಶ ಗರ್ಭ' ಎಂದು ಬೇಂದ್ರೆಯವರು ಸಾಹಿತ್ಯದ ವಿರಾಟ್ ಸ್ವರೂಪ (ಪು. 50)ದಲ್ಲಿ ತಿಳಿಸಿದ್ದಾರೆ.

ಪಂಚಮಹಾಭೂತಗಳ ಉತ್ಪತ್ತಿಗೆ ಕಾರಣವಾದ ಶಬ್ದ, ರಸ, ಸ್ಪರ್ಶ, ರೂಪ ಮತ್ತು ಗಂಧಗಳೆಂಬ ಐದು ಪದಾರ್ಥಗಳು ಪಂಚತನ್ಮಾತ್ರ. ಈ ಪಂಚತನ್ಮಾತ್ರಗಳನ್ನು ಬೇಂದ್ರೆಯವರು ಪ್ರತಿಮಾತ್ಮಕವಾಗಿ ಐದು ತಾಯಿಯರಲ್ಲಿ ಕಂಡಿದ್ದಾರೆ. ಶರೀರಾಂತರ್ಗತವಾದ ಆತ್ಮನನ್ನು ಆವರಿಸಿಕೊಂಡಿರುವ ಐದು ಪದರಗಳು ಪಂಚಕೋಶಗಳು ಎಂದು ವೇದಾಂತ ತಿಳಿಸುತ್ತದೆ. ಜೀವನಿಗಿರುವ ಆ ಐದು ಆವರಣಗಳು ಅನ್ನ ಮಯ (ಸ್ಥೂಲದೇಹ), ಪ್ರಾಣಮಯ (ಉಸಿರು), ಮನೋಮಯ (ಮನಸ್ಸು), ವಿಜ್ಞಾನಮಯ (ಬುದ್ಧಿ) ಮತ್ತು ಆನಂದಮಯ (ವಿಷಯ ಸುಖದ ಅನುಭವ). ಕೋಶವು ಆತ್ಮನ ಮುಸುಕು.

ಬೇಂದ್ರೆಯವರು 'ನಾನು' ಕವನದಲ್ಲಿ ವಿಶ್ವಮಾತೆ, ಭೂಮಿ ತಾಯಿ, ಭರತಮಾತೆ, ಕನ್ನಡದ ತಾಯಿ, ತನ್ನನ್ನು ಹೆತ್ತತಾಯಿ ಅಂಬವ್ವರನ್ನು ಸ್ತುತಿಸುತ್ತ 'ಈ ಐದು ಐದೆಯರೆ ಪಂಚಪ್ರಾಣಗಳಾಗಿ ಈ ಜೀವ ದೇಹನಿಹನು!' ಎಂದು ತಿಳಿಸಿದ್ದಾರೆ. ಆ ಪಂಚಪ್ರಾಣಗಳು ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನ. ಪ್ರಕೃತಿಯು ಜೀವಿಗೆ ಅನುಕೂಲಳಾಗಿರುವುದರ ಪ್ರಕಟರೂಪವೇ ಈ ಐದು ಜನ ತಾಯಿಯರು. ಇದು ಜೀವ ಜಗತ್ಸಂಬಂಧವನ್ನು ಐದು ಮಾತೆಯರಲ್ಲಿ ಬೇಂದ್ರೆ ಕಂಡ ರೀತಿ ಮತ್ತು ಆ ತಾಯಿಯರ ಕೃಪೆಯಿಂದ 'ಅಂಬಿಕಾತನಯ'ನ ಆತ್ಮೋತ್ಕರ್ಷವಾಗಿದೆ ಎಂಬ ಅರಿವು.

ಪ್ರತಿ ಜೀವಿಗೂ ಹೊರಗಣ ಶರೀರ, ಒಳಗಿನ ಆತ್ಮ ಎಂಬ ಇಬ್ಬಗೆಯರೂಪವಿದೆ. ಬೇಂದ್ರೆಯವರು ತನ್ನ ಶರೀರವನ್ನು 'ದತ್ತಾತ್ರೇಯ ಬೇಂದ್ರೆ' ಎಂದು ಪ್ರತ್ಯೇಕಿಸಿ, ತನ್ನ ಒಳಗಿನ ಆತ್ಮವನ್ನು, 'ಅಂಬಿಕಾತನಯದತ್ತ,' ಎಂದು ಕರೆದರು. ಈ ವಿಂಗಡಣೆಯಿಂದ ದೇಹದ ಸುಖದುಃಖ ಪ್ರತ್ಯೇಕ ಎಂದು ತಿಳಿದು ತಮ್ಮ ಜೀವನದಲ್ಲಿ ಎದುರಾದ ಕಷ್ಟ, ದುಃಖ, ಸಾವು, ನರಳಾಟವನ್ನು ಪರಕೀಯದಂತೆ ಭಾವಿಸಿದರು. ಆತ್ಮದ ಸ್ವಾತಂತ್ರ್ಯದಲ್ಲಿ ತಾವಿದ್ದರು.

ಬೇಂದ್ರೆಯವರ ಜೀವನವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅವರು ಒಂದು ಬಗೆಯಲ್ಲಿ ವೈರಾಗಿಯಂತಿದ್ದರು. ವೈರಾಗ್ಯವೆಂದರೆ ನಿಗ್ರಹ, ಸಹನೆ, ತಾಳ್ಮೆ. ಅದು ಆತ್ಮವನ್ನು ದೇಹದಿಂದ ಬೇರೆಮಾಡುವ ಜಾಣ್ಮೆಯನಡೆ. ದೇಹಕ್ಕೆ ಅಂಟಿಕೊಂಡು ಬಂದ ಸಂಸಾರದ ಕಷ್ಟ ಕಾರ್ಪಣ್ಯವನ್ನು ಬೇರೆಯಾಗಿ ಕಂಡದ್ದು ಅವರ ಆತ್ಮದ ವಿವೇಕ.

ಪರಮಾತ್ಮನ ಅಂಶವೇ ತನ್ನಲ್ಲಿ ಆತ್ಮವಾಗಿ ಕಂಗೊಳಿಸುತ್ತಿದೆ ಎಂಬ ಆಧ್ಯಾತ್ಮಭಾವದಲ್ಲಿ ಅಂಬಿಕಾತನಯ ರೂಪಕಾತ್ಮಕವಾಗಿ ಅನುಭಾವ ಕಾವ್ಯ ರಚಿಸಿದರು;

ಹೃದಯಾರವಿಂದದಲ್ಲಿರುವ ನಾರಾಯಣನೆ
ತಾನಾಗಿ ದತ್ತನರನು !
ವಿಶ್ವದೊಳ ನುಡಿಯಾಗಿ ಕನ್ನಡಿಸುತಿಹನಿಲ್ಲಿ
ಅಂಬಿಕಾತನಯನಿವನು ! **(ಗಂಗಾವತರಣ)**

ವಿಶ್ವ ಚೈತನ್ಯದ ಚಾಲಕ ಶಕ್ತಿ ನಾರಾಯಣ. ಅವನ ಆಂತರ್ಯದ ಒಳನುಡಿ ಜಗದ ಕಲ್ಯಾಣ. ಅದನ್ನು ಅಂಬಿಕಾತನಯದತ್ತ ಕವಿ ಕನ್ನಡದಲ್ಲಿ ಕನ್ನಡಿಸುತ್ತಿದ್ದಾನೆ. ವಿಶ್ವಕಲ್ಯಾಣದ ಚಿಂತನೆಯನ್ನು ಕನ್ನಡ ಭಾಷೆಯಲ್ಲಿ ಕನ್ನಡಿಯಂತೆ ಸ್ಪಷ್ಟವಾಗಿ ಗೋಚರಿಸುವಂತೆ ಕಾವ್ಯರಚಿಸುತ್ತಿದ್ದಾನೆ. ಇಲ್ಲಿ ಕನ್ನಡ, ಕನ್ನಡಿಸು ಕವಿಯ ಚತುರ ನುಡಿಬೆಳಕಿನಲ್ಲಿ ಕಂಗೊಳಿಸುತ್ತಿದೆ.

ಜೀವಾತ್ಮನಾದ ಬೇಂದ್ರೆ ಪರಮಾತ್ಮನನ್ನು ಪ್ರಕೃತಿಯ ಸತ್ ಮತ್ತು ಶಕ್ತಿ ಎಂದು ಪರಿಭಾವಿಸುತ್ತ ಐದು ಜನ ಮಾತೆಯರಲ್ಲಿ ಆ ಪ್ರೋಜ್ವಲ ಪ್ರಕಾಶವನ್ನು ಕಂಡಿದ್ದಾರೆ. ಅದು ಅವರ ಸಾತ್ವಿಕ ಮನಸ್ಸು, ಪಾರಮಾರ್ಥಿಕ ಬುದ್ಧಿ ಐದು ಐದೆಯರಲ್ಲಿ ಪ್ರಕೃತಿಯ ತೇಜಸ್ಸಾಗಿ ಪ್ರಕಟಗೊಂಡ ರೀತಿ.

ಪರಮಾತ್ಮ ಬ್ರಹ್ಮವಸ್ತು. 'ಅಚಿಂತ್ಯ ರೂಪಮ್', ಅದನ್ನು ವರ್ಣಿಸಲಾಗದು. ಆದರೆ ಅದನ್ನು ಮಾತೆಯರ ರೂಪದಲ್ಲಿ ಕಂಡು ಅದರ ಅನುಭವದಲ್ಲಿ ಮೀಯುವುದು ಸಾಧ್ಯ ಎಂಬುದನ್ನು 'ನಾನು' ಕವನದಲ್ಲಿ ಬೇಂದ್ರೆ ಕಾಣಿಸಿದರು. ಆ ತಾಯಿಯರ ಧ್ಯಾನದಲ್ಲಿ ಮನವನ್ನು ಹದಗೊಳಿಸಿಕೊಂಡರು. ಆ ಚಿತ್ತಶುದ್ಧಿಯ ಫಲವನ್ನು ಕಾವ್ಯವಾಗಿ ನೀಡಿದರು. ಅದು ಕವಿಯ ಆಂತರಿಕ ಸತ್ತ್ವ ಹಿಗ್ಗಿ ಮಾತೆಯರಾಗಿ ಪ್ರಕಟಗೊಂಡ ಕನ್ನಡ ಕಾವ್ಯದ ಭಾಗ್ಯ.

ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು ಜೀವವು ಬ್ರಹ್ಮ ಚೈತನ್ಯದ ಅಂಶವೆಂದು ತಿಳಿಸಿದ್ದಾನೆ.

ಮಮೈವಾಂಶೋ ಜೀವಲೋಕೆ ಜೀವಭೂತಃ ಸನಾತನಃ ।
ಮನಃಷಷ್ಠಾನೀಂದ್ರಿಯಾಣಿ ಪ್ರಕೃತಿಸ್ಥಾನಿ ಕರ್ಷತಿ ॥ (15–7)

'ನನ್ನ (ಬ್ರಹ್ಮದ) ಅಂಶವೇ ಪ್ರಾಣಿಪ್ರಾಪಂಚದಲ್ಲಿ ಜೀವವಾಗಿರುವ ಶಾಶ್ವತ ಸತ್ತ್ವ ಅದು ಪ್ರಕೃತಿಯಲ್ಲಿರುವ ಪಂಚೇಂದ್ರಿಯಗಳನ್ನು ಆರನೆಯದಾದ ಮನಸ್ಸನ್ನು ಸ್ವಾಧೀನ ಪಡಿಸಿಕೊಂಡು ಆಳುತ್ತದೆ. (ಡಿ.ವಿ.ಜಿ ಜೀವನಧರ್ಮ ಯೋಗ)

ಈ ಚಿಂತನೆಯಲ್ಲಿ ರೂಪುಗೊಂಡ 'ನಾನು' ಕವನದಲ್ಲಿ ಪ್ರಕೃತಿಯ ಪಂಚೇಂದ್ರಿಯಗಳಲ್ಲಿ ಐದು ಜನ ತಾಯಿಯರನ್ನು ಕಂಡ ಬೇಂದ್ರೆಯವರ ಮಾತೃ ಆರಾಧನೆ ಭಾರತೀಯ ಪರಂಪರೆಯಲ್ಲಿ ನವನವೀನ ವಾಗಿದೆ. ಪ್ರಪಂಚದಲ್ಲಿ ಪದಾರ್ಥಗಳ ಮೂಲವಸ್ತುಗಳೇ ಪಂಚಭೂತಗಳು. ಅವುಗಳಿಂದಾದುದು ಈ ಶರೀರ. ವಿಶ್ವಮಾತೆ ಆಕಾಶ; ಭೂಮಿತಾಯಿ – ಪೃಥಿವಿ ; ಭರತಮಾತೆ – ತೇಜಸ್ಸು ; ಕನ್ನಡ ತಾಯಿ – ವಾಯು ; ಹೆತ್ತತಾಯಿ – ಆಪಸ್ಸು (ನೀರು) ವಿನಿಂದಾದವನು ನಾನು ಎಂದು ಕವನ ರಚಿಸಿ ಆ ತಾಯಿಯರನ್ನು ಧ್ಯಾನಿಸಿದ್ದಾರೆ.

ಕ್ಷರದೇಹ – ಬೇಂದ್ರೆ, ಅಕ್ಷರ ಆತ್ಮ – ವಿಶ್ವ ಚೈತನ್ಯಾಂಶದ ನಾಶವಿಲ್ಲದ ನಿರ್ವಿಕಾರ ಸಾಕ್ಷಿದೆಶೆಯ – ಅಂಬಿಕಾತನಯದತ್ತ ಕವಿ ಎಂದು ಅವರು ಪರಿಭಾವಿಸುತ್ತಿದ್ದರು. ಒಂದು ಸಂದರ್ಶನದಲ್ಲಿ 'ನನ್ನಲ್ಲಿರುವ ಕವಿ ನನಗಿಂತ ಶಕ್ತಿಯುತವೆಂದು ನಾನು ತಿಳಿಯುತ್ತೇನೆ. The poet is more important than the body he possesses ನಮ್ಮ body disorganize ಆಗ್ತದೆ ಅದು dividual. ಆದ್ರೆ ಕವಿ in-dividual. Creative work ದೊಡನೆ ಕೆಲವರು interfere ಮಾಡ್ತಾರೆ. ಹೀಗ್ಮಾಡಿದರೆ ಕವಿ ಹೇಳಿದ್ದು ಅವರು ಬರೆದದ್ದು ಬೇರೆ ಬೇರೆ ಆಗ್ತದೆ. But the 'Poet' in me dictates and I take down. (ಮಾಸಿಕ ಪತ್ರಿಕೆ 'ಮಕರಂದ' ಮಾರ್ಚ್ 1966)

ಅವರು ತಮ್ಮನ್ನು ತಾವು ಹೀಗೆ ವಿಮರ್ಶಿಸಿಕೊಂಡಿದ್ದಾರೆ; 'ಬೇಂದ್ರೆ ಅಂಬಿಕಾತನಯನ ಕಾವ್ಯ ಉತ್ತಮ ಎಂದರೆ ಅವನಿಗೆ ಸೂಕ್ಕು; ಅದರ ಗುಣ ಹಾಗೂ ಹೀಗೂ ಎನ್ನುವದು ಕಷ್ಟ ಎಂದರೆ ಬೇಂದ್ರೆಗೆ ಬುದ್ಧಿ ಕಡಿಮೆ' (ಸಾ.ವಿ.ಸ್ವ–ಪು.125). ಕವಿಯ ಉತ್ತಮ ಉದ್ದೇಶದ ತೊಳಲಾಟವನ್ನು ಅವರು ಹೀಗೆ ಹೇಳಿಕೊಂಡಿದ್ದಾರೆ– 'ಜೀವನವು ರಸಮಯ' ಎಂಬ ದೀಕ್ಷೆ ಕೊಡಲು ಅಂಬಿಕಾತನಯ ಹೆಣಗಾಡುತ್ತಾನೆ, ಬೇಂದ್ರೆ ಪ್ರಕೃತಿಯಲ್ಲಿ. (ಸಾ.ವಿ.ಸ್ವ–ಪು. 126)

(ವಿಜಯ ಕರ್ನಾಟಕ, ಬೋಧಿವೃಕ್ಷ, 9.9.2017)

■



ದೇವ ಜೀವನ ಕೇಂದ್ರ

ಈ ವಿಶ್ವದಲ್ಲಿ ಪ್ರಕೃತಿಯಾಗಿ ಗೋಚರಿಸುತ್ತಿರುವ ಪರಮಾತ್ಮನ ಶಕ್ತಿಯೇ ಮಾಯೆ. ಅದರಲ್ಲಿ ಅವನ ಕಲಾಕೌಶಲ್ಯವಿದೆ. ಈ ಲೌಕಿಕ ಜೀವನ ನಿರ್ವಹಣೆಯಲ್ಲಿ ಒಳಿತು ಕೆಡಕು, ಕಷ್ಟ ಸುಖ, ಗಂಡು ಹೆಣ್ಣು, ಬಡತನ ಸಿರಿತನದ ಪರಸ್ಪರ ವಿರೋಧಭಾವ ನಮ್ಮನ್ನು ಆಡಿಸುತ್ತಿದೆ. ಅದರ ಮಾಯಾಮೋಹದಲ್ಲಿ ನಾವಿದ್ದೇವೆ. ಅದರಿಂದ ಬಿಡುಗಡೆ ಹೊಂದುವುದು ನಮ್ಮ ನಡೆ ನುಡಿಯು ಶುದ್ಧವಾದಾಗ; ಭಗವಂತನ ಹಾರ್ದಿಕ ಭಕ್ತಿಯಲ್ಲಿ ಮಿಂದು ಚಿತ್ತಶುದ್ಧಿಯನ್ನು ಪಡೆದಾಗ. ಆ ಚಿಂತನೆಯನ್ನು ಸಾರುವ ಕವಿತೆ 'ಬದುಕು ಮಾಯೆಯ ಮಾಟ'.

'ಗುಂಭ' ಪದವನ್ನು ಬೇಂದ್ರೆಯವರು ಈ ಕವನದಲ್ಲಿ ಗಾಢ ಮೌನಕ್ಕೆ ಪ್ರತಿಮೆಯಾಗಿ ಬಳಸಿದ್ದಾರೆ. ಅದು ಆಳವಾದ ಕಡಲಿನ ಮೌನ. ಮಾಯೆಯ ಮಾಟದ ಈ ಬದುಕಿನಲ್ಲಿ ಎಲ್ಲರೂ ಹೊರಗೆಡಹುವ ಮಾತು–ಸಮುದ್ರದ ಮೇಲಿನ ಅಲೆಗಳ ನೊರೆ ತೆರೆಯಾಟ ಅಷ್ಟೆ. ಆದರೆ ಪ್ರತಿ ವ್ಯಕ್ತಿಯ ಜೀವನದಲ್ಲಿ ಅವನ ಅನುಭವವು ಸಮುದ್ರದ ಆಳದಂತೆ ಗಂಭೀರವಾಗಿ ತುಂಬಾ ಮೌನವಾಗಿರುತ್ತದೆ. ಕಡಲಿನ ಆಳ ಲೆಕ್ಕಕ್ಕೆ ಸಿಗದು. ಅದೇ ರೀತಿ ಮನುಷ್ಯನ ಮನಸ್ಸಿನ ಸ್ವರೂಪ ಎಂಬುದು ಕವಿಯ ಭಾವ.

'ಬದುಕು ಮಾಯೆಯ ಮಾಟ
ಮಾತು ನೊರೆ–ತೆರೆಯಾಟ
ಜೀವಮಾನದ ತುಂಬ ಗುಂಭ ಮುನ್ನೀರು' **(ಗಂಗಾವತರಣ)**

ಪ್ರತಿದಿನ ಲೋಕದ ಎಲ್ಲ ಜೀವಿಗಳ ಪಂಚೇಂದ್ರಿಯಗಳನ್ನು ಜಾಗೃತಗೊಳಿಸಿ ಅರಿವನ್ನುಂಟು ಮಾಡುವ, ಸುಖ ತರುವ, ಬಣ್ಣ ಬೆಡಗು ಬೀರುವ, ಒಳಿತಾಗುವ ಬೆಳಕನ್ನು ಸೂರ್ಯ ತರುತ್ತಾನೆ. ಅದು ಆಸ್ತಿಕರಿಗೆ ಪರಮಾತ್ಮನ ಅನುಭವ.

ಈ ನೆಲದ ಬದುಕಿನಲ್ಲಿ ಪರಮಾತ್ಮ ಸೂರ್ಯರೂಪಿಯಾಗಿ ಎಲ್ಲರನ್ನೂ ಎಲ್ಲವನ್ನೂ ಸಲಹುತ್ತಿದ್ದಾನೆ. ಆದರೆ ದೀನ ದಲಿತ ಅಸಹಾಯ ಜೀವಿಗಳ ಉಳಿವಿಗೆ ಇತರ

ಅನುಕೂಲಸ್ತರ ಕರುಣೆ ತುಂಬಾ ಅವಶ್ಯಕವಾಗಿದೆ. 'ಕರುಣೋದಯದ ಕೂಡ ಅರುಣೋದಯವು ಇರಲು' ಆಗ ಮಾತ್ರ ದೀನದಲಿತರ ಎದೆಯನ್ನು ರವಿಯ ಕಾಂತಿಯಂತೆ ಹೊಚ್ಚ/ನವೀನ, ಹೊಂಬಣ್ಣದ ನೀರು ತುಂಬುತ್ತದೆ ಎಂದು ಬೇಂದ್ರೆ ತಿಳಿಸಿದ್ದಾರೆ.

* * *

ಮನುಷ್ಯ ತನ್ನ ಮೋಹದಿಂದ, ಸ್ವಾರ್ಥದಿಂದ, ಅಹಂನಿಂದ ಎಲ್ಲದರಲ್ಲಿ ಭೇದವನ್ನು ಕಂಡು ತನ್ನ ನಿಜ ಆನಂದದಿಂದ ವಂಚಿತನಾಗಿದ್ದಾನೆ. ಅವನು ಭಗವಂತನನ್ನು ನಿರಭ್ರ ಆಕಾಶದ ನಿರ್ಮಲತೆಯಲ್ಲಿ, ರವಿ ಚಂದ್ರ ತಾರೆಗಳ ತೇಜಸ್ಸಿನಲ್ಲಿ, ಹೂವಿನ ಕೋಮಲತೆಯಲ್ಲಿ ಕಂಡು ಶುದ್ಧನಾಗಿ, ತೇಜಸ್ವಿಯಾಗಿ ಕಂಪುಗೊಳ್ಳಬೇಕಾಗಿದೆ.

ಗೀತೆಯು ॥ ಮಾಯಯ್ಯಾಽಪಹೃತ ಜ್ಞಾನಾಃ ॥ (7–15) ಮಾಯೆಯು ಜನದ ತತ್ತ್ವಜ್ಞಾನ ಸಾಮರ್ಥ್ಯವನ್ನು ಅಪಹರಿಸಿದೆ ಎಂದು ಹೇಳಿದೆ. ಆದರೆ ಶುದ್ಧಜೀವನದಲ್ಲಿ ತತ್ತ್ವಾನುಸಂಧಾನ ಸುಲಭ. ಅದನ್ನು ಸಾಧಿಸಲು ಬೇಂದ್ರೆಯವರು ಈ ಕವನದಲ್ಲಿ ತನ್ನ ಕೆಳೆಯನಿಗೆ ಹೀಗೆ ತಿಳಿಸಿದ್ದಾರೆ :

'ನಿಜದಲ್ಲೆ ಒಲವಿರಲಿ
ಚೆಲುವಿನಲೆ ನಲಿವಿರಲಿ
ಒಳಿತಿನಲೆ ಬಲವಿರಲಿ ಜೀವಕೆಳೆಯಾ'

ದೇವರು ಎಲ್ಲಿಯೊ ಹೊರಗಿಲ್ಲ. ಅವನು ಪ್ರತಿಯೊಬ್ಬರ ಜೀವನ ಕೇಂದ್ರದಲ್ಲಿದ್ದಾನೆ. ವ್ಯಕ್ತಿಯು ನಿಜದ ಒಲವಿನಲ್ಲಿದ್ದು, ಚೆಲುವನ್ನು ಆರಾಧಿಸಬೇಕು. ಒಳಿತಿನ ನಡೆಯೆ ಬಲ ಎಂದು ತಿಳಿದು ಬಾಳಬೇಕು. ಆಗ ಅವನೇ ಇಂದ್ರ. ಆಗ ದೊರಕುವ ಆನಂದ, ಆತ್ಮಶಾಂತಿ ವರ್ಣನಾತೀತ.

'ದೇವ ಜೀವನ ಕೇಂದ್ರ
ಒಬ್ಬೊಬ್ಬನೂ ಇಂದ್ರ
ಏನಿದ್ದರೂ ಎಲ್ಲ ಇಲ್ಲೆ ತಿಳಿಯಾ'.

* * *

ಜಗತ್ತಿನ ತಂದೆ ತಾಯಿಗಳಾದ ಶಿವ ಪಾರ್ವತಿಯರು (ಆತನಾಕೆಯೆ) ನಮ್ಮ ಜೀವನೌಕೆಯನ್ನು ನಡೆಸುತ್ತಿದ್ದಾರೆ. ಅವರು ಗೊತ್ತು ಮಾಡಿದ ರೀತಿ ಒಂದು ಗುರಿಯೆಡೆಗೆ ನಮ್ಮನ್ನು ಕೊಂಡೊಯ್ಯುತ್ತಾರೆ ಎಂದು ಪ್ರತಿಮಾತ್ಮಕವಾಗಿ ಕವಿ ಚಿತ್ರಿಸಿದ್ದಾರೆ. ಪರಮೇಶ್ವರನಿಗೆ ಶರಣು ಹೋಗಿದ್ದಾರೆ.

'ಆತನಾಕೆಯೆ ನಮ್ಮ
ಜೀವನೌಕೆಯ ತಮ್ಮ
ಧ್ರುವ ಮರೆಯದಂತೆ ನಡೆಸುತ್ತಲಿರಲಿ.'

ಇದೇ ಭಾವದಲ್ಲಿ 'ನೃಸಿಂಹಸ್ತೋತ್ರ'ದಲ್ಲಿ ಬೇಂದ್ರೆಯವರು ಅನಂತಶಕ್ತನನ್ನು ಹೀಗೆ ಪ್ರಾರ್ಥಿಸಿದ್ದಾರೆ.

'ಅಣುರೇಣುವು ತಮ್ಮದಿಹುದು, 'ನಾನು' ಎಂಬುದಾಟವು
ತಾವೆ ಜೀವನಾವೆಯಲ್ಲಿ ಕ್ರೀಡೆಯಾಡುತಿರುವಿರಿ
ತಾವು ನಮ್ಮ ರೇವು, ನಾವು ಎತ್ತ ಹೋಗಿ ಬಂದರು
ನಾರಾಯಣ ನಾರಾಯಣ ಶ್ರೀನೃಸಿಂಹ ಪಾಹಿ ಮಾಮ್' (ಸೂರ್ಯಪಾನ)


ಬೇಂದ್ರೆಯವರು ತನ್ನ ಜೀವ ಕೆಳೆಯನನ್ನುದ್ದೇಶಿಸಿ 'ಈ ನಾನು ಆ ನೀನು । ಒಂದೆ ತಾನಿನ ತಾನು' ಎಂದು ಹೇಳಿದ್ದಾರೆ. ತಾನ ವೆಂದರೆ ದಾರ; ಎಳೆ; ತಂತು. ಕವಿಯು ತಾನು ಮತ್ತು ಆ ಗೆಳೆಯ ಒಂದೇ ಎಂಬುದನ್ನು 'ತಾನು' ಪ್ರತಿಮೆಯಲ್ಲಿ ಹಿಡಿದಿಟ್ಟಿದ್ದಾರೆ. ಆ 'ತಾನು' ಎಂಬುದು ಭಗವಂತನೂ ಹೌದು. ಒಂದು ತಾನಿನ ಬಟ್ಟೆಯಲ್ಲಿ ಎಲ್ಲ ಎಳೆಯೂ ಒಂದೇ. ಒಂದೊಂದು ಎಳೆ ಪ್ರತ್ಯೇಕವಾಗಿದ್ದರೂ ನೆಯ್ಗೆಯಾಗುವಲ್ಲಿ ಒಂದಾಗಿ ಹೋಗಿರುತ್ತದೆ. ಅದರಲ್ಲಿ ಯಾವುದೇ ಏರು ಪೇರು ಗಳಿರುವುದಿಲ್ಲ. ಹಾಗೆ ಒಂದಾದ ಜೀವಕೆಳೆಯರಲ್ಲಿ ರಸಭಾವ ಒಂದೇ ಲಹರಿಯಲ್ಲಿ ಹರಿಯುತ್ತಿರುತ್ತದೆ. ಹಾಗೆ ಒಂದಾದ ಭಾವದಲ್ಲಿ 'ತಾಳಲಯ ರಾಗಗಳು ಸಹಜ ಬರಲಿ' ಎಂದು ಆಶಿಸಿದ್ದಾರೆ.

(ವಿಜಯ ಕರ್ನಾಟಕ, ಬೋಧಿವೃಕ್ಷ, 24.6.2017)

■

ಲೇಖಕರ ಕೃತಿಗಳು

1. ಹಾಡುಹಕ್ಕಿ ಅಂಬಿಕಾತನಯದತ್ತ (1995)
   ಮೂರನೆ ಆವೃತ್ತಿ, 2012
2. ಡಿ.ಆರ್. ಬೇಂದ್ರೆ (1997)
   ಮೈಸೂರು ವಿಶ್ವವಿದ್ಯಾನಿಲಯವು ಪ್ರಕಟಿಸಿರುವ ಆಂಗ್ಲಕೃತಿ.
3. ನಾಕುತಂತಿ – ಒಂದು ಟಿಪ್ಪಣಿ (2000)
   ಮೂರನೆ ಆವೃತ್ತಿ 2012
4. ರಸ್ತೆ ನಿಯಮಗಳು (2000)
   ಮೈಸೂರು ವಿಶ್ವವಿದ್ಯಾನಿಲಯವು ಪ್ರಕಟಿಸಿರುವ ಕೃತಿ.
   ಐದನೆ ಆವೃತ್ತಿ – 2015
5. ಹೂತ್ಕದ ಹುಣಸಿ (2000) (ದ.ರಾ. ಬೇಂದ್ರೆ ಕಾವ್ಯ ವಿಮರ್ಶೆ)
   ಎರಡನೆ ಆವೃತ್ತಿ – 2011
6. ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ – ಒಂದು ಅಧ್ಯಯನ (2001)
   (ಪಿ.ಎಚ್.ಡಿ. ಮಹಾಪ್ರಬಂಧ) ಎರಡನೆ ಆವೃತ್ತಿ 2012
7. ಬರೆಹದಲ್ಲಿ ಬೇಂದ್ರೆಯವರ ಬದುಕು (2008)
   ದ.ರಾ. ಬೇಂದ್ರೆ ರಾಷ್ಟ್ರೀಯ ಟ್ರಸ್ಟ್, ಧಾರವಾಡ ಪ್ರಕಟಿಸಿರುವ ಕೃತಿ.
8. ಅಂತರಂಗದತ್ತ ನಯನ (2010)
9. ಮಹಾಕವಿ ಲಕ್ಷ್ಮೀಶನ ವಚನ ಜೈಮಿನಿ ಭಾರತ (2012)
10. ಹರಿಹರ ಮಹಾಕವಿಯ ವಚನ ಗಿರಿಜಾಕಲ್ಯಾಣ (2013)
11. ಬೆಂದ್ರೆಯವರ ಸಾಹಿತ್ಯದಲ್ಲಿ ಶರಣ ಚಿಂತನೆ (2015)
12. ರಾಘವಾಂಕ ಮಹಾಕವಿಯ ವಚನ ಹರಿಶ್ಚಂದ್ರ ಚಾರಿತ್ರ (2015)
13. ತಿರುತಿರುಗಿಯು ಹೊಸತಾಗಿರಿ (2015)
    (ದ.ರಾ.ಬೇದ್ರೆಯವರ ನಾದಲೀಲೆಯ ಅಧ್ಯಯನ)
14. ಸಂತಕವಿ ಕನಕದಾಸರ ನಳದಮಯಂತಿ ಪ್ರೇಮಕಥೆ (2018)
15. ಬೇಂದ್ರೆಕಾವ್ಯ (2018) ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
16. ಬೇಂದ್ರೆಕಾವ್ಯ : ಪದನಿರುಕ್ತ (2018)



ಕೃಷ್ಣಪ್ಪ ಅವರು ಬೇಂದ್ರೆ ಕಾವ್ಯದ ಜೀವನ ದರ್ಶನವನ್ನು ತಮ್ಮ ಜೀವನದ ತೊಟ್ಟಿಲಿಗೆ ತಂದು ತೂಗಿ ಅರ್ಥೈಸುತ್ತಿದ್ದಾರೆ. ಹಾಗಾಗಿಯೇ ಇದು ದೇಶೀ ವಿಮರ್ಶೆ; ಪಾಶ್ಚಾತ್ಯ ಕಾವ್ಯ ವಿಮರ್ಶೆಯ ನೆರಳಿನ ನಿರೂಪಣೆ ಅಲ್ಲ. ಬೇಂದ್ರೆ ಕಾವ್ಯವೇ ಕೃಷ್ಣಪ್ಪ ಅವರಿಗೆ ಒಂದು ವಿಸ್ಮಯ, ಆನಂದ, ಅನಂತ ಕಾವ್ಯದ ಲೀಲೆ. ಇದನ್ನು ಯಾರಾದರೂ ಪ್ರಶ್ನಿಸಬಹುದು; ಆದರೆ ಇಷ್ಟು ಹಿರಿಯ ಗಾಂಧಿ ತತ್ವಾನುಯಾಯಿಯಾದ ಕೃಷ್ಣಪ್ಪ ಅವರಿಗೆ ಯಾವ ಸಾಹಿತ್ಯಿಕ ವ್ಯಾಮೋಹಗಳೂ ಇಲ್ಲ. ಹೆಚ್ಚೆಂದರೆ ಬೇಂದ್ರೆ ಕಾವ್ಯದ ಬಗ್ಗೆ ಒಂದು ಉಪನ್ಯಾಸ ನೀಡಲು ಸ್ವಂತ ಖರ್ಚಿನಲ್ಲೇ ಎಲ್ಲಿಗಾದರೂ ಈ ಇಳಿಗಾಲದಲ್ಲೂ ಹೋಗಿ ಬರಲು ಸಿದ್ಧರು. ಬೇಂದ್ರೆ ಕಾವ್ಯದ ಪ್ರತಿನಿಧಿಯಂತೆ ಕೃಷ್ಣಪ್ಪ ಕಾಣುವರು. ಬೇಂದ್ರೆ ಕಾವ್ಯದ ಆಳದ ಬೇರುಗಳನ್ನು ಅವರು ಎಷ್ಟು ಸೂಕ್ಷ್ಮವಾಗಿ ಗ್ರಹಿಸಿದ್ದಾರೆ ಎಂಬುದಕ್ಕೆ ಈ ಕೃತಿಯ ಬಿಡಿಬಿಡಿ, ಪುಟ್ಟ ಬರಹಗಳು ಸಾಕ್ಷಿ ನೀಡುತ್ತವೆ. ಬೇಂದ್ರೆ ಕಾವ್ಯ ಒಮ್ಮೊಮ್ಮೆ ಸ್ಪರ್ಶಿಸಿದಂತೆ ಭಾಸವಾಗುತ್ತದೆ. ಕಾವ್ಯ ಕೂಡ ಅಂತರಾಳವ ಮುಟ್ಟುತ್ತದೆ. ಅಂತೆಯೇ ಕೃಷ್ಣಪ್ಪ ಮನಮುಟ್ಟುವಂತೆ ಬರೆಯುತ್ತಾರೆ. ಶಬ್ದಗಳಿಗೆ ಬಣ್ಣ ವಾಸನೆಗಳಿಲ್ಲ ನಿಜ; ಆದರೆ ಕವಿ ಪದಪದಗಳಿಗೂ ಮಾನವ ಸಂಬಂಧಗಳ ನಾಡಿಮಿಡಿತವ ತೊಡಿಸಬಲ್ಲ. ಹಾಗೆಯೇ ಬೇಂದ್ರೆಯ ನಾಡಿ ನಾದದ ಮಿಡಿತವ ಗ್ರಹಿಸಿ ಬರೆವ ವಿಮರ್ಶೆಯೂ ನಮಗೆ ಪಂಚಭೂತಗಳ ಸ್ಪರ್ಶವನ್ನು ಮಾಡಿಸುವಂತೆ ಆ ಕ್ಷಣಕ್ಕೆ ಬೆರಗು ಹುಟ್ಟಿಸುತ್ತದೆ.

-ಮೊಗಳ್ಳಿ ಗಣೇಶ್

ವಂಶಿ ಪಬ್ಲಿಕೇಷನ್ಸ್
ನಂ.4, ಗಾಯತ್ರಿ ಕಾಂಪ್ಲೆಕ್ಸ್, ಟಿ.ಬಿ. ಬಸ್‌ನಿಲ್ದಾಣದ ಹತ್ತಿರ,
ಬಿ.ಎಚ್.ರಸ್ತೆ, ಸುಭಾಷ್‌ನಗರ, ನೆಲಮಂಗಲ,
ಬೆಂಗಳೂರು-562 123
ಮೊಬೈಲ್: 99165 95916
ಇಮೇಲ್: vamshipublications@gmail.com

VP-29 ₹150/-